UNIVERSAL
LIBRARY
OU_200202
UNIVERSAL
LIBRARY

OSMANIA UNIVERSITY LIBRARY

Call No. K83 | S34D Accession No. K88

Author ನಂಜನಗೂಡು

Title ದಕ್ಷಿಣಸ್ವಾ

This book should be returned on or before the date last marked below

ಸತೀಹಿತೈಷಿಣೀ ಗ್ರಂಥಮಾಲಾ ನಂ.—೫.

॥ ಶ್ರೀ ॥

# ದಕ್ಷಕನ್ಯಾ

(ವಿಂದಾ)

ನಂಜನಗೂಡು

ಸತೀಹಿತೈಷಿಣೀ ಮಾತೃಮಂದಿರದಲ್ಲಿ

ಪ್ರಕಟಿಸಲ್ಪಟ್ಟುದು

ಪ್ರಥಮಮುದ್ರಣ 1,000 ಪ್ರತಿಗಳು

[ಇದರ ಸರ್ವಸ್ವಾತಂತ್ರ್ಯವೂ ಪತ್ರಿಕರ್ತ್ರಿಯದಾಗಿರುವುದು]

ಕ್ರಯ 1—8—0] [ಚಂದಾದಾರರಿಗೆ 1—0—0

॥ ಶ್ರೀ ॥

## ಪ್ರಸೀದತು

---

ಶ್ರೀ ಲಕ್ಷ್ಮೀಕೇಶವ ಸಮೇತ ಶ್ರೀ ಗರಳಪುರೀನಾಥ ಭಗವನ್.

" ನಮೋನಮಃ ಕಾರಣಕಾರಣಾಯ । ಜಗನ್ಮಯಾಯಾಹಿತನಾಶಕಾಯ ॥
ತ್ವತ್ಪಾದ ಪದ್ಮಾಶ್ರಿತರಕ್ಷಕಾಯ । ಶ್ರೀ ನೀಲಕಂಠಾಯ ನಮಶ್ಶಿವಾಯ ॥
ಧ್ಯಾಯನ್ತಿ ಯೆತ್ವಾಂ ಯತವಸ್ತುವನ್ತಿ । ಹೃದಮ್ಬುಜೆದೀಪಸಮಪ್ರಕಾಶಂ ॥
ನಾಸಾಗ್ರವಿನ್ಯಸ್ತ ವಿಲೋಚನಾಯ । ಶ್ರೀ ನೀಲಕಂಠಾಯ ನಮಶ್ಶಿವಾಯ ॥
ವಿಧಾತೃರೂಪಾಯ ಜಗದ್ಧಿತಾಯ । ರಮೇಶರೂಪಾಯ ಸದಾಶಿವಾಯ ॥
ಅನಂತರೂಪಾಯ ಚತುರ್ಭುಜಾಯ । ಶ್ರೀನೀಲಕಂಠಾಯ ನಮಶ್ಶಿವಾಯ "

(ಗ—ಮ)

## ಸಮರ್ಪಣೆ.

ಶ್ರೀಮತ್ಸಕಲ ಕಲ್ಯಾಣ ಗುಣಸಂಪೂರ್ಣನೂ, ಸಮಸ್ತ
ಸಿದ್ಧಗಣಸಂಸೇವಿತನೂ, ಭಕ್ತವತ್ಸಲನೂ, ಭವರೋಗ
ವೈದ್ಯನೂ, ದುರ್ಜನವಿದಾರನೂ, ಸಚ್ಚಿದಾನಂದ
ನಿಲಯನೂ, ಶ್ರೀ ಕೇಶವ ಸ್ವರೂಪನೂ,
ಸರ್ವಮಂಗಳಾಸಮೇತನೂ
ಆದ
**ಶ್ರೀ ವಿಷಹರಕ್ಷೇತ್ರಾಧಿನಾಥನ**
ಚರಣಾರವಿಂದಗಳಲ್ಲಿ ಈ ಲಘುಗ್ರಂಥಪುಷ್ಪ
ವನ್ನು, ಕರ್ತವ್ಯದಕ್ಷತೆಯ ಮತ್ತು ನಿರಂತರೋದ್ಯಮಶೀಲತೆಯ
ಫಲಪ್ರದಾನಕ್ಕಾಗಿ ಭಕ್ತಿಭಾವದಿಂದ
**ಸಮರ್ಪಿಸಿರುವೆನು.**

(ಗ್ರಂಥಕರ್ತ.)

# ಪ ರಿ ಣ ತಿ.

ದೇಶಬಾಂಧವರೇ !

ತಮ್ಮೆಲ್ಲರ ಉದಾರಾಶ್ರಯ ಬಲದಿಂದ ಸತೀಹಿತೈಷಿಣಿಯು, ತನ್ನ ಜನ್ಮವ್ರತವಾದ ದೇಶಮಾತೃ ಸೇವೆಯಲ್ಲಿ, ಮೊದಲನೆಯ ವರ್ಷವನ್ನು ಯಥೋಚಿತರೀತಿಯಲ್ಲಿ ಏಸಿಯೋಗಿಸಿ, ದ್ವಿತೀಯವರ್ಷದ ಪರಿಸಮಾಪ್ತಿ ಯೊಳಗಾಗಿ, ನಿರ್ದಿಷ್ಟಕಾರ್ಯವನ್ನೂ ಸಮರ್ಪಕವಾಗಿ ನೆರವೇರಿಸುವಂತೆ ಮಾಡುವ ಉತ್ಸುಕತೆಯಿಂದ ಕಾರ್ಯತತ್ಪರಳಾಗಿಯೇ ಇರುವಳು.

ಆದರೆ, ಕೆಲವು ಅನಿವಾರ್ಯ [ಹೇಗೆಂಬುದು, 'ಕ್ಷಮಾಪಣ' ಲೇಖ ನದಲ್ಲಿ ವಿವರಿಸಲ್ಪಟ್ಟಿರುವುದು.] ಗಳಿಂದ ಹಿತೈಷಿಣಿಯು, ಈವರೆಗೂ ಹೊರ ಹೊರಡಲಿಕ್ಕಾಗದಿದ್ದು, ಈಗಲೇ ದೊರೆತಿರುವ ಸರ್ವಮಂಗಳೆಯ ಅನುಗ್ರ ಹದಿಂದ, ನೂತನ ಶಕ್ತಿಸಂಪನ್ನಳಾಗಿ, ತನ್ನ ಸುತ್ತಮುತ್ತಲೂ ಆಕ್ರಮಿಸಿ ಕೊಂಡಿದ್ದ ವಿಘ್ನಪರಂಪರೆಗಳನ್ನು ಬಡಿದೋಡಿಸಿ, ಮುಂದೆ ಬರುವಂತಾ ದಳು. ಇನ್ನು ಮುಂದೆಯಾದರೂ ಇದೇ ಮಾತೆಯ ವರಪ್ರಸಾದವು ತನ್ನಲ್ಲಿ ಪೂರ್ಣವಾಗಿದ್ದು, ತನ್ನ ಗಮನಾಗಮನ ವಿಚಾರಗಳಿಗೆ, ಯಾವ ಬಗೆಯ ಕಂಟಕಗಳಾಗಲೀ ಅಡ್ಡಯಿಸಿ ಬರುವುದಿಲ್ಲವೆಂದು ಧೈರ್ಯದಿಂದ ಸಾರಿಸಾರಿ ಹೇಳುತ್ತಿರುವಳು.

ಅಲ್ಲದೆ, ಈವರೆಗೆ ದೊರೆತಿರುವ ಬಹುಮಂದಿ ಮಹಿಳೆಯರ ಸಲ ಹೆಯಂತೆಯೇ, ಇನ್ನು ಮುಂದೆ ಸತೀಹಿತೈಷಿಣಿಯ ಅಂತರ್ಬಾಹ್ಯಂಗಗಳೂ, ಸುಲಲಿತವೂ, ಸರಸ-ಸುಮನೋಹರ ಪದಬಂಧುರವೂ ಆಗಿ, ನಮ್ಮ ಸೋದ ರಿಯರ ಕೋಮಲವಾದ ಹೃತ್ಕುಸುಮಗಳು ವಿಕಸನವಾಗುವಂತೆ ಮಾಡುವ ಪ್ರಯತ್ನವೂ ನಡೆದು-ನಡೆಯುತ್ತಿರುವುದು. ಪ್ರಯತ್ನವು, ಸಫಲವಾ ದಂತೆಲ್ಲಾ, ಹಿತೈಷಿಣಿಯೊಡನೆ ತಿಂಗಳು-ತಿಂಗಳಿಗೂ ಕರ್ಣಾಟಕ ನಂದಿ ನಿಯೂ ಹೊರಹೊರಟು, ಸೋದರಿಯರ ಸೇವೆಯನ್ನು ಮಾಡಬೇಕೆಂಬ

ಕುತೂಹಲವು ಬಲವಾಗುತ್ತಿರುವುದು. ಆದರೆ, ಕರ್ಣಾಟಕ ನಂದಿನಿಯು ವಿಚಾರವಾಗಿ, ತಮ್ಮೆಲ್ಲರ ಅಭಿಪ್ರಾಯವೆಂತಿರುವುದೆಂಬುದು ಸ್ಪಷ್ಟಪಡುವವರೆಗೂ, ಅದು ಸಾಧ್ಯವಾಗುವಂತಿಲ್ಲ. ಇದಕ್ಕಾಗಿ ತಾವೆಲ್ಲರೂ ಉದಾರಮನಸ್ಸಿನಿಂದ ತಮ್ಮ ನಿಜವಾದ ಅಭಿಪ್ರಾಯವನ್ನು ಲಿಖಿತಮೂಲಕವಾಗಿ ಕಳುಹಲು, ಸಂಪ್ರಾರ್ಥಿತರಾಗಿಯೇ ಇರುವಿರಿ. ಇನ್ನೇನು ಹೇಳುವ ? ದೇಶಭಾಷಾಭಿಮಾನದಿಂದಲೂ, ಮಾತೃ ಪ್ರೇರಣೆಯಿಂದಲೂ ತಾವು, ಇಂದಿನವರೆಗೂ, ಹಿತೈಷಿಣಿಯನ್ನು ಪ್ರೋತ್ಸಾಹಿಸಿದಂತೆ ಮುಂದೆಯೂ, ಎಂದೆಂದಿಗೂ ಇವಳನ್ನು ಅನಾದರಿಸದೆ, ಶುದ್ಧಾಂತಃಕರಣದಿಂದ-ಪ್ರೋತ್ಸಾಹಿಸುತ್ತಿರುವಿರೆಂದೂ, ಹಿತೈಷಿಣಿಯ ವ್ರತಸಿದ್ಧಿಗೆ ನೀವೇ ಸಹಕಾರಿಗಳಾಗಿದ್ದು, ಕಾಲೋಚಿತವಾದ ಹಿತಸೂಚನೆಗಳಿಂದ ಎಚ್ಚರಿಸುವ ಸುಹೃತ್ತುಗಳಾಗಿರುವರೆಂದೂ ನಂಬಿರುವೆವು.

ಈ ನಮ್ಮ ನಂಬಿಕೆಗೆ ಭಂಗತಾರದೆ, ಬಳಿಗೆ ಬಂದ ದಕ್ಷಕನ್ಯೆಯನ್ನು ವಾತ್ಸಲ್ಯದಿಂದೆತ್ತಿಯಾಡಿಸಿ, ಮುಂದೆ, ತಿಂಗಳೆರಡರಲ್ಲಿ ನಿಮ್ಮೆಡೆಗೆ ಬರಲಿಕ್ಕಿರುವ ಮಾತೃನಂದಿನಿಯ ಮತ್ತು ರಮಾನಂದ-ವಿಕ್ರಮರ ಅಭ್ಯುದಯಕ್ಕಾಗಿ ಈಗಳಿಂದಲೇ ಸ್ವಸ್ತಿವಾಚನದಿಂದ ನಲವೇರಿಸುತ್ತಿರಬೇಕೆಂದೂ ಮನವಿಮಾಡಿರುವೆವು. ಮಾಡಿರುವ ಮನವಿಯನ್ನು ಮಾನ್ಯಮಾಡುವುದೂ, ಬಿಡುವುದೂ ನಿಮ್ಮ ಮೇಲೆ ಬಿದ್ದ ಹೊರೆಯಾಗಿದೆ. ಇಷ್ಟಲ್ಲದೆ ಸದ್ಯದಲ್ಲಿ ಮತ್ತೇನನ್ನೂ ಹೇಳಲಾರೆವು

ನಂಜನಗೂಡು,
14-10-1915.

ಇತಿ ಕಾರ್ಯದರ್ಶಿ,
ಸತೀಹಿತೈಷಿಣೀ ಮಾತೃಮಂದಿರಂ.

|| ಶ್ರೀ ||

# ಕ್ಷಮಾಪಣೆ.

ಯಾರನ್ನು ಕುರಿತು ಕ್ಷಮೆಯನ್ನು ಕೋರಬೇಕು? ಏನೆಂದು ಹೇಳಿ ಕೇಳಬೇಕು? ಇದಾವುದೂ ಒಗೆಹತ್ತುವಂತಿಲ್ಲ. ಕ್ಷಮಾಪಣೆಯನ್ನು ಕೋರುವುದರಿಂದ ಎಷ್ಟರ ಫಲವಾಗಬಹುದೋ, ಅಷ್ಟೇ ಫಲವೇ ಕೇಳದಿದ್ದರೂ ದೊರೆಯಬಹುದು ಎಂದರೆ-ಕ್ಷಮಾಶೀಲರಾದ ಮಹನಸಿಧಿಗಳು, ಅದೊಂದು ತಮ್ಮ ಜನ್ಮವ್ರತವೆಂದು ತಿಳಿದೇ ಇರುವುದರಿಂದ, ತಾವು ಕೋರಲ್ಪಡದೆಯೇ ಅಲ್ಪಜ್ಞರ ಎಷ್ಟೇ ಅಪರಾಧಗಳನ್ನಾದರೂ ಕ್ಷಮಿಸಿ, ಅವರನ್ನು ಉನ್ನತಿಗೆ ತರಬಲ್ಲವರಾಗಿರುವರು ಅಂತವರಲ್ಲಿ ಕ್ಷಮೆಯನ್ನು ಕುರಿತು ಕೇಳಬೇಕಾದ ಅಗತ್ಯವೇ ಉಳಿದಿರುವುದಿಲ್ಲ. ಕ್ಷಮಿಸಲೊಲ್ಲದವರಲ್ಲಿ ಹಲ್ಗಿರಿದು ಬೇಡಿದರೂ ಫಲವಿಲ್ಲ. ಇದನ್ನು ತಿಳಿದೂ ಇಂದಿನ ಕ್ಷಮಾಪಣೆಯ ದೀರ್ಘಲೇಖನಕ್ಕೇಕೆ ಪ್ರಯತ್ನಗೊಳ್ಳಬೇಕೆಂದರೆ—ಲೋಕವು ಮರ್ಯಾದೆಯನ್ನು ಯಾರೂ ಮೀರಬಾರದಷ್ಟೆ, ಕರ್ತವ್ಯದಲ್ಲಿ ಕಟ್ಟುಬಿದ್ದಿರುವ ನಾವು ಕ್ಷಮಾಪಣೆಯನ್ನು ಕೋರಲೇಬೇಕು.

ಅಪರಾಧವೆಂತಹುದೆಂದರೆ, ಪಿತೃಋಣಿಗೆ ಈ ವರೆಗೂ ಮುತ್ತಿದ್ದ ಅಜ್ಞಾತವಾಸವೆಂಬುದೇ ಉತ್ತರವು. ಏತರಿಂದ ಎಂಬುದಕ್ಕೆ ಸಮಾಧಾನವಾಗಿ, ಯಾವ ಕಾರಣಗಳನ್ನು ಹುಡುಕುವ? ಸಾಮಾನ್ಯವಾಗಿ ನೋಡಿದರೆ, ನಾಲ್ಕು ಮುಖ್ಯಕಾರಣಗಳು ಮುಂದೆ ನಿಲ್ಲುವುವು.

1. ಪತ್ರಪ್ರಚಾರದ ಅಪದೆಸೆಗೆ ಮುದ್ರಾಲಯದವರ ಅವಿಧೇಯತೆ, ಆಲಸತೆ, ಆಶಾಪರತೆಗಳೇ ಪ್ರಬಲ ಕಾರಣವೆಂಬುದು ಮೊದಲನೆಯ ಸಮಾಧಾನವು

2. ವಾಚನಾಭಿರುಚಿಯಿಲ್ಲದ ಈ ಕರ್ಣಾಟಕದಲ್ಲಿ, ಭಾಷಾದ್ರೋಹಿಗಳಾದ ದೇಶೀಯರ ನಿಷ್ಠುರತೆಯೇ ಪತ್ರಿಕೆಗಳ ಅವನತಿಗೆ ಕಾರಣವೆಂಬುದು ಎರಡನೆಯ ಸಮಾಧಾನವು.

3. ದ್ರೋಹಿಗಳ ಅಪಕೃತಿಯಿಂದುಂಟಾದ ಕಷ್ಟನಷ್ಟಗಳೇ ಮೂರನೆಯ ಸಮಾಧಾನವು.

4. ದೇಹಪರಿಶ್ರಮದಿಂದಾದ ಶಾರೀರಕ ಮತ್ತು ಮಾನಸಿಕ ಕ್ಲೇಶಗಳೇ ನಾಲ್ಕನೆಯ ಸಮಾಧಾನವು.

1. ಇವುಗಳಲ್ಲಿ ಯಾವುದನ್ನು ನಾವು ಮುಂದಿಡಬಹುದು ? ಮುದ್ರಾಲಯದವರ ಮೇಲೆ ಅಪವಾದವನ್ನು ಹೊರಿಸಿದ ಮಾತ್ರಕ್ಕೆ, ನಿಜವೆಂದು ನಂಬಿ ಶಾಂತರಾಗುವರಾರು ? " ಮುದ್ರಾಲಯದ ಸ್ಥಾಪನೆಯ ಉದ್ದೇಶವೇ ಪತ್ರ ಮತ್ತು ಪುಸ್ತಕಪ್ರಕಾಶಕ್ಕೆಂದಾಗಿರುವಲ್ಲಿ, ಅವುಗಳ ಮೇಲೆಯೇ ಅಪವಾದವೇ ? ಮುದ್ರಾಲಯದವರಲ್ಲಿ ಅವಿಧೇಯತೆ-ಆಲಸತೆ-ಆಶಾಪರತೆಗಳೇ ತುಂಬಿದ್ದರೆ, ಮುದ್ರಾಲಯಗಳಾದರೂ ಹಾಳುಬಿದ್ದು ಹೋಗದಿರುವುವೇ ? ಅಂತವುಗಳ ನಾಶಕ್ಕೆ ಅವುಗಳ ವ್ಯವಸ್ಥಾಪಕರೇ ಕಾರಣರಾಗುವರಲ್ಲವೇ ? " ಹೀಗೆಂಬ ಆಕ್ಷೇಪಣೆಗಳೇ ನಮ್ಮ ತಲೆಯ ಮೇಲೆ ಬೀಳುವುದು. ನಿಜ ! ನಮ್ಮಲ್ಲಿ ಕರ್ತವ್ಯಕ್ಷಮತೆಗೆ ಮೂಲಾಧಾರವಾದ ಸತ್ಯಸಂಧತೆಯೂ, ಅನುವರ್ತನಗುಣವೂ, ಜಾಗರೂಕತೆಯೂ, ನಿರಂತರೋದ್ಯಮಶೀಲತೆಯೂ ಚೆನ್ನಾಗಿದ್ದ ಪಕ್ಷದಲ್ಲಿ, ಮುದ್ರಾಲಯದವರ ಮೇಲಿನ ಅಪವಾದಾರೋಪಕ್ಕೆ ಅವಕಾಶವೇ ಇರುವುದಿಲ್ಲ. ನಮ್ಮ ಉತ್ಸಾಹಶಕ್ತಿಯನ್ನು ನೋಡಿ, ಅವರೂ ನಮ್ಮ ಆಪ್ತಬಾಂಧವರಾಗಿ ನಿಂತು, ನಮ್ಮ ಕಾರ್ಯವನ್ನು ತೃಪ್ತಿಕರವಾಗಿ ನಡೆಯಿಸುವುದರಲ್ಲಿ ಹಿಂತೆಗೆಯುವುದಿಲ್ಲ. ಹಾಗಿಲ್ಲದೆ, ನಮ್ಮಲ್ಲಿ ಅಭಿಮಾನ-ಆಲಸ್ಯ-ಉದಾಸೀನಗಳೇ ಮುಂದಾಗಿರುವುದಾದರೆ, ಅವರು ಮಾಡುವುದಾದರೂ ಏನಿರುವುದು ? ನಮ್ಮ ಅಜಾಗರೂಕತೆಯ ಮುಂದೆ, ಅವರ ಶ್ರದ್ಧಾಭಕ್ತಿಗಳಾದರೂ ಹೇಗೆ ಪ್ರಕಾಶಿಸಬೇಕು ? ಹೀಗಿರುವುದರಿಂದ ಮೊದಲನೆಯ ಸಮಾಧಾನದ ಮಾತನ್ನೇ ಕಟ್ಟಿಡಬೇಕಾಯಿತು.

2. ಇನ್ನು ದೇಶಕ್ಕೂ, ದೇಶಿಯರಿಗೂ ಹೊರಿಸಿದ ಅಪವಾದವು—ಅದಾದರೂ ಒಪ್ಪತಕ್ಕುದೋ ? " ಹೇಗೆ ? ಕರ್ಣಾಟಕದಲ್ಲಿ ವಾಚನಾಭಿ

ರುಚಿಯೇ ಇಲ್ಲವೆಂದು ಹೇಳುವುದು ಸರಿಯಲ್ಲ. ಅಭಿರುಚಿಯನ್ನುಂಟು ಮಾಡುವ ರಸವಿಸರವು ಪಸರಿಸದಿದೆಯೆಂದು ಮಾತ್ರ ಹೇಳಬಹುದು. ಅಲ್ಲದೆ ದೇಶೀಯರಲ್ಲಿ ಭಾಷಾಭಿಮಾನವು ಹೆಚ್ಚದಿರಲು ಕಾರಣರಾರು ? ಏತ ರಿಂದ ? ಗ್ರಂಥಕರ್ತರಲ್ಲಿ ದೇಶಹಿತೇಚ್ಛೆಯು ಚೆನ್ನಾಗಿದ್ದರೆ, ದೇಶೀಯರ ದೇಶಾಭಿಮಾನಕ್ಕೂ, ಭಾಷಾಪ್ರಸಾರಕ್ಕೂ ಕೊರತೆಯೇನು ? ವಾಚನಾಭಿ ರುಚಿ, ಪ್ರೋತ್ಸಾಹ, ದೇಶಭಕ್ತಿಗಳನ್ನು ಹೆಚ್ಚಿಸಬಲ್ಲ ಪ್ರತಿಭಾಶಕ್ತಿಯು ನಮ್ಮಲ್ಲಿದ್ದರೆ, ನಾವು ಕೋರದೆಯೇ ಅವರು ನಮ್ಮನ್ನು ಪ್ರೋತ್ಸಾಹಿಸು ವರು , ಅದಿಲ್ಲವಾದರೆ, ಕೂಗಿಕೂಗಿ ಅತ್ತು ಬೇಸತ್ತರೂ, ನಮ್ಮನ್ನು ಕೇಳು ವವರಾರು ?'' ಈ ಬಗೆಯ ಕಠಿಣ ಸಮಸ್ಯೆಗಳೇ ನಮ್ಮ ಮುಂದೆ ನಿಲ್ಲು ವುವು. ಇದರಲ್ಲಿಯೂ ನಮ್ಮ ಅವಜ್ಞತೆಯೇ ಮುಂದಾಗಿರುವುದರಿಂದ ಇದರ ಪ್ರಸ್ತಾಪವನ್ನೂ ಬಿಡಬೇಕಾಯಿತು.

3. ದ್ರೋಹಿಗಳ ಅಪಕೃತಿಯ ಮೇಲೆ ಬದ್ಧ ಆರೋಪವು,—ಅದೂ ತೃಪ್ತಿಕರವಾಗಲಾರದು. "ವಿಷಧರರೂ ಇರಬಹುದು ; ಕಂಟಕ ಗಳನ್ನೊಡ್ಡಿದ್ದರೆಂದೂ ಹೇಳಬಹುದು. ಆದರೆ, ಅಷ್ಟುಮಾತ್ರಕ್ಕೆ ಹೆದರಿ, ಕೈಕೊಂಡ ಕಾರ್ಯವನ್ನು ಬಿಡುವುದು ಸರಿಯಲ್ಲ. ಕಾರ್ಯದ ಪೂರ್ವಾಪರ ವಿಚಾರವನ್ನು ಮುಂದಾಗಿಯೇ ನಿರ್ಧರಿಸಿದ್ದು, ಕರ್ತವ್ಯವನ್ನು ನಿರ್ವಹಿಸು ವುದೇ ಕಾರ್ಯಧುರಂಧರರ ಲಕ್ಷಣವು. ಅಲ್ಲದಿದ್ದರೆ ಈ ಪ್ರಯತ್ನದಲ್ಲಿ ಪ್ರವರ್ತಿಸುವುದೇ ತಪ್ಪು.'' ಹೀಗೆಂಬ ವಜ್ರಪಾತವೇ ನಮ್ಮ ಮೇಲೆ ಬೀಳು ವುದು. ಇದಕ್ಕಿನ್ನೇನು ಹೇಳುವ ?

4. ಶಾರೀರಕ ಮತ್ತು ಮಾನಸಿಕ ಕ್ಲೇಶಗಳೆಂದರೆ, ಅವು ಯಾರ ನ್ನೂ ಬಿಟ್ಟುದಲ್ಲ. ಅದನ್ನೇ ಪ್ರಾಮುಖ್ಯವಾಗಿಟ್ಟರೆ ಕೇಳುವವರಾರು ? "ಕಾರ್ಯಕ್ಷೇತ್ರದಲ್ಲಿ ಕಾಲಿಟ್ಟ ಬಳಿಕ ಕಾಲಕ್ಕೆತಕ್ಕಂತೆ, ಕಾರ್ಯಕ್ರಮಗಳನ್ನು ಗೊತ್ತುಮಾಡಿಟ್ಟು, ತಕ್ಕಮಟ್ಟಿಗೆ ವಿಶ್ರಾಂತಿಯನ್ನು ಹೊಂದಿಯೇ ಇರ ಬೇಕಲ್ಲದೆ, ಬೇರೆಬೇರೆ ಕಾರಣಗಳನ್ನು ಮುಂದಿಡುವುದು ಮೂರ್ಖತನವು.''

ಇದೇ ಅದಕ್ಕುತ್ತರವಾಗುವುದು. ಇದೂ ಸಹಜವೇ! ನಮ್ಮನ್ನು ಮಿತಿ ಮೀರಿ ದೇಹಪರಿಶ್ರಮಪಟ್ಟು ಆಯಾಸಕ್ಲೇಶಗಳೆಂದು ಕುಳಿತು ಅಳುವುದಕ್ಕೆ, ಅವರೇನಾದರೂ ಕಟ್ಟುಮಾಡುವರೇ? ಅದಿಲ್ಲದಿದ್ದರೆ, ನಮ್ಮ ವಿಚಾರಶಕ್ತಿಲೋಪಕ್ಕೆ ಅವರೇಕೆ ಕಿವಿಗೊಡುವರು?

ಹೀಗೆ ಸಮಾಧಾನಗಳನ್ನು ಹೇಳಿಯೂ ಫಲವಿಲ್ಲವೆಂದರೆ,-' ಕಾಲಗತಿಯ ಪ್ರತಿಕೂಲತೆ, ದೈವಸಹಾಯದ ಅಭಾವ ' ಇವೆರಡೂ ಕಡೆಯದಾಗಿ ನಿಲ್ಲುವುವು. ಅಲ್ಲಿಯೂ ಆಕ್ಷೇಪವಿಲ್ಲದಿಲ್ಲ. ಕಾಲವೇ " ಪ್ರತಿಕೂಲವೆಂದೂ, ದೈವಸಹಾಯಕ್ಕೆ ಅಭಾವವಾಗಿದೆಯೆಂದೂ ನಿರೀಕ್ಷಿಸುತ್ತಿದ್ದರೆ ಅನುಕೂಲಿಸುವುದೋ? ಎಂದಿಗೂ ಇಲ್ಲ. ಕಾಲ-ಬಲಗಳನ್ನು ಕುರಿತು ಕುಳಿತೆಡೆಯಲ್ಲಿಯೇ ಹಲುಬುವವರಿಗೆ, ಹೇಗೂ ಅವು ಸಹಕಾರಿಗಳಾಗುವುದಿಲ್ಲ. ಪುರುಷಪ್ರಯತ್ನವು ಸಹಜರೀತಿಯಿಂದ ಉದ್ಯಮಶೀಲತೆಯಲ್ಲಿ ನಿರತವಾಗಿದ್ದರೆ, ಸೋಮಾರಿಗಳಿಗೆ ಪ್ರತಿಕೂಲವಾಗಿರುವ ಕಾಲವೇ ಇವರಿಗೆ ಅನುಕೂಲವಾಗಿಯೂ, ಅಭಾವವೆಂದು ತೋರುವ ದೈವಬಲವೇ ವೈಭವಪ್ರದವಾಗಿಯೂ ಸಹಕರಿಸುವುದರಲ್ಲಿ ಸಂಶಯವಿಲ್ಲ" ಇದೇನಮಗೆ ದೊರೆಯಬಹುದಾದ ಬಹುಮಾನವಾಗಿದೆ. ಇನ್ನೇನನ್ನು ಹೇಳಬಹುದು?

ಪ್ರಕೃತದಲ್ಲಿ, ಸತೀಹಿತೈಷಿಣಿಯ ತಾಟಸ್ಥ್ಯಕ್ಕೆ ಮುದ್ರಾಲಯದವರ ದೋಷವೆಳ್ಳಷ್ಟೂ ಇರುವುದಿಲ್ಲ. ಮಾತೃಕೃಪೆಯಿಂದ ಮೈಸೂರು ಕ್ರೌನ್ ಮುದ್ರಾಲಯದವರೂ, ಹುಬ್ಬಳ್ಳಿಯ ಶ್ರೀ ಕೃಷ್ಣ ಮುದ್ರಾಲಯದವರೂ ಸಹಜಕ್ಷಮೆಯಿಂದಲೂ, ಸೌಹಾರ್ದ್ರದಿಂದಲೂ ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನಡೆಸುತ್ತಿರುವುದಲ್ಲದೆ, ನಮ್ಮನ್ನೂ ಕಾರ್ಯನಿರ್ವಾಹದಲ್ಲಿ ಹುರಿಗೊಳಿಸುತ್ತಿರುವರು. ಇನ್ನು ನಮ್ಮವರಲ್ಲಿ ವಾಚನಾಭಿರುಚಿಯಿಲ್ಲವೆಂದರೆ, ನಾವೇ ದೇಶದ್ರೋಹಿಗಳಾಗುವೆವು. ಹೇಗೆಂದರೆ— ಸತೀಹಿತೈಷಿಣಿಯು ಹುಟ್ಟಿದ ಇಷ್ಟು ಅಲ್ಪಕಾಲದಲ್ಲಿಯೇ, ನಮ್ಮ ದೇಶೀಯರಿಂದಲೂ, ಮತ್ತು ದೇಶೋದ್ಧಾರಕರಾದ ಧರ್ಮಪ್ರಭುಸರ್ಕಾರದವರಿಂ

ದಲೂ ದೊರೆತಿರುವ ಸಹಾಯ, ಪ್ರೋತ್ಸಾಹ, ಹಿತಾಹಿತ ಸೂಚನೆಗಳು, ತಕ್ಕಮಟ್ಟಿಗೂ ಉತ್ತೇಜನವನ್ನು ಕಲ್ಪಿಸಿರುವುವಲ್ಲದೆ, ಇನ್ನೂ ಮುಂದೆ ಮುಂದೆ ಬರುವುದಕ್ಕೂ ಸಹಕಾರಿಗಳಾಗಿವೆಯೆಂದು ಧೈರ್ಯವಾಗಿ ಹೇಳ ಬಹುದಾಗಿದೆ.

ಮೇಲೆ ಹೇಳಿರುವ ದ್ವಿವಿಧ ಶಕ್ತಿಸಂಪನ್ನತೆಗಳ ಪ್ರಭಾವದಿಂದ ಮೂರನೆಯದಾದ ಕೇಡಿಗರ ಕಿರುಕುಳಗಳೂ ಹಿಂದೆಯೇ ಎಂದರೆ, ಸಭಾ ಪ್ರಕಾಶಕ್ಕೆ ಮೊದಲೇ ನಿವಾರಿಸಲ್ಪಟ್ಟಿರುವುವು. ಅಲ್ಲಿಂದೀಚೆಗೆ ಒಂದ ವಿಘ್ನಗಳಾದರೂ ಹಿತೈಷಿಣಿಯು ಪುರಪ್ರಕಾಶಕ್ಕೆ ಕಾರ್ಯಕಾರಿಗಳಾಗಿವೆ ಯೆಂದೇ ಹೇಳಬೇಕು.

ಮತ್ತೆ ದೇಹಾಯಾಸವನ್ನೇ ಹೆಚ್ಚಾಗಿ ಗುಣಿಸುತ್ತಿದ್ದರೆ, ಸತೀಹಿ ತೈಷಿಣಿಯು ಆವಿರ್ಭಾವಕ್ಕೇ ಅವಕಾಶವಿರುತ್ತಿರಲಿಲ್ಲ ತನ್ನ ಜನ್ಮೋದ್ದೇಶ ವನ್ನೂ, ನೈಜಕರ್ತವ್ಯವನ್ನೂ ಚೆನ್ನಾಗಿ ತಿಳಿದಿರುವ ಹಿತೈಷಿಣಿಯು, ಸೋದರಿಯರ ಸೇವೆಯೇ ದೇಶಮಾತೆಯ ಅಭ್ಯುದಯವೆಂದು ನಂಬಿರುವು ದರಿಂದ ದೇಹಾಯಾಸನೆಂದು ಕುಳಿತಿರದೆ, ಉಚಿತರೀತಿಗಳಿಂದ ತಕ್ಕಮ ಟ್ಟಿಗೂ ಕಾರ್ಯತತ್ಪರಳಾಗಿರುವಳು. ಇನ್ನು ಕಾಲಬಲ–ದೈವಸಹಾಯಗಳ ವಿಚಾರವೂ ಮುಂದೆ ಹೇಳುವ ನಿದರ್ಶನದಿಂದ ತೃಪ್ತಿಕರವಾಗಿದೆಯೆಂದೇ ತಿಳಿಯಬಹುದಾಗಿದೆ.

ಇಷ್ಟರ ಅನುಕೂಲ್ಯಗಳಿದ್ದೂ ವಿಳಂಬವಾಯ್ತೆಂದರೆ ಅದರ ತತ್ವವು ಸ್ವಲ್ಪದರಲ್ಲಿ ಮುಗಿಯದು. ಲೇಖನವಿಸ್ತಾರಕ್ಕೆ ಹೆದರಿ, ಬಿಡುವುದಕ್ಕೂ ಆಗಲಾರದು. ಏಕೆಂದರೆ—

ಸತೀಹಿತೈಷಿಣಿಯು ಹುಟ್ಟುವಾಗಲೇ ಮಾಸಪತ್ರಿಕಾ ರೂಪದಿಂದ ಹೊರಡುವ ಯೋಚನೆಯಾಗಿದ್ದಿತು. ಆದರೆ, ಪ್ರಥಮಪ್ರಯತ್ನದಲ್ಲಿಯೇ ಅಷ್ಟರ ಉತ್ತರವಾದಿತ್ವದ ಮಹತ್ವಾಕಾಂಕ್ಷೆಯಿರಬಾರದೆಂದು ಶಂಕಿಸಿ, ಮಾಲಿಕಾರಚನೆಯಲ್ಲಿ ತಿರುಗಿತು. ಮೊದಲು ಎಂದರೆ-ಸುಶೀಲಾ ಪ್ರಚಾರ

ಕಾಲದಲ್ಲಿ ಸ್ವಯಂಕೃಷಿಯಿಂದ ಮುಂದೆ ನಿಲ್ಲುವುದರ ಪರಿಣಾಮವೇನಾಗಬಹುದೋ ಎಂಬ ಭೀತಿಯೊಂದು ಹುಟ್ಟಿ, ನಮ್ಮ ಧರ್ಮಬಾಂಧವರ ಹೆಸರಿನಿಂದ ಪ್ರಚಾರಕ್ಕೆ ತರಲಾಯಿತು. ಇದಕ್ಕಾಗಿ ಅನೇಕವಿಧ ಕಷ್ಟನಷ್ಟಗಳುಂಟಾಗಬಹುದೆಂದು ತಿಳಿದೂ, ದೇಶಹಿತಕ್ಕೂ, ಧರ್ಮಭಗಿನಿಯರ ಅಭ್ಯುದಯಕ್ಕೂ ಮಾಡುವ ಕಾರ್ಯದಲ್ಲಿ, ಎಷ್ಟು ಕಷ್ಟವಾದರೂ ಸರಿಯೆಂದು ಧೈರ್ಯಹೊಂದಿ, ಪ್ರಕಾಶಸ್ಥಾನದಲ್ಲಿ ನಿಲ್ಲಲೊಪ್ಪಿದ ನಮ್ಮ ಸನ್ಮಾನನೀಯ ಭ್ರಾತೃಗಳಾದ ಶ್ರೀಯುತ ಹನುಮಾನ್ ಕಂಪೆನಿಯವರ ಔದಾರ್ಯಗುಣವಿಶೇಷವು ಸ್ತುತ್ಯರ್ಹವಾಗಿರುವುದು.

ಆದರೆ, ಸುಶೀಲಾ ಪ್ರಚಾರವಾದ ಒಂದೆರಡು ತಿಂಗಳಲ್ಲಿಯೇ, ನಮ್ಮ ದೇಶೀಯ ಸೋದರಿಯರ ಸ್ವಾಭಿಪ್ರಾಯ ಪೂರ್ವಕವಾಗಿ ನಮಗೆ ದೊರೆತ ಕೆಲವು ಸಲಹೆಗಳಿಂದಲೂ,–'ನಮ್ಮ ಸೋದರಿಯರ ಪರಸ್ಪರ ಸೌಜನ್ಯಪ್ರದರ್ಶನದ ಪತ್ರವ್ಯವಹಾರವೇ ಮೊದಲಾದ ಕಾಲೋಚಿತಸೂಚನೆಗಳಿಗೂ, ಅವರ ಅಭ್ಯುದಯಕ್ಕೂ ಹಿತೈಷಿಣಿಯು ನೆರವಾಗಿರಬೇಕಾದರೆ, ಸ್ತ್ರೀಕರ್ತೃತ್ವದಿಂದಲೇ ಪ್ರಚಾರಕ್ಕೆ ಬರಬೇಕಲ್ಲದೆ, ಪುರುಷಬಂಧುಗಳ ವಶಕ್ಕೊಪ್ಪಿಸಲ್ಪಡುವುದರಿಂದ ಉದ್ದೇಶಸಿದ್ಧಿಯಾಗುವ ಸಂಭವವಿಲ್ಲ' ವೆಂದು ಖಂಡಿತವಾಗಿ ಹೇಳಿದ ನಮ್ಮ ಧರ್ಮಭ್ರಾತೃವರ್ಗೀಯರಾದ ಕೆಲವು ಪಂಡಿತರ ಸಲಹೆಗಳಿಂದಲೂ ಸತೀಹಿತೈಷಿಣಿಯ ಸಮಸ್ತ ಕಾರ್ಯಭಾಗವನ್ನೂ ಸ್ವಂತವಾಗಿ ನಡೆಯಿಸುವುದೇ ಉತ್ತಮವೆಂಬುದು, ನಮ್ಮ ಅನುಭವಕ್ಕೆ ಬಂದಿತು. ಅಲ್ಲದೆ, ಮಧುರವಾಣಿಯ ಮಾಸಪತ್ರಿಕಾ ಕಾರ್ಯವೇ ವಿಸ್ತಾರವಾಗಿರುವಾಗ ಹಿತೈಷಿಣಿಯ ಕಾರ್ಯವೂ ಸೇರಿದರೆ, ಪ್ರಕಾಶಕರಿಗೆ ಅಧಿಕಶ್ರಮವಾಗುವುದೆಂಬ ವಿಚಾರವೊಂದು ಮುಂದಾಗಿ, ಅದನ್ನು ಸ್ವಂತವಾಗಿ ನಡೆಯಿಸಲು ನಿಶ್ಚಯಿಸಿತು. ಹೀಗೆ ಅತ್ಯಲ್ಪಾವಧಿಯಲ್ಲಿಯೇ, ಕೈಕೊಂಡ ಕಾರ್ಯಭಾಗದ ನಿರ್ದಿಷ್ಟಫಲವನ್ನು ಕಾಣುವುದಕ್ಕೆ ಮೊದಲೇ–ಅದನ್ನು ಬಿಟ್ಟುಕೊಡುವ ವಿಚಾರದಲ್ಲಿ ಸಂಪೂರ್ಣ ಸಮಾಧಾನವನ್ನು ವಹಿಸಿದುದ

ಲ್ಲದೆ, ಕರ್ತವ್ಯದಕ್ಷತೆಯುಂಟಾಗುವಂತೆ ನಮ್ಮನ್ನೂ ಅಡಿಗಡಿಗೆ ಎಚ್ಚರಿಸಿದ ಶ್ರೀಯುತ ಮಧುರವಾಣೀ ಪ್ರಕಾಶಕರ ಪರಮೋಪಕಾರವು, ನಮಗೆ ಚಿರಸ್ಮರಣೀಯವಾಗಿರುವುದು. ಇದಕ್ಕಾಗಿ ಮಧುರವಾಣಿಯು ಮತ್ತು ತತ್ಪ್ರಕಾಶಕರ ಅಭ್ಯುದಯವನ್ನು ಕೋರುವುದೂ ನಮ್ಮ ಕೃತಜ್ಞತೆಗೆ ಸೇರಿದುದಾಗಿದೆ.

ಹೀಗೆ ಕಾರ್ಯಾರಂಭಕ್ಕೆ ಮೊದಲೇ ಪೂರ್ವಾಪರ ವಿಚಾರಗಳನ್ನು ನಿರ್ಧರಿಸದೆ, ಆತುರದಿಂದ ಕೈಕೊಂಡ ಕಾರ್ಯವು, ಕೆಲವು ತಿಂಗಳಲ್ಲಿಯೇ ಒಂದೆರಡು ರೂಪಗಳಿಗೆ ಮಾರ್ಪಡುವಂತಾದುದರಿಂದ ದ್ವಿತೀಯ ವಿಘ್ನಕ್ಕೆ ಕಾರಣವಾಗಿ, ಅನೇಕ ವಿಚಾರಗಳು ಅಸ್ತ್ರಯಿಸಿ ನಿಂದುವು. ಅವುಗಳೆಲ್ಲವನ್ನೂ ದಾಟಿ ಬರುವುದಕ್ಕಾಗಿ ಬಹು ದೂರದ ಅಭ್ಯಾಸವೂ, ಅನೇಕ ವಿಚಾರಗಳ ಅನುಭವವೂ ಉಂಟಾಗಬೇಕಾಯಿತು. ಇಷ್ಟಾಗಿ ಕಾಲಾತಿಕ್ರಮದೋಷಕ್ಕೆ ಗುರಿಯಾದರೂ, ಮಾತೃಕಟಾಕ್ಷದಿಂದ ಸಂಕಲ್ಪಕಾರ್ಯದಲ್ಲಿ ತಕ್ಕಮಟ್ಟಿಗೆ ಸಮಾಧಾನವನ್ನು ಹೊಂದುವಂತೆ ನಭಾ ಪ್ರಕಾಶವಾಯಿತು. ಅವಾದ ಬಳಿಕ ದ್ರವ್ಯಾಭಾವವೆಂದಾಗಲೀ, ಯುದ್ಧಸಂಬಂಧವಾದ ಮುದ್ರಣಸಾಹಿತ್ಯಗಳಿಗೆ ಉಂಟಾಗಿರುವ ದುರ್ಭಿಕ್ಷಚಿಂತೆಯೆಂದಾಗಲೀ ಕುಳಿತಿರದೆ, ಮಾಡುವ ಪ್ರಯತ್ನವೆಲ್ಲವೂ ಮನಃಪೂರ್ವಕವಾಗಿ ಮಾಡಲ್ಪಟ್ಟಿತೆಂಬುದು, ವಿದ್ಯುಲ್ಲತಾ–ವಿರಾಗಿಣೀ ಪ್ರಚಾರದಿಂದಲೇ ತಿಳಿಯಬಹುದಾಗಿದೆ.

ಅಲ್ಲಿಂದೀಚೆಗೆ ತೃತೀಯಗ್ರಂಥ ಪ್ರಚಾರಕಾಲದಲ್ಲಿ ಹೇಳಿದ್ದಂತೆ, ಮಾತೃನಂದಿನಿಯನ್ನೇ ಮೊದಲು ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ನಂದಿನಿಯು ಮಾತೃಕೆಯಲ್ಲಿ ಮುದ್ರಣಕ್ಕೆ ಸಿದ್ಧವಾಗಿದ್ದ ಪೂರ್ವಾರ್ಧವು ಮಾತ್ರ ಮುದ್ರಾಲಯಕ್ಕೆ ಕಳುಹಲ್ಪಟ್ಟಿತು. ಉಳಿದ ಮುದ್ರಣಸಾಹಿತ್ಯಗಳೆಲ್ಲವನ್ನೂ ಸಿದ್ಧಪಡಿಸಿಕೊಳ್ಳಬೇಕಾದ ಭಾರವನ್ನು ಮುದ್ರಾಪಕರು ತಾವೇ ವಹಿಸಿ, ಉತ್ಸಾಹದಿಂದ ಕಾರ್ಯಕ್ಕೆ ಪ್ರಾರಂಭಿಸಿದರಲ್ಲದೆ, ಮುಂದಿನ ಉತ್ತ

ರಾರ್ಧವನ್ನು ಕಳುಹಬೇಕೆಂದು ತ್ವರೆಪಡಿಸಿದರು. ಆದರೆ ಸುಶೀಲೆಯ ದ್ವಿತೀಯ ಮುದ್ರಣದ ಕಾರ್ಯವೂ, ಮುಂದಾಗಿ ನಡೆಯಬೇಕಾಗಿ ಬಂದುದರಿಂದ ಎರಡಕ್ಕೂ ನಡುವೆ ನಿಲ್ಲಬೇಕಾಯಿತು ಇದರ ನಡುವೆ, ಗೃಹರಾಜ್ಯಾಂಗಕ್ಕೊಳಪಟ್ಟ ವಿವಾಹಮಹೋತ್ಸವವೊಂದರ ನಿಮಿತ್ತ, ಗುರುಹಿರಿಯರೊಡನೆ ಹೊರಡಬೇಕಾದ ಪಯಣಸಂಗತಿಯೂ ಸೇರಿತು. ಈ ಸಂಭ್ರಮದಲ್ಲಿ ಹೊರಡುವ ಗಡಬಡಿಯಿಂದ, ನನ್ನ ಅಜಾಗರೂಕತೆಯ ಫಲವಾಗಿ, ನಂದಿನೀಮಾತ್ಮಕೆಯ ಉತ್ತರಾರ್ಧವು ಕಣ್ಮರೆಯಾಗಿ, ಉಳಿದುವು ಪೆಟ್ಟಿಗೆಗೆ ಸೇರಿದ್ದುವು. ಸಾಲದುದಕ್ಕೆ ಅನಿರೀಕ್ಷ್ಯವಾಗಿ ಬಂದೊದಗಿದ ದೃಷ್ಟಿ ಮಾಲಿನ್ಯರೋಗದ ದೆಸೆಯಿಂದ, ನೇತ್ರಚಿಕಿತ್ಸೆಗಾಗಿ ಬೆಂಗಳೂರಲ್ಲಿಯೇ ಒಂದುತಿಂಗಳ ದೀರ್ಘಕಾಲವನ್ನೂ ಕಳೆಯಬೇಕಾಗಿ ಬಂದಿತು ಹೀಗಾದುದರಿಂದ ನಂದಿನಿಯ ಉತ್ತರಾರ್ಧಕ್ಕೆ ತಗಾದೆಯುಂಟಾಗಿದ್ದರೂ ಕಳುಹಲಿಕ್ಕಿಲ್ಲದೆ, ಅನಿವಾರ್ಯಪಕ್ಷದಿಂದ ಸುಮ್ಮನಿರಬೇಕಾಯಿತು.

ಹೀಗೆ ವಚನಭ್ರಷ್ಟತೆಗೆ ಗುರಿಯಾಗಬೇಕಾಯಿತೆಂಬ ವ್ಯಾಕುಲದಲ್ಲಿದ್ದಾಗ, ಇದೇ 1915 ನೇ ಜೂನ್ 20ನೇ ಭಾನುವಾರ ಮಧ್ಯಾಹ್ನದಲ್ಲಿ, ಕೇವಲ ಶಬ್ದಸ್ಪರ್ಶಗಳ ಮೂಲಕ–ಅದೃಶ್ಯವಾಣಿಯಿಂದ,–'ಸರ್ಕಾರದವರ ಆಜ್ಞಾಪತ್ರವು ಬಂದಿದೆ. ಇನ್ನೂ ಇಲ್ಲೇಕೆ ವಿಳಂಬಿಸುವೆ; ಏಳು.' ಎಂಬೀ ವಾಗಮೃತವನ್ನು ಸುರಿಸಿ, ನಮ್ಮಾ ಜಡಚೇತನಕ್ಕೆ ಚೈತನ್ಯವೃದ್ಧಿಯುಂಟುಮಾಡಿದ ಮಾತೃಕಟಾಕ್ಷದಿಂದ, ಆ ಕ್ಷಣದ ಮೊದಲು, ನಮಗುಂಟಾದ ಆನಂದೋತ್ಸಾಹಗಳೆಷ್ಟೆಂಬುದನ್ನು, ಇಲ್ಲಿ ಹೇಗೂ, ಹೇಳಿ ಮುಗಿಸುವಂತಿಲ್ಲ.

ಮಾತೆಯಿಂದ ನಿರೂಪವಾದ ಮರುದಿನವೇ ಇಲ್ಲಿಗೆ ನಮ್ಮ ಧರ್ಮಪ್ರಭು ಸರ್ಕಾರದವರ ಕಡೆಯಿಂದ ವಿರಾಗಿಣಿಯನ್ನು ಕಳುಹಬೇಕೆಂಬ ಆಜ್ಞಾಪತ್ರವು ಬಂದಿದ್ದ ವರ್ತಮಾನವು ನಮ್ಮ ಕಿವಿಯನ್ನು ಮುಟ್ಟಿತು. ಹೀಗೆ ಅದೃಷ್ಟವು ನಿದರ್ಶನಕ್ಕೆ ಬಂದುದರಿಂದ ತ್ವರೆಪಟ್ಟು ನಾಲ್ಕಾರು

ದಿನಗಳಲ್ಲಿಯೇ ಹೊರಟು, ಇಲ್ಲಿಗೆ ಬಂದು, ಮಾತೃಮಂದಿರವನ್ನು ಸೇರಿ, ಆತುರದಿಂದ ಕಾರ್ಯವನ್ನು ನಿರ್ವಹಿಸಲು ಪ್ರಾರಂಭಿಸಿದ್ದಾಯಿತು ಆದರೂ ನಡನಡುವೆ ಗೃಹರಾಜ್ಯ ಸಂಬಂಧವಾದ ತಾಪತ್ರಯಗಳು ಮುಂದಿದ್ದು, ಕೈತಪ್ಪಿರುವ ಮಾತೃಕೆಯನ್ನು ಹುಡುಕಲು, ಈ ವರೆಗೂ ಅವಕಾಶವೇ ದೊರೆಯದಂತಾಯಿತು. ಹೀಗೆ ನಮ್ಮ ಅಜಾಗರೂಕತೆ ಅಥವಾ ಪ್ರಮಾದವಶದಿಂದ ನಂದಿನಿಯ ಉತ್ತರಾರ್ಧವು ಕೈತಪ್ಪಿ, ಅದರಿಂದ ಕಾರ್ಯವು ಮಧ್ಯದಲ್ಲಿ ನಿಂತು, ಕಷ್ಟನಷ್ಟಗಳುಂಟಾದರೂ ಅವೆಲ್ಲವನ್ನೂ ಕ್ಷಮಿಸಿ, ದೇಶಮಾತೃಸೇವೆಯಲ್ಲಿ ತಕ್ಕಂತೆ ಉತ್ಸಾಹವುಂಟಾಗುವ ರೀತಿಯಿಂದ ಸಮಾಧಾನವನ್ನು ಕಲ್ಪಿಸಿರುವ, ನಮ್ಮ ಭ್ರಾತೃಶ್ರೇಷ್ಠರಾದ ಶ್ರೀಕೃಷ್ಣ ಮುದ್ರಾಲಯಾಧ್ಯಕ್ಷರ ಅನಿಮಿತ್ತಭ್ರಾತೃವಾತ್ಸಲ್ಯಕ್ಕಾಗಿ, ಚಿರಕೃತಜ್ಞರಾಗಿರುವುದಲ್ಲದೆ, ಅವರ ಶ್ರೇಯೋಭಿವೃದ್ಧಿಯನ್ನು ಕೋರುವುದು ನಮ್ಮ ಮು ್ಯಕರ್ತವ್ಯಕ್ಕೆ ಸೇರಿರುವುದು

ಇಷ್ಟಾಗಿ ಇನ್ನೂ ಹೀಗೆಯೇ ಕುಳಿತಿದ್ದರೆ, ದೇಶಬಾಂಧವರಲ್ಲಿ ಮಹಾಪಚಾರ ಪಟ್ಟಂತಾದೀತೆಂದೂ, ಇದಕ್ಕಾಗಿ ದಕ್ಷಕನ್ಯೆಯನ್ನೇ ಐದನೆಯ ಗ್ರಂಥವಾಗಿ ಪ್ರಚಾರಕ್ಕೆ ತಂದು, ಕ್ಷಮಾಪಣೆಯನ್ನು ಕೇಳುವುದು ಯುಕ್ತವೆಂದೂ ನಿರ್ಧರಿಸಿ, ದಕ್ಷಕನ್ಯೆಯನ್ನು ಮುದ್ರಣಕ್ಕೆ ಕಳುಹಿದುದಾಯಿತು. ಸರ್ವಮಂಗಳೆಯ ಅನುಗ್ರಹದಿಂದ ದಕ್ಷಕನ್ಯೆಯು ಬಹು ವಿಸ್ತೃತ ಗ್ರಂಥವಾಗಿದ್ದರೂ, ಅತ್ಯಲ್ಪ ಕಾಲಾವಧಿಯಲ್ಲಿಯೇ ಪ್ರಕಟವಾಗಬೇಕೆಂಬ ಉತ್ಸಾಹವು, ಮುದ್ರಾಪಕರ ಮನಸ್ಸನ್ನು ಮುಟ್ಟಿದುದರಿಂದ, ಶ್ರಮವನ್ನು ಕೂಡ ಗಣಿಸದೆ, ಮುದ್ರಣಕಾರ್ಯವನ್ನು ತೃಪ್ತಿಕರವಾಗಿಯೂ, ಜಾಗ್ರತೆಯಿಂದಲೂ ನೆರವೇರಿಸಿ ಕೊಟ್ಟುದಕ್ಕಾಗಿ, ಮೈಸೂರು ಕೌರ್ಟ್ ಮುದ್ರಾಲಯಾಧಿಕಾರಿಗಳು, ನಮ್ಮ ನಿರಂತರದ ಧನ್ಯವಾದಕ್ಕೆ ಪಾತ್ರರಾಗಿರುವರು.

ಇನ್ನು ನಮ್ಮ ಪ್ರವಾಸಕಾಲದಲ್ಲಿ, ಪ್ರತ್ಯಕ್ಷವಾಗಿ ನಮ್ಮನ್ನು ಕುರಿತು ಬಹು ವಿಧದಿಂದ-' ವಿದ್ಯುಲ್ಲತೆಯ ಮುಂದಿನ ವಿವರವನ್ನು ಹೇಳದೆ

ನಮ್ಮ ಮಿದುಳನ್ನು ಚದರಿಸಿ, ಕುತೂಹಲದಲ್ಲಿ ಕೆಡಹಬೇಕೆಂಬುದೇ ಹಿತೈಷಿಣಿಯ ಸಂಕಲ್ಪವೊ? ಮೊದಲು ಅದನ್ನು ವಿವರಿಸಿ, ಸಮಾಧಾನವನ್ನು ಕಲ್ಪಿಸುವುದಕ್ಕೇನಾದರೂ ಅಭ್ಯಂತರವುಂಟೋ?' ಹೀಗೆಂದು ಆಗ್ರಹಿಸಿದ ನಮ್ಮ ಧರ್ಮಭಗಿನಿಯರಲ್ಲಿ ವಿನಯಪೂರ್ವಕವಾಗಿ ಕ್ಷಮೆಯನ್ನು ಕೋರಿ, ಸರ್ವಪ್ರಯತ್ನದಿಂದಲೂ, ಜಾಗ್ರತೆಯಾಗಿ ಮಾತೃನಂದಿನಿಯನ್ನೂ ಪ್ರಕಟಪಡಿಸುವುದಲ್ಲದೆ, ಇನ್ನೆರಡು ಗ್ರಂಥಗಳನ್ನೂ ಈ ವರ್ಷಾಂತ್ಯದೊಳಗಾಗಿ ಪ್ರಚಾರಕ್ಕೆ ತಂದು, ಮುಂದಿನ ವರ್ಷದ ಆದಿಯಲ್ಲಿಯೇ ವಿದ್ಯುಲ್ಲತೆಯ ವಿವರವನ್ನು ಪ್ರಕಟಪಡಿಸುವೆವೆಂದೂ, ಆ ವರೆಗೂ ತಾಳ್ಮೆಯಿಂದ ಅವಕಾಶವನ್ನು ಕೊಟ್ಟು, ಹಿತೈಷಿಣಿಯನ್ನು ಬಿಡದೆ ಪ್ರೋತ್ಸಾಹಿಸುತ್ತಿರಬೇಕೆಂದೂ ಪ್ರಾರ್ಥಿಸುವೆವು. ಮತ್ತು ಕರ್ಣಾಟಕ ನಂದಿನಿಯನ್ನು ಹೊರಡಿಸುವುದಕ್ಕಾಗಿ ಅದರಲ್ಲಿ ಪ್ರಕಟಿಸಬೇಕೆಂದು ಅತ್ಯುಪಯುಕ್ತ ಲೇಖನಗಳನ್ನು ಕಳುಹಿಸಿರುವ ಶ್ರೀ|| ಸೌ|| ರಂಗನಾಯಕಮ್ಮನ (ಅಮಲ್ದಾರ್ ಎಸ್. ಗೋಪಾಲಯ್ಯಂಗಾರ್ಯರು, ಬಿ.ಎ., ಇವರ ಧರ್ಮಪತ್ನಿಯು) ವರೇ ಮೊದಲಾದ ನಮ್ಮ ಪ್ರಿಯಭಗಿನಿಯರಿಗೂ, ಮತ್ತು ಹಿತೈಷಿಣಿಯ ಕಾರ್ಯಭಾಗವನ್ನು ಸ್ವಯಂಸಾಕ್ಷಾತ್ಕಾರದಿಂದ ಕಟಾಕ್ಷಿಸಿ, ಬಹು ವಿಧದಿಂದ ತಮ್ಮ ಸಹೃದಯವನ್ನು ಸೂಚಿಸಿ ಪ್ರೋತ್ಸಾಹಿಸಿರುವ, ನಮ್ಮ ಸನ್ಮಾನಿತಭಗಿನಿಯರಾದ ಶ್ರೀ|| ಸೌ|| ಪಾರ್ವತಾಂಬಾ (ಶ್ರೀ "ಜಸ್ಟೀಸ್." ಚಂದ್ರಶೇಖರಯ್ಯರ್, ಬಿ.ಎ.,ಬಿ.ಎಲ್., ಇವರ ಧರ್ಮಪತ್ನಿ) ಯವರಿಗೂ ಮತ್ತು ಅವರ ಸಖೀವರ್ಗದವರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವುದಲ್ಲದೆ, ಕರ್ಣಾಟಕ ನಂದಿನಿಯ ಆವಿರ್ಭಾವಕ್ಕೆ ಹಿತೈಷಿಣಿಯ ಸಂಪದಭ್ಯುದಯಗಳೇ ಆಧಾರವಾಗಿರುವುದರಿಂದ, ಹಿತೈಷಿಣಿಯನ್ನು ಉನ್ನತಸ್ಥಿತಿಗೆ ತರುವ ಭಾಗದಲ್ಲಿ, ತಮ್ಮ ಸಹೃದಯಬಾಂಧವ್ಯವನ್ನೇ ಆದರ್ಶವಾಗಿ ತೋರಿಸಿ, ಇತರ ನಮ್ಮ ಧರ್ಮಭಗಿನಿಯರೂ ಇದರಲ್ಲಿ ಸಾಮರಸ್ಯವನ್ನು ತೋರಿಸುವಂತೆ ಮಾಡಲು ನಮಗೆ ಅವಕಾಶವನ್ನು ಕಲ್ಪಿಸಿಕೊಟ್ಟ

ರುವುದಕ್ಕಾಗಿ, ಇದೇ ವಾತ್ಸಲ್ಯವೇ ಅವಿಚ್ಛಿನ್ನವಾಗಿ ಬೆಳೆದು ಬರುವಂತೆ ಆ ನಮ್ಮ ಸನ್ಮಾನಿತ ಭಗಿನಿಯರೆಲ್ಲರಲ್ಲಿಯೂ ಮಾತೃಕಟಾಕ್ಷವು ಪೂರ್ಣವಾಗಿದ್ದು, ದೇಶಮಾತೆಯ ಅಭ್ಯುದಯ ಕಾರ್ಯವು ಸಿದ್ಧಿಹೊಂದುವಂತೆ ಅನುಗ್ರಹಿಸುತ್ತಿರಲೆಂದೂ ಪ್ರಾರ್ಥಿಸುವೆವು.

ಮತ್ತೇನು ? ಸಂತೋಷಭರದಿಂದಲೂ, ಸೌದರ್ಯಭಾವದ ಸಲಿಗೆಯಿಂದಲೂ, ಇಷ್ಟುದೂರ ಹೇಳಿದ ನಮ್ಮ ಭಾಷಣದಲ್ಲಿ, ಆತ್ಮಪ್ರಶಂಸೆಯಾಗಲೀ, ಅತ್ಯುಕ್ತಿಯಾಗಲೀ ಮರ್ಯಾದಾತಿಕ್ರಮಣ ದೋಷಗಳಾಗಲೀ ಕಂಡುಬರಬಹುದಾಗಿದ್ದರೆ, ಅದನ್ನು ಬಾಲ್ಯಬುದ್ಧಿಯಿಂದ ಮಾಡಲ್ಪಟ್ಟುದೆಂದು ಮನ್ನಿಸಿ, ಈ ವರೆಗೂ ಪ್ರೋತ್ಸಾಹಿಸುತ್ತಿದ್ದಂತೆಯೇ ಮುಂದೆಯಾದರೂ ಪ್ರೋತ್ಸಾಹಿಸುತ್ತಿರಬೇಕೆಂದೂ, ಪಂಡಿತರನ್ನೂ, ಪತ್ರಕರ್ತರನ್ನೂ ದೇಶಬಾಂಧವರನ್ನೂ, ದೇಶೋದ್ಧಾರಕರನ್ನೂ ಮತ್ತೆಮತ್ತೆಯೂ ಪ್ರಾರ್ಥಿಸುತ್ತ ಕ್ಷಮಾಪಣವನ್ನು ಕುರಿತ ಇಂದಿನ ಲೇಖನವನ್ನು ಇಲ್ಲಿಗೆ ವಿರಮಿಸಿರುವೆವು.

15-10-1915,
ನಂಜನಗೂಡು.

ಇತಿ,
ಹಿತೈಷಿಣೀ.

# ಅಸಾಧುಸಾಧುಪತ್ರಂ

| ಪುಟ | ಪಙ್ಕ್ತಿ | ಅಸಾಧು | ಸಾಧು |
|---|---|---|---|
| ೧ | ಮಂಗಳಶ್ಲೋ॥೨ನೆಪಾ॥ | ಪ್ರೇಕ್ಷತಾರಾ | ಪ್ರೇಕ್ಷ್ಯತಾರಾ |
| ೩ | ೪ | ಆಶಾಶಾಃ | ಆಶಾಃ |
| ೯ | ೯ | ಬೆಳಿದು | ಬೆಳೆದು |
| ೨೨ | ೬ | ಯಜಮಾ | ಯಜಮಾನ |
| ೨೯ | ೨೩ | ನೊಡಿದರೂ | ನೋಡಿದರೂ |
| ೫೬ | ೧೧ | ಕಾರಾರ್ಥಿ | ಕಾರ್ಯಾರ್ಥಿ |
| ೫೯ | ೪ | ತಲುಪಿಸು | ಮುಟ್ಟಿಸು |
| ೬೨ | ೭ | Reeding | Reading |
| ೭೮ | ೨೦-೨೧ | ಮಲದಂತೆಯೋ | ಮಲಗಿದ್ದಂತೆಯೋ |
| ೧೪೨ | ೧೭ | ಪೆಟ್ಟಿಯೊಳಗೆ | ಪೆಟ್ಟಿಗೆಯೊಳಗೆ |
| ೧೪೩ | ೧೮ | ಧಮಪಾಲ | ಧರ್ಮಪಾಲ |
| ೧೭೫ | ೪ | ಮರಣಾತರವೂಂ | ಮರಣಾನಂತರವೂ |
| ೧೮೩ | ೧ | ನಿಲ್ಲಿಸಿದುಪೆಲ್ಲ | ನಿಲ್ಲಿಸಿದುದಲ್ಲದೆ |
| ೧೯೯ | ೪ | ಸ್ಥಾನದಲ್ಲ | ಸ್ಥಾನದಲ್ಲಿ |
| ೨೦೦ | ೨೩ | ಪತಿಯಾ | ಪತ್ಯಾ |
| ೨೦೮ | ೩ | ಳಿಗೆ | ಅವಳಿಗೆ |
| ೨೨೫ | ೨೦ | ಮಾಡಿದರು | ಮಾಡಿದನು |
| ೨೩೮ | ೨೧ | ಕದ್ದೊಯು | ಕದ್ದೊಯ್ಯು |

ಅರ್ಥ ವ್ಯತ್ಯಾಸವಾಗುವ ಶಬ್ದಗಳಿಗೂ, ಅಕ್ಷರಗಳು ಬಿಟ್ಟುಹೋಗಿರುವ ಶಬ್ದಗಳಿಗೂ ಮಾತ್ರವೇ ಇಲ್ಲಿ ಶುದ್ಧರೂಪವನ್ನು ಕೊಟ್ಟಿರುವುದು. ಉಳಿದ ಅಲ್ಪಸ್ವಲ್ಪ ದೋಷಗಳಾವುದಿದ್ದರೂ, ವಾಚಕರೇ ಸರಿಪಡಿಸಿಕೊಳಬೇಕಾಗಿ ಕೋರುತ್ತಿರುವುದು.

|| ಶ್ರೀ ||

# ಪ್ರಸ್ತಾವನೆ.

ಸೋದರಿಯರೇ !

ಸರ್ವಮಂಗಳೆಯ ವರಪ್ರಸಾದದಿಂದಲೂ, ಆರಾಧ್ಯದೇವನ ಅಂತರಂಗ ಸಹಾಯದಿಂದಲೂ, ಗುರುವಿನನುಗ್ರಹ ಬಲದಿಂದಲೂ, ಮತ್ತು ದೇಶೋದ್ಧಾರಕರಾದ ಧರ್ಮಬಾಂಧವರ ಹಿತಾಹಿತಸೂಚನಾ-ಪ್ರೋತ್ಸಾಹಗಳಿಂದಲೂ ಕೈಕೊಂಡ ಕಾರ್ಯವು, ಎಂದರೆ-ಈ ದಕ್ಷಕನ್ಯಾಭಿಧಾನ ಗ್ರಂಥ ರಚನಾಕೃತಿಯು ಇಂದಿಗೆ ಕೊನೆಮುಟ್ಟಿದಂತಾಯಿತು.

ಆದರೆ, ಈ ಗ್ರಂಥಕಲ್ಪನೆಯಲ್ಲಿ, ಕೇವಲ ಭಗವತಿಯೊಲ್ಮೆಯೊಂದಲ್ಲದೆ, ಇತರ ಸಹಾಯಸಂಪತ್ತಿಯಾಗಲೀ, ದೇಶಭಾಷೆಯೊಂದಲ್ಲದೆ,-ಮತ್ತಾವ ಭಾಷಾಪರಿಜ್ಞಾನವಾಗಲೀ ಸೇರಿರುವುದಿಲ್ಲ. ಆದುದರಿಂದ, ಈ ಕ್ಷುದ್ರ ಗ್ರಂಥವು ಪಂಡಿತಂಮನ್ಯರಿಗೆ ನೀರಸವಾಗಿಯೂ, ಅಬದ್ಧಕಲ್ಪನೆಯಾಗಿಯೂ, ಅಸಮಂಜಸವಾಗಿಯೂ ಕಂಡುಬರಬಹುದು. ಆದರೂ ಸಹಜವಾಗಿ ಕ್ಷಮಾವಲಂಬಿಗಳಾಗಿರುವವರಲ್ಲಿ ನಮ್ಮ ಪ್ರಾರ್ಥನೆಯಾದರೂ ಬೇರೆಯಾಗಿರುವುದೇನು ? ಎಳೆಮಕ್ಕಳಾಡುವ ತೊದಲ್ನುಡಿಯ ಅರೆಮಾತುಗಳನ್ನೇ ಅಕ್ಕರೆಯಿಂದ ಕೇಳುವಂತೆ, ದೇಶಭಾಷಾ ಮಾತೃಸೇವೆಗಾಗಿಯೇ ಹುಟ್ಟಿರುವೆನೆಂದು ನಂಬಿರುವ, ಓರ್ವ ಬಾಲಿಶವಿದ್ಯಾರ್ಥಿನಿಯ ಅಲ್ಪಮತಿಗೊಳಪಟ್ಟ ಇದೊಂದು ಸೇವೆಯ ಉಪಕರಣಮಾತ್ರವೆಂದಾದರೂ ಭಾವಿಸಿ, ಸಾದರದಿಂದ ಸಮಾಲೋಚಿಸಿ, ಉಚಿತಾನುಚಿತ ವಿಚಾರಗಳನ್ನು ಕಾಲೋಚಿತವಾಗಿ ಸೂಚಿಸಿ ಪ್ರೋತ್ಸಾಹಿಸುವುದಾದರೆ, ಮಹೋಪಕಾರವಾದಂತೆಯೇ ಆನಂದಿಸುವೆನು.

ಮತ್ತೇನು ಹೇಳಲಿ ? ನಮ್ಮ ಸ್ತ್ರೀಜನಾಂಗದ ಪುರೋವೃದ್ಧಿಗೆ ಆವಶ್ಯಕವಾಗಿರಬೇಕಾದ ರೀತಿ-ನೀತಿಗಳನ್ನು ಪ್ರತ್ಯಕ್ಷಾಪ್ರತ್ಯಕ್ಷರೂಪ

ದಿಂದ, ಅನುಭವಕ್ಕೊಳಪಟ್ಟ ವಿಚಾರಗಳನ್ನು ತಕ್ಕಮಟ್ಟಿಗೆ ಉದಾಹರಣೆಗಳೊಡನೆಯೇ ಪ್ರತಿಪರಿಚ್ಛೇದದ ಆದಿ ಅಥವಾ ಅಂತ್ಯಭಾಗದಲ್ಲಿಯೇ ಕಾಣಿಸಿರುವುದರಿಂದಲೂ, ಗ್ರಂಥದ ಕಡೆಯಲ್ಲಿರುವ 'ಫಲಿತಾಂಶ' ಲೇಖನದಲ್ಲಿ ಉದ್ದೇಶ-ಚರಿತಾರ್ಥತೆಗಳ ವಿಚಾರವನ್ನು ಸ್ಪಷ್ಟಪಡಿಸಿರುವುದರಿಂದಲೂ ಇಲ್ಲಿ, ಇನ್ನು ಇದಕ್ಕೂ ಹೆಚ್ಚಾಗಿ ಬರೆಯಬೇಕಾದ ಆಗತ್ಯವೇನೂ ಕಾಣುತ್ತಿಲ್ಲವಾದರೂ, ಆದನ್ನೇ ನಮ್ಮ ಸೋದರಿಯರೆಲ್ಲರ ಕಿವಿ, ಕಣ್, ಮನಸ್ಸುಗಳನ್ನೂ ಮುಟ್ಟುವಂತೆ ಮಾಡುವ ಕೆಲಸದಲ್ಲಿ, ನಮ್ಮ ಧರ್ಮಬಾಂಧವರು ಅಧಿಕ ಶ್ರಮವನ್ನು ವಹಿಸಿಕೊಳ್ಳಬೇಕೆಂದು ಮತ್ತೆಮತ್ತೆಯೂ ಬೇಡಿಕೊಳ್ಳುವುದೊಂದನ್ನು ಮಾತ್ರ ಬಿಡಲಾರೆನು. ಆ ನಮ್ಮ ಸನ್ಮಾನನೀಯ ಭ್ರಾತೃವರ್ಗೀಯರು, ತಮ್ಮ ತಮ್ಮ ನಾರೀ ವರ್ಗಗಳಲ್ಲಿ, ವಿಂದಾ ಸುಕನ್ಯಾ-ಸುನಂದಾ-ಗಂಗಾ-ಯಮುನಾ-ಮೊದಲಾದವರ ಕರ್ತವ್ಯಕ್ಷಮತೆ, ನಿರಂತರೋದ್ಯಮಶೀಲತೆಗಳನ್ನುಂಟುಮಾಡುವವರಾದರೆ, ನನ್ನ ಲೇಖನದ ಪರಿಶ್ರಮವೂ, ಉದ್ದೇಶವೂ ಸಾರ್ಥಕ್ಯಹೊಂದುವುವಲ್ಲದೆ, ಪತ್ರೀದಾರಿಗೆ ಸಂಬಂಧಿಸಿದ ಕಾದಂಬರಿಯೊಂದನ್ನು ಬರೆಯಬೇಕೆಂದು ಹುರುಡಿಸಿದ ನನ್ನ ಸೋದರನ [ಈಗ ಸದ್ಯದಲ್ಲಿ ಈತನು, ಕಾಶಿ ಸೆಂಟ್ರಲ್ ಹಿಂದೂ ಕಾಲೇಜಿನ ಇಂಟರ್ ಮೀಡಿಯೇಟ್ ತರಗತಿಯ ವಿದ್ಯಾರ್ಥಿಯಾಗಿರುವನು.] ಅಭಿಮತವೂ ಸಫಲವಾದೀತೆಂದು ಹೇಳಲು ಯಾವ ಅಭ್ಯಂತರವೂ ಇರುವುದಿಲ್ಲ.

ಮುಖ್ಯವಾಗಿ, ನಮ್ಮಾ ದೇಶಮಾತೆಯ ಅಭ್ಯುದಯಕ್ಕೆ ಪ್ರಬಲ ಕಂಟಕಗಳಾಗಿರುವ ತೃಷ್ಣಾ-ದುರಾಚಾರ ರೋಗಗಳು ನಿವಾರಣೆಯಾಗಿ, ಸದಾನಂದ ಸಾಮ್ರಾಜ್ಯವು ಸ್ಥಿರಪಡುವಂತೆ ಮಾಡಬಲ್ಲ ಸ್ವಶಕ್ತಿ, ಸ್ವಾವಲಂಬನ, ಸ್ವರೂಪವಿಜ್ಞಾನಗಳೆಂಬ ಮಂತ್ರಶಕ್ತಿಗಳು ನಮ್ಮ ಅಶೇಷ ಕರ್ಣಾಟಕ ಮಾತೃಸಂತಾನರಲ್ಲಿಯೂ ಸ್ಫೂರ್ತಿಗೊಳಿಸುವಂತೆ ಅನುಗ್ರಹಿಸಬೇಕೆಂದು ಅನವರತವೂ ಅನನ್ಯಭಾವದಿಂದ ಮಾತೃಸನ್ನಿಧಿಯಲ್ಲಿ ಸಂಪ್ರಾರ್ಥಿಸುತ್ತಿರುವ

**ರಾ||ಸಂ|| ಆಶ್ವಿಜಶುದ್ಧಚತುರ್ಥಿ**
**ಮಂಗಳವಾರ**
**ಗರಳಪುರೀ (ಸಂಜನಗೂಡು)**

ನಿರಂತರ ಶ್ರೇಯಃಕಾಂಕ್ಷಿಣಿ,
ವಿದ್ಯಾರ್ಥಿನಿ.

# ವಿಷಯಸೂಚನೆ.


| ಪರಿಚ್ಛೇದ | ವಿಷಯ | ಪುಟಸಂಖ್ಯೆ |
|---|---|---|
| | (ಪ್ರಥಮಭಾಗದಲ್ಲಿ) | |
| ಪ್ರಥಮ ... | ವಿಷಯೋಪಾಸನೆ ... | ೧–೪ |
| ದ್ವಿತೀಯ ... | ಒಳಸಂಚು ... | ೫–೯ |
| ತೃತೀಯ ... | ಮೋಸದ ಮದ್ದು ... | ೯–೧೪ |
| ಚತುರ್ಥ ... | ಚೇಳುಕಡಿತ ... | ೧೫–೨೫ |
| ಪಂಚಮ ... | ಆಶೋತ್ಪತ್ತಿ ... | ೨೫–೩೨ |
| ಷಷ್ಠ ... | ಅಪೂರ್ವದೃಶ್ಯ ... | ೩೩–೩೯ |
| ಸಪ್ತಮ ... | ಭಯೋತ್ಪಾತ ... | ೪೦–೪೬ |
| ಅಷ್ಟಮ ... | ಕೌತುಕವ್ಯಾಪಾರ ... | ೪೭–೫೦ |
| ನವಮ ... | ಆರೋಪಣೆ-ನಿರೂಪಣೆ ... | ೫೧–೫೬ |
| ದಶಮ ... | ನಿಯೋಗ ... | ೫೬–೬೧ |
| ಏಕಾದಶ ... | ಎಚ್ಚರಿಕೆ ... | ೬೨–೬೭ |
| ದ್ವಾದಶ ... | ಪರಿವರ್ತನೆ ... | ೬೮–೭೪ |
| ತ್ರಯೋದಶ ... | ಸಂಭ್ರಮ-ಸಂತಾಪ ... | ೭೪–೮೨ |
| ಚತುರ್ದಶ ... | ಆಗ್ರಹ ... | ೮೩–೯೩ |
| ಪಂಚದಶ ... | ದೀಕ್ಷೆ ... | ೯೩-೯೯ |
| | (ದ್ವಿತೀಯ ಭಾಗದಲ್ಲಿ) | |
| ಪ್ರಥಮ ... | ಅನ್ವೇಷಣೆ ... | ೧೦೦–೧೦೭ |
| ದ್ವಿತೀಯ ... | ಪೂರ್ವಸ್ಮರಣೆ ... | ೧೦೮–೧೧೨ |
| ತೃತೀಯ ... | ಅಭಯಪ್ರದಾನ ... | ೧೧೩–೧೧೮ |
| ಚತುರ್ಥ ... | ಮುಯ್ಯಿಗೆಮುಯ್ಯಿ ... | ೧೧೯–೧೨೨ |

| ಪರಿಚ್ಛೇದ | | ವಿಷಯ | | ಪುಟಸಂಖ್ಯೆ |
|---|---|---|---|---|
| ಪಂಚಮ | ... | ವಿಪರ್ಯಾಸ | ... | ೧೨೩–೧೩೨ |
| ಷಷ್ಠ | ... | ಪುನರ್ವಿಯೋಗಶಂಕೆ | ... | ೧೩೨–೧೩೯ |
| ಸಪ್ತಮ | ... | ಅಂಚೆಗೆ ಸೂಚನೆ | ... | ೧೪೦–೧೪೬ |
| ಅಷ್ಟಮ | ... | ವಿಶ್ರಾಂತಿ | ... | ೧೪೭–೧೫೩ |
| ನವಮ | ... | ಐಂದ್ರಜಾಲ | ... | ೧೫೪–೧೫೯ |
| ದಶಮ | ... | ದ್ವೇಷಸಾಧನೆ | ... | ೧೬೦–೧೬೭ |
| | | (ತೃತೀಯ ಭಾಗದಲ್ಲಿ) | | |
| ಪ್ರಥಮ | ... | ಅನಿಷ್ಟಸಂಘಟನ | ... | ೧೬೮–೧೭೩ |
| ದ್ವಿತೀಯ | ... | ಪರಿಷ್ಕರಣ | ... | ೧೭೪–೧೮೦ |
| ತೃತೀಯ | ... | ದಿಗ್ಬಂಧನ | ... | ೧೮೦–೧೮೩ |
| ಚತುರ್ಥ | ... | ಭಯಪ್ರದರ್ಶನ | ... | ೧೮೪–೧೮೮ |
| ಪಂಚಮ | ... | ಬೀಭತ್ಸವ್ಯಾಪಾರ | ... | ೧೮೯–೧೯೪ |
| ಷಷ್ಠ | ... | ದಿಗ್ವಿಜಯ | ... | ೧೯೫–೧೯೮ |
| | | (ತುರೀಯ ಭಾಗದಲ್ಲಿ) | | |
| ಪ್ರಥಮ | ... | ನ್ಯಾಯವಿಮರ್ಶೆ–ಕೃತಾಂತನ ವಾಙ್ಮೂಲ | | ೧೯೯–೨೧೦ |
| ದ್ವಿತೀಯ | ... | ವಿಂದಾಪರಿಚಯ–ಪ್ರಹರಿಗಳ ಹೇಳಿಕೆ | | ೨೧೦–೨೧೫ |
| ತೃತೀಯ | ... | ಯಮುನೆಯ ಹೇಳಿಕೆ | ... | ೨೧೬–೨೨೧ |
| ಚತುರ್ಥ | ... | ಗಂಗೆಯ ನಿಶ್ಚಿತಾರ್ಥ | ... | ೨೨೨–೨೩೧ |
| ಪಂಚಮ | ... | ವಾಸುದೇವಾದಿಗಳ ಗರ್ವಭಂಗ | ... | ೨೩೧–೨೪೦ |
| ಷಷ್ಠ | ... | ಬಲವಂತನ ಜೀವಿತವೃತ್ತಾಂತ | ... | ೨೪೧–೨೪೭ |
| ಸಪ್ತಮ | ... | ಧರ್ಮಪಾಲನ–ನ್ಯಾಯಸ್ಥಾಪನೆ | ... | ೨೪೭–೨೫೦ |
| | | ಫಲಿತಾಂಶ. | | |

ಶ್ರೀ

|| ಲಕ್ಷ್ಮೀನೃಸಿಂಹಪ್ರಸನ್ನ ||

# ದಕ್ಷಕನ್ಯಾ

" ಪಾಶ್ಚಾತ್ಯಾಶೋಕಪುಷ್ಪಪ್ರಕರನಿಪತಿತೈಃ ಪ್ರಾಪ್ತರಾಗಂ ಪರಾಗೈಃ |
ಸ್ನಾನಾರ್ಘ್ಯೈರೋಚಿಸ್ಸಗನ್ಧೈಃ ಸ್ತ್ವಪದ ಶಶಧರಂ ಪ್ರೇಕ್ಷ್ಯ ತಾರಾನುಷಕ್ತಮ್ ||
ಪದ್ಮಾನಾಂ ಬದ್ಧಕೋಶಾ ನಿವಸುರನಿವಹೈರಞ್ಜಲೀನ್ ಕಲ್ಪಮಾನಾಂ |
ಚಕ್ರಾಧೀಶೋಽಭಿವನ್ದನ್ ಪ್ರದಿಶತುಸದೃಶಾಮುತ್ತಮಶ್ಲೋಕಶಾಂ ವಃ "||೯೭||

(ಸು-ಶ.)

## ಪ್ರಥಮಪರಿಚ್ಛೇದ.

(ವಿಷಯವಾಸನೆ.)

ಭಗವಾನ್ ಭಾಸ್ಕರನು ಸಾಯಂಸಂಧ್ಯೆಯನ್ನು ಸಮೀಪಿಸಿದ್ದನು. ಆತನ ಚಂಡಕಿರಣದ ಉದ್ದಂಡತಾಪವೂ ಈ ವೇಳೆಯಲ್ಲಿ ಶಾಂತರೂಪವನ್ನೇ ತಾಳಿ, ಸುಮನೋಹರವಾಗಿತ್ತು. ಈ ವೇಳೆಯಲ್ಲಿ ವಾಯುಸೇವನೆಗಾಗಿ ಹೊರಹೊರಡುವ ನಾಗರಿಕರ ದರ್ಶನವೂ ಸುಲಭವಲ್ಲವೆ? ಸಂದೇಹವೇನು? ವಿಷಹರಪುರದ ರಾಜಬೀದಿಯಲ್ಲಿ ಉನ್ನತವೂ, ವಿಸ್ತಾರವೂ ಆದ ಉಪ್ಪರಿಗೆ ಮನೆಯೊಂದು, ನಕ್ಷತ್ರಗಣದಲ್ಲಿ ಪರಿಶೋಭಿಸುವ ಚಂದ್ರನಂತೆಯೇ ಬಗೆಗೊಳ್ಳುತ್ತಿರುವುದು. ಉಪ್ಪರಿಗೆಯ ಮೇಗಡೆ ಕಂಬಕ್ಕೆ ತಗಲಿಸಿದ್ದ ಲಾಂದ್ರದ ಗಾಜಿನಮೇಲೆ ಸೂರ್ಯರಶ್ಮಿಯು ಬಿದ್ದು, ಮನೆಯ ಮುಂಗಡೆಯನ್ನೆಲ್ಲಾ ಸಪ್ತವರ್ಣಗಳಿಂದ ಚಿತ್ರಮಯವಾಗಿ ಮಾಡಿದ್ದಿತು. ವಾಯುಸೇವನೆಗಾಗಿ ತೀವ್ರಗಮನದಿಂದ ಬರುತ್ತಿದ್ದ ಸುಂದರ ತರುಣನೊ

ಬ್ಬನು, ಇದೇ ದಾರಿಯಲ್ಲಿಯೇ ಅಧೋವದನನಾಗಿ ನಡೆತರುತ್ತಿದ್ದನು. ಆದರೆ,ಮನೆಯಮುಂಗಡೆಗೆ ಬರುವುದರೊಳಗಾಗಿ, ಉಪ್ಪರಿಗೆಯ ಮೇಲಿಂದ ಕೆಳಗೆ ಹಾರಿಬಿದ್ದ ಸುವಾಸನಾಯುಕ್ತವಾದ ಗುಲಾಬಿಯ ಹೂವೊಂದು, ಈತನ ಕಣ್ಮನಂಗಳನ್ನು ವಿಸ್ಮಯ ಮತ್ತು ಕೌತುಕಗಳಿಗೆಡೆಮಾಡಿದುದಲ್ಲದೆ, ಉಪ್ಪರಿಗೆಯ ಕಡೆಗೆಳೆದಿತು.

ಯುವಕನು ತಲೆಯೆತ್ತಿನೋಡಿದನು , ಬೆರಗಾದನು. ಏಕೆ ? ಮೇಲು ಪ್ಪರಿಗೆಯಲ್ಲಿ ಗಾಳಿಗೆ ಮೈಯ್ಯೊಡ್ಡಿ ನಿಂತಿದ್ದ ರಮಣೀಮೂರ್ತಿಯನ್ನು ಕಂಡೂ ಬೆರಗಾಗದ ತರುಣರುಂಟೋ ? ಅಷ್ಟೇಅಲ್ಲ ! ಮೇಲಕ್ಕೆತ್ತಿದ ಯು ವಕನ ದೃಷ್ಟಿಯಾದರೂ ಕೆಳಕ್ಕಿಳಿಯಲೊಲ್ಲೆನೆಂದು ರಮಣಿಯ ರೂಪರಾಶಿ ಯಲ್ಲಿಯೇ ಸೇರಿಹೋಯಿತು ! ರಮಣಿಯಾದರೂ ಸುಮ್ಮನಿದ್ದಳೆಂದೋ ? ಅವಳ ವಿಜಾತೀಯವೀಕ್ಷಣವು ಯುವಕನನ್ನು ತಕ್ಕಷ್ಟು ಪ್ರಹರಿ ಸದೆ ಬಿಡಲಿಲ್ಲವೆಂಬುದೇ ನಮ್ಮ ಭಾವನೆ ! ಹೇಗೂ ಹೆಚ್ಚುಹೊತ್ತು ಹಾಗೆ ನಿಂತಿರಲಿಲ್ಲ. ಯುವಕನನ್ನು ಮಹಾಶಯನೆಂದು ತಿಳಿದೋ, ಮತ್ತೇತರಿಂ ದೆಯೋ, ರಮಣಿಯು ಸರ್ರನೆ ತಿರುಗಿ ಹೊರಟುಹೋದಳು.

ರಮಣಿಯ ಪರಾಙ್ಮುಖತೆಯಿಂದ, ತರುಣನ ಮುಖವು ವಿವರ್ಣ ವಾಯಿತು. ಆಗಲೂ ರಮಣಿಯಲ್ಲಿ ಸೇರಿಹೋಗಿದ್ದ ಈತನ ಮನಸ್ಸು ಮಾತ್ರ ಮತ್ತೆ ತಿರುಗಲಿಲ್ಲ. ದೃಷ್ಟಿಯೇನುಮಾಡಬಲ್ಲುದು ? ಪಾಪ ! ಮಕ ರಂದಕ್ಕಾಗಿ ಹೋದರೆ, ಆ ಸುಗಂಧಪುಷ್ಪವೇ ಕಣ್ಮರೆಯಾಯ್ತೆಂಬ ಶೋಕ ದಿಂದ, ಕಂದಿ ಕುಂದಿ ಹಿಂದಿರುಗಿತು ! ಯುವಕನು ಮತ್ತೇನನ್ನು ಮಾಡ ಬೇಕು ? ಮತ್ತೊಮ್ಮೆ ಆ ದೈವಿಕಮೂರ್ತಿಯನ್ನು ಕಣ್ಣಾರೆ-ಮನವಾರೆ ನೋಡಿ ಹೋಗಬೇಕೆಂದಿದ್ದರೂ, ಹೆಚ್ಚುಹೊತ್ತು ಅಲ್ಲಿ ನಿಂತಿರುವಂತಿಲ್ಲ ; ಹೊರಟೇಹೋಗಬೇಕು. ಆದರೆ, ಕಾಲೇ ಬಾರದು ! ಇದಲ್ಲವೇ, ವಿಚಿತ್ರ ಘಟನಾವಿಶೇಷ ! ಇದನ್ನೇ ಅಲ್ಲವೆ, ರಮಣಿಯರ ಅದ್ಭುತಶಕ್ತಿಯೆಂದೆನ್ನು ವುದು ? ಹೇಗಾದರೂ ಇರಲಿ ; ತರುಣನೇನೋ ಮುಂದಕ್ಕಡಿಯಿಟ್ಟನು.

ಮತ್ತೊಮ್ಮೆ ಹಿಂದಿರುಗಿನೋಡಿದನು ; ರಮಣಿಯಿದ್ದೆಡೆಯಲ್ಲಿ ನಿಂತಿದ್ದ ಕೃಷ್ಣವರ್ಣದ ಕರಾಳಸ್ತ್ರೀವಿಗ್ರಹವೊಂದನ್ನು ಕಂಡು, ಭಯಚಕಿತನಾದನು! ನಿಟ್ಟುಸಿರಿಟ್ಟು, ಪ್ರಯಾಸದಿಂದ ಮುಂದಕ್ಕೆ ನಡೆದನು. ಇದಕ್ಕಲ್ಲವೇ 'ಆಶಾಶಾಃಪರಮಂದುಃಖಂ' ಎಂದು ಹೇಳುವುದು ?

ಯುವಕನ ಸ್ಥಿತಿ, ಗತಿ, ವೀಕ್ಷಣ ವಿಭಾಗಗಳನ್ನು ನೋಡಿದ ಕೃಷ್ಣಾಂಗಿಯ ಮುಖವು ರಕ್ತವರ್ಣಕ್ಕೆ ತಿರುಗಿತು; ಅವಳ ಕಣ್ಣಾಲೆಗಳೂ ಕೆಂಪೇರಿ, ಗಿರಗಿರನೆ ತಿರುಗತೊಡಗಿದುವು. ಅವಳು, ತಾನೊಮ್ಮೆ ಹೂಂಕರಿಸಿದ ಮಾತ್ರಕ್ಕೆ, ಯುವಕನಿಗಾದ ಸ್ಥಿತಿಯನ್ನು ಕುರಿತು ಸಂಶಯಕ್ಲೇಶಕ್ಕೆಡೆಯಾದಳು, ಮತ್ತೂ ವಿಚಾರತರಂಗಗಳಿಂದ ತಳಮಳಗೊಳ್ಳುತ್ತ ಉಪ್ಪರಿಗೆಯಲ್ಲೆಲ್ಲಾ ಸುತ್ತಾಡತೊಡಗಿದಳು.

ಸಾಮಾನ್ಯವಾಗಿ ನೋಡಿದರೆ, ಯಾರಿಗೇಆಗಲಿ ಸಂಶಯವಿಚಾರವೊಂದು ಮನಮುಟ್ಟಿತೆಂದರೆ ಸಾಕು; ಎಷ್ಟೇ ಪಾಂಡಿತ್ಯವಿರಲಿ, ಅದು ಮಲಿನವಾಗಿ ನೂರಾರು ಚಿನ್ತಾತರಂಗಗಳಲ್ಲಿ ಸಿಕ್ಕಿ ತೊಳಲುವಂತಾಗುವುದು ಸರಿಯಷ್ಟೆ! ಅದರಲ್ಲಿಯೂ ವಿಶೇಷ ಪಾಂಡಿತ್ಯವಿಲ್ಲದೆ, ನಾಗರಿಕತೆಯ ತಿರುಳನ್ನಾದರೂ ಕಂಡರಿಯದೆ, ಪ್ರಾಚೀನ ಮರ್ಯಾದೆಯನ್ನೂ ಮೀರದೆ ವರ್ತಿಸತಕ್ಕ ಮಹಿಳೆಯರಲ್ಲಿ ಹೇಳಬೇಕಾದುದೇನು ? ಹಾಗೆಯೇ ನಮ್ಮ ಕೃಷ್ಣಾಂಗಿಗಾದರೂ ಚಿನ್ತೆಯಾವರಿಸಿತ್ತೆಂದರೆ ಆಕ್ಷೇಪವುಂಟೋ ?

ಚಿನ್ತಾಪರವಶತೆಯಿಂದ ಬೀಗಿದ್ದ ಕೃಷ್ಣಾಂಗಿಗೆ ಇತರ ವಿಚಾರವೇನೆಂಬುದೇ ಮರೆತುಹೋಯಿತು. ಕ್ರಮಕ್ರಮವಾಗಿ ಹೊತ್ತುಮೀರಿ ಕತ್ತಲೆಯೂ ಸುತ್ತಿಮುತ್ತಿಕೊಂಡಿತು. ಅಷ್ಟಾದರೂ ಇವಳು, ಉಪ್ಪರಿಗೆಯಿಂದ ಕೆಳಗಿಳಿಯಬೇಕೆಂಬುದನ್ನಾಗಲೀ, ತಾನು ಏನನ್ನು ಮಾಡಬೇಕೆಂಬುದನ್ನಾಗಲೀ ತಿಳಿದುಕೊಳ್ಳಲಾರದೆಯೇ ಇದ್ದಳು. ಆದರೆ ಇನ್ನೂ ಎಷ್ಟುಹೊತ್ತು ಹಾಗಿದ್ದು ತೀರುವುದು ? ಮನೆಗೆಲಸವಾಗಬೇಕಲ್ಲವೆ ? ಕೆಳಗಡೆಯಿಂದ ಹೊರಟುಬಂದ "ಯಮುನಮ್ಮಾ ! ಯಮುನಮ್ಮಾ !! ಎಲ್ಲಿರುವಿರಿ ? '

ಎಂಬ ಬಲವಾದ ಕೂಗೊಂದು ಇವಳ ಕಿವಿಯನ್ನು ಕೊರೆದು, ಮನಸ್ಸನ್ನು ತಿವಿದು, ಪ್ರಜ್ಞೆಗೆ ಆವರಿಸಿದ್ದ ಜಡತೆಯನ್ನು ಕಡಿದುಹಾಕಿಬಿಟ್ಟಿತು.

ಕೃಷ್ಣಾಂಗಿಯಾದಾ ಯಮುನಾಬಾಯಿ, ಜಡತೆಯಿಂಗಿದ ಬಳಿಕಾದರೂ ಚಿತ್ತಸ್ವಾಸ್ಥ್ಯವನ್ನು ಹೊಂದಲಾರದೆಯೇ ಇದ್ದಳು. ಏಕೆಂದರೆ— ಜಡತೆಯಿಂಗಿದ ಬಳಿಕ, ಚಂಚಲತೆಯು ಹೊರಹೊಮ್ಮದೆ ಪ್ರಕಾಶವು ಸ್ಥಿರವಾಗಲಾರದಷ್ಟೆ. ಹಾಗೆಯೇ ಯಮುನೆಯು ಕೂಡ ತನ್ನಲ್ಲಿತಾನೆಯೇ, ‘ ಇದಾವಸಂಕೇತ ? ಇದರ ನಿಜಾಶಯವೇನು ? ಇಂದು ಮಧ್ಯಾಹ್ನದಿಂದ ಸಂಶಯಗಳೇ ಪರಂಪರೆಯಾಗಿ ಕಂಡುಬರುತ್ತಿರುವುದೇಕೆ ? ಇದರಿಂದ ಈ ಗೃಹಸ್ವಾಮಿಗೇನಾದರೂ ಕೆಡುಕುಂಟಾದೀತೋ ? ತಿಳಿದು ಹೇಳುವವರಾರು ? ಓ ನಮ್ಮ ತಾಯಿ ! ಗೃಹರಾಜ್ಯಲಕ್ಷ್ಮಿ !! ಸುನಂದಾದೇವಿ !!! ನೀನೆಲ್ಲಿರುವೆ ? ಏಕೆ ವಿಳಂಬಿಸುವೆ ? ನೀನು ಮತ್ತೆ ಬಂದೆಯಾದರೆ, ಈ ಪುಂಡಾಟಕ್ಕೆ ಗಂಡುಮದ್ದಾದೀತಲ್ಲವೇ ? ತಾಯಿ ! ಮತ್ತೆ ಮೈದೋರಲಾರೆಯಾ ? ’ ಹೀಗೆ ಹೇಳು–ಹೇಳುತ್ತ ಆಕಾಶವನ್ನು ನೋಡಿ, ವಿಕೃತಸ್ವರದಿಂದ–‘ ಭಗವತಿ ! ದುರ್ಗಾಮಾತೆ !! ಕೃಪೆಮಾಡು, ನಮ್ಮ ತಾಯಿಯನ್ನು ಮತ್ತೆ ಕರೆಸಿಕೊಡು. ದಯಾಮಯಿ ! ಈ ದಿನದ ವಿಷಯವಾಸನಾರೋಗಕ್ಕೆ ತಕ್ಕ ಮದ್ದು ಕೊಟ್ಟು ಕಾಪಾಡು ’ ಎಂದು ಕೂಗಿಹೇಳುತ್ತ ಉಪ್ಪರಿಗೆಯಿಂದ ಕೆಳಕ್ಕಿಳಿದುಬಿಟ್ಟಳು.

|| ಶ್ರೀಃ ||

# ದ್ವಿತೀಯ ಪರಿಚ್ಛೇದ.

(ಒಳಸಂಚು)

ಉಪ್ಪರಿಗೆಯಿಂದಿಳಿದ ಯಮುನೆಯು, ಮೊದಲು ಅಂಗಳಕ್ಕೆ ಬಂದಳು. ಅಂಗಳದಲ್ಲಿ ಉಪ್ಪರಿಗೆಗೆ ಹತ್ತುವ ಹಂತದ ಬಾಗಿಲಿಗೆ ಅಡ್ಡವಾಗಿಯೇ ನಿಂತಿದ್ದ ತರುಣಸೇವಕನನ್ನು ಕಂಡಳು. ಆ ವೇಳೆಯಲ್ಲಿ ಆತನ ಮುಖಭಾವ ಮತ್ತು ವರ್ಣಭೇದಗಳಿಂದ ಯಮುನೆಯ ಸಂಶಯವು ಮತ್ತೂ ಹೆಚ್ಚಿತು. ಆದರೂ ಸಂಶಯವನ್ನು ಪ್ರಕಟಮಾಡದೆ, ಅಡಗಿಸಿಕೊಂಡು ಮೆಲ್ಲನೆ ಕೇಳಿದಳು—' ಗೋಪಾಲ ! ಕರೆದವರಾರು? '

ಗೋಪಾಲ—ನೀವು, ಮನೆಯಲ್ಲಿರುವಿರೋ—ಇಲ್ಲವೋ ? ಎಂಬುದನ್ನು ತಿಳಿಯಲಿಕ್ಕಾಗಿ ನಾನೇ ಕೂಗಿದೆನು.

ಯಮುನೆ—ಏತಕ್ಕಾಗಿ ?

ಗೋಪಾಲ—ಯಾರೋ ಬಂದು ನಿಮ್ಮನ್ನು ಕೇಳಿದರು ; ಆದರಿಂದ ಕರೆದೆ.

ಯಮುನೆ—ಅವರಾರು ? ಏನೆಂದರು ? ಎಲ್ಲಿರುವರು ?

ಗೋಪಾಲ—ಅದಾವುದೂ ನನಗೆ ತಿಳಿಯದು. ಹೇಗೂ ನಿಮ್ಮನ್ನು ನೋಡಬೇಕಾಗಿತ್ತೆಂದೂ, ಮತ್ತೆ ಬರುತ್ತೇವೆಂದೂ ಹೇಳಿ ಹೋದರು.

ಯಮುನೆ—ಹೋಗಲಿ, ಅಮ್ಮಾಯಿಯವರು ಏನುಮಾಡುತ್ತಿರುವರು ?

ಗೋಪಾಲ—ಜಪದಲ್ಲಿರಬಹುದು.

ಯಮುನೆ—ಕಿರಿಯ ಯಜಮಾನಿಯವರೋ ?

ಗೋಪಾಲ—ನಾನು ನೋಡಿಲ್ಲ. ವಿಲಾಸಭವನದಲ್ಲಿಯೇ ಇರಬೇಕು.

ಯಮುನೆ—ಇರಲಿ ; ನೀನು ಈಗ ಹೊರಗೆ ಹೋಗಬೇಕಾದುದಿಲ್ಲವಷ್ಟೆ.

ಗೋಪಾಲ—ಏಕೆ ?

ಯಮುನೆ—ನನಗೆ ಹೊರಗೆ ಕೆಲಸವಿದೆ, ಹೋಗಬೇಕು. ನೀನು ಮನೆಯಲ್ಲಿಯೇ ಇರುತ್ತೀಯಷ್ಟೆ?

ಗೋಪಾಲ—ಈಗಲೇ ನಾನು ಹೊರಗೆ ಹೋಗಬೇಕಾದುದೇನೂ ಇಲ್ಲ. ಅಡಿಗೆಗೆ ಬೇಕಾದುವುಗಳನ್ನು ತೆಗೆದಿಟ್ಟು, ಆ ಬಳಿಕ ಹೋಗಬೇಕಾಗಿದೆ.

ಯಮುನೆ—'ಹಾಗೆಯೇ ಮಾಡು, ನಾನೂ ಹೋಗುವೆನು' ಎಂದು ಬೀದಿಯ ಕಡೆಗೆ ತಿರುಗಿದಳು. ಗೋಪಾಲನೂ ತಲೆದೂಗುತ್ತ ಅಂಗಳ, ತೊಟ್ಟಿ, ನಡುವೆಗಳನ್ನು ದಾಟಿ, ಅಡಿಗೆಮನೆಯ ಹಿಂಗಡೆಯ ಕತ್ತಲೆಕೋಣೆಯ ಕಡೆಗೆ ನಡೆದನು. ಬೀದಿಯ ಅಂಗಳದವರೆಗೂ ನಡೆದಿದ್ದ ಯಮುನೆಯು, ಏನನ್ನೋ ನೆನೆಯಿಸಿಕೊಂಡು ಥಟ್ಟನೆ ಹಿಂದಿರುಗಿದಳು. ಮನದಲ್ಲಿಯೇ ಯಾವುದನ್ನೋ ಗುಣಿಸುತ್ತ ಕಾಲುಸಪ್ಪಳವಾಗದಂತೆ ಗೋಪಾಲನು ನಡೆದ ದಾರಿಯಲ್ಲಿಯೇ ನಡೆತಂದಳು.

ಗೋಪಾಲನಿಗೆ, ಯಮುನೆಯು ತನ್ನ ಬೆನ್ನಟ್ಟಿಬರುತ್ತಿರುವುದೇನುಗೊತ್ತು? ಪಾಪ! ಹಿಂದು-ಮುಂದು ನೋಡದೆ ಮೆಲ್ಲನೆ ಕೋಣೆಯ ಕಿರುಮನೆಯ ಬಳಿಗೆ ಬಂದು ಬಗ್ಗಿನೋಡಿದನು. ಕಿರುಮನೆಯೊಳಗೆ ಸಣ್ಣ ದೀಪವೊಂದು ಮಿಣುಗುತ್ತಿತ್ತು. ಕಿರುಮನೆಯಲ್ಲಿ ಮರದ ಮುರುಕುಮಂಚದಮೇಲೆ ಕೃಷ್ಣಾಂಗನೊಬ್ಬನು ಒರಗಿಕುಳಿತು, ನಸ್ಯವನ್ನು ಹದಮಾಡುತ್ತಿದ್ದನು. ಗೋಪಾಲನು ಕೃಷ್ಣಾಂಗನ ಮುಂದೆನಿಂತು ಹೇಳಿದನು— "ದಿವಾನಸಾಹೇಬ್!"

ದಿವಾನ—(ಕಯ್ಯಲ್ಲಿ ಹದಮಾಡಿದ್ದ ನಸ್ಯದಿಂದ ಒಂದೆರಡು ಚಿಟಿಕಿಯನ್ನು ತೆಗೆದು ಸೊರಸೊರನೆ ಸೇದಿ ಮಿಕ್ಕುದನ್ನು ಬಲಗೈಬೆರಳುಗಳಿಂದ ಅದಿಮಿಹಿಡಿದು, ನಡು-ನಡುವೆ ಸೀನುತ್ತ,-'ಏನು? ಗೋಪಾಲ! ಇಂದಿನ ವಿಶೇಷವಿನ್ನೇನು?'

ಗೋಪಾಲ—ವಿಶೇಷಕ್ಕೆ, ಹೊರಗೆ ಹೋಗಿದ್ದರಲ್ಲವೇ ?

ದಿವಾನ—ಅದೇಕೆ ಹೋಗಲಿಲ್ಲ ?

ಗೋಪಾಲ—ಹೋಗಲಿಕ್ಕೆ ಅವಕಾಶವೇ ದೊರೆಯಲಿಲ್ಲ. ಈ ವರೆಗೂ, ಯಮುನಮ್ಮನವರು ಬಿಸಿಲುಮಾಳಿಗೆಯಮೇಲೆಯೇ ನಿಂತು ನೋಡುತ್ತಿದ್ದರು.

ದಿವಾನ—ಒಬ್ಬಳಿಗಾಗಿ ಕೆಲಸವನ್ನೇ ಕೆಡಿಸಿಕೊಳ್ಳುವುದೇ ? ಏನಾದರೂ ಒಂದು ಹೂಟವನ್ನು ತೆಗೆದಿದ್ದರಾಗದಿತ್ತೋ ?

ಗೋಪಾಲ—ಮಾಡಿಯೇ ಬಂದಿರುತ್ತೇನೆ.

ದಿವಾನ—ಏನುಮಾಡಿರುತ್ತೀಯೆ ?

ಗೋಪಾಲ—ಮೇಲಿದ್ದಾಕೆಯನ್ನು ಕೂಗಿ, ಯಾರೋ ನೋಡಲಿಕ್ಕೆ ಬಂದಿದ್ದರೆಂದು ಹೇಳಿ, ಬೀದಿಗೆ ಹೋಗುವಂತೆ ಮಾಡಿಯೇ ನಾನಿತ್ತ ಬಂದುದು.

ದಿವಾನ—ಆಕೆ ಹೇಳಿದುದೇನು ?

ಗೋಪಾಲ—“ ನಾನು ಕೆಲಸಕ್ಕಾಗಿ ಹೊರಗೆಹೋಗಿ ಬರುವೆನು. ನೀನು ಮನೆಯಲ್ಲಿಯೇ ಇರಬೇಕೆಂದು ” ಹೇಳಿ ಹೋದರು.

ದಿವಾನ—ಆಕೆ, ಹೊರಗೆ ಹೋಗುವವರೆಗೂ ಇದ್ದು ನೋಡಿಬಂದೆಯೊ ?

ಗೋಪಾಲ—ಬೀದಿಯ ಹಂತದವರೆಗೂ ಹೋದುದನ್ನು ನೋಡಿಬಂದೆನು.

ದಿವಾನ—ಆದರೂ, ನನಗಾಕೆಯ ವಿಚಾರವಾಗಿ ಸಂಶಯವಿದ್ದೇ ಇದೆ. ಅವಳೆಂತಹ ಮಾಟಗಾತಿಯೆಂದರಿತಿರುವೆ ! ಅವಳಿಗಾವಾಗಲೂ ನಮ್ಮ ಒಳಗುಟ್ಟನ್ನು ತಿಳಿಯಬೇಕೆಂಬುದೊಂದೇ ನಿರೀಕ್ಷೆಯಾಗಿದೆ. ಇಲ್ಲೆಲ್ಲಿಯಾದರೂ ಅಡಗಿ, ಹೊಂಚಿ ಕೇಳುತ್ತಿದ್ದರೂ ಇರಬಹುದು. ಒಂದುಬಾರಿ ಹುಡುಕಿ ನೋಡಿಬಾ, ಆ ಬಳಿಕ ಉಳಿದ ವಿಚಾರವಾಗಲಿ.

ಗೋಪಾಲನು, ಹೊರಗೆಹೋಗಿ ನಾಲ್ಕುಕಡೆಯೂ ಹುಡುಕಿ ಬಂದು,--' ಹುಡುಕಿದೆ; ಎಲ್ಲಿಯೂ, ಯಾರಸುಳಿವೂ ಇಲ್ಲ. ಎಲ್ಲೆಲ್ಲಿಯೂ ನಿಶ್ಶಬ್ದವಾಗಿದೆ.'

ದಿವಾನ—ಹಾಗಿದ್ದರೆ, ನಮಗೆ ಕಾಲವು ಅನುಕೂಲವಾಗಿದೆಯೆಂದೇ ತಿಳಿಯಬೇಕು. ಏಕೆಂದರೆ ಆ ಮಾಟಗಾರ್ತಿಗೇನಾದರೂ ಈ ವಿಚಾರದಲ್ಲಿ ಅಲ್ಪಸ್ವಲ್ಪ ತಿಳಿದರೂ ಸಾಕು. ನನ್ನೀ ಯಶವಂತನಾಮಕ್ಕೆ ಮಣ್ಣುಬೀಳುವುದು. ನಮ್ಮವರೆಲ್ಲರ ಕಯ್ಕಾಲುಗಳಿಗೂ ಬಿರುದು ಬರಬಹುದು! ಎಚ್ಚರಿಕೆಯಿರಲಿ. ಅಂಚೆಯಮನೆಗೆ ಹೋಗಿದ್ದೆಯಾ?

ಗೋಪಾಲ—ಮೊದಲೇ ಹೇಳಲಿಲ್ಲವೇ ? ಹೊರಗೆ ಹೋಗಿಲ್ಲವೆಂದು.

ದಿವಾನ—ಖತಿಯಿಂದ ಎಡಗಯ್ಯನ್ನು ಮಂಚಕ್ಕೆ ಹೊಡೆದು—"ಛೀ ! ಛೀ !! ಎಂತಹ ಅವಿವೇಕಿ ನೀನು ? ಏನು ಅವಿಚಾರವಿದು ? ಸ್ವಲ್ಪವಾದರೂ ಮುಂದಾಲೋಚನೆಯೇ ಬೇಡವೇ ? ಕಾಗದಪತ್ರಗಳೇನಾದರೂ ಇತರರ ಕೈಸೇರಿದ್ದರೆ, ನಮ್ಮ ಗತಿಯೇನಾದೀತೆಂದು ಬಲ್ಲೆ ? ನಮ್ಮೆಲ್ಲರಿಗೂ ದೊಡ್ಡಮನೆಯೇ ಗತಿಯಾದೀತು ! ಹೊರಡು ; ಮುಟ್ಠಾಳ ! ಬೇಗಹೊರಡು !! ಒಂಭತ್ತು ವರ್ಷಗಳ ಪ್ರಯತ್ನಕಾರ್ಯವೂ ಕೆಟ್ಟುಹೋದೀತು. ಈಗಲೇ ಹೋಗಿನೋಡು, ಉಳಿದುದೇನಿದ್ದರೂ ನಾನೇ ವಿಚಾರಿಸಿಕೊಳ್ಳುವೆನು. ಮುಖ್ಯವಾಗಿ ನಮ್ಮ ಗುಪ್ತಸಂಧಾನವನ್ನು ಭದ್ರವಾಗಿ ನೋಡಿಕೊಳ್ಳುವ ಕೆಲಸವು, ನಿನ್ನದೇ ಆಗಿದೆ. ನೆನಪಿರಲಿ!'' ಎಂದು ಹೇಳಿ ಕಳಗಿಳಿದು ನಿಂತನು.

ಗೋಪಾಲನು ತಲೆದೂಗುತ್ತ ಬೀದಿಯ ಕಡೆಗೆ ನಡೆದನು. ದಿವಾನಯಶವಂತನೂ, ಕಿರುಮನೆಯ ಕದವನ್ನು ಮುಚ್ಚಿ, ಹಿತ್ತಲಕಡೆಗೆ ನಡೆದನು. ಆದರೆ, ಗೋಪಾಲನ ಬೆನ್ನಟ್ಟಿಬಂದ ಯಮುನೆಯು, ಎಲ್ಲಿ ಹೋಗಿರಬಹುದು ? ಏನು ಮಾಡಿರಬಹುದು ? ಎಂಬುದು ನಮ್ಮ ಮಹಿಳಾವರ್ಗದ

ವರ ಕುಶಲಮತಿಗೆ ತಿಳಿದೇ ಇರಬೇಕಲ್ಲವೇ ? ಸಂದೇಹವೇನು ? ಇಂತಹ ಉಪಾಯ ಚಾಕಚಕ್ಯಗಳು ಕಾರ್ಯದಕ್ಷರಾದ ಧೀರಮತಿಯರ ಪ್ರಯತ್ನ ಫಲದಿಂದ ಚೆನ್ನಾಗಿಯೂ ಪ್ರಕಟವಾಗುತ್ತಿರುವುವಲ್ಲವೆ ?

## ತೃತೀಯಪರಿಚ್ಛೇದ.

(ಮೋಸದ ಮುದ್ದು)

ಮಾನಿನಿಯರೇ! ಏನುಹೇಳುವಿರಿ? ಮೋಸದ ಮುದ್ದಾವುದು? ಹೇಳಬಲ್ಲಿರೋ? ಆಹಾ ಧಾರಾಳವಾಗಿ ಹೇಳುವೆವೆನ್ನುವಿರೋ? ನಿಜ! ಹೇಳುವಿರಿ!! ಈ ಮುದ್ದು ಮಾನಿನಿಯರ ಮನದಲ್ಲಿಯೇ ಹುಟ್ಟಿ, ಬೆಳೆದು, ಹೊರಬೀಳಬೇಕು. ಮಾನವತಿಯರ ಹೇಳಿಕೆ-- ಕೇಳಿಕೆಗಳಿಂದೆಯೇ ಮತ್ತಿನವರಿಗೂ ಅದು ದೊರೆಯಬೇಕು? ಹಾಗಲ್ಲವೇ ಇರುವುದು? ಸಂಶಯವೇನು? ಹಾಗಾದರೆ ಈಗ ಹೇಳಿರಿ ; ನೋಡುವ ? "ಮೋಸವೆಲ್ಲಿರುವುದು ? ಮುದ್ದಾವುದು ? ಮಾಡುವವರಾರು?" ಮೋಸವೆಲ್ಲಿರುವುದೆಂದರೆ, ದಿವಾನ-ಯಶವಂತ ಮತ್ತು ಗೊಲ್ಲ-ಗೋಪಾಲರೇ ಮೊದಲಾದವರ ಗುಪ್ತಸಂಧಾನದಲ್ಲಿಯೇ! ಮುದ್ದೆಂದರೆ, ಪರಾಭಿಪ್ರಾಯತತ್ವಜ್ಞರ ಮತ್ತು ಪ್ರತಿಷ್ಠಾಕಾಮಿಗಳ ರಸನಾಗ್ರದಲ್ಲಿಯೇ !! ಮಾಡುವವರೆಂದರೂ, ಗುಪ್ತನ್ವೇಷಣದಲ್ಲಿರುವ ಯಮುನೆಯೇ !!! ಅಲ್ಲದೆ-ಮತ್ತೆಲ್ಲಿಯೂ ಇರುವಂತೆ ಹೇಳಲಿಕ್ಕಿಲ್ಲ. ಹಾಗಾದರೆ 'ಯಮುನೆಯೆಲ್ಲಿರುವಳು ? ಏನುಮಾಡುತ್ತಿರುವಳು ?' ಎಂದು ಕೇಳುವಿರಿ! ಆದರೆ, ಮೊದಲು, ಅವಳ ಮಾಟದ ಹೂಟವೆಂತಹುದೆಂಬುದನ್ನು ಅರಿತಬಳಿಕಲ್ಲವೇ, ಅವಳನ್ನು ನೋಡಬೇಕೆಂಬ ಯೋಚನೆ ? ಅಹುದು, ಆದರೆ

ಇತ್ತಬನ್ನಿರಿ. ಮನೆಯಮುಂಗಡೆಯ ಪಡಸಾಲೆಯಮೇಲೆ, ದಂಡಪಾಣಿಗ ಳಾದ ಮುಸಲ್ಮಾನ ಪಹರೆಯವರು ಕುಳಿತಿರುವರು. ಅವರಿಬ್ಬರೂ ಕಿವಿಮಾ ತನಾಡುತ್ತಿರುವರು. ಇಬ್ಬರಮುಖದಲ್ಲಿಯೂ ಕೌತುಕದ ಚಿಹ್ನೆಗಳೇ ಕಾಣುತ್ತಿವೆ. ಅದೇನಿರಬಹುದು ! ನಮಗೆಗೊತ್ತೇ ? ಮೊದಲನೆಯ ಪಹ ರೆಯವನು, ಎರಡನೆಯವನನ್ನು ಕುರಿತು, ‘ ಅರೆ, ಉಸ್ಮಾನ್ ! ಯಮು ನಾಬಾಯಿ ಅವರು, ಹೇಳಿದ್ದು ಯಾತರಮಾತು ? ನಿನಗೆ ಗೊತ್ತಾಯ್ತೇ? ’

ಉಸ್ಮಾನ್—ಅಲ್ಲೀಖಾನ್ ! ನೀನರಿತಿದ್ದು ಇಷ್ಟೇನೋ ? ಅವರು ಹೇಳಿ ದ್ದೆಂದರೆ- ‘ ಮನೆಕಡೆ ಜೋಕೆ ! ಕಳ್ಳ-ಮೋಸತನಗಳೇನಾದರೂ ನಡೆದಾವು ? ಹುಷಾರಿರಿ !! ’ ಎಂತಲ್ಲವ್ರೋ ?

ಅಲ್ಲೀಖಾನ್—ಅದುಸರಿ ; ಇನ್ನೂ ಕಿವಿಯಲ್ಲಿ ಹೇಳಿದರಲ್ಲ ?

ಉಸ್ಮಾನ್—ಓ ! ಆ ಮಾತು ? “ ದಿವಾನ-ಗೊಲ್ಲ, ಇಬ್ಬರಮೇಲೆ ನಿಮ್ಮ ಕಣ್ಣಿರಬೇಕು. ಅವರು ಹೋಗಿಬರೋದು ಮಾಡೋದನ್ನ ತಿಳಿದು, ನನ್ನಲ್ಲಿ ಹೇಳುತ್ತಿರಬೇಕು ” ಇದನ್ನೇ ಹೇಳಿದ್ದು.

ಅಲ್ಲೀಖಾನ್—ಇನ್ನೊಂದು, ಕಡೆಮಾತು ?

ಉಸ್ಮಾನ್—ಅದೋ ? ಅದೇ ಮುಖ್ಯವಾದುದು. ‘ ಯಾರು ಬಂದು ಕೇಳಲಿ ; ನಾನು ಈ ಕಡೆ ಬಂದು ಹೋಗಿದ್ದೇನೆಂದು ಹೇಳಬಾ ರದು. ಎಚ್ಚರಿಕೆ ! ’ ಇದನ್ನೇ.

ಅಲ್ಲೀಖಾನ್—ಕುತೂಹಲದಿಂದ ‘ ಅದ್ಯಾಕಂತೆ ಅಷ್ಟೊಂದು ಗುಟ್ಟು ? ’

ಉಸ್ಮಾನ್—ಛೆ ! ಎಂಥ ಹುಚ್ಚನಾಗಿದ್ದೀಯೆ ನೀನು ? ಮನೆಕಡೆ ಕಣ್ಣಿರ ಬೇಕೆಂದರೆ-ಇದು ಗೊತ್ತಾಗಲಿಲ್ಲ ? ನಿನ್ನದೇನು ? ಬಿಡು, ತಂಬಾ ಕು ಒಂದರಲ್ಲೇ ನಿನ್ನ ಮನಸ್ಸು !

ಅಲ್ಲೀಖಾನ್—ಅದು ಹೇಗಾದರೂ ಇರಲಯ್ಯಾ ! ಇಷ್ಟಕ್ಕೇ ಬಿಟ್ಟು ಬಿಡು. ಅದೋನೋಡು ! ಗೊಲ್ಲಯ್ಯನೇ ಬರುತ್ತಿದ್ದಾನೆ. ಅವನ ಕಿವಿಗೇನಾದರೂ ಬಿದ್ದೀತು ?

ಉಸ್ಮಾನ್—‘ ನಿಜ ! ನಿಜ !! ಅವನ ಕಣ್ಣಿಗೆ ಮಣ್ಣುಹಚ್ಚಬೇಕೆಂದೇ ಬಾಯಿಯುವರು ಹೇಳಿದ್ದು.’ ಎಂದಿಬ್ಬರೂ ಆ ಮಾತನ್ನು ಅಷ್ಟಕ್ಕೇನಿಲ್ಲಿಸಿ, ಬೇರೆಬೇರೆ ಮಾತುಗಳನ್ನೆತ್ತಿ ಅಲ್ಲೆಯಲ್ಲಿ ಕುಳಿತರು ಗೋಪಾಲನು ಅಡಿಗೆಮನೆ, ಊಟದಮನೆ, ನಡುಮನೆ, ಹಜಾರ, ನಡುವಣತೊಟ್ಟಿ, ಮುಂದಿನಅಂಗಳ ಮೊದಲಾದುವನ್ನೆಲ್ಲಾ ದಾಟಿ, ಕ್ಷಣಕ್ಷಣಕ್ಕೂ ತಿರುತಿರುಗಿನೋಡುತ್ತ, ಯಾರನ್ನೋ ಹುಡುಕುತ್ತಿರುವಂತೆ, ಬೀದಿಗೆ ಬಂದು, ಪಹರೆಯುವರ ಮುಂದೆ ನಿಂತನು ; ಕ್ಷಣದವರೆಗೆ ನೋಡಿದನು. ಪಹರೆಯುವರು ಹಿಂದುಸ್ತಾನಿಯಲ್ಲಿ ಮಾತನಾಡುತ್ತಿದ್ದರು. ಮತ್ತಾವವಿಶೇಷವೂ ಕಂಡುಬರಲಿಲ್ಲ. ಪಹರೆಯುವರು ಮೈಮರೆತಂತೆ, ಕಾಡುಹರಟೆಗಳಿಂದ ಕೇಕೆಹೊಡೆದು ನಗುತ್ತ ತೂಗಾಡುತ್ತಿದ್ದರು. ತಾನುಬಂದರೂ ತಿರುಗಿನೋಡಲಿಲ್ಲವೆಂದು ಕೋಪದಿಂದ ಗೋಪಾಲನು ಕೂಗಿಹೇಳಿದನು.—“ಛೆ! ಕತ್ತೆಗಳೆ ! ಇದ್ಯಾವ ನಾಚಿಕೆಗೇಡಿನ ಹರಟೆ ? ಎಳ್ಳಷ್ಟೂ ಭೀತಿಯಿರಬೇಡವೇ ?”

ಪಹರೆಯುವರು—ಭಯ ಗಾಬರಿಗಳಿಂದ ಥಟ್ಟನೆ ತಿರುಗಿ ‘ ಅಯ್ಯಾ ! ಇದೊಂದುದಿನ ಮಾಫ್‌ಮಾಡಿರಿ ! ನಮ್ಮ ಜನರ ಮದುವೆಮಾತು ಬಂತು ; ಅದರ ಚರ್ಚೆಹತ್ತಿ, ಮೈಮರೆತು ಕೂಗಿದೆವು.’

ಗೋಪಾಲ—ಇರಲಿ ; ನಿಮಗೆ ದಿವಾನರು ಏನುಹೇಳಿದ್ದಾರೆ ಗೊತ್ತಿಲ್ಲ ? ಈ ಮನೆಯಲ್ಲಿರುವಾಗ ನೀವು ನಿಮ್ಮ ಜಾತಿಮಾತು ಹೇಳಕೂಡದೆಂದು ಕಟ್ಟುಮಾಡಿದ್ದು, ಮರೆತುಬಿಟ್ಟಿರಿ ?

ಉಸ್ಮಾನ್—ಮರೆತದ್ದುನಿಜ, ಅದಕ್ಕೇ ಈದಿನ ಮಾಫ್‌ಮಾಡಬೇಕೆಂದದ್ದು.

ಗೋಪಾಲ—ಆಗಲಿ ; ಇದೊಂದುದಿನ ನಿಮ್ಮನ್ನು ಮಾಫ್‌ಮಾಡಿ ಬಿಟ್ಟಿರುತ್ತೇನೆ. ಮುಂದೆ ಹುಷಾರ್.

ಅಲ್ಲೀಖಾನ್—ಓಹೋ ಹುಷಾರಿದ್ದೇವೆ

ಗೋಪಾಲ—ಇರಲಿ ; ಈ ಕಡೆ ಯಮುನಾಬಾಯಿ ಬರಲಿಲ್ಲವೋ ?

ಉಸ್ಮಾಣ—ಆಗ ಹೋದವರು ಇನ್ನೂ ಬಂದಿಲ್ಲ.

ಗೋಪಾಲ—ನಿಜವಾಗಿ ಬೀದಿಗೆ ಹೋದರೇ ? ಚೆನ್ನಾಗಿ ನೋಡಿದಿರಾ ?

ಉಸ್ಮಾಣ—ಶಠಭಾವದಿಂದ ‹ ಏನು ? ಸುಳ್ಳುಹೇಳುತ್ತೇವೆಯೋ ? ನಿಮ್ಮ ಇದಿರಾಗಿಯೋ ಹೋಗಲಿಲ್ಲವೇ ? ನಾವು ಚೆನ್ನಾಗಿ ನೋಡಿಯೇ ಹೇಳಿದ್ದೇವೆ. ಆಗಲೇ ಅವರು, ಪಡುವಲದಿಕ್ಕಿಗೆ ಹೋದವರು ಇನ್ನೂ ಬಂದಿಲ್ಲ. ಇದೇನೋ ನಿಜವಾದಮಾತು.

ಗೋಪಾಲ—ಅದಕ್ಕಲ್ಲವಯ್ಯಾ , ಕೂಗಾಡಬೇಡ , ತುರ್ತುಕೆಲಸವಿದೆ. ಅದಕ್ಕಾಗಿ ಅವರನ್ನು ಕೇಳಿದ್ದು.

ಬೀದಿಯಕಡೆಗೆ ನೋಡುತ್ತ ಕುಳಿತಿದ್ದ ಅಲ್ಲಿಖಾನನು ಗೋಪಾಲನನ್ನು ನೋಡಿ ‹ ಅಯ್ಯಾ! ನೋಡಿರಿ, ಆಕಡೆಯಿಂದಲೇ ಅವರು ಬರುತ್ತಿದ್ದಾರೆ. ಈಗಲಾದರೂ ನಮ್ಮಮಾತು ನಂಬಿಕೆಯಾಯ್ತಲ್ಲವೆ? '

ಗೋಪಾಲನು ತಿರುಗಿನೋಡಿದನು , ಯಮುನೆಯು ಬರುತ್ತಿದ್ದುದನ್ನು ಕಂಡನು, ಆವರೆಗೂ ಕಳವಳಗೊಂಡಿದ್ದ ಅವನ ಮನಸ್ಸು ಸ್ವಲ್ಪ ಸಮಾಧಾನಹೊಂದಿದಂತಾಯ್ತು , ತಲೆದೂಗುತ್ತ ಮುಂದುಮುಂದಕ್ಕೆ ಬಂದು ರಸ್ತೆಯಬಳಿಯಲ್ಲಿ ನಿಂತನು. ಅಷ್ಟರಲ್ಲಿಯೇ ಬಂದ ಯಮುನೆಯೂ ಇದಿರಾಗಿ ನಿಂತು, ಕಿರುನಗೆಯಿಂದ ಕೇಳಿದಳು. ‹ ಏನು ? ಗೋಪಾಲ ! ಇದೆಲ್ಲಿಗೆ ಹೊರಟೆ ?

ಗೋಪಾಲ—ಅಂಗಡಿಯವರೆಗೆ ಹೋಗಬೇಕಾದ ಕೆಲಸವಿತ್ತು.

ಯಮುನೆ—ಅಂಚೆಯಮನೆಗೆ ಹೋಗಿದ್ದೆಯಾ ?

ಗೋಪಾಲ—ಎಲ್ಲಿ ? ‹ ಮನೆಯಲ್ಲಿರು; ಬೇಗಬರುತ್ತೇನೆ ' ಎಂದು ಹೋಗಿ, ನೀವು ಇಷ್ಟುಹೊತ್ತು ಮಾಡಿದಿರಿ. ಈವರೆಗೂ ನೋಡಿ ನೋಡಿ ಬೇಸತ್ತು ಕಡೆಗೆ ಹೊರಟಿರುತ್ತೇನೆ. ನಿಮ್ಮನ್ನು ಅಮ್ಮಾಯಿಯವರು ಕೂಗಿಕೂಗಿ ಸಾಕಾಗಿ ಸುಮ್ಮನಾದರು.

ಯಮುನೆ—ಹಾಗೋ ? ನನಗೆ ತಿಳಿದಿರಲಿಲ್ಲ ! ಇರಲಿ ; ಅಮ್ಮಾಯಿಯ ವರಿಗೆ ಹೇಳಿಕೊಳ್ಳಬಲ್ಲೆನು. ಆದರೆ ನೋಡು ; ಮೋಸದಮದ್ದ ನ್ನು ತರಲಿಕ್ಕೆಂದು ಹೋಗಿ ಈವರೆಗೂ ಕಾದಿರಬೇಕಾಯ್ತು ; ಇದೇ ಇಷ್ಟು ಹೊತ್ತಾಗಲು ಕಾರಣ.

ಗೋಪಾಲ—ಹಾ ! ಹಾಗೆಂದರೇನು ? ಎಂತಹುದು ? ಎಲ್ಲಿತ್ತು ? ಕೊಟ್ಟ ವರಾರು ?

ಯಮುನೆ—ಹೋ ! ತಾಳುತಾಳು !! ಇಷ್ಟೇಕೆಗಾಬರಿ ? ಮೋಸದಮ ದ್ದೆಂದರೆ ಈ ಕೆಟ್ಟಜಾತಿಯ ಉಬ್ಬುಸರೋಗಕ್ಕೆ ಗೊತ್ತಾದ ಒಂದು ಬಗೆಯ ಔಷಧ ! ಇದೂ ಒಂದುಬಗೆಯ ರಸವರ್ಗಕ್ಕೆ ಸೇರಿ ದುದು. ಇಲ್ಲಿಗೆ ಹೊಸದಾಗಿ ಬಂದಿರುವ ರಾಜವೈದ್ಯರಲ್ಲಿಯೇ ಇರುವುದು ; ಅವರೇ ನನಗೆ ಇದನ್ನು ಕೊಟ್ಟರು. ಅವರ ಬಳಿಯಲ್ಲಿ ಇದರ ಮಹತ್ವವನ್ನು ತಿಳಿಯುತ್ತ ಕುಳಿತಿದ್ದುದರಿಂದಲೇ ಇಷ್ಟು ಹೊತ್ತು ಕಳೆದುಹೋಯಿತು.

ಗೋಪಾಲ—ಅದೆಲ್ಲಿದೆ ? ತೋರಿಸಿರಿ ನೋಡುವ !

ಯಮುನೆಯು ಬಗಲೊಳಗೆ ಅಡಗಿಸಿಕೊಂಡಿದ್ದ ಚಿಕ್ಕಪೆಟ್ಟಿಗೆಯೊಂ ದನ್ನು ಹೊರತೆಗೆದು, ಅದರೊಳಗಿಂದ ಪಿತ್ತಾಳೆಯ ಭರಣಿಯನ್ನೂ, ಅದರ ಮೇಗಡೆಗೆ ಸುತ್ತಿದ್ದ ಕಾಗದಗಳನ್ನೂ ದೂರದಲ್ಲಿಯೇ ತೋರಿಸಿ, ನೋಡು, ಇದನ್ನು ಈಗಲೇ ತೆಗೆಯಬಾರದೆಂದು ಹೇಳಿರುವರು. ಅವರು ಹೇಳಿರುವ ಅಥವಾ ಈ ಸೂಚೀಪತ್ರದಲ್ಲಿ ಕಾಣಿಸಿರುವ ನಿಯಮವನ್ನು ಅನುಸರಿಸಿಯೇ ಇದನ್ನು ಉಪಯೋಗಿಸಬೇಕಂತೆ ! ಇಲ್ಲವಾದರೆ ಅವಗುಣವೇ ಕಂಡು ಬರುವುದಂತೆ !!

ಗೋಪಾಲ—ಇದನ್ನು ಯಾರಿಗಾಗಿ ತಂದಿರಿ ? ಈ ಮನೆಯಲ್ಲಿ ಈ ರೋಗಿ ಗಳಾದರೂ ಯಾರು ?

ಯಮುನೆ—ನನಗಾಗಿಯೇ ತಂದೆನು. ಆದರೆ, ಈ ರೋಗದಿಂದ ನರಲುತ್ತಿ ರುವವರೆಲ್ಲರಿಗೂ ಇದನ್ನೇ ಉಪಯೋಗಿಸಬಹುದಂತೆ. ಪಾಪ !

ನಿನ್ನ ಕೆಲಸಕ್ಕೆ ಅಡ್ಡಿಯಾದೆನೇನೋ ? ಇನ್ನು ತಡಮಾಡಿಕೊಳ್ಳದೆ ಹೊರಡು.

ಗೋಪಾಲನು ತಲೆದೂಗುತ್ತ ಹೊರಟುಹೋದನು.

ಯಮುನೆ—ಪ್ರಹರಿಗಳ ಕಡೆ ತಿರುಗಿ,-‘ ಉಸ್ಮಾನ್ ! ಹೇಳಿದುದೆಲ್ಲವೂ ನೆನಪಿರಲಿ ; ರಾತ್ರಿ ಏಳುಗಂಟೆಯಾಗಿದ್ದರೂ, ಜಮಿನಾನ್ದಾರರೇನೋ ಇನ್ನೂ ಮನೆಗೆ ಬಂದಿಲ್ಲ. ಅವರ ಮನಸ್ಸು ಬರುಬರುತ್ತ ವಿರಕ್ತಿ ಯನ್ನೇ ಹೊಂದುತ್ತಿದೆ. ಗೃಹಸ್ವಾಮಿಯು ಉಪೇಕ್ಷೆಯಿಂದ ಗೃಹಕ್ಕೆ ಹಾನಿ ತಟ್ಟದಂತೆ ನೋಡಿಕೊಳ್ಳುವ ಭಾರವು, ನಿಮ್ಮ ಮೇಲೆ ಬಿದ್ದಿದೆ. ನೋಡಿರಿ, ನೀವು ಲಂಚಕ್ಕಾಗಲೀ ಇತರ ದುರಾ ಚಾರಕ್ಕಾಗಲೀ ಮರುಳಾಗುವುದಾದರೆ, ನರಕದಲ್ಲಿಯೂ ನಿಮಗೆ ಸ್ಥಳವಿರುವುದಿಲ್ಲ. ಇನ್ನು ನಿಮ್ಮ ಅಲ್ಲಾದೇವರಾಣೆಗೂ ಸತ್ಯ ವನ್ನು ಮೀರದಿರಬೇಕು.

ಉಸ್ಮಾನ್—ಅಮ್ಮ! ಅಲ್ಲಾದೇವರಾಣೆ,-ಖುರಾನಿನಾಣೆ ನಾವು ಮಾತಿಗೆ ತಪ್ಪಲಿಕ್ಕಿಲ್ಲ. ನಮ್ಮಲ್ಲಿ ಮೋಸಕ್ಕೆ ಜಾಗವಿಲ್ಲ ; ಧೈರ್ಯವಾಗಿರಿ. ಎಲ್ಲಾ ಭಾರವೂ ನಮ್ಮದಿರಲಿ.

ಯಮುನೆ—‘ಹೂಂ ! ನೋಡಿರಿ, ಇದೀಗ ನಿಮ್ಮ ಗುಣಕ್ಕೆ ಬೆಲೆಕಟ್ಟುವ ಮಾತು. ಇದೇ ನಿಮ್ಮಲ್ಲಿ ಸ್ಥಿರವಾಗಿರಬೇಕಾದುದು. ಈಗ ನಾನು ತಂದಿರುವ ಮೋಸದ ಮದ್ದಾದರೂ, ನಿಮ್ಮಂತವರ ಸಹಾಯದಿಂ ದಲೇ, ಪ್ರಯೋಜನಕ್ಕೆ ಬರಬೇಕು ; ಇಲ್ಲದಿದ್ದರಾಗದು. ಇನ್ನು ಹೆಚ್ಚು ಮಾತು ಬೇಡ’ ಎಂದು ಹೇಳಿ ಹೊರಟುಹೋದಳು. (ಪ್ರ ತ್ಯುತ್ಪನ್ನಮತಿಯರಲ್ಲಿರುವ ‘ ಮೋಸದಮದ್ದು’ ಎಂತಹದೆಂಬು ದನ್ನು ಯಾರೂ-ಹೇಗೂ ಮುಂದಾಗಿ ಹೇಳಲಾರರಲ್ಲವೆ !)

|| ಶ್ರೀ ||

## ಚತುರ್ಥ ಪರಿಚ್ಛೇದ.

(ಚೇಳುಕಡಿತ.)

“ಇದಕ್ಕೇನು ಮಾಡಬೇಕು? ಏನು ಉಪಾಯವಿದೆ? ಇದರ ಉದ್ದೇಶವೇನಿರಬಹುದು?” ಈ ಬಗೆಯ ಪ್ರಶ್ನಾವಳಿಯು ಯಾರಬಾಯಲ್ಲಿ ಹೊರಟಿರಬಹುದು? ಮತ್ತಾರಲ್ಲಿ, ನಮ್ಮ ವಾಚಕರ ಪೂರ್ವಪರಿಚಿತೆಯಾದಾರಮಣಿಯ ಬಾಯಲ್ಲಿಯೇ! ಆಕೆಯೆಲ್ಲಿರುವಳು? ವಿಲಾಸಭವನದ ಚಿತ್ರಶಾಲೆಯಲ್ಲಿ; ಏನುಮಾಡುತ್ತಿರುವಳು? ಕುರ್ಚಿಯಮೇಲೆ ಕುಳಿತು, ಚಿತ್ರದ ಹಲಗೆಯಮೇಲೆ ದೃಷ್ಟಿಯಿಟ್ಟು, ಚಿಂತಿಸುತ್ತಿರುವಳು! ಈ ನಾರೀಮಣಿ ಯಾರಿರಬಹುದು? ಸಂದೇಹವೇಕೆ? ನಮ್ಮ ಜಮೀನ್ದಾರನ ದ್ವಿತೀಯಪತ್ನಿ, ಜಗನ್ಮೋಹನೆಯಾದಾಗಂಗಾಬಾಯಿಯೇ. ‘ಹೋ! ತಾಳಿರಿ, ಮುಖ್ಯವಿಚಾರವನ್ನೇ ಮರೆತುಹೋಗಿದ್ದೆವಲ್ಲವೆ? ಹಾಗಿದ್ದರೆ, ಮತ್ತೆನೋಡಿರಿ. ಜಮೀನ್ದಾರನ ಹೆಸರು ತಾರಾಪತಿರಾಯ. ಈತನ ಸದ್ಗುಣಪ್ರತಾಪದಿಂದ ಪ್ರಖ್ಯಾತಿ ಹೊಂದಿದ ಹೆಸರೇ ಲೋಕಬಂಧು. ತಾರಾಪತಿರಾಯನು ಈ ಕಾಲದ ಸೊಕ್ಕಿನಮಕ್ಕಳಂತೆ ಅವಿಧೇಯನಲ್ಲ; ಸುಶಿಕ್ಷಿತವಿದ್ಯಾವಂತ, ವಿನಯಶೀಲ, ಪೂರ್ಣ ಮೇಧಾವಿ, ಹಾಗೂ ಕೇವಲ ಪಾರಮಾರ್ಥಿಕಬುದ್ಧಿಯುಳ್ಳವನು. ಹೆಚ್ಚೇಕೆ? ಪಂಡಿತ-ಪಾಮರಾದಿಗಳೆಲ್ಲರಿಂದೆಯೂ ಸನ್ಮಾನಹೊಂದಬೇಕಾದರೆ, ಆವ ಸುಗುಣಗಳುಂಟೋ, ಅವೆಲ್ಲವೂ ಈ ನಮ್ಮ ಜಮೀನ್ದಾರನಲ್ಲಿ ನೆಲೆಗೊಂಡಿದ್ದುವೆಂದರೆ ಸಾಕಾಗಿರುವುದು. ಜಮೀನ್ದಾರನ ಸಂಸಾರದಲ್ಲಿದ್ದವರೆಂದರೆ, ಪತಿವಿಹೀನೆಯಾದ ಮಾತೃ, ಅಭಿಮಾನವತಿಯಾದ ಪತ್ನಿ, ಅನಾಥೆಯಾಗಿ ಬಂದು ಸೇರಿರುವ ಯಮುನೆ ಇವರೂ, ಮಿಕ್ಕ ದಿವಾನ, ಕರಣಿಕ,

ಗೊಲ್ಲ, ಅಡುವಳ ಪಡಿಚರರೇ ಮೊದಲಾದವರೂ ಇದ್ದರು. ದ್ವಿತೀಯ ಪತ್ನಿಗೆ ಸಂತಾನಲಾಭವಿನ್ನೂ ದೊರೆತಿಲ್ಲ.

ಇನ್ನು ಜಮೀನ್ದಾರನ ಮನೆಯ ಪರಿಚಯವನ್ನುಂಟುಮಾಡಿಕೊಡುವುದು ನಮ್ಮ ಕೆಲಸವಾಗಿದೆ. ಜಮೀನ್ದಾರನ ಭವನದ ನಿರ್ಮಾಣಕ್ರಮವೇ ಒಂದು ಬಗೆಯದು. ಇದನ್ನು ಯಾವುದಕ್ಕೇ ಆಗಲಿ ಹೋಲಿಸುವಂತಿಲ್ಲ, ಮತ್ತು ಕ್ರಮವಾಗಿ ವಿವರಿಸುವುದೆಂದರೂ ಪ್ರಯಾಸವೇ ! ಆದರೂ, ತಕ್ಕಷ್ಟು ಹೇಳದೆ ಬಿಡಲಾಗದಲ್ಲವೆ ?

ಜಮೀನ್ದಾರನ ಮನೆಯು, ಅತ್ಯಂತ ಪ್ರೇಕ್ಷಣೀಯವಾದುದು ಅಂತರ್ಬಹಿರಂಗದಲ್ಲಿಯೂ ಗೃಹನಿರ್ಮಾಣಕ್ರಮವು ರಾಜಮನೆತನದವರ ಮರ್ಯಾದೆಗೆ ಅನುಸರಿಸಿರುವಂತೆ ಕಾಣುತ್ತಿರುವುದು. ಮಧ್ಯಭಾಗದ ಮನೆಯ ಮುಂಗಡೆಯಲ್ಲಿ ಕಮಾನು ಬಾಗಿಸಿದ ಚಪ್ಪರ, ವಿಶಾಲವಾದ ಪಡಸಾಲೆ, ಅಲ್ಲಿಂದ ಒಳಹೊಕ್ಕರೆ, ಮತ್ತೆ ಅಂಗಳ, ತೊಟ್ಟಿ, ಕಿರುಮನೆ ಮತ್ತು ಬಗೆಗೊಳ್ಳುವ- ಹಜಾರ- ಮೊದಲಾದುವುಗಳಿಂದ ಬಲು ದೊಡ್ಡದಾಗಿಯೂ ಅಂದವಾಗಿಯೂ, ತಕ್ಕಷ್ಟು ಅನುಕೂಲವುಳ್ಳದಾಗಿಯೂ ಕಂಡುಬರುತ್ತಿರುವುದು. ಇದರ ಹಿಂಗಡೆಯಲ್ಲಿ ಪಾಕಶಾಲೆ-ಭೋಜನಶಾಲೆ-ಸಾಹಿತ್ಯಶಾಲೆ-ಮಜ್ಜನಗೃಹ-ಗೋಶಾಲೆ—ಆರಾಮ—ಪುಷ್ಕರಿಣಿ ಇವೇ ಮೊದಲಾದುವುಗಳೆಲ್ಲವೂ ಬಹು ದೂರದವರೆಗೆ ಒಂದಕ್ಕೊಂದ ಸೇರಿದಂತೆ ಬಹು ಭದ್ರವಾಗಿರುವುವು. ಈ ಮಧ್ಯಭವನದಲ್ಲಿಯೇ ಜಮೀನ್ದಾರನ ತಾಯಿ ಚಂದ್ರಮತಿಯೂ, ಅವಳ ಆಶ್ರಿತವರ್ಗಕ್ಕೆ ಸೇರಿದ ಯಮುನೆಯೂ ಮತ್ತೂ ದಿವಾನ, ಕರಣಿಕ, ಗೊಲ್ಲ, ಇನ್ನುಳಿದ ಅಡುಗೆಯವರೂ, ಪರಿಚಾರಕರು ಮೊದಲಾದವರೂ ಇರತಕ್ಕ ಸ್ಥಳವಾಗಿರುವುದು ಈ ಮಧ್ಯಭವನಕ್ಕೆ ಸೇರಿದಂತೆಯೇ ಇದರ ಬಲಗಡೆಯಲ್ಲಿರುವ ವರ್ತುಲಾಕಾರದ ಧವಲವರ್ಣದ ಭವ್ಯಭವನವೇ ‘ಲಕ್ಷ್ಮೀನಿಲಯ’ವೆಂಬ ಅಭಿಧಾನದಿಂದ ಪರಿಶೋಭಿಸುತ್ತಿರುವುದು. ಈ ಭವನವು ಮೂರು ಅಂತರಗ

ಉಪ್ಪರಿಗೆಗಳುಳ್ಳುದು. ಇದರ ಪ್ರತಿಯೊಂದು ಅಂತರಕ್ಕೂ ಸಾಲುಕಿಟಿಕಿಗಳೂ, ಅಲ್ಲಿಗಲ್ಲಿಗೆ ಬಾಗಿಲುಗಳೂ, ಇರುವುವು. ಪ್ರತಿಯೊಂದು ಬಾಗಿಲು, ಕಿಟಕಿ ಕದಗಳಿಗೂ ಬಗೆಬಗೆಯ ಬಣ್ಣದ ದಾರಗಳಿಂದ ಮೊಡಲ್ಪಟ್ಟ ತೆರೆಗಳೂ ಇಳಿಯಾಗಿ ಬಿಡಲ್ಪಟ್ಟಿರುವುವು. ಭವನದಸುತ್ತಲೂ ಅಷ್ಟಗಟ್ಟಿಯಂತೆ ಉಕ್ಕಿನ ತಂತಿಪಣಿಗೆಯ ರಕ್ಷಾಬಂಧವಿರುವುದು. ಭವನಕ್ಕೆ ಹೊರಗಡೆಯ ಮೂರುದಿಕ್ಕುಗಳಿಗೂ, ಮಧ್ಯಭಾಗದ ಮನೆಯೊಳಕ್ಕೆ ಒರುವಕಡೆಗೂ, ದೊಡ್ಡದೊಡ್ಡ ಬಾಗಿಲುಗಳಿರುವುವು. ಆದರೆ, ಈ ಭವ್ಯಭವನದ ಪ್ರತಿಯೊಂದುಬಾಗಿಲೂ, ಗವಾಕ್ಷಗಳೂ ಮುಚ್ಚಲ್ಪಟ್ಟಿರುವುವು. ಬಾಹ್ಯಶೋಭೆಗೆ ಬೇಕಾದಷ್ಟು ವಸ್ತುಗಳು ನಿಬಿಡವಾಗಿದ್ದರೂ—‹ **ಸೂರ್ಯನಿಲ್ಲದ ಹಗಲಂತೆ** ’ ಅಂತಸ್ಸತ್ತ್ವವಿಲ್ಲದುದರಿಂದ, ಶೋಭಾವಹವಾಗಲೊಲ್ಲೆನೆಂದು ಹೇಳುವಂತೆ, ನೋಟಕರನ್ನು ಕೌತುಕದಲ್ಲಿ ಕೆಡಹುತ್ತಿರುವುದು. ಇದಕ್ಕೆ ಕಾರಣವೇನೋ ಬಲವತ್ತರವಾಗಿರಬೇಕಲ್ಲದೆ, ಇಲ್ಲಿಯುವರೆಗೂ ನಮಗೆ ತಿಳಿಯುದೆಯೇ ಇರುವುದು. ಅದಾವುದೇ ಆಗಿದ್ದರೂ, ಸದ್ಯದಲ್ಲಿ ಮಾನಸಿಕವಾಗಿರಬೇಕೆಂಬುದೇ ನಮ್ಮ ಸೂಚನೆಯಾಗಿದೆ.

ಮಧ್ಯಭವನದ ವಾಮಪಾರ್ಶ್ವಕ್ಕಿರುವ ಮತ್ತೊಂದುಭವನವೂ, ‹ ಲಕ್ಷ್ಮೀನಿಲಯ ’ ದಂತೆಯೇ, ಪ್ರೇಕ್ಷಣೀಯವಾಗಿರುವುದು. ಇದು ಆದರಂತೆ ವರ್ತುಲಾಕಾರವಾಗಿರದೆ ಅಷ್ಟಕೋಣಾಕಾರದಿಂದ ಮತ್ತೂ ರಮ್ಯವಾಗಿರುವುದು. ಇದಕ್ಕೂ ಮೂರು ಉಪ್ಪರಿಗೆಗಳಿರುವುವು ಆಕಾರದಲ್ಲಿ ಇದು, ಅದಕ್ಕೂ ದೊಡ್ಡದು. ಮತ್ತೂ ಚಿತ್ರವಿಚಿತ್ರಾಲಂಕೃತವಾಗಿಯೂ ಇರತಕ್ಕುದು. ಇದರ ಅಂದಕ್ಕೆ ತಕ್ಕಂತೆಯೇ ‹ **ವಿಲಾಸಭವನ** ’ ವೆಂಬ ಅಂಕಿತನಾಮವು, ಮೇಗಡೆಯ ಗೋಡೆಯಮೇಲೆ ಸ್ಫುಟಾಕ್ಷರಗಳಿಂದ ಕೆತ್ತಲ್ಪಟ್ಟಿರುವುದು. ಇದೇ ಜಮೀನ್ದಾರನ ದ್ವಿತೀಯಪತ್ನಿ ‹ **ಗಂಗಾಬಾಯಿ** ’ ಯು ಇರತಕ್ಕ ಸ್ಥಳವೆಂದು ತಿಳಿದುಬಂದಿರುವುದು.

ವಿಲಾಸಭವನಕ್ಕೂ, ಮಧ್ಯಭವನಕ್ಕೂ ಸೇರಿದಂತೆ ಮುಂಗಡೆಯಲ್ಲಿರುವ ಚತುಷ್ಕೋಣಾಕಾರದ ಮಂಟಪವೇ, ಜಮೀನ್ದಾರನ ‹ಓಲಗಶಾಲೆ ;

ಇದರಲ್ಲಿಯೂ ನಾಲ್ಕಾರು ಕಿರುಮನೆಗಳೂ, ಮಧ್ಯದಲ್ಲಿ ಮಂಟಪವೂ ಇರುವುವು. ಎಲ್ಲಕ್ಕೂ ಬಲವಾದ ಬಾಗಿಲುಗಳುಂಟು. ಇಲ್ಲಿಯೇ ಜಮಿಾನ್ದಾರನ ಸ್ವಂತ ಬರೆವಣಿಗೆಗೂ,ಮಲಗುವುದಕ್ಕೂ, ಸಮಾಲೋಚಿಸಲಿಕ್ಕೂ, ಇನ್ನೂ ಇತರ ಕಾಲಕ್ಷೇಪಗಳಿಗೂ ಬೇರೆಬೇರೆ ಸ್ಥಳಗಳೇರ್ಪಟ್ಟಿರುವುವು. ಜಮಿಾನ್ದಾರನು, ಸ್ನಾನ ಮತ್ತು ಭೋಜನಕಾಲಗಳನ್ನು ಬಿಟ್ಟು ಉಳಿದ ಕಾಲದಲ್ಲೆಲ್ಲಾ ಇಲ್ಲಿಯೇ ಇರುವನು.

ಈ ಓಲಗಶಾಲೆಯಂತೆಯೇ ಇದಕ್ಕೆ ಇದಿರಾಗಿ ಲಕ್ಷ್ಮೀನಿಲಯಕ್ಕೂ, ಮಧ್ಯಭವನಕ್ಕೂ ನಡುದಾಯದಲ್ಲಿ ಮತ್ತೊಂದು ಮಂಟಪವಿರುವುದು. ಅದು, ದಿವಾನ ಮತ್ತು ಕರಣಿಕರೂ ಇತರ ಆಶ್ರಿತವಿದ್ಯಾರ್ಥಿವರ್ಗವೂ ಕುಳಿತು, ಲೆಕ್ಕಪತ್ರಗಳ್ನು ಬರೆಯಲಿಕ್ಕೂ, ಓದಲಿಕ್ಕೂ, ಗೊತ್ತಾದ ಸ್ಥಳವಾಗಿರುವುದು. ಮನೆಯ ಮುಂಗಡೆಯಲ್ಲಿಯೂ ಹೂದೋಟವಿರುವುದು. ತೋಟದ ಸುತ್ತಲೂ ಬಹುದೂರದವರೆಗೆ ಪ್ರಾಕಾರದ ಗೋಡೆಗಳು ಆವರಿಸಿಕೊಂಡಿರುವುವು.

ಲಕ್ಷ್ಮೀನಿಲಯಕ್ಕೂ, ವಿಲಾಸಭವನಕ್ಕೂ ಸಂಧಿಸಿರುವ ಮಧ್ಯಭವನದ ಮೇಗಡೆಯ ಉಪ್ಪರಿಗೆಯೇ, ಅಂತಃಪುರಾಂಗನೆಯರ ವಿಹಾರಕ್ಕೆಂದು ಬಿಟ್ಟಿರುವ ಬಿಸಿಲುಮಾಳಿಗೆಯಾಗಿದೆ. ಈ ಮಾಳಿಗೆಯು, ಮನೆಯಮುಂದಿನ ಪ್ರಾಕಾರದ ಬಾಗಿಲವರೆಗೂ, ಕಬ್ಬಿಣದ ಕಂಬಗಳನ್ನು ನೆಟ್ಟು, ಮೇಗಡೆ ಬಲವಾಗಿ ಸೇತುವೆಯಂತೆ ಕಟ್ಟಲ್ಪಟ್ಟಿರುವುದರಿಂದ, ಹೆಂಗುಸರು, ಬೀದಿಯಲ್ಲಿ ನಡೆವ ವಿನೋದಗಳನ್ನು ನೋಡಲಿಕ್ಕೂ ಅನುಕೂಲವಾಗಿರುವುದು. ಈ ಮಾಳಿಗೆಯಲ್ಲಿ ಉದ್ದಕ್ಕೂ ನಾನಾಬಗೆಯ ಬಣ್ಣದಗಿಡಗಳೂ, ಹೂಬಳ್ಳಿಗಳೂ ಶೇಖರಿಸಲ್ಪಟ್ಟಿರುವುವು ಈ ಬಗೆಯಲ್ಲಿ ತುಂಬಿ ತುಳುಕುತ್ತಿರುವ ಬಗೆಬಗೆಯ ಹೂಗಳ ಕಂಪಿನಿಂದ ಮಾರುತನೂ, ಇಲ್ಲಿಗೆ ಆಯಾಸಪರಿಹಾರಕ್ಕೆಂದು ಬರುವವರನ್ನು ಉಲ್ಲಾಸಗೊಳಿಸುತ್ತಿರುವನು. ಇದಕ್ಕೆಂದೇ ಬಂದಿದ್ದಾ ಸ್ವರ್ಗಸುಂದರಿಯ ದರ್ಶನಲಾಭವು, ಯುವಕನನ್ನು ಭ್ರಾಂತನನ್ನಾಗಿ ಮಾಡಿದ ಸ್ಥಲವಾದರೂ ಇದೇಸರಿ.

“ ಸಾಕು ; ಸಂಗ್ರಹವೆಂದು ಹೇಳಿದುದೇ ಇಷ್ಟಾಯಿತು. ಇನ್ನು ಕಥಾಭಾಗವು ಮುಂದಾಗಲಿ.”

ಪ್ರಿಯಸೋದರಿಯರೇ !

ಏನು ? ಆ ಅಪರಿಚಿತ ತರುಣನ ಚಿತ್ತಾಕರ್ಷಣಮಾಡಿದ ಮನೋಮೋಹಿನಿಯನ್ನು ನೀವೂ ನೋಡಬೇಕೆಂಬಿರಲ್ಲವೋ ? ಚರಿತ್ರೆಗೆ ಮುಖ್ಯಪಾತ್ರವನ್ನೇ ಉಪೇಕ್ಷಿಸಬಹುದೋ ? ಅಲ್ಲದೆ ಸ್ವಜಾತ್ಯಭಿಮಾನದಿಂದೇನಾದರೂ ಮತ್ಸರಿಸುವಿರೋ ? ಕೂಡದು ; ಹಾಗೆಂದೂ ಮಾಡಕೂಡದು. ನಿಮ್ಮ ಹೃತ್ಕೋಶದಲ್ಲಿ ನಿಷ್ಕಲಂಕವಾದ ‘ ದೈವೀಪ್ರೇಮ ’ ವೊಂದೇ ನೆಲಸಿದ್ದು, ಅದು ನಿಮ್ಮ ಸೋದರಿಯರೆಲ್ಲರನ್ನೂ ಆದರಿಸುವಂತಿರಬೇಕು !! ಇಷ್ಟುಮಟ್ಟಿಗಾಗಿದ್ದರೆಯೇ, ನಿಮ್ಮಲ್ಲಿ ಸ್ತ್ರೀಜನಕ್ಕೆ ಉಚಿತವಾದ ಕೋಮಲತೆಯುಂಟೆಂದು ಹೇಳಬಹುದು. ಹಾಗಿಲ್ಲದೆ ಹೇಳಲಾಗದು.

ಹಾಗಿದ್ದರೆ, ಇತ್ತಬನ್ನಿರಿ ; ವಿಲಾಸಮಂದಿರದ ಈ ‘ ಚಿತ್ರಶಾಲೆ ’ ಯನ್ನು ನೋಡಿರಿ ! ನೆಲದಮೇಲೆ ಹಾಸಿರುವ ರತ್ನಗಂಬಳಿಯೂ, ಗೋಡೆಗೆ ತಗಲಿಸಲ್ಪಟ್ಟಿರುವ ಚಿತ್ರಪಟಗಳೂ, ಸಾಲಾಗಿ ನಿಂತಿರುವ ಬೀರುಗಳೂ, ಸುತ್ತಲೂ ಕುರ್ಚಿಗಳಿಂದಾವರಿಸಲ್ಪಟ್ಟು, ನಡುವೆ ನಿಂತಿರುವ ದೊಡ್ಡಮೇಜವೂ, ಮೇಜಿನಮೇಲೆ ಬೇರೆಬೇರೆಯಾಗಿ ಇರಿಸಲ್ಪಟ್ಟಿರುವ ಚಿತ್ರಕೆಲಸದ ಸಾಮಗ್ರಿಗಳೂ, ಹಲಗೆಗಳೂ, ಮತ್ತೂ ಹೆಣಿಗೆ ಕಸೂತಿ ಕೆಲಸಕ್ಕೆ ಬೇಕಾಗುವ ಸಾಮಗ್ರಿಗಳೂ, ಇವೆಲ್ಲಕ್ಕೂ ಮಿರುಪನ್ನುಂಟುಮಾಡುವಂತೆ ಹೊಳೆಹೊಳೆಯುತ್ತ ಮೇಜಿನಮೇಗಡೆ ಮಧ್ಯಭಾಗಕ್ಕೆ ಸರಿಯಾಗಿ ಇಳಿಬಿಟ್ಟಿರುವ ದೀಪವೂ, ಇವೆಲ್ಲವೂ ನಿಮಗೆ ಎಷ್ಟರ ಉತ್ಸಾಹವನ್ನುಂಟುಮಾಡುವುದೋ ಒಮ್ಮೆ ಹೇಳಿರಿ ? ನೀವೂ ಇಲ್ಲಿ ಕುಳಿತು ಕೆಲಸಮಾಡಬೇಕೆಂದಿರುವಿರಲ್ಲವೇ ? ಇಲ್ಲ ; ಕುರ್ಚಿಯಮೇಲೆ ಕುಳಿತು, ಮೇಜಿನಮೇಲೆ ಮೊಣಕಯ್ಯೂರಿ, ಚಿಗುರಂತೆ ಹೊಳೆಯುತ್ತಿರುವ ಅಂಗೈಗಳನ್ನು ಎರಡುಕೆನ್ನೆಗೂ ಮರೆಯಾಗಿಟ್ಟು, ಮುಂದಿದ್ದ ಚಿತ್ರದ ಹಲಗೆಯನ್ನೇ ನೋಡುತ್ತಿರುವ ಈ ರಮಣಿ

ಯನ್ನು ನೋಡಿ ಮುಗ್ದರಾಗಿರುವೆವೆಂಬಿರೋ ? ಸಾಧು ! ಸತಿಯರೇ ! ಸಾಧು !! ನಿರ್ಮತ್ಸರ ಪ್ರೇಮವೆಂಬುದು, ನಿಮ್ಮಲ್ಲಿಯೇ ಬಗೆಗೊಳ್ಳುತ್ತಿರಬೇಕು. ಆದರೆ, ಮತ್ತೆಯೂ ನೋಡಿರಿ ! ರಮಣಿಯು ವಿಶಾಲಾಕ್ಷದಿಂದ ಹೊರಹೊರಡುತ್ತಿರುವ ಆಲೋಲಕಟಾಕ್ಷವು, ಅವಳ ಸ್ವಭಾವಸಹಜಸೌಂದರ್ಯಕ್ಕೆ ರಂಜನವನ್ನುಂಟುಮಾಡುತ್ತಿರುವುದು. ಅದು ಸಾಲದೆಂದು ಅವಳು ಧರಿಸಿರುವ ಜರತಾರಿ ಅಂಚಿನ ಗುಲಾಬಿಬಣ್ಣದ ಪಟ್ಟೇಸೀರೆಯೂ, ಆ ಎಣ್ಣೆಗೆಂಪುಬಣ್ಣದ ಕುಪ್ಪುಸವೂ, ಆ ಚಿನ್ನರನ್ನದ ತೊಡವುಗಳೂ ಮತ್ತೆಷ್ಟು ಮನೋಹರವಾಗಿ ಕಾಣುತ್ತಿವೆಯಲ್ಲವೇ ? ಇರಲಿ.

ಏನಿದ್ದರೂ ರಮಣಿಯ ಮುಖಚಂದ್ರನನ್ನು ಇಂದು ರಾಹು, ತುಡುಕಿದಂತೆ ತೋರುತ್ತಿದೆ. ರಮಣಿಯ ಕಟಾಕ್ಷದಲ್ಲಿ ರಸವಿಷಯಗಳಾವುವೂ ಪ್ರಸರವಾಗುತ್ತಿಲ್ಲ. ಮಂದಗತಿಯಿಂದ ಚಿತ್ರದ ಹಲಗೆಯಮೇಲೆಯೇ ನಡೆದಾಡುತ್ತಿದೆ. ಹೀಗಾಗಲು ಕಾರಣವೇನು ? ಏನಿರಬೇಕೋ ಪರಮೇಶ್ವರನೇ ಹೇಳಬೇಕು. ಹೇಗೂ ರಮಣಿಯ ಬಾಯಿಂದ-‹ ಇದಕ್ಕೆನ್ನೇನು ಮಾಡಲಿ ? ಏನುಪಾಯಪಡೆ ? ಇದರ ಉದ್ದೇಶವಾವುದು ? ’ ಎಂಬೀ ಪ್ರಶ್ನೆಗಳೇ ಮತ್ತೆಮತ್ತೆಯೂ ಹೊರಬೀಳುತ್ತಿವೆ. ಆದರೇನು ? ಎಷ್ಟು ಹೊತ್ತಾದರೂ, ತಕ್ಕ ಸಮಾಧಾನವೇನೂ ದೊರೆಯಲಿಲ್ಲ. ಯೋಚಿಸುತ್ತಿದ್ದಂತೆಯೇ ರಮಣಿಯು, ವ್ಯಸ್ತಳಾಗಿ ಕುಳಿತಳು. ಎಷ್ಟುಹೊತ್ತು ಕುಳಿತಳೋ ಹೇಳುವಂತಿಲ್ಲ.

ಬಲುಹೊತ್ತಿನ ಮೇಲೆ, ಹಿಂದಳಿಂದ ‹ ಗಂಗಾಬಾಯಿ ! ನಿದ್ರಿಸುತ್ತೀರೇನು ? ’ ಎಂಬ ಕೂಗೊಂದು ಹೊರಟು, ನಿದ್ರಿಸುತ್ತಿದ್ದ ರಮಣಿಯ ಕಿವಿಯನ್ನು ಕೊರೆದುಕೊಂಡು ಹೋಯಿತು. ರಮಣಿಯು ತಲೆಯೆತ್ತಿ ನೋಡಿದಳು; ಕಿರುಮನೆಯ ಕದದ ಬಳಿಯಲ್ಲಿ, ಕಿರುನಗೆಯಿಂದ ನೋಡುತ್ತ ನಿಂತಿದ್ದ ಯಮುನೆಯನ್ನು ಕಂಡು, ಸ್ಥಿರಭಾವದಿಂದ ಹೇಳಿದಳು–‹‹ಏನು ? ಬಂದೆ ? ಯಮುನಾ ! ಬಾ, ಕುಳಿತುಕೊ.’’

ಯಮುನಾ—ನಗುನಗುತ್ತ ಕುರ್ಚಿಯ ಬಳಿಯಲ್ಲಿ ಕುಳಿತು-‘ ಅಮ್ಮಾಯಿಾ ಯವರು, ನೋಡಿಬಾರೆಂದು ಹೇಳಿದುದರಿಂದ ಬಂದೆನು. ನಾನು ಬಂದು ಎಷ್ಟೋ ಹೊತ್ತಾಯಿತು. ನೀವು ಯಾವುದೋ ಯೋಚನೆ ಯಲ್ಲಿ ಮಗ್ನರಾಗಿದ್ದಿರಲ್ಲವೆ ?

ಗಂಗಾ—ಮತ್ತೇನು ? ತಿಳಿದೇಇದೆ ! ಈ ದಿನದ ಚಿತ್ರದಲ್ಲಿ ಯಾವುದಾ ದರೂ ಹೊಸಬಗೆಯನ್ನು ಚಿತ್ರಿಸಬೇಕೆಂಬ ಉದ್ದೇಶ ! ಅದು, ಎಂ ತಹುದಾಗಿರಬೇಕೆಂಬುದೇ ಆಲೋಚನೆ.

ಯಮುನಾ—ತಲೆದೂಗಿ ‘ ಸಹಜ! ’ ಯಾವುದೇ ಆಗಲಿ, ಬುದ್ಧಿಶಕ್ತಿಗೆ ಮಿಾರಿದುದಲ್ಲ. ಆಲೋಚಿಸಿ ಮಾಡಿದರೆ ತಕ್ಕಷ್ಟು ಫಲವುಂಟು. ಅದು ಹೇಗೂ ಇರಲಿ ; ನಿಮ್ಮ ವಿದ್ಯಾ-ಬುದ್ಧಿ-ಕೌಶಲ್ಯವೇ ಮೊದ ಲಾದ ಸಮಸ್ತ ವೈಭವಗಳಿಗೂ ತಕ್ಕಂತೆ, ಮಕ್ಕಳಾದರೂ ಆಗಿ ದ್ದರೆ, ಎಷ್ಟೋ ಸೊಗಸು ತೋರುತ್ತಿತ್ತು. ಇದಿಲ್ಲವೆಂಬುದೊಂದೇ ನನಗೆ ಕೊರತೆಯಾಗಿ ಕಾಣುತ್ತಿದೆ.

ಗಂಗಾ—ತಲೆದೂಗಿ, ಕಿರುನಗೆಯಿಂದ—‘ ಮಕ್ಕಳಿದ್ದವರಿಗಾಗುವ ಸುಖ ವೇನು ? ಇಲ್ಲದವರಿಗಾಗುವ ದುಃಖವೇನು? ’

ಯಮುನಾ—ಏನೆಂದರೆ, ಅದು ಅನುಭವದಿಂದಲೇ ತಿಳಿಯಬೇಕು ; ಬಾ ಯಿಂದ ಹೇಳುವಂತಹುದಲ್ಲ.

ಗಂಗಾ—ಅದು, ಬರಿಯ ಭ್ರಾಂತಿ ! ಮಕ್ಕಳಿಗಾಗಿ, ಮೊದಮೊದಲು ಹಲಬುವುದು, ಆ ಬಳಿಕ, ಹುಟ್ಟಿದ ಮಕ್ಕಳ ರೋಗ-ಸಾವು ಮೊದಲಾದವುಗಳಾಗಿ ಅಳುವುದು. ಇವಲ್ಲವೇ ಮಕ್ಕಳಿಂದಾಗುವ ಸುಖವು ?

ಯಮುನಾ—ಹಾಗಿದ್ದರೆ ಮಕ್ಕಳಾಗಬೇಕೆಂದು ಯಾರೂ, ವ್ರತ, ನಿಯ ಮಾದಿ ಕ್ಲೇಶಗಳಿಗೆ ಗುರಿಯಾಗುತ್ತಿರಲಿಲ್ಲ. ಸುಖವುಂಟೆಂಬುದರಿಂ ದಲೇ, ಎಷ್ಟೇ ಜ್ಞಾನಿಗಳಾಗಿದ್ದವರೂ ಮಕ್ಕಳಾಗಬೇಕೆನ್ನುವರು.

ಗಂಗಾ—ನಮ್ಮ ಆ ಆಶೆಯೊಂದರಿಂದಲೇ ಫಲವುಂಟಾಗುವುದೇನು ? ಎಷ್ಟೋ ಕಷ್ಟಗಳನ್ನು ಸಹಿಸಿ, ಪಡೆಯಬೇಕಾದ ಫಲವು, ಕಷ್ಟ ಪಡದೆಯೇ ಉಂಟಾಗಿರುವುದಲ್ಲವೇ ?

ಯಮುನಾ—ಯಾವುದು ?

ಗಂಗಾ—ಯಾವುದೆಂದರೆ ಈಗ ನಮಗೆ ಮಕ್ಕಳಿಲ್ಲವೆ ?

ಯಮುನಾ—ನಿಮ್ಮ ಸವತಿಯ ಮಕ್ಕಳನ್ನು ಹೇಳುವಿರೋ ?

ಗಂಗಾ—ಆಹುದು ; ಅವರು ಮಕ್ಕಳಲ್ಲವೋ ?

ಯಮುನಾ—ಹೇಗಾದುವು ? ಎಷ್ಟಾದರೂ ಬಿಟ್ಟೇಹೋಗಿವೆ !

ಗಂಗಾ—'ಏನು ? ಬಿಟ್ಟಿದೆ ! ಹೇಗೆ ? ಯಜಮಾನರಿಗೆ ಮಕ್ಕಳೇ ಆಹುದಷ್ಟೆ ; ಅವರ ಮಕ್ಕಳು, ನನಗೂ ಆಗಲಾರವೋ ? ಬೇರೆಯೇ ಆಗಬೇಕೋ ? ಅವುಗಳೇ ನಮ್ಮವು. ಬೇರೆ ಬೇಕಾಗಿಲ್ಲ.'

ಯಮುನಾ—ಹಾಗೆ ಹೇಳುವುದಾದರೂ ಮಗಳೊಬ್ಬಳೇ !

ಗಂಗಾ—ಅದೇಕೆ ? ಮಗನಿಲ್ಲವೆ ?

ಯಮುನಾ—ಎಲ್ಲಿ ? ತಾಯಿ, ಕಾಲಾಧೀನಳಾದಳೆಂಬ ವರ್ತಮಾನಬಂದ ಮೂರು ನಾಲ್ಕು ತಿಂಗಳೊಳಗಾಗಿ ಮಗನೂ, ಕಾಲವಶನಾದನೆಂದು ವರ್ತಮಾನ ಬಂದಿತು. ಅದರ ಮೇಲೆಯೇ ಅಮ್ಮಾಯಿಯವರ ಬಲಾತ್ಕಾರಕ್ಕೆ, ಯಜಮಾನರು ಕಟ್ಟುಬೀಳಬೇಕಾಯಿತು.

ಗಂಗಾ—ಹುಬ್ಬುಗಂಟಿಕ್ಕಿ—'ಯಾವ ಸುಖಸಾಧನೆಯಾಗಬೇಕೆಂದು ಮಾಡಿಕೊಳ್ಳಬೇಕಾಯ್ತು ? ಹಾಗೆಯೇ ಇದ್ದರಾಗುತ್ತಿರಲಿಲ್ಲವೇ?

ಯಮುನಾ—ಹಾಗೆನ್ನಲಾದೀತೇ ? ಅವರು, ದ್ವಿತೀಯ ವಿವಾಹ ಮಾಡಿಕೊಂಡುದು, ಯುಕ್ತವಿಚಾರವೇ ಸರಿ. ಆದರೂ, ಪ್ರಯತ್ನಸಾಫಲ್ಯವೆನ್ನಿಸುವಂತೆ ಮಕ್ಕಳಾಗಲಿಲ್ಲ. ಆಗಿದ್ದ ಮಗನಿಗೂ ಅಪದೆಸೆಯುಂಟಾಯ್ತು.

ಗಂಗಾ—ನನಗೆ ಇದಾವುದೂ ತಿಳಿಯದು. ಯಾವ ಸುದ್ದಿಯನ್ನೂ-ಯಾರೂ ನನ್ನಲ್ಲಿ ಹೇಳುವವರಿಲ್ಲ, ನಾನೂ ಕೇಳಬೇಕೆಂದಿಲ್ಲ. ದೈವ ಯತ್ನಕ್ಕೆ ಯಾರೇನು ಮಾಡಿಯಾರು? ದೊರೆತಷ್ಟರಲ್ಲಿಯೇ ತೃಪ್ತ ರಾಗಬೇಕು.

ಯಮುನಾ—ನಿಮ್ಮ ಸಹನೆ, ಮತ್ತಾರಲ್ಲಿಯೂ ಇರಲಾರದು! ಆಕೆಯೂ ಬದುಕಿದ್ದು, ನೀವಿಬ್ಬರೂ, ಒಂದೇ ಕಡೆಯಲ್ಲಿದ್ದ ಪಕ್ಷದಲ್ಲಿ, ಜಮೀನ್ದಾರರ ಸಂತೋಷಕ್ಕೆ ಪಾರವಾದರೂ ಎಲ್ಲಿರಬೇಕು?

ಗಂಗಾ—ಉದಾಸೀನದಿಂದ,—'ಅದೆಲ್ಲವೂ ಸ್ವಪ್ನವಿಚಾರವೇ ಸರಿ.'

ಯಮುನಾ—ಕೊರಳನ್ನು ಕೊಂಕಿಸಿ,—'ಒಂದುವೇಳೆ, ನಿಜವೇ ಆದರೋ?'

ಗಂಗಾ—ಬೆದರಿನೋಡುತ್ತ,—'ಇದೇನು? ಸ್ವಪ್ನವೋ?'

ಯಮುನಾ—ನಿಜವೇ, ಏಕಾಗಬಾರದು?

ಗಂಗಾ—ಹೇಗಾದೀತು? ಹತ್ತು ವರ್ಷಗಳಿಗೆ ಹಿಂದೆ ಕಳೆದುಹೋದುದು, ದೊರಕೀತೇ?

ಯಮುನಾ—ಹೋಯಿತೆಂಬುದು, ಪರೋಕ್ಷದ ಮಾತು, ಒಂದುವೇಳೆ ಅದು, ದ್ರೋಹಿಗಳ ಅಪಲಾಪವೇ ಆಗಿದ್ದರೆ, ಆಗಬಾರದೇಕೆ?

ಗಂಗಾ—ಶರಭಾವದಿಂದ, 'ಯಜಮಾನರ ವಿಷಯದಲ್ಲಿಯೂ ದ್ರೋಹಿಗಳಿದ್ದಾರೆಯೋ? ಅದು, ಅಬದ್ಧದ ಮಾತಾಗಿದೆ. ಹಾಗೂ ಒಂದುವೇಳೆ, ದೊರೆಯುವ ಪಕ್ಷದಲ್ಲಿ, ಸಂತೋಷವೇ ಸರಿ. ಅದರಿಂದ ಯಜಮಾನರೂ ಸುಖಿಗಳಾದಾರಲ್ಲವೆ? ಅಷ್ಟೇ ನನಗೆ ಸಾಕು.

ಯಮುನಾ— ದೈವೇಚ್ಛೆ! ಅದಿರಲಿ; ಹೊಸಸುದ್ದಿಯೊಂದನ್ನು ಕೇಳಿದೆ.

ಗಂಗಾ—ಅದೇನು?

ಯಮುನಾ—ಹುಡುಗಿಗೆ ವರನು ನಿಶ್ಚಿತನಾಗಿದ್ದಾನಂತೆ; ಮುಂದಿನ ಮಾಘದಲ್ಲಿಯೇ ಮದುವೆಯಂತೆ.

ಗಂಗಾ—ನನಗೆ ತಿಳಿಯದು. ಹುಡುಗಿಯ ತಂದೆಯಿರುವಲ್ಲಿ, ಈ ವಿಷಯ ದಲ್ಲಿ ಮತ್ತಾರಿಗೆ ಹಕ್ಕಿರುವುದು ?

ಯಮುನಾ— ಹಟವಾದಿಗಳ ವಿಷಯದಲ್ಲಿ, ಯಾರೇನು ಹೇಳಲಾದೀತು ? ಹುಡುಗಿಯನ್ನು ಇಲ್ಲಿಗೆ ಕಳಿಸುವುದಿಲ್ಲವೆಂದೂ, ತಮ್ಮಲ್ಲಿಯೇ ವಿದ್ಯೆ ಯನ್ನು ಕಲಿಯಿಸಿ, ಅನುಕೂಲವಾದ ವರನಿಗೆ ಮದುವೆಮಾಡಿ ಕೊಡುವೆವೆಂದೂ, ಹುಡುಗಿಯ ತಾತನು ಹೇಳುತ್ತಿರುವನಂತೆ ! ಯಜಮಾನರಾದರೂ, ಮರ್ಯ್ಯಾದೆಗೆ ಕುಂದಾದೀತೆಂದು ಮೌನ ವನ್ನೇ ಹಿಡಿದಿರಬೇಕಲ್ಲವೇ ?

ಗಂಗಾ—ಬಿಡುಗಣ್ಣಿನಿಂದ ನೋಡುತ್ತ,-‘ ನಿನಗಿದೆಲ್ಲಾ ಹೇಗೆ ತಿಳಿಯಿತು?’

ಯಮುನಾ—ಈ ದಿನ ಮಧ್ಯಾಹ್ನದಲ್ಲಿ ನಾನು ರಾಮಮಂದಿರಕ್ಕೆ ಹೋ ಗಿರಲಿಲ್ಲವೆ ? ಅಲ್ಲಿಗೆ ನನ್ನ ಸೋದರಮಾವನ ಮಗನು, ಬಂದಿದ್ದನು. ಅವನಿಂದ ತಿಳಿದುಬಂದಿದೆ.

ಗಂಗಾ—ಈ ಊರಲ್ಲಿಯೇ ಇದ್ದಾನೆಯೇ ?

ಯಮುನಾ—ಇಲ್ಲಿಗೆ ನಾಲ್ಕುಹರದಾರಿಯಲ್ಲಿರುವ ಹಳ್ಳಿಯಲ್ಲಿರುವನು.

ಗಂಗಾ—ಆತನ ಹೆಸರೇನು ? ಉದ್ಯೋಗವಾವುದು ?

ಯಮುನಾ—ಉದ್ಯೋಗವೆಂತಹುದೋ ನನಗೆ ಹೇಳಲಿಕ್ಕೆ ಬಾರದು. ಹೇಗೂ ಪ್ರಸಿದ್ಧನಾದ ಚಿಕಿತ್ಸಕನಂತೆ ! ಅವನ ಹೆಸರಾದರೂ ನನಗೆ ಮರೆತುಹೋಗಿದೆ, ಚೆನ್ನಾಗಿ ನೆನಪಿಲ್ಲ.

ಗಂಗಾ—ಯಾವುದು ಹೇಗಾಗಬೇಕೋ ಹಾಗೆಯೇ ಆಗುವುದು. ನನ್ನ-ನಿನ್ನ ಇಷ್ಟದಂತಾಗುವುದೇನು ? ಸುಮ್ಮನೇಕೆ ಬಳಲಬೇಕು ?

ಯಮುನಾ—ಅಷ್ಟೇ ಸರಿ ! ಆದರೆ, ಅಮ್ಮಾಯಿಯವರ ಕ್ಲೇಶವನ್ನು ನೋಡಿ, ಸಹಿಸುವಂತಿಲ್ಲ.

ಗಂಗಾ—ನಾವೇನು ಮಾಡಲಾದೀತು ? ಹೊತ್ತು ಏರುತ್ತಿದೆ. ನನಗೆ ಹೊರಗೆ ಕೆಲಸವಿದೆ ಇನ್ನು ಹೊರಡು !

ಯಮುನಾ—ನಾನೂ ಹೋಗಬೇಕು. ಆದರೆ ನಿಮ್ಮ ಅಕ್ಕನವರೂ, ಮಕ್ಕಳೊಡನೆ ಬಂದು, ನೀವೂ, ಅವರೂ, ಇಬ್ಬರೂ ಸೇರಿ, ಸುಖಸಂತೋಷದಲ್ಲಿರುವುದನ್ನು ನೋಡಬೇಕೆಂಬುದೇ ನನ್ನ ಕೋರಿಕೆ.

ಗಂಗಾಬಾಯಿಗೆ ಮುಖವು ಕೆಂಪೇರಿತು ; ಕಿಡಿಕಿಡಿಯಾಗಿ ನೋಡಿ,–' ಏಕೆ, ಸುಮ್ಮನೆ ಪರೀಕ್ಷಿಸುತ್ತೀಯೆ ? ಹಾಗೆ ಬರುವುದಾದರೆ ಮತ್ತೂ ಸಂತೋಷ. ನನಗೀ ಜವಾಬ್ದಾರಿಯೇ ತಪ್ಪಿಹೋದೀತಮ್ಮ ! ಇನ್ನು ಹೋಗಿ ಕೆಲಸನೋಡು.

ಯಮುನಾಬಾಯಿಯು ಕಿರುನಗೆಯಿಂದ,–' ಗಂಗಾಬಾಯಿ ! ಈ ಮಾತು, ನಿಮಗೆ ಚೇಳುಕಡಿತದಂತಾಯ್ತೇನು ? ನಿಮ್ಮನ್ನು ನಾನೇಕೆ ಪರೀಕ್ಷಿಸಬೇಕು ? ' ಎಂದು ಹೇಳಿ ಹೊರಟುಹೋದಳು. ಗಂಗಾಬಾಯಿಯೂ, ಚಿತ್ರಶಾಲೆಯ ಕದವನ್ನು ಹಾಕಿಕೊಂಡು ಹೊರಟಳು.

## ಪಂಚಮ ಪರಿಚ್ಛೇದ.

(ಅಶೋತ್ಪತ್ತಿ)

"ಎಷ್ಟು ಮಂದಿಗೆ ಎರಡನೆ ಮದುವೆಯಾಗಿಲ್ಲ ? ಎಲ್ಲರೂ ಇವನಂತೆಯೇ ವೈರಾಗ್ಯದಲ್ಲಿರುವರೇನು ? ಯಾರೂ ಇವನಂತೆ ಜೋಗಿಯಾಗಿರುವುದನ್ನು ನಾನು ನೋಡಿರುವುದಿಲ್ಲ. ದೇವರು ಕೊಟ್ಟಿರುವ ಸಂಪತ್ತಿಗೆ ಕೊರತೆಯಿಲ್ಲವಾದರೂ, ಅನುಭವವನ್ನು ಕೇಳಿ ತಂದಿರಬೇಕಲ್ಲವೆ ? ' ರತಿಯಂತಹ ಹೆಂಡತಿ; ಕುಬೇರನಿಗೆ ಸಮವಾದ ಭಾಗ್ಯ' ಯಾವುದಕ್ಕೆ ಕಡಿಮೆ ? ಹೀಗೇಕಿರಬೇಕು ? ಇದೂ ನನ್ನ ದುರದೃಷ್ಟವೇನು ? "

"ಅಮ್ಮಾಯಿಾ! ಎಲ್ಲರೂ ಒಂದೇ ಬಗೆಯುವರಾಗಿದ್ದಾರೆಯೇ? ಭಾವನಾಗುಣಗಳು ಬೇರೆಬೇರೆಯಾಗಿವೆಯಲ್ಲವೆ? ಯುಜಮಾನರಿಗೆ ವಿರಕ್ತಿಯಲ್ಲಿರುವ ಮನಸ್ಸು, ಮತ್ತೊಂದರಲ್ಲಿಯೂ ಇಲ್ಲ! ಇದನ್ನು ನಾವು ಹೇಳಿ, ಬದಲಾಯಿಸಲಿಕ್ಕಾದೀತೆ?"

"ಹೇಗಾದೀತು? ಯುಮುನೆ! ಹತ್ತುವರ್ಷಗಳಿಂದ ದಿನದಿನಕ್ಕೂ ಬಲವಾಗುತ್ತಿರುವ ಹುಚ್ಚು, ಇನ್ನುಮುಂದೆ ನೆಟ್ಟಗಾಗುವುದೆಂದರೆ ಆದೀತೇ? ಇದು, ಬರಿಯ ಆಶೆಯಲ್ಲವೇ? ಅವಳುಹೋಗಿ, ಇವಳನ್ನು ತಂದೂ, ಅವನು ಹಾಗೆ ಒಂಟಿಯಾಗಿರುತ್ತಿರುವುದು, ನನಗೆ ಸಮಾಧಾನವೇ? ಆತನ ಹಿಂದಿನ ಸಂತೋಷ-ಉತ್ಸಾಹವೆಲ್ಲವೂ, ಸುನಂದೆಯೊಡನೆಯೇ ಮಾಯವಾದುವೇ? ದಿನದಿನಕ್ಕೂ ಜಿಗುಪ್ಸೆಯೇ ಹೆಚ್ಚುತ್ತಿದೆ. ಅಯ್ಯೋ! ಸುನಂದೆ! ಈಗ ನೀನೆಲ್ಲಿರುವೆ? ನಿನ್ನ ಮಕ್ಕಳೇನಾಗಿವೆ? ಹೇಳಲಾರೆಯಾ? ಆ ನಿನ್ನ ಪ್ರೀತಿ-ವಿಶ್ವಾಸ ಗೌರವವೆಲ್ಲವೂ ಈಗೆಲ್ಲಿಹೋದುವು?"

"ಏಕೆ ಅಳುವುದು? ಅಮ್ಮಾಯಿಾ! ಅಳಬಾರದು. ಅಳುವಂತಹದೇನೂ ಆಗಿಲ್ಲ; ಸುಮ್ಮನಿರಿ" ಈ ಬಗೆಯ ಉತ್ತರಪ್ರತ್ಯುತ್ತರಗಳು, ಜಮಿಾನ್ದಾರನ ತಾಯಿ-ಚಂದ್ರಮತಿಗೂ, ಯುಮುನೆಗೂ ನಡೆಯುತ್ತಿದ್ದುವು. ಚಂದ್ರಮತಿಯು, ಹಜಾರದೊಳಗಡೆಯ ಕಿರುಮನೆಯಲ್ಲಿ ಕುಳಿತಿದ್ದಳು. ಅವಳ ಮುಂದೆ ಯುಮುನೆಯು ಕುಳಿತಿದ್ದಳು. ಕಿರುಮನೆಯು ಚಂದ್ರಮತಿಯ ಸ್ವಂತವಾದ್ದಾಗಿರುವುದು. ಇದರೊಳಗಡೆಯಲ್ಲಿ, ಇವಳ ಕೈಪೆಟ್ಟಿಗೆ, ಪೆಟಾರಿ, ದೇವರ ಪೆಟ್ಟಿಗೆ, ಮೊದಲಾದ ಪೆಟ್ಟಿಗೆಗಳು, ದೇವರ ಪೂಜಾಸಾಮಗ್ರಿಗಳೂ, ಉಳಿದ ಹಾಸಿಗೆ, ಹೊದಿಕೆಬಟ್ಟೆಗಳೂ ಓರಣವಾಗಿಡಲ್ಪಟ್ಟಿರುವುವು. ಹೆಚ್ಚೇಕೆ? ಒಟ್ಟಿನಲ್ಲಿ, ಈ ಕಿರುಮನೆಯುನ್ನು ನೋಡಿದರೆ ಸಾಕು; ಚಂದ್ರಮತಿಯ ಕರ್ತವ್ಯದಕ್ಷತೆ, ಮನೋಜಯು ಇತ್ಯಾದಿಗಳು, ಎಷ್ಟರಮಟ್ಟಿಗಿರಬಹುದೆಂಬುದು, ತಿಳಿದುಬರುವುದು,

ಚಂದ್ರಮತಿಗೆ, ೭೦ ವರ್ಷಗಳಾಗಿರಬಹುದು. ಆದರೂ, ದೇಹವು ದೃಢವಾಗಿರುವುದು. ಮುಖದಲ್ಲಿಮಾತ್ರ, ಸುಕ್ಕುಕಾಣಿಸಿಕೊಂಡಿರುವುದು.

ಈಕೆಗೆ ಪತಿವಿಯೋಗವಾದ ಕಾಲದಲ್ಲಿ, ಪುತ್ರನು, ಇನ್ನೂ ಲೋಕಾನುಭವ ಶೂನ್ಯನಾಗಿಯೇ ಇದ್ದುದರಿಂದ ‘ ಸಮಾಜಶಾಸನ ’ ವೆಂಬ ಘೋರ ವಿಪತ್ತಿಗೆ ಒಳಪಟ್ಟು, ಇವಳ ತಲೆಯು, ಸುಣುಪಾಗಿಹೋಗಿತ್ತು ! ಪುತ್ರನು ಪ್ರಾಪಂಚಿಕ ಸ್ಥಿತಿ ಗತಿಗಳನ್ನು ಚೆನ್ನಾಗಿ ತಿಳಿದುಕೊಳ್ಳುವಂತಾದಬಳಿಕ, ತಾಯ ದುರವಸ್ಥೆಗಾಗಿ ವ್ಯಥೆಪಡದಿರಲಿಲ್ಲ. ಆದರೂ, ಉಪಾಯಾಂತರ ವಿಲ್ಲದೆ, ಆ ವಿಚಾರದಲ್ಲಿ ಏನನ್ನೂ ಮಾಡಲಾರದೆ ಮೌನವನ್ನೇ ಹಿಡಿದಿರಬೇ ಕಾಯ್ತು. ಅದು ಹೇಗಾದರೂ ಇರಲಿ, ಸದ್ಯಸ್ಥಿತಿಯಲ್ಲಿ ಚಂದ್ರಮತಿಯು, ಉಟ್ಟಿದ್ದುದು ಬಿಳಿಯಬಟ್ಟೆ, ಕೊರಳುತುಂಬ ತುಳಸೀಮಣಿ, ಹಣೆಯಲ್ಲಿ ಸಣ್ಣ ಅಕ್ಷತೆಯಚುಕ್ಕಿ, ಕಯ್ಯಲ್ಲಿ ಜಪಸರ, ನೋಡುವವರಿಗೆಲ್ಲಾ ಇವಳಲ್ಲಿ ಪೂಜ್ಯಭಾವನೆಯುಂಟಾಗುವಂತೆ ಮಾಡುತ್ತಿರುವ ತೇಜಸ್ಸು, ಸರ್ವಾಂಗದ ಲ್ಲಿಯೂ ವ್ಯಾಪಿಸಿಕೊಂಡಿರುವುದು.

ಆದರೆ, ಸುಹೃದರೇ ! ನಮ್ಮ ಜಮೀನ್ದಾರ ತಾರಾಪತಿರಾಯನನ್ನು ಈ ಕಾಲದ ಮಹಾಶಯರಂತೆ ತಿಳಿಯಬೇಡಿರಿ ? ಈ ಕಾಲದ ನಾಗರಿಕ ತೆಯ ತತ್ವವೆನ್ನುವುದು “ ಜೀರ್ಣವಸ್ತುಗಳನ್ನು ಕಾಲಿಂದೊಗೆದು, ನೂತನ ವಸ್ತ್ರಗಳನ್ನು ಧರಿಸಬೇ ” ಕೆಂದು ಹೇಳುವ ನೀತಿಮಾತ್ರವಾಗಿದೆ. ಆ ನೀತಿ ಯೆಂಬುದರ ತತ್ವಾರ್ಥವೇನೆಂಬುದನ್ನು ಯೋಚಿಸುವುದು ಹಾಗಿರಲಿ ; ‘ಹಳೆ ಯದನ್ನೊಗೆದು, ಹೊಸದನ್ನು ಹಿಡಿಯಬೇ’ ಕೆಂಬ ಒಂದೇಅರ್ಥದಿಂದ ಕೆಲ ವುಮಂದಿ ಮಹಾಶಯರು, ತಮ್ಮನ್ನು ಹೆತ್ತ, ತಾಯ್ತಂದೆಗಳನ್ನಾದರೂ, ಕಡೆಗಣಿಸುತ್ತಿರುವರು ! ಏಕೆಂದರೆ ‘ ಕಯ್ಯಲಾಗದ ಈ ಮುದಿಹದ್ದುಗ ಳಿಂದ ಕೆಲಸವೇನಾದಿತೆಂ ’ ದು, ಬಹು ಧಾರಾಳಬುದ್ಧಿಯಿಂದ ಹೇಳುವರು. ಅದು ಸಾಲದೆಂದರೆ, ಅಧಿಕಾರಿಯಾದವನೊಬ್ಬನು, ವೈದಿಕನಾಗಿರುವ ತನ್ನ ವೃದ್ಧಪಿತನನ್ನು, ಪಿತನೆಂದು ಹೇಳಿಕೊಳ್ಳುವುದು ಕೂಡ, ಅಪಮಾನಕರವಂತೆ! ಇದಲ್ಲವೇ ಪಿತೃಭಕ್ತಿ ? ಅಷ್ಟೇಅಲ್ಲ ! ಅಂತವನ ತಾಯಿಯಾದವಳಿಗೆ ದು ರ್ದೈವದಿಂದ ಪತಿವಿಯೋಗವಾಯ್ತೆಂದರೆ ಹೇಳುವುದೇನು ? ಅವಳ ಪತಿ

ದೇವನು ಕಷ್ಟಪಟ್ಟು, ಸಂಪಾದಿಸಿಟ್ಟ ಆಸ್ತಿಯೆಲ್ಲಕ್ಕೂ, ಈ ನಾಗರಿಕನೆನ್ನಿಸಿಕೊಳ್ಳುವ ಮಗನೇ, ಸ್ವಾಮಿಯಾಗತಕ್ಕವನು. ಈತನು, ಕೊಡುವ ಪಿಡಿಭಿಕ್ಷೆಗೆ ಕಯ್ಯೊಡ್ಡಿ, ಜೀವಿಸುವುದು ಮತ್ತು ಈ ಮಗನ ಹೆಂಡಿತಿಗೆ ತೊತ್ತಾಗಿರುವುದು, ಇವೆರಡು ವೃತ್ತಿಯಲ್ಲಿಯೇ ಇವಳಿಗೆ ಹಕ್ಕು ನಿಲ್ಲುವುದಂತೆ! ಮತ್ತಾವುದಕ್ಕೂ ಅವಳಲ್ಲಿ, ಸ್ವಾತಂತ್ರ್ಯವೇ ಇಲ್ಲವಂತೆ! ನಮ್ಮ ಸುಪ್ರಸಿದ್ಧಾಫ್ರತೃವರ್ಗವು ಮಾತ್ರ, ಎಂದೆಂದಿಗೂ ಹಾಗೆ, ಆಚರಿಸಬಾರದೆಂಬುದೇ ನಮ್ಮ ಭರವಸೆ. ಹೆತ್ತತಾಯಿಯರನ್ನು, ತಮ್ಮ ಜನ್ಮದಾತೆಯರನ್ನು, ಪ್ರತ್ಯಕ್ಷದೇವತಾಸ್ವರೂಪಿಯರನ್ನು, ಯಾವಪುತ್ರರು, ತ್ರಿಕರಣಶುದ್ಧಿಯಿಂದ ಸೇವಿಸುವರೋ, ಅವರೇ ಸುಪುತ್ರರು; ಅವರೇ ಸಿದ್ಧಾರ್ಥಿಗಳು; ಅವರೇ ನಮ್ಮ ನಿರಂತರದ ಧನ್ಯವಾದಗಳಿಗೂ ಪಾತ್ರರಾದವರು. ವಿವರಣೆಯಿಂದೇನು?

ಪ್ರಕೃತದಲ್ಲಿ, ನಮ್ಮ ಧನ್ಯವಾದಕ್ಕೆ ಪಾತ್ರನಾದವನೆಂದರೆ, ತಾರಾಪತಿಯೇ ಸರಿ! ಈತನು ತಾಯನ್ನು ಮನದಲ್ಲಿಯಾದರೂ ಕಡೆಗಣಿಸಲಾರನು. ತಾಯಿಯೇ ಈತನಿಗೆ ಇಷ್ಟದೇವತೆ, ತಾಯಿಯ ಇಷ್ಟವನ್ನು ನಡೆಯಿಸುವುದೇ ಈತನ ತಪಶ್ಚರ್ಯೆ. ಈ ಮಾತೃದೈವವನ್ನು ಬಿಟ್ಟು, ಇವನಿಗೆ ಮತ್ತಾವ ದೈವದಲ್ಲಿಯೂ 'ಮನಸ್ಸು ಹೋಗುತ್ತಿರಲಿಲ್ಲ ಈತನು ಎಷ್ಟೇ ಸಂಕಟದಲ್ಲಿ ಸಿಕ್ಕಿ ತಪಿಸುತ್ತಿರಲಿ, ಮಾತೃದೇವತೆಯ ಕರುಣಾಮೃತಪೂರಿತವಾದ ಕಂಠವು, ಕಿವಿಗೆ ಮುಟ್ಟಿತೆಂದರೆ ಸಾಕು, ಉತ್ಸಾಹಶಕ್ತಿಯಿಂದ ದಿಗ್ಗನೆದ್ದುಬಂದು, ತಾಯಿಯಬಳಿಯಲ್ಲಿ ನಿಲ್ಲುವನು. ಈ ಬಗೆಯ ಅನ್ಯಾದೃಶವಾದ ಭಕ್ತಿಯಿಂದೆಯೇ, ಈ ಮಾತೆಯ ಸುಖಸಮಾಧಾನಕ್ಕೆಂದು, ಯಮುನೆಯನ್ನು, ಸೇವಾಕಾರ್ಯದಲ್ಲಿ ಕಟ್ಟುಮಾಡಿರುವನು. ಚಂದ್ರಮತಿಯೆಂದರೆ, ಸಾಮಾನ್ಯಸ್ತ್ರೀಯಾಗಿಲ್ಲ! ಅವಳಲ್ಲಿರುವ ಧರ್ಮಶ್ರದ್ಧೆ, ಸತ್ಯನಿಷ್ಠೆ, ಭೂತದಯೆ, ದೈವಭಕ್ತಿ, ಇತ್ಯಾದಿ ಸದ್ಗುಣಗಳು ಅನ್ಯಾದೃಶಗಳಾಗಿರುವುವು. ಈ ಸದ್ಭಾವನಾಪ್ರಭಾವವೇ, ಯಮುನೆಯು ಇವಳನ್ನು ಪರಮೇಶ್ವರಿಯೆಂದೇ ಭಾವಿಸಿ, ಸೇವಿಸುವಂತೆ ಮಾಡಿರುವುದು.

ಯಮುನೆಯು ಚಂದ್ರಮತಿಗೆ ಸಮೀಪಬಂಧುವಲ್ಲವಾದರೂ, ಶೀಲ-ಸತ್ಯ-ಕರ್ತವ್ಯದಕ್ಷತೆಗಳೆಂಬ ತನ್ನ ಸದ್ವರ್ತನೆಗಳಿಂದ ಚಂದ್ರಮತಿಗೆ ಪರಮಾಪ್ತಬಂಧುವಾಗಿರುವಳು. ತಾರಾಪತಿರಾಯನೂ, ಇವಳನ್ನು ತನ್ನ ಒಡಹುಟ್ಟಿದವಳೆಂದೇ ಭಾವಿಸಿ, ಸನ್ಮಾನಿಸುತ್ತಿರುವನು. ಇವಳಲ್ಲದೆ, ಚಂದ್ರಮತಿಯ ಹೃತ್ತಾಪವನ್ನು ಸಮಾಧಾನಪಡಿಸಲು, ಮತ್ತಾರಿಗೂ ಶಕ್ತಿಸಾಲದು. ಆ ಮಾತು ಹಾಗಿರಲಿ. ಇಂದು ಚಂದ್ರಮತಿಗೆ, ಬಹು ದಿನಗಳಿಂದ ತಡೆದಿದ್ದ ಸ್ನುಷಾ (ಸೊಸೆ) ವಿಯೋಗವ್ಯಸನವು, ಮತ್ತೆ ಕಾಣಿಸಿಕೊಂಡಿರುವುದು ! ಪುತ್ರನ, ಪೂರ್ವದ ವೈಭವಸ್ಥಿತಿಯೂ, ನೆನಪಿಗೆ ಬಂದು, ಇವಳ ಮನಸ್ಸನ್ನು ತುತ್ತುಮುರಾಗುವಂತೆ ಮಾಡಿರುವುದು. ಮನದಳಲನ್ನು ತಡೆಯಲಾರದೆ, ವ್ಯೆಮರೆದು ಹಲಬುವಂತಾಗಿರುವುದು, ಯಮುನೆಯೂ ಮುಂದೆ ಕುಳಿತು ಸಮಾಧಾನ ಮಾಡುತ್ತಿರುವಳು ! ಆದರೇನು ? ಇನ್ನೂ ಸಮಾಧಾನವಾಗಿಲ್ಲ. ಚಂದ್ರಮತಿಯು, ಬಾರಿಬಾರಿಗೂ ತಲೆಯೆತ್ತಿ ದೈನ್ಯದಿಂದ,-‹ಅಯ್ಯೋ, ಸುನಂದಾ ! ನೀನೆಲ್ಲಿರುವೆ ? ತಾಯಿ! ನೀನು ಹೋಗಿ, ನಿನ್ನ ಮಕ್ಕಳೂ ಮರೆಯಾಗಿ, ನಾನು ಜೀವಿಸುತ್ತಿರಬೇಕೇ ? ತವರ್ಮನೆಗೆಂದು ಹೋದವಳು, ಒಂದೇಬಾರಿಗೆ, ಎಲ್ಲರನ್ನೂ ತೊರೆದು, ಹೊರಟುಹೋಗಬಹುದೇ ? ಮತ್ತೆ ನೋಡಬೇಕೆಂದು ಅತ್ತು-ಅತ್ತು ಸಾಯುತ್ತಿದ್ದರೂ, ಕಾಣಿಸಿಕೊಳ್ಳದಿರುವುದೇ? ’ ಎಂದೀಪರಿಯಾಗಿ ಮನಬಂದಂತೆ ಹಲಬುತ್ತಿದ್ದಳು. ಯಮುನೆಗೆ ಮುಂದೆ, ಸಹಿಸಲಾಗಲಿಲ್ಲ. ಕೂಗಿಹೇಳಿದಳು,-‹ ಅಮ್ಮಾಯಿ ! ಅಳಬೇಡಿರಿ ! ಅಳಬೇಕಾದುದೇನೂ ಆಗಿಲ್ಲ. ತಾಳ್ಮೆಯನ್ನು ತೆಗೆದುಕೊಳ್ಳಿರಿ.’

ಚಂದ್ರಮತಿ—ದುಃಖವನ್ನು ತಡೆಗಟ್ಟಿ, ಗದ್ಗದಸ್ವರದಿಂದ,-‹ಯಮುನಾ ! ಹೇಗೆಸಹಿಸಲಿ ? ಹೇಳು ! ಮಗನು ಜೋಗಿಯಾಗಿ, ಯಾವಾಗ ನೋಡಿದರೂ, ಸುಖಲೇಶವಿಲ್ಲದೆ ಮರುಗುತ್ತಿರುವನು. ಸೊಸೆಯಾದವಳು ಒಂಟಿಯಾಗಿಯೇ ಹಗಲಿರುಳೂ ಕೊರಗುತ್ತಿರುವಳು. ಇದನ್ನು

ನೋಡಿಯೂ ಈ ಹಾಳು, ಹೆತ್ತ ಒಡಲನ್ನು ಹೇಗೆತಾನೇ ಹಿಡಿದುಕಟ್ಟಲಿ? ಮಗನಿಗೆ ಮತ್ತೆ ಮಕ್ಕಳಾಗಲಿಲ್ಲ; ಆಗಿದ್ದ ಮಕ್ಕಳೂ ಉಳಿಯಲಿಲ್ಲ. ಇನ್ನು ಸುಖಸಂಗತಿಯ ಆಶೆಯಾದರೂ, ಇರುವುದೇ?

ಯಮುನೆ—ತಾಯಿ! ಅಳಬಾರದು. ತಮ್ಮ ಮಗನ ಸುಖ-ಸಮಾಧಾನಗಳಿಗೆ ಕೊರತೆಯಿಲ್ಲ.

ಚಂದ್ರಮತಿ—ಬೆದರಿ ನೋಡುತ್ತ ‘ಯಮುನೆ! ಏನಿದು? ಕನಸೋ? ನಿಜವಾಗಿಯೂ ಹೇಳುತ್ತಿರುವೆಯೋ? ಇನ್ನು, ತಾರಾಪತಿಯ ಅದೃಷ್ಟದಲ್ಲಿ ಸುಖವೂ, ಬರೆದಿದೆಯೋ? ನಿಜವಾಗಿ ಹೇಳು?’

ಯಮುನೆ—ಕನಸಲ್ಲ; ನಿಜವಾಗಿಯೂ ಹೇಳುತ್ತಿರುವೆನು ಸಹಧರ್ಮಿಣಿ, ಸಮೀಪದಲ್ಲಿದ್ದೂ ಸುಖಕ್ಕೆ ಕೊರತೆಯೇನು?

ಚಂದ್ರಮತಿ—ವಿಸ್ಮಯ ಕೌತುಕಗಳಿಂದ ‘ಯಮುನೆ! ನೀನೇನುಹೇಳುವೆಯೋ, ನನಗೆ ಗೊತ್ತಾಗುತ್ತಿಲ್ಲ. ಗಂಗೆಯು, ಇಲ್ಲಿಗೆ ಬಂದು, ೮ ವರ್ಷಗಳಾದರೂ, ಒಂದುದಿನವಾಗಲಿ ಗಂಡಹೆಂಡಿರು, ವಿನೋದದಲ್ಲಿದ್ದುದನ್ನು ನಾನು, ನೋಡಿದುದಿಲ್ಲ. ಮಗನಿಗೆ ಸುಖ-ಸಮಾಧಾನದ ವಿಷಯಗಳಲ್ಲಿ ಹೇಳಹೋದರೆ, ಮೊದಲಹೆಂಡತಿಯ ಗುಣಗಳನ್ನೇ ಎತ್ತಿಹೇಳಿ, ಕಣ್ಣೀರ್ಗರೆದು, ಅಲ್ಲಿ ನಿಲ್ಲದೆ ಹೊರಟುಹೋಗುವನು. ‘ಸುನಂದೆಯ ಸ್ಮರಣೆಯು, ಶುದ್ಧಾಂಗವಾಗಿ ಅಳಿಸಿಹೋಗುವವರೆಗೂ, ನಾನು ಮತ್ತೊಂದು ವ್ಯಕ್ತಿಯಲ್ಲಿ ಸರಸವನ್ನು ಬೆಳೆಯಿಸಲಾರೆನು?’ ಎಂದು ಮುಕ್ತಕಂಠದಿಂದ ಹೇಳುತ್ತಿರುವನು. ಇದಕ್ಕಿನ್ನೇನು ಹೇಳಲಿ?

ಯಮುನಾ—ಕಿರುನಗೆಯಿಂದ ‘ಸುನಂದಾದೇವಿಯ ಸದ್ಗುಣಗಳ ಉಜ್ವಲಸ್ವರೂಪವು, ಹೇಗೂ ಮಲಿನವಾಗುವಂತಿಲ್ಲ ಹಾಗೂ, ಯಾವ ಮೂರ್ತಿಯ ನೆನಪು, ಮರೆಯಾಗಬೇಕೆನ್ನುವುದೋ, ಅದೇ ಮೂರ್ತಿಯೇ, ಇದಿರಾಗಿ ಬಂದು ನಿಂದರೆ, ಹೇಳುವುದೇನು? ಅಮ್ಮಾಯಿ!

ಶ್ರೀದತ್ತ—ಇರಲಿ ; ಮುಂದೆ ತಿಳಿಸಲಾದೀತು. ಮಲೆತಿರದೆ ಎಚ್ಚೆತ್ತಿರು. ಉಳಿದವರ ಸ್ಥಿತಿ ಏನಾಗಿದೆಯೋ ವಿಚಾರಿಸು. ಎಂದು ಹೇಳಿ, ಮತ್ತೆ ಇಬ್ಬರೂ ಹಿಂದಿರುಗಿ, ಚಂದ್ರಮತಿಯ ಕಿರುಮನೆಯ ಬಳಿಗೆ ಬಂದು, ಮೆಲ್ಲನೆ ಕದವನ್ನು ತಟ್ಟಿದರು.

ಚಂದ್ರಮತಿ– ದಿಗಿಲುಬಿದ್ದೆದ್ದು ಬಂದು, ಕದವನ್ನು ತೆರೆದುನೋಡಿ ‘ ಇದೇಕೆ? ತಾರಾಪತಿ! ಇಷ್ಟುಹೊತ್ತಾದರೂ ಮಲಗಬೇಡವೇ? ’ ಎಂದು ಆತುರದಿಂದ ಕೇಳಿದಳು.

ತಾರಾಪತಿ — ಶ್ರೀದತ್ತನ ಸೂಚನೆಯಂತೆ ‘ ಅಮ್ಮಾಯಿಾ ! ಸಂಗೀತಶ್ರವಣಕ್ಕೆ ಹೋಗಿದ್ದು, ಇದೇ ಬಂದೆವು ; ಬಂದವರು, ನಿಮ್ಮನ್ನು ನೋಡಿಕೊಂಡು ಹೋಗಿ, ಮಲಗಬೇಕೆಂದು ಬಂದು ಕೂಗಿದೆವು. ಯಮುನೆಯೂ ಇಲ್ಲಿರುವಳಷ್ಟೆ ? ’

ಚಂದ್ರಮತಿ—ಇಲ್ಲ , ಅವಳು ಹರಿಕಥೆಯನ್ನು ಕೇಳಲಿಕ್ಕೆಂದು ಹೋಗಿರುವಳು.

ತಾರಾಪತಿ—ಸರಿಯೆ, ನೀವಿನ್ನು ಮಲಗಬಹುದು ; ನಾವೂ ಹೋಗುವೆವು.

ಚಂದ್ರಮತಿಯು, ಕದವನ್ನು ಮುಚ್ಚಿ, ಮಲಗಿದಳು. ಜವಾನ್ದಾರನೂ, ಶ್ರೀದತ್ತಕುಮಾರನೂ ಉಪ್ಪರಿಗೆಗಳನ್ನು ನೋಡಿ ಬರಲು, ನಡೆದರು. ಲಕ್ಷ್ಮೀನಿಲಯದಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ವಿಲಾಸಭವನದಲ್ಲಿಯೂ, ಇನ್ನೆಲ್ಲಿಯೂ ವಿಶೇಷವೇನೂ ಕಂಡುಬರಲಿಲ್ಲ. ಆದರೂ, ಗಂಗೆಯ ಮಲಗುವಮನೆ-ಚಿತ್ರದಮನೆಗಳ ಕದಗಳು ಮಾತ್ರ ಹಿಂದಕ್ಕೆ ತೆರೆದು ಹೋಗಿದ್ದುವು ; ಅಗಣಿಗಳು ಮುರಿದುಬಿದ್ದಿವೆ ; ಬಾಗಿಲುಗಳೂ ತೆರೆಯಲ್ಪಟ್ಟಿವೆ. ಕಿರುಮನೆಯಲ್ಲಿ ದೀಪವಿರಲಿಲ್ಲ. ದೀಪವನ್ನು ಹಿಡಿದು ನೋಡಿದರು. ಬೀರುಗಳೂ, ಪೆಟ್ಟಿಗೆಗಳೂ ಬರಿದಾಗಿ ಬಿದ್ದಿವೆ. ಉಡುವು ತೊಡವುಗಳಾಗಲೀ, ಉಳಿದ ಚಿತ್ರ-ಹೆಣಿಗೆ, ಕಸೂತಿ ಸಾಮುಗ್ರಿಗಳಾಗಲೀ, ಯಾವುವೂ ಇರಲಿಲ್ಲ. ಗಂಗೆಯು ಮಂಚದಮೇಲೆ ಮೈಮರೆತು ನಿದ್ರಿಸುತ್ತಿದ್ದಳು. ಶ್ರೀದತ್ತಕುಮಾರನು ವಿಸ್ಮಿತನಾಗಿ ಏನನ್ನೋ ಯೋಚಿಸುತ್ತ ನಿಂತನು.

ತಾರಾಪತಿ—ವಿಕೃತಸ್ವರದಿಂದ ' ಕುಮಾರ! ಮಾಡುವುದೇನು ? ಹೀಗೇಕೆ ನಿಂತಿರುವೆ ? '

ಶ್ರೀದತ್ತ—ತಲೆಯೆತ್ತಿ 'ತಾರಾಪತಿರಾವ್! ಇಷ್ಟು ಕೃತ್ಯಗಳು ನಡೆದಿದ್ದರೂ, ಹೀಗೆ ಮೈಮರೆತು ಮಲಗಿರುವುದು ಅತ್ಯಾಶ್ಚರ್ಯಕರವಾಗಿದೆ.'

ತಾರಾಪತಿ—ನಿರಾತಂಕವೂ, ವಯಃಪ್ರಾಬಲ್ಯವೂ ಸೇರಿದ್ದರೆ, ನಿದ್ದೆಗೆ ಕೊರತೆಯೇನು ? ಹಾಗೂ ನಿನಗೇನಾದರೂ ಸಂಶಯವಿದ್ದರೆ, ಎಚ್ಚರಿಸಿ ಕೇಳುವೆನು.

ಶ್ರೀದತ್ತ—ಆಗುವುದೇನೋ ಆಯಿತು. ಇನ್ನು ಸುಮ್ಮನೆ ಗಲಭೆಮಾಡುವುದರಿಂದ ಕೆಲಸವೇ ಕೆಡುವುದಲ್ಲದೆ ಮತ್ತೇನೂ ಆಗಲಾರದು. ಹಾಗೂ ಈಗಲೇ ಎಚ್ಚರಿಸುವುದರಿಂದ ಸ್ತ್ರೀಸ್ವಭಾವಕ್ಕೆ ತಕ್ಕಂತೆ ಅಳುವೂ ತಲೆದೋರಬಹುದು. ಈಗ ಸಮಾಧಾನದಲ್ಲಿದ್ದು, ಇವರಾಗಿ ಬಂದು ಅಳುವ ಸಂದರ್ಭದಲ್ಲಿ, ಕಾಲಕ್ಕೆ ತಕ್ಕಂತೆ ಒಂದೆರಡು ಸವಿಮಾತುಗಳಿಂದ ಸಂತಯಿಸುವುದು ಯುಕ್ತವಾಗಿದೆ.

ತಾರಾಪತಿ—ಅದೇ ಯುಕ್ತವಾದ ಸಲಹೆಯಾಗಿದೆ.

ಶ್ರೀದತ್ತ—ಹೊತ್ತು ಕಳೆದುಹೋಗುತ್ತಿದೆ ಮನೆಯೆಲ್ಲವನ್ನೂ ನೋಡಿ, ತಕ್ಕಷ್ಟು ವಿಷಯಸಂಗ್ರಹಮಾಡಲಾಗಿದೆ. ಇನ್ನು ನಾನು ಇಲ್ಲಿ ನಿಲ್ಲುವಂತಿಲ್ಲ ; ಬೇಗಹೋಗಬೇಕು.

ತಾರಾಪತಿ—ಕುಮಾರ ! ನಿನ್ನ ಕೆಲಸಕ್ಕೆ ನಾನು ತಡೆಯಾಗಲಾರೆನು ; ನಡೆ. ಇಂದಿನ ಕೌತುಕವ್ಯಾಪಾರದಿಂದ, ಮನಸ್ಸು ಚಾಂಚಲ್ಯಕ್ಕೆ ಗುರಿಯಾಗಿದೆ. ಇದರ ಪರಿಣಾಮವೇನೋ ತಿಳಿಯದು. ಆದುದಾಗಲಿ ! ದೇವರಿರುವನಲ್ಲವೇ ? ಎಂದು ಕುಮಾರನೊಡನೆ ಹೊರಟು, ತನ್ನ ಓಲಗಶಾಲೆ (Office) ಯ ಬಾಗಿಲನ್ನು ತೆರೆದು ಒಳಹೊಕ್ಕನು. ಶ್ರೀದತ್ತನು, ತಾರಾಪತಿರಾಯನಿಗೆ ಬಾಗಿಲನ್ನು ಭದ್ರಪಡಿಸಿ ಮಲಗುವಂತೆ ಬಾರಿಬಾರಿಗೂ ಎಚ್ಚರಿಸಿ, ಅನುಮತಿ ಹೊಂದಿ ಹೊರಟುಹೋದನು.

|| ಶ್ರೀ ||

# ನವಮಪರಿಚ್ಛೇದ

(ಆರೋಪಣೆ—ನಿರೂಪಣೆ.)

ಪ್ರಾತಃಕಾಲ ಏಳುಗಂಟೆಯಿರಬಹುದು. ಜಮೀನ್ದಾರನು ಓಲಗಶಾಲೆಯಲ್ಲಿ ಒಬ್ಬನೇ ಕುಳಿತು, ಏನನ್ನೋ ಬರೆಯುತ್ತಿದ್ದನು. ಮುಖವು ಮಿಶ್ರವರ್ಣದಿಂದ ವಿಜಾತೀಯವಾಗಿದ್ದಿತು, ಕಣ್ಣುಗಳಲ್ಲಿ ನೀರು ತುಂಬಿ ತುಳುಕಾಡುವಂತಾಗಿದ್ದಿತು. ಹಾಗೂ, ಬಿಡದೆ, ಏಕಾಗ್ರತೆಯಲ್ಲಿಯೇ ಕುಳಿತು ಬರೆಯುತ್ತಿದ್ದನು. ಆದರೆ, ಅಷ್ಟರಲ್ಲಿ, ಕಾಲುಂಗುರದ ಕಿರುದನಿಯೊಂದು ಕೇಳಿಬಂದುದರಿಂದ, ಮೆಲ್ಲನೆ ತಲೆಯೆತ್ತಿ ನೋಡಿದನು. ಬರುತ್ತಿದ್ದಾಕೆಯು ಗಂಗೆಯಲ್ಲದೆ ಮತ್ತಾರೂ ಆಗಿರಲಿಲ್ಲ. ಜಮೀನ್ದಾರನು ಬರೆವುದನ್ನು ಅಷ್ಟಕ್ಕೆ ನಿಲ್ಲಿಸಿ, ಬರೆದಿದ್ದ ಪತ್ರವನ್ನು ಬದಿಗಿಟ್ಟು, ತಲೆಬಾಗಿ ಏನನ್ನೋ ಚಿಂತಿಸುತ್ತಿರುವವನಂತೆ ಕುಳಿತನು.

ಗೋಪಾಲನು ಓಡಿಬಂದು, ಬೀದಿಯಬಾಗಿಲನ್ನು ಹಾಕಿದನು. ಬಳಿಕ ಗಂಗೆಯು ಮೆಲ್ಲನೆ ಬಂದು, ಉಟ್ಟಿದ್ದ ಸೀರೆಯ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತ ನಿಂತಳು. ಆಗಲೂ, ತಾರಾಪತಿರಾಯನು ತಲೆಯೆತ್ತಿ ನೋಡಲಿಲ್ಲ. ಗಂಗೆಯು ಅಪಮಾನವಾಯ್ತೆಂದು ಭಾವಿಸಿ, ಬಿಕ್ಕಿಬಿಕ್ಕಿ ಅಳತೊಡಗಿದಳು. (ಅಳುವೇ ಹೆಂಗಳೆಯರ ಪ್ರಬಲಸಾಧನವೆನ್ನುವುದು ?)

ತಾರಾ[illegible]ವನಂತೆ ತಲೆಯೆತ್ತಿ, 'ಇದೇಕೆಬಂದೆ ? ಗಂಗೆ ! ಅಳುವುದೇಕೆ ?

ಗಂಗೆ—ಹಣೆಯಬರಹಕ್ಕಾಗಿ ಅಳುವುದು ; ಹೇಳಿಕೊಳ್ಳಲಿಕ್ಕಾಗಿಯೇ ಬಂದುದು.

ತಾರಾಪತಿ—ಬೇಸರಪಟ್ಟಂತೆ ನಟಿಸಿ,–' ನನಗೆ ಅಗತ್ಯವಾದ ಕೆಲಸವಿದೆ. ಈಗ ಕೇಳಲು ಹೊತ್ತಿಲ್ಲ; ನಾಳೆಗಾಗಲಿ.'

ಗಂಗೆ—ನಾಳೆಯಾಗುತ್ತಿದ್ದರೆ, ಈಗಲೇ ಬರುತ್ತಿರಲಿಲ್ಲ.

ತಾರಾಪತಿ—ಹೇಗೊ ಇರಲಿ, ಈಗ ನನಗೆ ಹೇಳಿ ಕೇಳಲು ವೇಳೆಯಿಲ್ಲ. ಇಷ್ಟವಿದ್ದಲ್ಲಿ, ಬೇಕಾದವರಲ್ಲಿ ಹೇಳಬಹುದು.

ಗಂಗೆ—ತಿರಸ್ಕಾರದಿಂದ ನೋಡುತ್ತ—' ಕೈಹಿಡಿದ ಗಂಡನೇ ಹೆಂಡತಿಯನ್ನು ಹೋಗೆನ್ನುವ ಕಾಲದಲ್ಲಿ, ಹೆರವರಲ್ಲಿ ಹೇಳಬೇಕಲ್ಲವೇ ? ಆದೀತು ! ' **ಪ್ರಾಣಸಂಕಟವಾದರೆ ನೇಣುಹಾಕಿಕೊಳ್ಳಿ** ' ಎಂದು ಹೇಳುವಂತಾಯ್ತು. ನನ್ನ ದುರದೃಷ್ಟಕ್ಕೆ ಯಾರೇನನ್ನು ಮಾಡುವರು ?

ತಾರಾಪತಿ—ಕಿರುನಗೆಯಿಂದ-' ಅಷ್ಟರ ಪ್ರಾಣಸಂಕಟವೇನುಬಂದಿದೆ ?'

ಗಂಗೆ—ಪ್ರಾಣಹೋದರೆ, ನೆಮ್ಮದಿಯಾದೀತು. ನಿಮಗೇನೋ ವಿನೋದವಾಗಿದೆ ; ನೀವು ನಗುತ್ತಿರುವಿರಿ. ನನ್ನ ಹೊಟ್ಟೆಯಲ್ಲಿ ಉರಿಯೇಳುತ್ತಿರುವುದು ; ನಿಮಗೇನು ಗೊತ್ತು ? ನನ್ನ ಉಡುವು, ತೊಡವುಗಳೂ ; ಕಷ್ಟಪಟ್ಟು ಹಾಕಿದ ಕಸೂತಿ, ಹೆಣಿಗೆ ಸಾಮಾನುಗಳೂ ಕಳುವಾಗಿಹೋಗಿವೆ.

ತಾರಾಪತಿ—ಅಷ್ಟೇಯೋ ? ಮತ್ತೇನಾದರೂ ಉಂಟೋ ?

ಗಂಗೆ—ಇನ್ನೂ ಹೋಗಬೇಕೇ ? ಇಷ್ಟು ಸಾಲದೇ ?

ತಾರಾಪತಿ—ಹೋಗುವುದೆಲ್ಲವೂ ಹೋಗಲಿ ; ಅದೃಷ್ಟವನ್ನು ಯಾರೂ ಕೊಂಡುಹೋಗಲಾರರು. ಹೋದ ವಸ್ತುಗಳೊಡನೆಯೇ ಹೋಗುವವರಾರು ? ಇದಕ್ಕೆ ಅತ್ತು ಹೊಂದುವ ಲಾಭವೇನು ?

ಗಂಗೆ—ಹಾಗೆಂದು ಸುಮ್ಮನಿರಲಾದೀತೇ ?

ತಾರಾಪತಿ—ಮತ್ತೇನನ್ನು ಮಾಡಬೇಕು ? ಆಗುವುದು, ಹೇಗಿದ್ದರೂ ತಪ್ಪುವುದಿಲ್ಲ. ನನ್ನ ಕೈಪೆಟ್ಟಿಗೆಯೂ ಕಾಗದಪತ್ರಗಳೂ, ಹೋದುವು. ನಾನೇನು ಮಾಡಿದೆನು ? ಲಭ್ಯವಿಲ್ಲದುದು ಹೋಗಲೆಂದು ಸುಮ್ಮನಿಲ್ಲವೆ ?

ಗಂಗೆ-—ಕೈಯೂರ ಕೊಂಡುಬಂದುದಕ್ಕೆ ಏನುಮಾಡುವಿರಿ ?

ತಾರಾಪತಿ—ಅದಾವುದು ? ಕೈಯೂರ ಕೊಂಡುಬಂದುದು ?

ಗಂಗೆ—ನಾನೇಕೆ ಹೇಳಲಿ ? ಮೊದಲೇ ನಾನು ನಿಮಗಾಗದವಳು ; ಸಾಲದುದಕ್ಕೆ ನಿಮಗಿಷ್ಟರಾದವರ ಮಾತನ್ನೂ ಹೇಳಿ, ಬೇಸರವನ್ನು ಹೆಚ್ಚಿಸಲೇ ? ನನಗೇನು ಬೇಕಾಗಿದೆ ? ಲೋಕದಲ್ಲಿ ಪತಿಯ ಉದಾಸೀನಕ್ಕೆ ಪಕ್ಕಾಗಿ ಬಾಳುವುದಕ್ಕಿಂತ, ಮರಣವೇ ಲೇಸಾಗಿ ಕಾಣುತ್ತದೆ. 'ಕಿರಿಯ ಹೆಂಡತಿ ಕಿವಿಕಿತ್ತರೂ ಪ್ರಿಯಳು' ಎಂದು ಹೇಳುವುದುಂಟು. ಅದು ನನ್ನ ಪಾಲಿಗೆ ಮಾತ್ರ ಸುಳ್ಳಾಗಿ ಹೋಗಿದೆ. ಇನ್ನು ನನ್ನ·········ಮುಂದೆ ಹೇಳಲಾಗಲಿಲ್ಲ. ಕೊರಳು ಕಟ್ಟಿತು; ಕಣ್ಣುಗಳಲ್ಲಿ ನೀರು ತುಂಬಿತು. ಗಂಗೆಯು ಮಾತಿಲ್ಲದೆ ನೆಲದಮೇಲೆ ಬಿದ್ದುಬಿಟ್ಟಳು

ತಾರಾಪತಿರಾಯನ ಶರಭಾವವು ಈಗಲೀಗ ಮರೆಯಾಯ್ತು! ಹೃತ್ಕೋಶದಲ್ಲಿ ಅಡಗಿದ್ದ ಪತ್ನೀವಿಷಯಕವಾದ ಪ್ರೇಮವು ಹೊರಹೊಮ್ಮಿತು. ರಾಯನು ಧಿಗ್ಗನೆದ್ದುಬಂದು, ನೆಲದಮೇಲೆ ಬಿದ್ದಿದ್ದವಳನ್ನು ಎತ್ತಿ, ತನ್ನ ಉರಸ್ಥಲಕ್ಕೆ ಒರಗಿಸಿ ಕುಳ್ಳಿರಿಸಿಕೊಂಡು, ಕಣ್ಣೊರಸಿ, ಪ್ರೀತಿವ್ಯಂಜಕಸ್ವರದಿಂದ–'ನೀನಿನ್ನೂ ಅರಿಯದ ಹುಡುಗಿಯರಂತೆ ಆಡುತ್ತಿರುವೆ; ನನ್ನ ಮನಸ್ಸನ್ನು ನೀನು ತಿಳಿದಿದ್ದ ಪಕ್ಷದಲ್ಲಿ, ನೀನು ಎಂದಿಗೂ ಹೀಗೆ ಹೇಳುತ್ತಿರಲಿಲ್ಲ. ಅಭಿಮಾನ[illegible]ದ ನಿನ್ನ ಮನದಲ್ಲಿ, ನನ್ನ ವಿಚಾರವಾ[illegible]ರೆವಂತಿದ್ದರೂ ಲೇಸಾಗುತ್ತಿದ್ದಿತು. ನ[illegible] ಉಡುವು ತೊಡುವುಗಳಿಗಾಗಿ ನೀನು ಅಳ[illegible]ಲ್ಲ. ನಿನಗೆ ಯಾರಲ್ಲಿ ಅನುಮಾನವುಂಟೋ ತಿಳಿಯ ಹೇಳಿದರೆ, ತಕ್ಕಮಟ್ಟಿಗೂ ಕಟ್ಟುಮಾಡುವೆನು.'

ಗಂಗೆ—ನಾನು ಹೇಳುವುದು ನಿಮಗೆ ಹೇಗೂ ಪಥ್ಯವಾಗದು. ಆದರೂ, ಹೇಳದೆತೀರದು. ಮನೆಯಲ್ಲಿ ಬಹುದಿನಗಳಿಂದ ಆಪ್ತರಂತಿದ್ದು,

ಆಪಳಿತಗಳನ್ನೆಲ್ಲಾ ತಿಳಿದಿದ್ದ ನಿಮ್ಮ ಮುಸಲ್ಮಾನ ಪಹರೆಯವರಲ್ಲದೆ, ಮುಸಲ್ಮಾನರು ಮತ್ತಾರು ಬಂದಿದ್ದರು ? ಇನ್ನೂ ಅವರು ಬಾರ ದಿರಲು ಕಾರಣವೇನು ?

ತಾರಾಪತಿ—ಇದ್ದರೂ ಇರಬಹುದು. ಮತ್ತಾರಲ್ಲಿಯಾದರೂ ಅನುಮಾ ನವುಂಟೇ ?

ಗಂಗೆ—ಅನುಮಾನವಲ್ಲ ನಿಮ್ಮ ಯಮುನೆಯೇ ಇಷ್ಟು ಅನರ್ಥಗಳಿಗೂ ಮೂಲನೆಂದು ಹೇಳಬಲ್ಲೆನು.

ತಾರಾಪತಿ—ಹೇಗೆ ಹೇಳುವೆ ?

ಗಂಗೆ—ಅವಳು, ನಿನ್ನೆ ರಾತ್ರಿ, ನನ್ನಲ್ಲಿ ಇಲ್ಲದ-ಸಲ್ಲದ ಮಾತುಗಳನ್ನೆತ್ತಿ, ಮಾತಿನ ನೆಪದಿಂದ ಮನೆಯಲ್ಲಿದ್ದುದನ್ನೆಲ್ಲಾ ಚೆನ್ನಾಗಿ ಗೊತ್ತು ಮಾಡಿಕೊಂಡು ಹೋದುದೂ, ಹೋದವಳು ಯಾರಲ್ಲಿಯೋ ಹಿಸು ಗುಟ್ಟಿ ಬಂದು, ಮತ್ತೆ ಹರಿಕಥೆಯ ನೆವದಿಂದ ಹೊರಟುಹೋ ದುದೂ ಏತರಿಂದ ? ಎಂದೂ ಹೊರಗೆ ಹೋಗದಿದ್ದವಳಿಗೆ ಇಂದು ಹರಿಕಥೆಯು ಬೇಕಾಯ್ತಿಲ್ಲವೇ ?

ತಾರಾಪತಿ—ಹಾಗಾದರೆ, ಇನ್ನೂ ಮನೆಗೆ ಬಂದಿಲ್ಲವೇ ?

ಗಂಗೆ—ಬಂದಿದ್ದಳು. ಅತ್ತೆಯವರು, ಮತ್ತೆ ಎಲ್ಲಿಗೋ ಕಳಿಸಿರಬಹುದು. ಅವರಿಗೆ ಅವಳು, ನನಗಿಂತ ಹೆಚ್ಚಿನವಳು

ತಾರಾಪತಿ—ಅಹುದು. ಅವಳ ನಿರ್ದುಷ್ಟವಾದ ಶೀಲವೇ ಹಾಗೆ ಮಾಡಿದೆ. ನಾನಾದರೂ ಆಕೆಯ ವಿಚಾರದಲ್ಲಿ ಸಂದೇಹಪಡಲಾರೆನು.

ಗಂಗೆ—ನಾನು ಮೊದಲೇ ನನ್ನ ಮಾತು ಪಥ್ಯವಾಗದೆಂದು ಹೇಳಿದೆನು.

ತಾರಾಪತಿ—ಪತ್ನಿಯ ಬೆನ್ನುತಟ್ಟುತ್ತ-'ಗಂಗ ! ಹೀಗಾಡುವುದು ಸರಿ ಯಲ್ಲ. ಯಾವುದೂ ದುಡುಕುವುದರಿಂದ ಕೆಡುವುದು, ತಾಳ್ಮೆ ಯಿರಲಿ. ಕೂಡಿದಮಟ್ಟಿಗೂ ಜಾಗ್ರತೆಯಾಗಿಯೇ ನಿಜಾಂಶವನ್ನು ಕಂಡುಹಿಡಿದು ಸರಿಪಡಿಸುವೆನು; ಸಮಾಧಾನದಿಂದಿರು, ಹೋಗು.

ಬಹು ಜನರು ಬಂದು-ಹೋಗುವ ಸ್ಥಳವಾದುದರಿಂದ, ಇಲ್ಲಿರಬಾರದು.'

ಗಂಗೆಯು ಮರುಮಾತಿಲ್ಲದೆ, ಹೊರಟುಹೋದಳು. ಅವಳು ಹೊರಟುಹೋದ ಉತ್ತರಕ್ಷಣದಲ್ಲಿಯೇ ಯಮುನೆಯೂ ಬಂದಳು. ತಾರಾಪತಿರಾಯನು, ತಲೆಯೆತ್ತಿ–'ಯಮುನಾ! ಸ್ವಲ್ಪ ಇತ್ತ ಬಾ!' ಎಂದು ಕೂಗಿದನು.

ಯಮುನೆ — ಬಂದು ದೂರದಲ್ಲಿ ನಿಂತು–'ಏನು?'

ತಾರಾಪತಿ — ರಾತ್ರಿ ನಡೆದ ವಿದ್ಯಮಾನಗಳೆಲ್ಲವೂ ಗೊತ್ತಿದೆಯೇ?

ಯಮುನೆ — ವಿದ್ಯಮಾನವೂ ಗೊತ್ತಿದೆ, ಮಾಡಿದವರೂ, ಮಾಡಹೇಳಿದವರೂ ತಿಳಿದಿದೆ.

ತಾರಾಪತಿ — ಏನು! ಏನು!? ಗೊತ್ತಿದೆಯೆ? ಮಾಡಿದವರಾರು?

ಯಮುನೆ — ಈಗಲೇ ಅದನ್ನು ಹೇಳಲಾಗದು.

ತಾರಾಪತಿ — ತಲೆದೂಗಿ–'ಮುಂದೆ ಗೊತ್ತಾದೀತು, ಇರಲಿ, ನಿನ್ನಮೇಲೆ ಬಿದ್ದಿರುವ ಆರೋಪಣೆಗೆ ನೀನೇನು ಹೇಳುವೆ?'

ಯಮುನೆ — ಹೇಳುವುದೇನು? ಬೇಳುವುದೆಂದು ಮೊದಲೇ ನಿಶ್ಚಯಿಸಿದ್ದೆನು.

ತಾರಾಪತಿ — ಹಾಗಿದ್ದೂ ಏನನ್ನೂ ಹೇಳಲಾರೆಯೇನು?

ಯಮುನಾ — ಕಿರುನಗೆಯಿಂದ–'ಪ್ರತಿಭಾಸಂಪನ್ನರು, ತಮ್ಮ ಬುದ್ಧಿಶಕ್ತಿಯಿಂದ ಜನರ ನಡೆನುಡಿಯಲ್ಲಿರಬಹುದಾದ ದೋಷಗಳನ್ನು ನೋಡಿದಮಾತ್ರದಿಂದಲೇ ತಿಳಿಯಬಲ್ಲರು. ನಂಬಲು ತಕ್ಕುದನ್ನು ಹೇಳದೆಯೇ ನಂಬುವರು. ನಂಬಲಾಗದುದನ್ನು ಆಣೆಯಿಟ್ಟಾಗಲೀ, ಕಣ್ಣೀರ್ಗರೆದಾಗಲೀ, ಆಶೆಹುಟ್ಟಿಸುವುದರಿಂದಾಗಲೀ, ಬೆದರಿಸಿಯಾಗಲೀ ನಂಬುವಂತೆ ಮಾಡುವೆನೆಂದರೆ ನನಗಳವಲ್ಲ. ಇದರ ಮೇಲೆಯೂ ನಾನು ಹೇಳತಕ್ಕುದೇನು?

ತಾರಾಪತಿ — ನಿಜವೇ ಸರಿ. ನಿನ್ನ ವಿಚಾರದಲ್ಲಿ ನನಗೆ ಹೇಗೂ ಸಂಶಯವಾಗುವಂತಿಲ್ಲ.

ಯಮುನಾ—ಅದು ದೈವೇಚ್ಛೆ ! ಮತ್ತೇನು ?

ತಾರಾಪತಿ—ಇನ್ನು ಎರಡು ಮೂರು ದಿನಗಳಲ್ಲಿ ಸುನಂದೆಯ ಭಾವರೂಪ ಪ್ರತಿಷ್ಠೆಯಾಗಬೇಕಾಗಿದೆ. ಲಕ್ಷ್ಮೀನಿಲಯವನ್ನು ಪರಿಷ್ಕರಿಸುವ ಕೆಲಸ ನಿನ್ನದಾಗಿದೆ.

ಯಮುನಾ—ಸಂತೋಷದಿಂದ-' ಅಗತ್ಯವಾಗಿಯೂ ಮಾಡುವೆನು. ಇಂದಿನ ಆರೋಪಣೆ-ಮತ್ತು ನಿರೂಪಣೆಗಳನ್ನು ಹೇಗೂ ಮರೆಯಲಾರೆನು.' ಎಂದು ಹೇಳಿ ಹೊರಟುಹೋದಳು.

॥ ಶ್ರೀ ॥

## ದಶಮ ಪರಿಚ್ಛೇದ.

(ನಿಯೋಗ.)

ಸಾಯಂಕಾಲ ನಾಲ್ಕು ಗಂಟೆಯ ಸಮಯದಲ್ಲಿ, ದಂಡಪಾಣಿಯಾದ ಜಮೀನ್ದಾರನು ಕಾರಾರ್ಥಿಯಾಗಿ ಹೊರಹೊರಟನು. ಪ್ರಾಕಾರದ ಬಾಗಿಲನ್ನು ದಾಟಿ, ಮುಂದೆ ಹೊರಡುವವರೆಗೂ ಸುಮ್ಮನಿದ್ದ ಗೋಪಾಲನು, ಕಾಲುನಡೆಯಿಂದೆಯೇ ಹೋಗುತ್ತಿರುವ ಜಮೀನ್ದಾರನನ್ನು ಕಂಡು, ಓಡಿಬಂದು,-' ಗಾಡಿ ಸಿದ್ಧವಾಗಿದೆ '' ಎಂದು ಶೃತಪಡಿಸಿದನು.

ತಾರಾಪತಿ—ಕುಪಿತನಾಗಿ-' ಗಾಡಿಯು ನನಗೆ ಬೇಕಾಗಿಲ್ಲ ; ನಿನ್ನನ್ನು ಕರೆದವರಾರು ? ಕಾರ್ಯಗೌರವದಿಂದ ಹೊರಟರೆ, ಪಥನಿರೋಧ ಮಾಡುವೆ ; ಹೊರಟುಹೋಗು.' ಎಂದು ಧಿಕ್ಕರಿಸಿದನು.

ಗೋಪಾಲನಿನ್ನೇನು ಮಾಡಬಲ್ಲನು ? ಪಾಪ ! ಮ್ಲಾನಮುಖವನ್ನು ಮತ್ತೆ ತೋರಿಸದೆ, ಮೆಲ್ಲಗೆ ಹಿಂತಿರುಗಿ ಹೊರಟುಹೋದನು.

ತಾರಾಪತಿರಾಯನೂ, ಒಂದೆರಡು ಕ್ಷಣದವರೆಗೆ, ಅಲ್ಲೇ ನಿಂತಿದ್ದು ಆ ಬಳಿಕ ಹೊರಟು ರಾಜಮಾರ್ಗವನ್ನನುಸರಿಸಿ ಬರುತ್ತಿದ್ದನು. ಬರುತ್ತಿದ್ದವನು, ನಡುದಾರಿಯಲ್ಲಿ ವಿಸ್ತಾರವಾದುದೊಂದು ಭವನದ ಮುಂಗಡೆಯಲ್ಲಿ ನಿಂತು ನೋಡುತ್ತಿದ್ದ ಘನವಂತನೊಬ್ಬನನ್ನು ಸಂಧಿಸಿ, ಕೈಮುಗಿದು ಹೇಳಿದನು-'ವಂದನೆ' ರಾವಬಹದ್ದುರ-ರಾಧಾನಾಥರಾವ್!

ರಾವಬಹದ್ದುರ--ಪ್ರತಿವಂದನೆ, ತಾರಾಪತಿರಾವ್! ಸುಖಾಗಮನವಷ್ಟೆ?

ತಾರಾಪತಿ—ಭಗವದನುಗ್ರಹದಿಂದ ಇಷ್ಟರವುಟ್ಟಿಗೆ, ಇದೇನು, ಇಲ್ಲಿ ನಿಂತಿರುವಿರಿ?

ರಾವಬಹದ್ದುರ—ವಿಶ್ರಾಂತಿಗಾಗಿ ಹೊರಗೆ ಬಂದವನು, ಹಾಗೆಯೇ ಬಂದ ನಿಮ್ಮನ್ನು ನೋಡುತ್ತ ನಿಂತೆನು. ನಿಮ್ಮಲ್ಲಿ ಹೇಳಬೇಕಾದ ಸಂಗತಿಯೊಂದಿದೆ, ನೀವೇಬಂದುದು ತುಂಬಾಅನುಕೂಲವಾಯ್ತು.

ತಾರಾಪತಿ—ನಾನೂ ತಮ್ಮ ಶ್ರೀದತ್ತ—

ರಾವಬಹದ್ದುರ—ಅದಿರಲಿ ಹಾಗೆಯೇ ನ್ಯಾಯಸಭೆಯ (Court) ವರೆಗೂ ಬಂದು, ಅಲ್ಲಿ ನನ್ನ ವಿಶ್ರಾಂತಿಮಂದಿರದಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿಕೊಂಡಿದ್ದು ಹೋಗಬಹುದು, ಬನ್ನಿಂ

ತಾರಾಪತಿ—ಆಗಬಹುದು. ಹಾಗೆಯೇ ನ್ಯಾಯಪೀಠದಲ್ಲಿ ನನ್ನ ಮನವಿಯೂ ಒಪ್ಪಿಸತಕ್ಕುದಿದೆ.

ಇಬ್ಬರೂ, ಭವನದ ಮೇಗಡೆಗೆ ಹೋದರು. ರಾವಬಹದ್ದುರನ ಆಗಮನ ನಿರೀಕ್ಷೆಯಲ್ಲಿದ್ದವರೆಲ್ಲರೂ ಎದ್ದುನಿಂತರು. ರಾವಬಹದ್ದುರನು ನ್ಯಾಯಪೀಠದಲ್ಲಿ ಕುಳಿತು, ಅಂಗಿಯ ಕಿಸೆಯಲ್ಲಿದ್ದ ಬೀಗದಕೈಯನ್ನು ತೆಗದು ತಾರಾಪತಿಯ ಕೈಯ್ಯಲ್ಲಿರಿಸಿ,–'ಜವಿಾನ್ದಾರರೇ! ಅಲ್ಲಿ ಪ್ರತ್ಯೇಕವಾಗಿ ಕಾಣುವ ಕಿರುಮನೆಯ ಕದವನ್ನು ತೆಗೆದು, ಒಳಗಡೆ ಅಗಣಿಹಾಕಿಕೊಂಡು ವಿಶ್ರಮಿಸಿಕೊಳ್ಳಿರಿ, ಅವಕಾಶವಾದಾಗ ಕರೆಯಿಸುವೆನು; ಕಿರುಮನೆಗೆ ಮತ್ತಾರೂ ಬಾರದಂತೆ ನೋಡಿಕೊಳ್ಳಿರಿ.'

ಜಮೀನ್ದಾರ—ಆಗಬಹುದೆಂದೊಪ್ಪಿ, ಬೀಗದಕೈಯನ್ನು ತೆಗೆದುಕೊಂಡು ಬಂದು ಕಿರುಮನೆಯ ಬಾಗಿಲನ್ನು ತೆಗೆದು ಮೆಲ್ಲನೆ ಒಳಹೊಕ್ಕು, ಮತ್ತೆ ಕದವನ್ನು ಮುಚ್ಚಿ, ಕಿರುಮನೆಯೊಳಗಡೆಯಲ್ಲಿ ನಾಲ್ಕು ಕಡೆಯನ್ನೂ ಚೆನ್ನಾಗಿ ನೋಡಿದನು. ಮೊದಮೊದಲು ಏನೂ ಕಾಣಿಸಲಿಲ್ಲ. ಬರಬರುತ್ತ ಬೆಳಕು ಕಾಣಬಂದುದಲ್ಲದೆ, ಕಿಟಿಕಿಗೆ ತೆರೆಯನ್ನು ಬಿಟ್ಟಿರುವುದೂ, ಅದಕ್ಕೆ ಮರೆಯಾಗಿ ಯಾರೋ ಕುರ್ಚಿಯ ಮೇಲೆ ಕುಳಿತು ಓದುತ್ತಿರುವುದೂ ತಿಳಿದುಬಂದಿತು. ತಾರಾಪತಿರಾಯನು ಕೌತುಕಗೊಂಡು ಮುಂದೆಬಂದು ಕುಳಿತಿದ್ದವನನ್ನು ನೋಡಿದನು, ಬೆರಗಾದನು. ಕುಳಿತಿದ್ದಾತನು ಮತ್ತಾರೂಅಲ್ಲ ಉತ್ಕ್ರಮಣಾವಸ್ಥೆಯಲ್ಲಿ ತಪಿಸುತ್ತಿದ್ದವನನ್ನು, ಅಮೃತ ಪ್ರಾಶನದಿಂದ ಬದುಕಿಸಿದ ಶ್ರೀದತ್ತಕುಮಾರನೇ ಆಗಿದ್ದನು. ಆತನ ಆನಂದವನ್ನು ಕೇಳಬೇಕೆ ? ಗದ್ಗದಸ್ವರದಿಂದ–'ಕುಮಾರ!' ಎಂದು ಮಾತ್ರ ಹೇಳಿ ಕೈಹಿಡಿದನು.

ಶ್ರೀದತ್ತ—ಜಮೀನ್ದಾರನನ್ನು ಮರ್ಯಾದೆಯಿಂದ ಕುರ್ಚಿಯ ಮೇಲೆ ಕುಳ್ಳಿರಿಸಿ–'ರಾಯರೇ ! ನೀವು ಈ ಕಡೆ ಬರುವಿರೋ-ಮರೆತು ಬಿಡುವಿರೋ ಎಂಬ ಸಂಶಯವು ಬಲವಾಗಿತ್ತು.

ತಾರಾಪತಿ—ಯಾವುದನ್ನು ಮರೆವುದು ? ಕುಮಾರ ! ನನ್ನ ಪ್ರಾಣವನ್ನಾದರೂ ಬಿಡಬಲ್ಲೆನಲ್ಲದೆ, ಮಕ್ಕಳೊಡಗೂಡಿರುವ ನನ್ನ ಪ್ರಾಣವಲ್ಲಭೆಯನ್ನು ಮಾತ್ರ ಮರೆತಿರಲಾರೆನು. ಹೇಗೂ ನನ್ನ ಜೀವನ ದೀಪವು ನಿನ್ನ ಕೈಯ್ಯಲ್ಲಿ ಸೇರಿದೆ. ಹೇಗೆ ಬೇಕಾದರೂ ಮಾಡಬಹುದು.

ಶ್ರೀದತ್ತ—ಇದೇಕೆ ಹೀಗೆ ಹುಡುಗರಂತೆ ಹೇಳುತ್ತಿರುವಿರಿ ? ಜಮೀನ್ದಾರ್ ! ನನ್ನನ್ನು ಹೊರಗಿನವನೆಂದೇ ತಿಳಿದಿರುವಿರೋ ? ಈ ಕೆಲಸವು ನನ್ನದಾಗಿರುವುದರಿಂದ ನಿಮ್ಮಿಂದ ಹೇಳಿಸಿಕೊಳ್ಳಬೇಕಾಗಿಲ್ಲ.

ಇರಲಿ, ನಿಮ್ಮ ಪತ್ನಿಗೇನಾದರೂ ನೀವು ನಿಮ್ಮ ಸ್ವಹಸ್ತಾಕ್ಷರದ ಪತ್ರವನ್ನು ಕೊಡುವಿರೋ ?

ತಾರಾಪತಿ—ತಂದೇ ಇರುತ್ತೇನೆ. ಆದರೆ, ನೀನೂ ಒಂದುಬಾರಿ ನೋಡಿ, ಸಂದೋರಿದರೆ ತಲುಪಿಸು.

ಶ್ರೀದತ್ತ—ಆಗಬಹುದು, ನೀವೇ ಓದಿಹೇಳಿರಿ

ತಾರಾಪತಿರಾಯನು ಪತ್ರವನ್ನು ಈ ರೀತಿ ವಾಚಿಸಿದನು.

(ಪತ್ರ.)

" ದೇವಿ, ಸುನಂದಾ !

ಈ ಅಧಮನಲ್ಲಿ, ಈ ನಿರ್ಭಾಗ್ಯನ ವಿಷಯದಲ್ಲಿ ನೀನು ಹೇಗೆ ಭಾವಿಸುತ್ತಿರುವೆ ? ಕೃತಘ್ನನೆಂದೋ ? ನಿರ್ಘೃಣನೆಂದೋ ? ಅಪ್ರಯೋಜಕನೆಂದೋ ? ನೀನು ಹೇಗೆ ಭಾವಿಸುತ್ತಿದ್ದರೂ, ನನ್ನನ್ನು ಕ್ಷಮಿಸಬಲ್ಲೆಯಲ್ಲವೇ? ಆದರೆ, ನೋಡು , ಪ್ರಾಣಾಧಿಕೆ ! ನಾನು ನಿನ್ನನ್ನು ಬೇಕೆಂದು ಬಿಟ್ಟವನಲ್ಲ. ದುರ್ಜನರ ಅಪಲಾಪದಿಂದ ವಂಚಿತನಾದ ನನಗೆ ನಿನ್ನ ವಿಚಾರವಾಗಿ ಬಂದ ಸುಳ್ಳು ಸುದ್ದಿಯೇ ನಿಜವಾಗಿ ತೋರಿತು. ವಿಚಾರಶೂನ್ಯತೆಯಿಂದ, ನಿನ್ನನ್ನು ಈವರೆಗೂ ಪರಂಧಾಮದಲ್ಲಿರುವವಳನ್ನಾಗಿಯೇ ತಿಳಿದು, ಮನಸಾಪೂಜಿಸುತ್ತಿದ್ದೆನು. ಆದರೆ, ಇಂದು ಶ್ರೀದತ್ತಕುಮಾರನಿಂದ ನಿನ್ನ ಜೀವಿತ ವೃತ್ತಾಂತವನ್ನು ಕೇಳಿ ತಿಳಿದು, ನನಗಾದ ಸಂತೋಷಾಶ್ಚರ್ಯಗಳನ್ನೂ, ನೀನು ಹೇಳಿ ಕಳುಹಿರುವ ಮಾತುಗಳಿಂದುಂಟಾಗಿರುವ ಪಶ್ಚಾತ್ತಾಪವನ್ನೂ ಇಲ್ಲಿ ನಾನು ವಿವರಿಸಿ ಬರೆಯಲು ಅಶಕ್ತನಾಗಿರುವೆನು. ಅಲ್ಲದೆ ಬರೆಯಲು ಕುಳಿತರೆ, ಅಖಂಡವಿಚಾರಗಳೇ ಮುಂದೆ ಬಂದು ನಿಲ್ಲುವುವು. ಯಾವುದನ್ನು ಬರೆವುದು ? ಯಾವುದನ್ನು ಬಿಡುವುದು ? ಇದಕ್ಕಾಗಿ ಎಲ್ಲವನ್ನೂ ಮನದಲ್ಲಿಯೇ ಅಡಗಿಸಿ, ನನ್ನೀನುಡಿಯನ್ನು ನೀನು ಕಡೆಗಣಿಸದೆ ನಡೆಯಿಸುವೆ ಎಂಬ ಭರವಸೆಯಿಂದ, ಒಂದೆರಡು ಮಾತಿನಲ್ಲಿ ಮುಗಿಸುವೆನು. ನಿನ್ನ ಸ್ವರ್ಗೀಯ ಪ್ರೇಮಸ್ವರೂಪವನ್ನೇ ಧ್ಯಾನಿಸುತ್ತಿರುವ

ಈ ನಿನ್ನ ಸ್ವಾಮಿಗೆ, ಮಕ್ಕಳೊಡನೆ ನೀನು ಬಂದು ಎಷ್ಟುಬೇಗ ಪ್ರಸನ್ನಳಾಗಬಲ್ಲೆಯೋ, ಅಷ್ಟೂ ಈತನಿಗೆ ಸಂತೋಷವೇ ಸರಿ. ನನ್ನ ಹಿತೈಷಿಣಿಯಾದ ನಿನಗೆ ಇನ್ನು ಹೆಚ್ಚುಬರೆಯುಲೇಕೆ ? ಈ ಪತ್ರಪಠಣವಾದ ಬಳಿಕ ಅಲ್ಲಿ ನಿಲ್ಲದೆ ಹೊರಟುಬರುವೆಯೆಂಬ ಭರವಸೆಯಿಂದ ನಿನ್ನ ಆಗಮನವನ್ನೇ ಇದಿರುನೋಡುತ್ತ, ದಿನಗಳನ್ನೆಣಿಸುತ್ತಿರುವುದಲ್ಲದೆ, ನನಗೆ ಮತ್ತಾವ ಕೆಲಸವಿದೆ ?

ವಿಷಹರಪುರ, ೧-೮-೧೫. } ಇತಿ ನಿನ್ನ ಮನದನ್ನ ತಾರಾಪತಿ. ''

ಎಂದು ಪತ್ರವನ್ನು ಮುಗಿಯಿಸಿ, ಶ್ರೀದತ್ತನ ಕೈಯ್ಯಲ್ಲಿರಿಸಿದನು.

ಶ್ರೀದತ್ತ—ತಲೆದೂಗಿ-'ರಾವಸಾಹೇಬ್ ! ಪತ್ರವು, ಅಂತಃಕರಣವನ್ನು ಚೆನ್ನಾಗಿ ವ್ಯಕ್ತಪಡಿಸುತ್ತಿರುವುದು. ಇನ್ನು ನೀವು, ನಿರ್ವಿಚಾರವಾಗಿ ತೆರಳಬಹುದು. ಇಂದಿಗೆ ನಾಲ್ಕನೆಯ ದಿನದಲ್ಲಿ ನಿಮ್ಮ ಪತ್ನಿಯು ನಿಮ್ಮ ಬಳಿಯನ್ನು ಸೇರುವಳು.

ತಾರಾಪತಿ—ನೀನೇ ಹೋಗುವೆಯಾ ?

ಶ್ರೀದತ್ತ—ಹೋಗಬೇಕಾದ ಸಂದರ್ಭವಾದರೆ ಹೋಗುವೆನು. ನೀವಿನ್ನು ಇಲ್ಲಿ ಹೆಚ್ಚುಹೊತ್ತಿದ್ದರೆ, ಜನರ ಅನುಮಾನಕ್ಕೆ ಕಾರಣವಾಗುವುದು. ಹೊರಗಿರತಕ್ಕವರಲ್ಲಿ ಬಹುಮಂದಿ ನಮ್ಮ ವಿರೋಧಪಕ್ಷದವರಾಗಿದ್ದಾರೆ. ಎಚ್ಚರಿಕೆಯಲ್ಲಿರಬೇಕು.

ತಾರಾಪತಿರಾಯನು ಎದ್ದನು. ಅಷ್ಟರಲ್ಲಿ, ಹೊರಗೆ ಕೂಗುವ ಶಬ್ದವೂ ಕೇಳಿಸಿತು. ಅವಸರದಲ್ಲಿ ಕಿರುಮನೆಯ ಬಾಗಿಲನ್ನು ತೆರೆದು ಹೊರಗೆಬಂದು, ಮತ್ತೆ ಬೀಗಹಾಕಿ ಮ್ಯಾಜಿಸ್ಟ್ರೇಟರ (Magistrate) ಮುಂದೆ ಹೋಗಿ, ವಿನಯದಿಂದ ಬೀಗದಕೈಯನ್ನು ಮುಂದಿಟ್ಟು ನಿಂತನು.

ಮ್ಯಾಜಿಸ್ಟ್ರೇಟ್ (ರಾವಬಹದ್ದೂರ) } ಏನು ? ಜಮಿಾನ್ದಾರರೇ ! ವಿಶೇಷವುಂಟೋ ?

ತಾರಾಪತಿ—ಸ್ವಾಮೀ! ರಾತ್ರಿ ಮನೆಯಲ್ಲಿ ನಡೆದ ಕಳುವಿನ ವಿಚಾರವೇ ವಿಶೇಷವಾಗಿದೆ. ಅದನ್ನು ಸ್ವಾಮಿಸನ್ನಿಧಿಯಲ್ಲಿಯೇ ಶ್ರುತಪಡಿಸಬೇಕೆಂದು ಬಂದೆನು.

ಮ್ಯಾಜಿಸ್ಟ್ರೇಟ್—ಪೊಲೀಸಿಗೆ ತಿಳಿಸಲಿಲ್ಲವೇ ?

ತಾರಾಪತಿ—ತಿಳಿಸಲು ನಮ್ಮ ಕಡೆಯವರನ್ನು ಕಳಿಸಿತ್ತು.

ಮ್ಯಾಜಿಸ್ಟ್ರೇಟ್—ನೀವೇ ಸವಿಸ್ತರವಾಗಿ ಹೇಳುವುದು ಉತ್ತಮವಲ್ಲವೆ ? ಪೋಲೀಸಿ (Police) ನವರ ಮೂಲಕವಾಗಿ ಬರುವ ವಿಚಾರಗಳನ್ನು ಚೆನ್ನಾಗಿ ಪರಿಶೀಲಿಸಿ, ತಕ್ಕ ರೀತಿಯಲ್ಲಿ ಇತ್ಯರ್ಥಪಡಿಸುವುದು ನ್ಯಾಯವಾಗಿದೆ. ನೀವಿನ್ನು ತೆರಳಬಹುದು.

ತಾರಾಪತಿ—'ಆಗಬಹುದು!' ಎಂದು ಕೈಮುಗಿದು ಹೊರಟುಹೋದನು. ಮ್ಯಾಜಿಸ್ಟ್ರೇಟ್ ರಾಧಾನಾಥರಾಯನೂ ಅಂದಿನ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿ, ನ್ಯಾಯಪೀಠದಿಂದೆದ್ದು ಹೊರಟನು.

ಶ್ರೀದತ್ತಕುಮಾರನು, ಜಮೀನ್ದಾರನ ಕಡೆಯ ನಿಯೋಗಿಯಾಗಲು, ಎಲ್ಲಿಂದ–ಹೇಗೆ ಬಂದನೋ, ಎಲ್ಲಿಗೆ ಹೋದನೋ, ಅದನ್ನಾರೂ ಅರಿತವರಲ್ಲ.



|| ಶ್ರೀ ||

# ಏಕಾದಶ ಪರಿಚ್ಛೇದ.

## (ಎಚ್ಚರಿಕೆ)

ಆದಿತ್ಯವಾರವಾದುದರಿಂದ, ರಾವಬಹದ್ದೂರ್ ರಾಧಾನಾಥರಾಯನು ಇಂದು ನ್ಯಾಯಸ್ಥಾನಕ್ಕೆ (Court) ಹೋಗಲಿಲ್ಲ; ಊಟವಾದ ಬಳಿಕ, ಕಾಲಕ್ಷೇಪಕ್ಕಾಗಿ ವಾಚನಶಾಲೆಯ (Reeding Room) ಬಾಗಿಲನ್ನು ತೆಗೆದು ಒಳಹೊಕ್ಕನು. ವಾಚನಶಾಲೆಯು ಈತನ ಸ್ವಂತ ಓಲಗಶಾಲೆಯ ಪಕ್ಕದಲ್ಲಿಯೇ ಇರುವುದು. ವಾಚನಶಾಲೆಯು, ಸುಮಾರು ಇನ್ನೂರುಮಂದಿ ಕುಳಿತುಕೊಳ್ಳಬಹುದಾದಷ್ಟು ವಿಸ್ತಾರವಾಗಿದ್ದಿತು. ಇದರ ಒಂದು ಭಾಗದಲ್ಲಿ, ನಡುವೆ ಎತ್ತರವಾದ ಜಗಲಿ, ಜಗಲಿಯ ಮೇಲೆ ಮಣೆಯೂ, ಮಣೆಯ ಮುಂಗಡೆ ಪುರಾಣಗ್ರಂಥಗಳನ್ನಿರಿಸಿರುವ ಕಾಲುಮಣೆಯೂ ಇರುವುವು. ಸುತ್ತಲೂ ಪುರಾಣವನ್ನು ಕೇಳಲು ಬರುವವರು ಕುಳಿತುಕೊಳ್ಳುವುದಕ್ಕಾಗಿ ಚಾಪೆಗಳನ್ನು ಹಾಸಿರುವುದು. ಶಾಲೆಯ ಮತ್ತೊಂದು ಭಾಗದಲ್ಲಿ—ಮೂರು ದಿಕ್ಕುಗಳಿಗೂ, ಪತ್ಯಪುಸ್ತಕಗಳನ್ನೊಳಕೊಂಡಿರುವ ದೊಡ್ಡದೊಡ್ಡ ಕನ್ನಡಿ ಬೀರುಗಳೂ, ಬೀರುಗಳ ಮುಂಗಡೆ ನಾಲ್ಕಾರು ಕುರ್ಚಿಗಳೂ, ಕುರ್ಚಿಗಳಿಗೆ ಮಧ್ಯೆ ಮೇಜವೂ ನಿಲ್ಲಿಸಲ್ಪಟ್ಟಿವೆ. ಒಟ್ಟಿನಲ್ಲಿ ಈ ವಾಚನಮಂದಿರದ ನೈರ್ಮಲ್ಯ-ಏಕಾಂತ ಸ್ವರೂಪಗಳನ್ನು ನೋಡಿದರೆಯೇ ರಾವಬಹದ್ದೂರರ ಸದ್ಭಾವನಾಸ್ವರೂಪವು ಎಂತಹದಾಗಿರುವುದೆಂಬುದನ್ನು ತಿಳಿಯಬಹುದು

ರಾಧಾನಾಥರಾವಬಹದ್ದೂರನು, ವಿರಾಮಕಾಲದಲ್ಲಿ, ಹಗಲುನಿದ್ದೆ, ಸಂಗೀತ, ವಿನೋದಕೂಟ, ನೋಟಗಳೆಂದೇನಾದರೂ ವ್ಯರ್ಥವಿಷಯಗಳಿ

ಗಾಗಿ ಕಾಲಧನವನ್ನು ಹಾಳುಮಾಡಿಕೊಳ್ಳುತ್ತಿದ್ದನೆಂದೋ ? ಹಾಗಿಲ್ಲ. ರಾಧಾನಾಥನು ಆಗರ್ಭಶ್ರೀಮಂತನು, ಪೂರ್ಣವಿದ್ಯಾವಂತನು, ನಿರಂತರೋದ್ಯಮಶೀಲನು, ದಂಡನೀತಿಶಾಸ್ತ್ರ ವಿಶಾರದನು, ಸತ್ಯಸಂಕಲ್ಪನು, ರಾಜಭಕ್ತಿಯುತನು. ಹೆಚ್ಚೇಕೆ ?–ದೇಶಭಕ್ತನೆಂದರೆ, ರಾಜಕಾರ್ಯಧುರೀಣನೆಂದರೆ, ನ್ಯಾಯನೀತಿ ಸಂಪನ್ನನೆಂದರೆ ನಮ್ಮ ರಾಧಾನಾಥಠಾಕೂರನೇ ಸರಿ. ಈತನು ಪ್ರತಿನಿತ್ಯವೂ ಊಟವಾದ ಕಾಲುಗಂಟೆಯು ಹೊತ್ತಾದರೂ, ಈ ವಾಚನಶಾಲೆಯಲ್ಲಿ ಕುಳಿತು, ವಿಶ್ರಮಿಸಿಕೊಳ್ಳದೆ ಇರುತ್ತಿರಲಿಲ್ಲ. ಹಾಗೂ ಭಾನುವಾರವೆಲ್ಲಾ ಇಲ್ಲಿಯೇ ಇದ್ದು, ರಾಜಕೀಯ ತಂತ್ರಗಳನ್ನೂ, ಸಾಮಾಜಿಕ ನೀತಿಗಳನ್ನೂ, ಆತ್ಮವಿಚಾರತತ್ವವನ್ನೂ ಒಳಕೊಂಡಿರುವ ಸದ್ಗ್ರಂಥಗಳನ್ನು ಸಮಾಲೋಚಿಸುತ್ತಿರುವನು. ದಿನವೂ ರಾತ್ರಿವೇಳೆಯಲ್ಲಿ ಇಲ್ಲಿಯೇ ಪುರಾಣಶ್ರವಣ ಸತ್ಕಾಲಕ್ಷೇಪವನ್ನು ಮಾಡಿಸುವುದು ಇವನ ಪದ್ಧತಿಯಾಗಿದೆ. ಆದರೆ ಇದೊಂದು ಮಾತು ನಮ್ಮ ಆಧುನಿಕ–ಸುಧಾರಕ ಮಂಡಲಿಗೆ ಹಾಸ್ಯಾಸ್ಪದವಾಗಿ ತೋರುವುದೋ, ಹೇಗೋ ತಿಳಿಯದು. ಹೇಗೂ ಇರಲಿ, ಇದ್ದ ಸಂಗತಿಯನ್ನು ತೆಗೆದು ತೋರಿಸುವುದೊಂದೇ ಈ ಲೇಖನಿಯ ಕೆಲಸವು.

ದೇಶಭಕ್ತರಿಗೆ ಪರಮಾದರ್ಶಪುರುಷನಾದ ನಮ್ಮ ರಾಧಾನಾಥಬಹದ್ದೂರನು, ಈ ಪಟ್ಟಣಕ್ಕೆ ಬಂದುದು ಮೊದಲು ಇಂದಿನವರೆಗೆ, ಅವಿಶ್ರಾಂತಶ್ರಮದಿಂದ ಪುಂಡಾಟಗಳ ತಂಡಗಳನ್ನು ಕಂಡುಹಿಡಿಯಿಸಿ, ಜನರ ನೆಮ್ಮದಿಯನ್ನು ಕಾಪಾಡುವುದರಲ್ಲಿ ಸಾಹಸಪಡುತ್ತಿರುವನು. ಸಾಲದುದಕ್ಕೆ ತಾರಾಪತಿರಾಯನ ಮನೆಯಲ್ಲಿ ನಡೆದ ಕಳುವಿನ ವಿಚಾರವೂ ಸೇರಿ, ಈತನ ಆಗ್ರಹ–ಶಪಥಗಳನ್ನು ಮತ್ತೂ ದೃಢಪಡಿಸಿರುವುದು. ಆದರೇನು ? ಯಾವುದಕ್ಕೇ ಆಗಲಿ ಕಾಲವು ಅನುಕೂಲಿಸಬೇಕಲ್ಲವೇ ? ಇರಲಿ.

ಕಾಲಕ್ಷೇಪಕ್ಕಾಗಿ ಬಂದ ರಾಧಾನಾಥಬಹದ್ದೂರನು, ಕುರ್ಚಿಯ ಮೇಲೆ ಕುಳಿತು, ಮೇಜಿನಮೇಲಿದ್ದ ದಂಡನೀತಿಶಾಸ್ತ್ರವನ್ನು ತೆಗೆದು,

ಹಾಳೆಗಳನ್ನು ಮಗುಚಿಹಾಕಿದನು. ಪುಸ್ತಕದೊಳಗೆ ಅಂಟುಹಾಕಿದ್ದ ಲಕೋಟೆಯೊಂದು ಸಿಕ್ಕಿತು. ಬಹದ್ದೂರನು ಕುತೂಹಲದಿಂದ ತೆಗೆದುನೋಡಿದನು. ವಿಳಾಸವಾದರೂ-' ರಾವಬಹದ್ದೂರ ರಾಧಾನಾಥ ರಾಕೂರರಿಗೆ ' ಎಂದೇ ವಿಲಿಖಿತವಾಗಿದ್ದಿತು. ಬಹದ್ದೂರನು, ವಿಸ್ಮಯಾಧಿಕ್ಯದಿಂದ, ಲಕೋಟೆಯನ್ನೊಡೆದು, ಒಳಗಿದ್ದ ವಿಕೃತಾಕ್ಷರಪತ್ರವನ್ನು ಓದಲಾರಂಭಿಸಿದನು. ಪತ್ರಾಲೋಕನಾರಂಭದಲ್ಲಿಯೇ ಬಹದ್ದೂರನ ಮುಖವು ರಕ್ತವರ್ಣಕ್ಕೆ ತಿರುಗಿದ್ದು, ಬರಬರುತ್ತೆ ವಿವಿಧವರ್ಣಗಳಿಂದ ಭಯಂಕರವಾಗಿ ತೋರುತ್ತಿದ್ದಿತು. ಪತ್ರದ ಸಾರಾಂಶವೇನೆಂಬುದನ್ನು ನಮ್ಮ ವಾಚಕರ ಅವಗಾಹನಕ್ಕೆ ತರಬೇಕಲ್ಲವೇ ?

(ಪತ್ರ.)

' ಸರ್ಕಾರದವರ ಮಹತ್ಪ್ರಯತ್ನ ಭಂಗೋದ್ದಿಶ್ಯವಾಗಿ, ನಾವು ಗುರಿಕಟ್ಟಿರುವ ಸುಖಮಯಸ್ವರೂಪಿಯಾದ ಶ್ರೀಯನ್ನು ಅಪಹರಿಸಿ, ಇಷ್ಟಸಿದ್ಧಿ ಹೊಂದುವುದರ ಮೂಲಕ, ಲೋಕಹಿತೈಷಿಗಳಿಗೆ ಅಪ್ರಿಯವನ್ನು ಮಾಡುವ ನಮ್ಮಾ ಪ್ರಯತ್ನವು, ಹೇಗೂ ಭಂಗಹೊಂದಲಾರದೆಂಬುದಕ್ಕೆ, ಈ ದುರ್ಗಮಸ್ಥಾನವನ್ನು ಕೂಡ, ಸುಗಮವನ್ನಾಗಿ ಮಾಡಿ ಬಂದಿರುವ ಈ ಪತ್ರವೇ ಸಾಕಾಗಿದೆ, ತಿಳಿದಿರಲಿ.

ಇತಿ ಎಚ್ಚರಿಕೆ.'

ರಾವಬಹದ್ದೂರನು ಪತ್ರವನ್ನು ಮಡಿಸಿ, ಅಂಗಿಯ ಕಿಸೆಯಲ್ಲಿಟ್ಟು, ಕಾಲಕ್ಷೇಪದ ಮನೆಯ ಬಾಗಿಲನ್ನು ಭದ್ರಪಡಿಸಿ ಬಂದು, ಓಲಗಶಾಲೆಯಲ್ಲಿ ಕುಳಿತು ಯೋಚಿಸಿದನು ; ಯಾವುದೂ ತೋರಲಿಲ್ಲ. ಕಳವಳಗೊಂಡಂತಾಗಿ, ಹೊರಗಡೆ ಕುಳಿತಿದ್ದ ಸೇವಕನನ್ನು-' ರೈಮಲ್ ! ಇತ್ತ ಬಾ ' ಎಂದು ಕೂಗಿದನು.

ರೈಮಲ್—ಬಂದು ಕೈಮುಗಿದು-' ಏನಪ್ಪಣೆ ? '

ರಾವಬಹದ್ದೂರ—ಆಫೀಸು, ರೀಡಿಂಗ್‌ರೂಮ್ ಇವುಗಳಿಗೆ ಬಂದಿದ್ದವರಾರು ?

ರೈಮಾರ್ — ಇಲ್ಲ; ಇತ್ತ ಕಡೆಯಲ್ಲಿ ಯಾರೂ ಬಂದಿರಲಿಲ್ಲ.

ಬಹದ್ದೂರ — ತಲೆದೂಗಿ,-' ಹೂಂ ! ಇರಲಿ, ಬೇಗಹೋಗಿ ಪೋಲೀಸ್ ಇನ್ ಸ್ಪೆಕ್ಟರ್ ದಳವಾಯಿಸಿಂಗರನ್ನು ಬರಹೇಳಿ ಬಾ.'

ರೈಮಾರ್ — ' ಅಪ್ಪಣೆ ' ಎಂದು ಹೊರಟುಹೋದನು.

ಬಹದ್ದೂರನು, ಪತ್ರವನ್ನು ತೆರೆದು ಮತ್ತೆಮತ್ತೆಯೂ ಓದುತ್ತಿದ್ದನು. ಅರ್ಧಗಂಟೆಯೊಳಗಾಗಿ, ೩೮ ವರ್ಷದ ದೃಢಾಂಗನಾದ ತೇಜಸ್ವಿಯೊಬ್ಬನು ದಂಡಪಾಣಿಯಾಗಿ ಪ್ರವೇಶಿಸಿ, ರಾವಬಹದ್ದೂರನಿಗೆ ಕೈಮುಗಿದು-' ರಾವಬಹದ್ದೂರ್ ! ವಿಶೇಷವೇನಾದರೂ ಉಂಟೋ ? ಏತಕ್ಕಾಗಿ ಬರಮಾಡಿದಿರಿ ? ' ಎಂದು ಕೇಳಿದನು.

ರಾವಬಹದ್ದೂರ — ಕೈಹಿಡಿದು, ಬಳಿಯಲ್ಲಿದ್ದ ಕುರ್ಚಿಯ ಮೇಲೆ ಕುಳ್ಳಿರಿಸಿ ' ದಳವಾಯಿಸಿಂಗ್ ! ಇದೇ, ನೋಡು, ನಿನ್ನನ್ನು ಬರಮಾಡಿಸಿದ ವಿಶೇಷವಾಗಿದೆ.' ಎಂದು ಕೈಯಲ್ಲಿದ್ದ ಪತ್ರವನ್ನು ಮುಂದಿಟ್ಟನು.

ದಳವಾಯಿ — ಪತ್ರವನ್ನು ಒಂದೆರಡುಬಾರಿ ಓದಿ, ಬಹದ್ದೂರನಕಡೆಗೆ ತಿರುಗಿ, ' ಪತ್ರಕಾರರು ಬಹಳ ಮೋಸಗಾರರಾಗಿದ್ದಾರೆ.'

ಬಹದ್ದೂರ — ಅಹುದು , ಯಾರನ್ನು ಉದ್ದೇಶಿಸಿ ಬರೆದಿರುವುದು ?

ದಳವಾಯಿ — 'ಲೋಕಹಿತೈಷಿಗಳಿಗೆ ಅಪ್ರಿಯವನ್ನುಂಟುಮಾಡುವ ' ಮತ್ತು 'ಸುಖಮಯವಾದ ಶ್ರೀಯನ್ನು ಅಪಹರಿಸಿ ಇಷ್ಟಸಿದ್ಧಿ ಹೊಂದಲು,' ಎಂದು ಬರೆದಿರುವುದರಿಂದ, ಇದು ಜಮೀನ್ದಾರರನ್ನೇ ಉದ್ದೇಶಿಸಿ ಬರೆಯಲ್ಪಟ್ಟಿರುವುದೆಂದು ಹೇಳಬೇಕು. ಏಕೆಂದರೆ, ' ಸರ್ಕಾರದವರ ಮಹಾಪ್ರಯತ್ನ ಭಂಗೋದ್ದಿಶ್ಯವಾಗಿ ' ಎಂದು ಮೊದಲೇ ಎಚ್ಚರಿಸುವುದರಿಂದ, ಹಾಗೆ ಹೇಳಬೇಕಾಗಿದೆ.

ಬಹದ್ದೂರ — ಅಷ್ಟುಮಾತ್ರಕ್ಕೇ ಹೀಗೆ ಊಹಿಸುವುದು ಹೇಗೆ ?

ದಳವಾಯಿ — ಹೇಗೆಂದರೆ, ನಿನ್ನೆ ನ್ಯಾಯಸ್ಥಾನದಲ್ಲಿ ಜಮೀನ್ದಾರರ ಪ್ರವೇಶವಾದುದು ಮೊದಲು, ಹೊರಟುಹೋಗುವವರೆಗೂ ನಡೆದ ವಿದ್ಯಮಾನಗಳಿಂದ ಹಾಗೆ ಹೇಳುವೆನು.

ಬಹದ್ದೂರ—ಅಯ್ಯೋ ! ಈಗ ನಾನು ಜಡನಂತಾಗಿರುವೆನು ; ನನ್ನ ಬುದ್ಧಿ ಶಕ್ತಿಯೇ ಲೋಪವಾಗಿದೆ.

ದಳವಾಯಿ—ಕಿರುನಗೆಯಿಂದ ' ಇಷ್ಟಕ್ಕೆ ಅಧೀರರಾದರೆ, ಹಿಂದಿನಪ್ರಯತ್ನಗಳೇನಾಗಬಹುದು ? '

ಬಹದ್ದೂರ—ಈ ಲೇಖನಕ್ಕೆ ನಾನು ಹೆದರುವವನಲ್ಲ. ಆದರೆ, ಇದು ನನ್ನ ವಾಚನಶಾಲೆಯ ಮೇಜಿನಮೇಲಿದ್ದ ಪುಸ್ತಕವನ್ನು ಸೇರಿರುವುದರಿಂದ ಶಂಕಿತನಾಗಿರುತ್ತೇನೆ.

ದಳವಾಯಿ—ಸ್ವಾಮಿ ! ನೀವು ಮನೆಯಬಾಗಿಲನ್ನು ತೆರೆದು ಹೋಗಿದ್ದ ವೇಳೆಯಲ್ಲಿ, ಯಾರಾದರೂ ಮಾಡಬಾರದೇಕೆ ?

ಬಹದ್ದೂರ—ಈ ಮನೆಯ ಮತ್ತು ವಾಚಕಮಂದಿರದ ಬೀಗದಕೈಗಳನ್ನು ಯಾವಾಗಲೂ ನನ್ನಲ್ಲಿಯೇ ಇರಿಸಿಕೊಂಡಿರುವೆನಲ್ಲದೆ, ಯಾರಲ್ಲಿಯೂ ಕೊಡುವುದಿಲ್ಲ. ಹಾಗಿರುವುದರಿಂದ, ನಾನು ಬಂದು ಕುಳಿತುಕೊಳ್ಳುವುದಕ್ಕೆ ಮೊದಲು, ಯಾರಿಗೂ ಪ್ರವೇಶಕ್ಕೆ ಅವಕಾಶವಿರುವುದಿಲ್ಲ.

ದಳವಾಯಿ—ಬೇರೆ ಕದಗಳಿಲ್ಲವೇ ?

ಬಹದ್ದೂರ—ಇದ್ದರೂ ಅವುಗಳನ್ನು ತೆಗೆಯುವಂತೆ ಬಿಟ್ಟಿಲ್ಲ. ಕಿಟಕಿ ಕದಗಳಿಂದ ಹೀಗೆ ಮಾಡಲು ಸಾಧ್ಯವಿಲ್ಲ.

ದಳವಾಯಿ—ಕ್ಷಣಹೊತ್ತು ಯೋಚಿಸುತ್ತಿದ್ದು ತಲೆದೂಗಿ ಹೇಳಿದನು. ' ಸ್ವಾಮಿ ! ಈಗಲೇ ನಾನು ಯಾವುದನ್ನೂ ಹೇಳಲಾರೆನು. ಆದರೆ, ತಮ್ಮ ಮನೆಬಾಗಿಲುಗಳಿಗೆ ನಾನು ಬೇರೆ ಅಲಾರಂಬೀಗಗಳನ್ನು ಕಳಿಸುತ್ತೇನೆ ಆದರಿಂದ ಚೋರರ ಗುಪ್ತಸಂಧಾನಕ್ಕೆ ಆತಂಕವುಂಟಾಗಬಹುದು.

ಬಹದ್ದೂರ—ಆಗಲಿ ; ನಮ್ಮ ಜಮಿನಾನ್ದಾರರಿಗೆ ಸಂಭವಿಸಬಹುದಾಗಿರುವ ಅಪಾಯವನ್ನು ನಿವಾರಿಸುವುದಕ್ಕೂ, ಸಂಚುಗಾರರನ್ನು ಕಂಡು ಹಿಡಿದು ಶಿಕ್ಷಿಸುವುದಕ್ಕೂ ಪ್ರಯತ್ನಿಸಿರುವೆಯೇನು ?

ದಳವಾಯಿ—ಸ್ವಾಮೀ ! ನನ್ನ ಕರ್ತವ್ಯದಲ್ಲಿ ನಿರತನಾಗಿಯೇ ಇರುವ ನನಗೆ ಹೇಳಬೇಕೇ ? ಆದರೂ, ಈ ಕೆಲಸಕ್ಕಾಗಿಯೇ ನಿಯಮಿಸಲ್ಪಟ್ಟಿರುವ ತಮ್ಮ ಮೈದುನರ ಕೈಕೆಳಗಿನ ಉದ್ಯೋಗಸ್ಥರನ್ನು ಪರೀಕ್ಷಿಸಬೇಕಾಗಿದೆ.

ಬಹದ್ದೂರ—ಅಯ್ಯಾ ! ನನ್ನ ಮೈದುನನು ವಿದ್ಯಾವಂತ ; ತಕ್ಕಮಟ್ಟಿಗೂ ಸದ್ವರ್ತನದಲ್ಲಿರತಕ್ಕವನು. ಆದರೂ, ಈಗ ನಾಲ್ಕಯ್ದು ದಿನಗಳಿಂದ ಅವನ ಮುಖಭಾವವೂ, ಗಮನವೂ ಬದಲಾಯಿಸಿದಂತೆ ತೋರುತ್ತಿದೆ. ಕಾರಣವೇನೋ ಗೊತ್ತಾಗಲಿಲ್ಲ. ಮನೆಯಲ್ಲಿ ಅವನನ್ನು ಕಾಣುವುದೇ ದುರ್ಲಭ ; ಕಂಡಾಗ ಕೇಳಿದರೆ, 'ಸಂಚುಗಾರರು ಅಲ್ಲಲ್ಲಿ ತಲೆದೋರುತ್ತಿರುವರು. ಅವರನ್ನು ಕಂಡುಹಿಡಿಯುವ ಪ್ರಯತ್ನವು ನಡೆಯುತ್ತಿದೆ , ವಿರಾಮವಿಲ್ಲ.' ಹೀಗೆಂದು ಹೇಳುವನು. ಆತನು ಇಷ್ಟು ಶ್ರದ್ಧೆಯಿಂದ ಪ್ರಯತ್ನಿಸುತ್ತಿದ್ದರೂ ಪುಂಡಾಟವು ಹೆಚ್ಚುತ್ತಿದೆಯೆಂದರೆ ಆಶ್ಚರ್ಯವೇಸರಿ !

ದಳವಾಯಿ—ಈಗಲೇ ನಾವು ಅದನ್ನು, ಬಾಯ್ದೆರೆದು, ಹೇಳಬಾರದು. ಕೂಡಿದಮಟ್ಟಿಗೂ ಜಾಗ್ರತೆಯಾಗಿಯೇ ತಕ್ಕ ಏರ್ಪಾಟುಮಾಡಿ, ವಿದ್ರೋಹಿಗಳನ್ನು ಕಂಡುಹಿಡಿಯುವೆನು , ಧೈರ್ಯವಾಗಿರಬಹುದು. ನನಗಿನ್ನು ಅಪ್ಪಣೆಯೇ ?

ಬಹದ್ದೂರ—ಹಾಗೆಯೇಮಾಡು. ಹೇಗೂ ಈ ಕಾರ್ಯವು ನಿನ್ನಿಂದಲೇ ತೃಪ್ತಿಕರವಾಗಿ ನೆರವೇರಬೇಕಾಗಿರುವುದು. ಇರಲಿ , ಇನ್ನು ಹೊರಡಬಹುದು.

ದಳವಾಯಿ—'ಆಗಬಹುದು' ಎಂದು ಕೈಮುಗಿದು ಹೊರಟುಹೋದನು.

ರಘುನಾಥನು, ತನಗೆ ಸಿಕ್ಕಿರುವ ವೈರಿದಳದ ಎಚ್ಚರಿಕೆಯನ್ನು ಭದ್ರವಾಗಿಟ್ಟು, ಕಾರ್ಯಗೌರವದಿಂದ ಎದ್ದು ಹೊರಟುಹೋದನು.

*

॥ ಶ್ರೀ ॥

# ದ್ವಾದಶಪರಿಚ್ಛೇದ.

(ಪರಿವರ್ತನೆ.)

ಪ್ರಿಯಸೋದರಿಯರೇ! ಕಾಲಚಕ್ರವು ಒಂದೇಬಗೆಯಾಗಿರಲಾರದಲ್ಲವೇ ? ಅದು, ಪರಿವರ್ತನಾಕ್ರಮದಿಂದ, ಬೇರೆ ಬೇರೆ ರೂಪಗಳನ್ನು ತಾಳಿ ಸುತ್ತುತ್ತಿದೆಯಷ್ಟೆ. ಇಂತಹ ಕಾಲಚಕ್ರದ ಪರಿವರ್ತನಾಸ್ಥಿತಿಯನ್ನು ಮುಂದಾಗಿ ತಿಳಿದು ಹೇಳಲು, ಯಾರಿಗಾದರೂ ಅಳವೇ ? ನಮ್ಮ ಜಮಿಾನ್ದಾರನ ಭವನದ ಕಡೆಗೆ ಗಮನಿಸಿರಿ. ಭವನವೇ ನೂತನಕಾಂತಿಯಿಂದ ಪರಿವರ್ತಿತವಾಗಿ ಬೆಳಗುತ್ತಿದೆ. ಕಾರಣವೇನು ? ಭವನಾಧಿಕಾರಿಯ ಆತ್ಮಸಮಾಧಾನವೇ ಕಾರಣವೆನ್ನುವಿರೋ ? ನಿಜ ! ಈ ದಿನವೇ ಜಮಿಾನ್ದಾರನ ಹೃದಯಾನಂದ ಕಾರಿಣಿಯಾದ, ಪ್ರೇಮಮಯಿಾ ಸುನಂದಾದೇವಿಯು ಬರುವಳೆಂಬ ನಿರೀಕ್ಷೆ ; ಇದಕ್ಕೆಂದೇ ಲಕ್ಷ್ಮೀನಿಲಯವೂ ನವರಾಗದಿಂದ ಪರಿಶೋಭಿಸುತ್ತಿರುವುದು. ಚಂದ್ರಮತಿಗೆ ಆನಂದ, ಯಮುನೆಗೆ ಉತ್ಸಾಹ ; ವಿಷಕಂಠನಿಗೆ ಕುತೂಹಲ ; ಅಡಿಗೆ ಪರಿಚಾರಕರಿಗೆ ಕಳವಳ ; ಗೋಪಾಲನಿಗೆ ತಳಮಳ ; ಯಶವಂತನಿಗಂತೂ ವ್ಯಾಕುಲವೇ.

ಮನೆಯಲ್ಲಿ, ಒಬ್ಬೊಬ್ಬರ ಸ್ಥಿತಿಯೂ ಒಂದೊಂದು ಬಗೆಯದಾಗಿರುವುದು. ಇನ್ನು ಜಮಿಾನ್ದಾರ ತಾರಾಪತಿರಾಯನ ವಿಚಾರವಾಗಿ ಹೇಳಬೇಕೇ ? 'ಇನ್ನೇನು, ನನ್ನ ಮನೋದೇವತೆಯೇ ನನಗಿಂದು ಪ್ರಸನ್ನೆಯಾಗುವಳು' ಎಂಬ ಆನಂದದಿಂದ ಮನವು ಉಕ್ಕೇರುತ್ತಿರುವುದು, ಕಣ್ಣುಗಳಲ್ಲಿ ಕೌತುಕವು ತೋರುತ್ತಿದೆ ; ಬಾಯೊಳಗೆ ನೀರೂರುತ್ತಿದೆ ; ಕೈಕಾಲುಗಳಂತೂ ಮೆಯ್ಮರೆದಂತಾಗಿ, ಅಡಿಗಡಿಗೂ ನಡುನಡುಗುತ್ತಲಿವೆ. ಇನ್ನೇನಾ

ಬೇಕು ? ಇಂತವನಿಂದ ಕೆಲಸವೇನಾದೀತು ? ಇಂದು ಈತನು, ಪ್ರಾತಃ ಕಾಲದ ಸ್ನಾನವಾದಬಳಿಕ ಬಂದು, ಓಲಗಶಾಲೆಯ ಮುಂಗಡೆ, ಒರಗುವ ಕುರ್ಚಿಯಮೇಲೆ ಕುಳಿತವನು, ಮತ್ತೆ ಅತ್ತಿತ್ತ ಕದಲಿದವನಲ್ಲ ; ಮನೆಯ ವರಲ್ಲಿ ಯಾರೊಡನೆಯೂ ನುಡಿದು-ನುಡಿಯಿಸುವನಲ್ಲ ; ಒಂದಕ್ಷರವನ್ನಾ ದರೂ ಬರೆದವನಲ್ಲ ; ಓದಬೇಕೆಂದು ಮನದಲ್ಲಿಯಾದರೂ ಎಣಿಸಿದವನಲ್ಲ. ಎಡದ ಕೆನ್ನೆಯಮೇಲೆ, ತನ್ನೆಡಗಯ್ಯಿರಿಸಿ, ಬಲಗೈ ಬೆರಲುಗಳನ್ನು ಕುಣಿ ಕುಣಿಸುತ್ತೆ ಏನನ್ನೋ ಗುಣಿಸುತ್ತಿದ್ದನು. ಹೀಗೆಯೇ ಎಷ್ಟುಹೊತ್ತು ನಿರೀಕ್ಷಿಸುತ್ತಿದ್ದರೆ, ದೇವಿಯು ಪ್ರಸನ್ನೆಯಾಗಬಹುದು ? ಪ್ರಚಂಡಮಾ ರ್ತಾಂಡನು ಮಧ್ಯಾಕಾಶದಲ್ಲಿ ಪ್ರಜ್ವಲಿಸುತ್ತಿರುವನು. ಆತನ ಉಜ್ವಲಸ್ವ ರೂಪದಿಂದ, ಪ್ರಪಂಚವೇ ಪರಿತಪಿಸುವಂತಾಗಿದೆ. ಆದರೆ, ನಮ್ಮ ಜಮೀ ನ್ದಾರನಿಗೆ ಮಾತ್ರ, ಮಾರ್ತಾಂಡನ ಮಹೋಗ್ರತಾಪವು ಹಿತಕರವಾಗಿಯೇ ಇರಬೇಕು ! ಇಲ್ಲದಿದ್ದರೆ, ಈತನಿಂದು ಸ್ನಾನ-ಪಾನಗಳಲ್ಲಿಯೂ ಗಮನವಿ ಲ್ಲದೆ ಜಡನಂತಾಗಿ ಕುಳಿತಿರುತ್ತಿದ್ದನೇ ? ಎಂದಿಗೂ ಇಲ್ಲ. ಈ ವೇಳೆಯಲ್ಲಿ ಈತನ ಮನಸ್ಸು ಮಾಸಿನೀಧ್ಯಾನಮೌನವ್ರತದಲ್ಲಿ ಲೀನವಾಗಿದೆಯಲ್ಲದೆ, ಬಾಹ್ಯವ್ಯಾಪಾರಗಳನ್ನು ಗಮನಿಸುವಂತಿಲ್ಲ. ಕ್ಷಣಕ್ಷಣಕ್ಕೂ, ಬೀದಿಯ ಕಡೆ ನೋಡುವನು ; ಬೀದಿಯಲ್ಲಿ ತಿರುಗಾಡುವ ಬಂಡಿಗಳ ಸದ್ದನ್ನು ಕೇಳಿ, ಹಮ್ಮೈಸಿ ನೋಡುವನು ; ನಿರೀಕ್ಷೆಗೆ ಭಂಗವಾಯ್ತೆಂಬ ಉಮ್ಮಳದಿಂದ ಉಸಿರ್ಗರೆದು ತಲೆಬಾಗಿ ಕುಳ್ಳಿರುವನು. ಎಷ್ಟುಹೊತ್ತು ಕುಳಿತು ನೋಡಿ ದರೂ ನಿರೀಕ್ಷೆಗೆ ಫಲವಾಗದೆಹೋದರೆ, ಆತನ ಮನಸ್ಸಿನ ಯಾತನೆಯಾ ದರೂ ಎಷ್ಟಿರಬೇಕು ? ಈ ವೇಳೆಯಲ್ಲಿ ಈತನನ್ನು ಸಂತಯಿಸುವವರಾರು ?

ಓಹೋ ! ತಾಳಿರಿ, ತಪ್ಪಿದೆವು. ಸೋದರಿಯರೇ ! ತಪ್ಪಿನುಡಿದೆವು. ಸ್ವಾಮಿಯು ಚಿನ್ತಾಕುಲನಾಗಿ ಕುಳಿತರೆ, ಸ್ವಾಮಿನಿಯೇ ಬಂದು ಸಂತ ಯಿಸುವುದು ಸಹಜಧರ್ಮವು. ' ಹಾಗಾದರೆ, ಗಂಗಾಬಾಯಿಯೇ ಈಗ ಬರಬಾರದೇಕೆ ? ಏನುಮಾಡುತ್ತಿರುವಳು ? '

ಗಂಗೆಯ ಸ್ಥಿತಿಯೂ ಪರಿವರ್ತಿತವಾಗಿದೆ! ಎಂದಿನಂತೆ ಇಂದಿವಳು ಆಲಸಳಾಗಿರುವುದಿಲ್ಲ ; ಪುಟಚಂಡಿನಂತೆ ಹಾರಾಡುತ್ತಿರುವಳು. ಇವಳ ಮುಖದಲ್ಲಿ ಕಳೆಯೇರುತ್ತಿರುವುದು ; ಕಟಾಕ್ಷಕಾಂತಿಯಿಂದ ಮನೆಯೇ ನರ್ತಿಸುತ್ತಿರುವಂತೆ ಕಾಣುವುದು. ಉಪ್ಪರಿಗೆಯಿಂದ ಕೆಳಗೂ, ಕೆಳಗಿಂದ ಉಪ್ಪರಿಗೆಗೂ ಇಳಿದೇರುತ್ತಿರುವುದೆಂದರೆ, ಇವಳಿಗೆ ಮಕ್ಕಳಾಟಿಕೆಯಂತೆಯೇ ಆಗಿರುವುದು. ಅಷ್ಟೇ ಅಲ್ಲ ! ಅತ್ತೆಯನ್ನು ನುಡಿಯಿಸುವಳು ; ಯಮುನೆಯನ್ನು ಅಡಿಗಡಿಗೂ ಬೆಸಗೊಳ್ಳುವಳು ; ಅಡಿಗೆ-ಪರಿಚಾರಕರನ್ನು ಸವಿನುಡಿಯಿಂದ ಉಬ್ಬೇರಿಸುವಳು ; ಪತಿಯಬಳಿಗೆ ಹೋಗಬೇಕೆಂದು ಸಮಯವನ್ನೇ ನೋಡುತ್ತಿರುವಳು. ಇಂದಿನ ಇವಳ ಉತ್ಸಾಹಕ್ಕೆ ಕಾರಣವೇನೋ ಪರಮೇಶ್ವರನೊಬ್ಬನಿಗೆ ಗೊತ್ತು.

ತಾರಾಪತಿರಾಯನು ಸುನಂದೆಯ ವಿಚಾರವಾಗಿ, ಇಂದಿನವರೆಗೂ, ಗಂಗೆಯ ಬಳಿಯಲ್ಲಿ ಹೇಳಿಲ್ಲ. ಗಂಗೆಗೆ ತಿಳಿದಿದೆಯೋ, ಇಲ್ಲವೋ ಅದನ್ನೂ ಹೇಳುವಂತಿಲ್ಲ. ಇವಳಾಗಿ ಗಂಡನಲ್ಲಿ ಈ ಪ್ರಸ್ತಾಪವನ್ನೆತ್ತಿಯೂ ಇಲ್ಲ. ಅವುದಕ್ಕೂ ಸಮಯವೊದಗಬೇಕಷ್ಟೆ. ಆದರೆ, ಈಗಲೀಗ ಸಮಯಸಿಕ್ಕಿತು. 'ಮಾಡಿದ ಅಡಿಗೆಯೆಲ್ಲವೂ ತಣ್ಣಗಾಗುತ್ತಿದೆ. ಯಜಮಾನರಿನ್ನೂ ಸ್ನಾನಕ್ಕೆದ್ದಿಲ್ಲ. ಹೇಗಾದರೂ ಮಾಡಿ ಎಬ್ಬಿಸಬೇಕು.' ಹೀಗೆಂದು ಮನೆಯವರೆಲ್ಲರೂ ಬಂದು, ಗಂಗೆಯಲ್ಲಿ ಮೊರೆಯಿಟ್ಟರು. ಗಂಗೆಯು ವಿಳಂಬಿಸದೆ ಪತಿರಾಜನೆಡೆಗೆ ನಡೆತಂದಳು. ಪ್ರಿಯಪತ್ನೀಧ್ಯಾನದಲ್ಲಿಯೇ ಕುಳಿತಿದ್ದ ತಾರಾಪತಿಗೆ, ಗಂಗೆಯು ಬಂದುದೇ ತಿಳಿಯಲಿಲ್ಲ. ಗಂಗೆಯಾದರೂ ಸದ್ದಾಗದಂತೆ ಮೆಲ್ಲನೆ ಬಂದು, ಪತಿಯ ಹಿಂದೆ ನಿಂತು, ತನ್ನ ಕೋಮಲಹಸ್ತವನ್ನು ಪತಿಯ ಭುಜಪ್ರದೇಶದಲ್ಲಿರಿಸಿದಳು.

ಖಿನ್ನನಾಗಿ ಕುಳಿತಿದ್ದಾತನಿಗೆ, ಪತ್ನಿಯ ಶೀತಲ ಕರಸ್ಪರ್ಶದಿಂದ ಜ್ಞಾನೋದಯವಾಯಿತು ; ತಲೆಯೆತ್ತಿ ನೋಡಿದನು ; ಗಂಗೆಯ ಮಂದಸ್ಮಿತ ವದನಾರವಿಂದವನ್ನು ಕಂಡು, ಚಕಿತನಾಗಿ ಕೇಳಿದನು,-' ಗಂಗೆ !

ಇದೇನು ಬಂದೆ ? ಇಂದೇನಿಷ್ಟು ಸುಪ್ರಸನ್ನತೆ ? ಸದ್ದಾಗದಂತೆ ಬಂದು ಹೊಂಚಿ ನೋಡುತ್ತಿರುವುದೇನು ? ಬಂದು ಎಷ್ಟು ಹೊತ್ತಾಯಿತು ? '
ಗಂಗೆಯು ಉತ್ತರವೇನನ್ನೂ ಕೊಡದೆ, ಒಂದುಬಾರಿ ಪತಿಯನ್ನು ಪರಿಹಾಸದಿಂದ ನೋಡಿ, ಬಲವಾಗಿ ನಕ್ಕುಬಿಟ್ಟಳು.

ತಾರಾಪತಿ—ಪತ್ನಿಯ ಕೈಹಿಡಿದೆಳೆದು ಮುಂದೆ ನಿಲ್ಲಿಸಿಕೊಂಡು, ಕುತೂಹಲದಿಂದ ಕೇಳಿದನು,-' ಹೇಳು, ಗಂಗೆ ! ಸುಮ್ಮನೇಕೆ ಮಾತಿಲ್ಲದೆ ನಗುತ್ತಿರುವೆ ?'

ಗಂಗೆ—ಪರಿಹಾಸದಿಂದ ತಲೆದೂಗುತ್ತ ' ಜಮೀನ್ದಾರರ ಅಗಾಧಚಿಂತೆಗೆ ಕಾರಣವು ಗೊತ್ತಾದರೆ, ಆ ಬಳಿಕ ನಾನೂ ಹೇಳುವೆನು.'

ತಾರಾಪತಿ—ಲೇವಾದೇವಿ ವಿಷಯಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವುದೇ ನನ್ನ ವ್ಯಸ್ತತೆಗೆ ಕಾರಣ !

ಗಂಗೆ—ಮೈಮರೆತು ಬೀಗಿಕುಳಿತಿದ್ದ ಜಮೀನ್ದಾರರ ಚಿತ್ತಸ್ಥೈರ್ಯವೇ ನನ್ನ ನಗುವಿಗೆ ಕಾರಣ ?

ತಾರಾಪತಿ—ಅಷ್ಟಕ್ಕೆ ನಗುವುದೇಕೆ ?

ಗಂಗೆ—ಲೇವಾದೇವಿ ವಿಷಯಗಳಲ್ಲಿ ವ್ಯತ್ಯಾಸವಾಗಿದ್ದರೆ, ಊಟ ನಿದ್ರೆಗಳನ್ನು ಬಿಡುವುದೇಕೆ ?

ತಾರಾಪತಿ—ಬಿಟ್ಟಿರುವವರು ಯಾರು ?

ಗಂಗೆ—ನಾನು ಮತ್ತಾರನ್ನೂ ಏಕೆ ಹೇಳಲಿ ?

ತಾರಾಪತಿ—ನನ್ನನ್ನೇ ಹೇಳುವೆಯೇನು ?

ಗಂಗೆ—ಅಹುದು; ಹಾಗೇಕೆಮಾಡಬೇಕು ? ಅಟ್ಟ ಅಡಿಗೆ ಆರಿಹೋಯಿತು.

ತಾರಾಪತಿ—ನನಗೆ ದೇಹಾರೋಗ್ಯವು ಕೆಟ್ಟಿದೆ. ಈಗ ನಾನು ಊಟಮಾಡುವುದಿಲ್ಲ. ಎಲ್ಲರೂ ಊಟಮಾಡಬಹುದು.

ಗಂಗೆ—' ಎಲ್ಲರೂ ' ಎಂದರೆ ಅರ್ಥವೇನು ?

ತಾರಾಪತಿ—ನೀನೂ, ಅಮ್ಮಾಯಿೂ. ಮತ್ತು ಮನೆಯುವರೆಲ್ಲರೂ.

ಗಂಗೆ—ಆದೀತು. ನಾನು ಕುಕ್ಷಿಂಭರಿಯೆಂಬುದೂ, ಅವಿಶ್ವಾಸಿನಿಯೆಂಬುದೂ ಎಲ್ಲರಿಗೂ ಗೊತ್ತಿದೆ. ಆದರೆ, ಅಮ್ಮಾಯಿಯಾಯವರಿಗೆ ನೀವೇ ಹೇಳುವಿರೇನು ?

ತಾರಾಪತಿ—ಆತುರದಿಂದ, ನಿನ್ನನ್ನು 'ಅವಿಶ್ವಾಸಿನಿ' ಯೆಂದವರಾರು ?

ಗಂಗೆ—ಬಾಧ್ಯಪಟ್ಟವರಿರುವಾಗ ಮತ್ತಾರು ಹೇಳುವರು ?

ತಾರಾಪತಿ—ನಾನೆಂದು, ನಿನ್ನನ್ನು ಹಾಗೆ ಹೇಳಿರುವುದು ?

ಗಂಗೆ—ಬಾಯ್ದೆರೆದು ಹೇಳಿಲ್ಲ ; ಮನದಲ್ಲಿಯೇ ಭಾವಿಸುತ್ತಿರುವಿರಿ. ಮುಂದೆ ಬಾಯ್ದೆರೆದು ಹೇಳಿದರೂ ಹೇಳಬಲ್ಲಿರಿ !

ತಾರಾಪತಿ—ಗಂಗೆ ! ನಿನಗೆ ನೀನೇ ಹೀಗೆ ಬೇರೆಬೇರೆ ಕಾರಣಗಳನ್ನು ತೆಗೆದು, ನನ್ನನ್ನು ನೋಯಿಸುವುದು ಸರಿಯಲ್ಲ. ಹಾಗೇನಾದರೂ ತಪ್ಪಿದ್ದರೆ ತಿಳಿಯಹೇಳು.

ಗಂಗೆ—ನಂಬುವುದೊಂದು ಗೊತ್ತಾದರಲ್ಲವೇ ಹೇಳುವುದು ?

ತಾರಾಪತಿ—ಗಂಗೆ ! ನಿನ್ನ ಸಂಶಯಕ್ಕೆ ನಾನು ಎಷ್ಟುಮಾತ್ರಕ್ಕೂ ಕಾರಣನಲ್ಲ. ನಾನಾವಾಗಲೂ ನಿನ್ನನ್ನು ಅವಿಶ್ವಾಸಿನಿಯೆಂದೂ ಭಾವಿಸಿಲ್ಲ. ಹೀಗಿದ್ದೂ ನಿನಗಿಷ್ಟರಕೋಪವೇಕೆ ?

ಗಂಗೆ—ಮಂದಹಾಸದಿಂದ 'ನಿಮಗೆ ನನ್ನಲ್ಲಿ ಹಾಗೆ ಭರವಸೆಯಿರುತ್ತಿದ್ದರೆ, ನಿಮ್ಮ ವ್ಯಾಕುಲಕ್ಕೆ ಕಾರಣವೇನೆಂಬುದನ್ನು ನನಗೆ ಹೇಳದಿರುತ್ತಿದ್ದಿರೇನು? ಈಗಲೂ ಮುಳುಗಿಹೋಗಲಿಲ್ಲ; ಸ್ನಾನಕ್ಕೇಳಿರಿ.'

ತಾರಾಪತಿ—ಇಲ್ಲ ; ಕೋಪಿಸಬೇಡ. ನಾನು ಊಟಮಾಡುವುದಿಲ್ಲ.

ಗಂಗೆ—ಹುಬ್ಬುಗಂಟಿಕ್ಕಿ 'ನಾನು ಎಷ್ಟುಬಗೆಯಾಗಿ ಹೇಳಿದರೂ ಲಕ್ಷ್ಯಕ್ಕೆಬಾರದು. ಈ ಭಾಗ್ಯಕ್ಕೆ ನನ್ನನ್ನೇಕೆ ಉಳಿಸಿರಬೇಕು ? ಇಷ್ಟವಸ್ತುವನ್ನೇಕೆ ಕರೆದೊಯ್ಯಬೇಕು ? ದೈವಕ್ಕೂ ನಾನು ಬೇಕಾಗಿಲ್ಲವೇನು ? ಆಕೆಯಂತೆಯೇ ನಾನೂ ಸತ್ತಿದ್ದರೆ,......'

ತಾರಾಪತಿ—ಆತುರದಿಂದ, ಪತ್ನಿಯಬಾಯನ್ನು ಮುಚ್ಚಿ 'ಹಾಗೆ ಮನಬಂದಂತೆ ಹೇಳಬೇಡ. ಆಕೆಯೂ ಸತ್ತಿಲ್ಲ; ನೀನೂ ನನಗೆ ಅಹಿತಳಲ್ಲ.'

ಗಂಗೆ—ಏನು ! ಸತ್ತಿಲ್ಲವೇ ? ನಿಜವೇ ? ಮಕ್ಕಳೊಡನೆ ಬದುಕಿರುವಳೇ ?

ತಾರಾಪತಿ—ನಿಜವಾಗಿಯೂ ಸತ್ತಿಲ್ಲ. ಮಕ್ಕಳೂ ಸುಖವಾಗಿವೆ.

ಗಂಗೆ—ಹಾಗಾದರೆ, ಇಂದಿನವರೆಗೂ ಕರೆಯಿಸಿಕೊಳ್ಳದಿದ್ದುದೇಕೆ ? ನನ್ನನ್ನು ನಿಷ್ಠುರಕ್ಕೆ ಗುರಿಪಡಿಸಬೇಕೆಂದೋ ? ಹಗಲೂ, ಇರುಳೂ ನೀವು ಹೀಗೆ ಕೊರಗುತ್ತಿರುವುದು ನನಗೆ ಸಮಾಧಾನವೆಂದೋ ? ಇನ್ನಾದರೂ ನಿಮ್ಮ ಪ್ರಿಯಪತ್ನಿಯನ್ನು ಕರೆಯಿಸಿಕೊಂಡು ಸುಖಿಸಬಹುದು. ನನ್ನ ಆತಂಕವೇನೂ ಇರುವುದಿಲ್ಲ.

ತಾರಾಪತಿ—ಆನಂದೋತ್ಸಾಹಗಳಿಂದ ಪತ್ನಿಯ ಗಲ್ಲವನ್ನೆತ್ತಿ, ಮುಖವನ್ನೇ ನೋಡುತ್ತ ಹೇಳಿದನು. 'ಗಂಗೆ ! ನಿನ್ನೀವಾಕ್ಯದಿಂದ ನನ್ನ ಮನಸ್ಸು ಸೋತುಹೋಗಿದೆ. ಇನ್ನಾದರೂ ಕ್ಷಮಿಸು. ಸುನಂದೆಯು, ಈ ದಿನವೇ, ಬರುವಳೆಂಬ ವರ್ತಮಾನವಿತ್ತು ; ಇನ್ನೂ ಬಂದಿಲ್ಲ. ಇದಕ್ಕಾಗಿಯೇ ನಾನು ನಿರೀಕ್ಷಿಸುತ್ತಿರುವುದು.'

ಗಂಗೆ—ನನಗೆ ಇದೊಂದನ್ನೂ ಹೇಳಲಿಲ್ಲವೇಕೆ ? ಅಪಾತ್ರಳೆಂದೋ ? ಅಸೂಯಾಪರಳೆಂದೋ ?

ತಾರಾಪತಿ—ಅಂತಹದೇನೂ ಇಲ್ಲ. ಆದರೂ, ಬೇರೆ ಕೆಲವು ಪ್ರಬಲಕಾರಣಗಳಿವೆ.

ಗಂಗೆ—ನಾನೂ ತಮ್ಮನ್ನು ಬಲಾತ್ಕರಿಸಬೇಕೆಂದಿಲ್ಲ. ಹೇಗೂ, ಸುಖಸಂತೋಷದಿಂದಿರುವುದೇ ಬೇಕು. ಈಗಲಾದರೂ ಏಳಿರಿ ; ಸುಖಿಸುವಕಾಲದಲ್ಲಿ ದುಗುಡದಿಂದಿರಬಾರದು.

ತಾರಾಪತಿ—ಏಳಲಾರೆನೆಂದು ಮೊದಲೇ ಹೇಳಿದೆನಲ್ಲವೆ ?

ಗಂಗೆ—ಇಷ್ಟಾದರೂ ಹಟವೇನು ?

ಸತಿಪತಿಯರ ಸಂವಾದದ ಮಧ್ಯದಲ್ಲಿಯೇ ಚಂದ್ರಮತಿಯು ಬಂದು ಹೇಳಿದಳು,-'ಮಗು, ತಾರಾಪತಿ ! ಮೈಬಡವೆಂದು ಊಟವನ್ನೇ ಬಿಡಬೇಕೇ ? ನಿನಗಾಗಿ ನಾವೆಲ್ಲರೂ ಕಾದಿರುವೆವು. ಇನ್ನು ಹಟಮಾಡದೆ ಏಳು.'

ಗಂಗೆ—ಕಿರುನಗೆಯಿಂದ ' ಈವರೆಗೂ ಹಟಸಾಧನೆಯಾಯ್ತಷ್ಟೆ! ಇನ್ನು ಮಾತೃವಾಕ್ಯಪರಿಪಾಲನೆಯಾಗಲಿ ; ವಿಳಂಬವೇಕೆ ? '

ತಾರಾಪತಿರಾಯನು ಅನಿವಾರ್ಯಹಕ್ಕಾಗಿ ಎದ್ದನು. ಸ್ನಾನಾನುಷ್ಠಾನವೂ ಯಥಾಕ್ರಮವಾಗಿ ನಡೆದಿತು. ಊಟವು ಬೇಕಾಗಿರಲಿಲ್ಲವಾದರೂ, ತಾಯಿಯ ವಾತ್ಸಲ್ಯಕ್ಕೂ, ಪತ್ನಿಯ ಸುಪ್ರಸನ್ನತೆಗೂ ಕಟ್ಟು ಬಿದ್ದು, ಎಲ್ಲರೊಡನೆ ಊಟವನ್ನೂ ಮಾಡಿ ಬಂದು, ಮೊದಲಂತೆಯೇ ಕುಳಿತನು. ಗಂಗೆಯೂ ಬಂದು ಪತಿಗೆ ತಾಂಬೂಲವನ್ನೊಪ್ಪಿಸಿ, ನೂತನಕಾಂತಿಯಿಂದ ರಾಗೋದ್ರೇಕವಾಗುವಂತೆ ಪತಿಯಬಳಿಯಲ್ಲಿ ಸ್ವಲ್ಪಹೊತ್ತು ವಿನೋದದಲ್ಲಿದ್ದು, ಬಳಿಕ ವಿಲಾಸಭವನಕ್ಕೆ ತೆರಳಿದಳು.

ಗಂಗೆಯ ಪರಿವರ್ತನೆಯು ಚಂದ್ರಮತಿಗೆ ಸೊಗಸುತೋರಿತಾದರೂ, ಯಮುನೆಗೆ ಸಂಶಯವನ್ನೇ ಹೆಚ್ಚಿಸುತ್ತಿದ್ದಿತು. ನಾವು ಹೇಳುವುದೇನು ? ' ಸಂಶಯಾತ್ಮಾವಿನಶ್ಯತಿ ' ಎಂಬ ತತ್ವವನ್ನರಿತು ಗಂಗೆಯನ್ನು ಗೌರವಿಸಬೇಕೆನ್ನುವುದೇ !

|| ಶ್ರೀ ||

## ತ್ರಯೋದಶ ಪರಿಚ್ಛೇದ.

(ಸಂಭ್ರಮ—ಸಂತಾಪ.)

' ಸಾಯಂಕಾಲವಾದರೂ ನಮ್ಮ ಭಾಗ್ಯಲಕ್ಷ್ಮಿಯು ಬರಲಿಲ್ಲವೇಕೆ ? ಏತರಿಂದ ತಡೆಯಾಗಿದೆ ? ಭಗವತ್ಕೃಪೆಯು ಪೂರ್ಣವಾಗಿರಬೇಕಲ್ಲವೇ ? ' ಎಂದು ಹೇಳುತ್ತ ಯಮುನೆಯು, ಬೀದಿಯ ಬಳಿಯಲ್ಲಿಯೇ ನಿಂತಿದ್ದಳು. ನಿಂತು ನೋಡುತ್ತಿದ್ದಂತೆಯೇ, ಘೋಷಾ ಹೆಂಗುಸರು ಕುಳಿತುಕೊಳ್ಳುವಂತಹ ಕುದುರೆ ಬಂಡಿಯೊಂದು, ಪ್ರಾಕಾರದ ಬಾಗಿಲನ್ನು ದಾಟಿ ಬಂದು, ಮನೆಯ ಮುಂಗಡೆಯಲ್ಲಿ ನಿಂತಿತು. ಬಂಡಿಯ ಇಕ್ಕೆಲದಲ್ಲಿಯೂ

ರಕ್ಷಕರಾಗಿ ಬಂದಿದ್ದ ಭಟರು ಸರಿದು ಕೈಕಟ್ಟಿ ನಿಂತರು. ಬಂಡಿಯನ್ನೇ ಇದಿರುನೋಡುತ್ತಿದ್ದ ಯಮುನೆಯು, ಬೀಳುವುದನ್ನೂ ತಿಳಿಯದೆ, ಎಡವಿ ಮುಗ್ಗರಿಸುತ್ತ ಓಡಿಬಂದು, ಬಂಡಿಯ ಕದವನ್ನು ತೆರೆದು, ಕಣ್ಣೀರು ಸುರಿಸುತ್ತ ಗದ್ಗದಸ್ವರದಿಂದ-'ಬಂದಿರಾ, ಭಾಗ್ಯಲಕ್ಷ್ಮೀ!' ಎಂದು ಹೇಳಿ ಕೈನೀಡಿದಳು. ಹತ್ತುವರ್ಷದ ಸುಕುಮಾರನಾದ ಬಾಲಕನೊಡನೆ, ಇಪ್ಪತ್ತೆಂಟು ವರ್ಷದ ತೇಜಸ್ವಿನಿಯಾದ ನಾರೀಮಣಿಯು ಬಂಡಿಯಿಂದ ಕೆಳಗಿಳಿದು, ಅಧಿಕವಾದ ಆಯಾಸದಿಂದ ಯಮುನೆಯ ಭುಜದಮೇಲೆ ತನ್ನ ಮೈಭಾರವನ್ನೂರಿ, ಮೆಲ್ಲಗೆ ನಡೆತಂದು ಮೊದಲ ಅಂಗಳದಲ್ಲಿಯೇ ಕುಳಿತುಬಿಟ್ಟಳು. ಯಮುನೆಯು ಕುಮಾರನನ್ನು ಕಂಕುಳಲ್ಲಿಟ್ಟು, ಚಂದ್ರಮತಿಗೆ ಶುಭವರ್ತಮಾನವನ್ನು ಹೇಳಲು ಓಡಿದಳು.

ಪತ್ನಿಯ ಆಗಮನ ಚಿಂತೆಯಲ್ಲಿಯೇ ಕುಳಿತಿದ್ದ ತಾರಾಪತಿರಾಯನು ಪತ್ನಿಯು ಬಂದು ಮುಂದಿನ ಅಂಗಳದಲ್ಲಿ ಕುಳಿತುದನ್ನು ಕಂಡು, ಒಂದೇ ನೆಗತಕ್ಕೆ ಹಾರಿಬಂದು, ಪತ್ನಿಯ ಮುಂದೆ ನಿಂತನು. ಮಲಿನವಸ್ತ್ರದಿಂದ ಮರೆಯಾಗಿದ್ದ ಪತ್ನಿಯ ಕೃಶಾಂಗವನ್ನು ನೋಡಿ, ಹುಚ್ಚನಂತೆ ವಿಕೃತಸ್ವರದಿಂದ-'ಸುನಂದಾ! ಸುನಂದಾ!!' ಎಂದು ಕೂಗಿ ಮುಂದೆ ಏನನ್ನೂ ಹೇಳಲಾರದೆ ಸುಮ್ಮನಾದನು. ಸುನಂದೆಗೂ ಪತಿಯನ್ನು ನೋಡಿ, ಹೃತ್ತಾಪವು ಹೊರಹೊಮ್ಮಿತು ; ಕಣ್ಣುಗಳಿಂದ ಧಾರೆಯಾಗಿ ನೀರು ಸುರಿದುಹೋಯಿತು ; ಪ್ರಜ್ಞೆಯೂ ತಪ್ಪಿತು ; ಕುಳಿತಂತೆಯೇ ಕಣ್ಣೆವೆಗಳನ್ನು ಮುಚ್ಚಿದಳು

ನಾಲ್ಕಾರು ನಿಮಿಷಗಳಾದ ಬಳಿಕ, ತಾರಾಪತಿರಾಯನು ಪ್ರಜ್ಞೆಹೊಂದಿ, ಪತ್ನಿಯ ಅವಸ್ಥೆಯನ್ನು ನೋಡಿ ತಡೆಯಲಾರದೆ ಬಳಿಗೆಬಂದು, ಕರವಸ್ತ್ರದಿಂದ ಗಾಳಿಹಾಕುತ್ತ, ಕಂಪಿತಸ್ವರದಿಂದ ಕೇಳಿದನು-'ಪ್ರಾಣಾಧಿಕೆ! ದುಃಖವನ್ನು ತಡೆಗಟ್ಟು, ಕಣ್ದೆರೆದು ನನ್ನನ್ನು ನೋಡು ; ಮಾತನಾಡು.'

ಸುನಂದೆಯು ಪತಿಯ ಮಾತನ್ನು ಮೀರದೆ ಕಣ್ಣೀರನ್ನು ತಡೆದು, ಪತಿಯ ಮುಖವನ್ನೊಮ್ಮೆ ನೋಡಿದಳು. ಮಾತನಾಡಲಿಕ್ಕಾಗಲೀ-ಮತ್ತೆ ಮತ್ತೆಯೂ ನೋಡಲಿಕ್ಕಾಗಲೀ, ಇವಳಿಂದ ಸಾಧ್ಯವಾಗಲಿಲ್ಲ. ಪತಿಯ ವಾಕ್ಯಕ್ಕೆ ಉತ್ತರವಾಗಿ ಒಂದುಸಾರಿ ಬಲವಾಗಿ ನಿಟ್ಟುಸಿರಿಟ್ಟು ಸುಮ್ಮನಾದಳು.

ತಾರಾಪತಿ—ಮತ್ತೆ ಪತ್ನಿಯ ಮುಖವನ್ನೇ ನೋಡುತ್ತ-' ಮಾತನಾಡಲೊಲ್ಲೆಯಾ, ಪ್ರಿಯೆ ? ಈವರೆಗೂ ಇಲ್ಲಿಗೆ ಬರಲಿಷ್ಟವಿರಲಿಲ್ಲವೇ ? ಏಕೆ ಬರಲಿಲ್ಲ ? ಹೇಳು.'

ಸುನಂದೆಗೆ ಇನ್ನು ಸುಮ್ಮನಿರುವುದು ಸರಿಯಾಗಿ ಕಾಣಲಿಲ್ಲ. ಆದರೆ, ನಾಲಿಗೆಯಲ್ಲಿ ದ್ರವವಾದರೂ ಇರಲಿಲ್ಲ. ಮಾತನಾಡುವ ಬಗೆ ಹೇಗೆ ? ಅಡಿಗಡಿಗೂ ನಿಟ್ಟುಸಿರಿಡುತ್ತ, ಬಹು ಕಷ್ಟದಿಂದ ಪತಿಯನ್ನು ಕುರಿತು ಹೇಳಿದಳು-' ನಾನು ಇದಕ್ಕೇನು ಹೇಳಲಿ ? ಇಷ್ಟವಿತ್ತೋ, ಇರಲಿಲ್ಲವೋ, ಹೇಗಿದ್ದೆನೊ, ಏಕೆ ಬರಲಿಲ್ಲವೋ, ಆ ಸರ್ವಸಾಕ್ಷಿಯಾದ ಭಗವಂತನೊಬ್ಬನಿಗೇ ಗೊತ್ತು! ಮುಖ್ಯವಾಗಿ, ಅನಿರೀಕ್ಷ್ಯವಾಗಿ ಬಂದೊದಗಿದ ಪ್ರಾಣಾಪತ್ತಿನಲ್ಲಿಯೂ, ಸಮಾಧಾನವನ್ನುಂಟುಮಾಡಿರುವ ಪ್ರಭುದರ್ಶನವು ಇಷ್ಟವಾಗಿರಲಿಲ್ಲವೆಂದು ಹೇಗೆ ಹೇಳಲಿ ? ಇಂದಾದರೂ, ಈ ದೀನಚೇತನೆದಲ್ಲಿ ಭಗವತ್ಕೃಪೆಯುಂಟಾಗಿ, ಜನ್ಮಸಾರ್ಥಕತೆ ಹೊಂದುವಂತೆ ಆಯಿತೆಂಬ ಸಂತೋಷವೇ ನನಗೆ ಸಾಕು. ಆದರೆ,.........' ಎಂದು ಅರ್ಧೋಕ್ತಿಯಲ್ಲಿಯೇ ನಿಲ್ಲಿಸಿ, ಕ್ಷಣಕಾಲ ಸುಮ್ಮನಿದ್ದು ಬಳಿಕ ದೈನ್ಯದಿಂದ-' ಹಾ, ಕಂದಾ ! ಮಿತ್ರವಿಂದಾ !! ಅಯ್ಯೋ, ನನ್ನ ಮೋಹದ ಕಂದಾ !!! ನೀನೆಲ್ಲಿರುವೆ ? ಏನಾದೆ ? ಈ ಪಾಪಿಗೆ ನೊಗದೋರು ! ' ಎಂದು ಕೂಗುತ್ತೆ ಮತ್ತೆ ಮೈಮರೆದಳು. ತಾರಾಪತಿರಾಯನು, ಪತ್ನಿಯ ಆರ್ತಾಲಾಪದಿಂದ ಮತ್ತೂ ಅಧೀರನಾಗಿ, ಕರ್ತವ್ಯಜ್ಞಾನಶೂನ್ಯತೆಯಿಂದ ಸ್ತಬ್ಧನಾಗಿ ಕುಳಿತನು.

ಶುಭವರ್ತಮಾನವನ್ನು ಕೇಳ ಹೋಗಿದ್ದ ಯಮುನೆಯು ಚಂದ್ರಮತಿಯಲ್ಲಿ ತಿಳಿಸಿದಳು. ಚಂದ್ರಮತಿಯು ಆನಂದಪಾರವಶತೆಯಿಂದ ಮೊಮ್ಮಗನನ್ನೆತ್ತಿ ಕಂಕುಳಲ್ಲಿಟ್ಟು, ಸೊಸೆಯಿದ್ದೆಡೆಗೆ ಯಮುನೆಯೊಡನೆ ಓಡಿಬಂದಳು; ನೋಡಿದಳು. ಪುತ್ರನು ಪರವಶನಾಗಿ ಕುಳಿತಿದ್ದನು. ಪುತ್ರವಧುವು (ಸೊಸೆ) ಮೂರ್ಛಿತೆಯಾಗಿದ್ದಳು. ಹೆತ್ತೊಡಲ ದುಃಖವನ್ನು ಹೇಗೂ ತಡೆಯಲಾರದೆ, ಚಂದ್ರಮತಿಯು ನಿಂತಲ್ಲಿಯೇ ಚಲಿಸದೆ ಕುಳಿತುಬಿಟ್ಟಳು. ಯಮುನೆಯು, ಸಂತಾಪಾಧಿಕ್ಯದಿಂದ ಚೇಷ್ಟಾರಹಿತರಾಗಿ ಕುಳಿತಿದ್ದ ಸತೀಪತಿಗಳಿಗೆ ಶೈತ್ಯೋಪಚಾರ ಮಾಡಿ ಎಚ್ಚರಿಸಿದಳು. ಸುನಂದೆಯು ಸ್ವಲ್ಪಹೊತ್ತಿನಲ್ಲಿಯೇ ಎಚ್ಚೆತ್ತು ಕಣ್ದೆರೆದು ನೋಡಿದಳು.

ತಾರಾಪತಿ—ಸುನಂದಾ ! ಹೇಳು, ಏಂದೆಯೇನಾದಳು ? ವಿಚಾರವೇನು ? ಹೇಳಲಾರೆಯಾ ?

ಸುನಂದೆ— ಗದ್ಗದಸ್ವರದಿಂದ–'ನನ್ನ ಏಂದೆ ಕಳ್ಳರ ಪಾಲಾದಳು !'

'ಏಂದೆಯು ಕಳ್ಳರ ಪಾಲಾದಳು' ಹಾ ! ಎಂತಹ ಮರ್ಮಾಂತಿಕ ಶಬ್ದ !' ತಾರಾಪತಿರಾಯನು ತನ್ನೆರಡು ಕೈಗಳಿಂದೆಯೂ ತಲೆಯನ್ನು ಬಿಗಿಯಾಗಿ ಹಿಡಿದು ಕುಳಿತನು. ಯಮುನೆಯು ಶಕ್ತಿಶೂನ್ಯಳಾಗಿ ಕುಳಿತುಬಿಟ್ಟಳು.

ಚಂದ್ರಮತಿ—ಕಣ್ಣೀರ್ಗರೆದು–'ತಾಯಿ ! ಮಗುವೇನಾದಳು ? ಕಳ್ಳರೆಲ್ಲಿಂದ ಬಂದರು ? ಹೇಗೆ ಕಳುವಾದಳು ? ವಿಚಾರವೇನು ? ಮೆಲ್ಲನೆ ಹೇಳಬಲ್ಲೆಯಾ ?'

ಸುನಂದೆ—ಬಲವಾಗಿ ನಿಟ್ಟುಸುರಿಟ್ಟು, ಕಷ್ಟದಿಂದ ಹೇಳತೊಡಗಿದಳು—

'ಇಲ್ಲಿಂದ ಬರಯೇಳಿ ಒರೆದಟ್ಟಿದ ಪತ್ರವು ಮೊನ್ನೆಯೇ ನನ್ನ ಕೈ ಸೇರಿತು. ಇಷ್ಟು ದಿನಗಳ ಬಳಿಕಾದರೂ ಇತ್ತ ಗಮನ ಬಂತೆಂಬ ಸಂತೋಷದಿಂದ, ನನ್ನ ತಂದೆತಾಯಿಯುವರು ಆಗಲೇ ನನ್ನನ್ನು ಕಳಿಸಲು ಒಪ್ಪಿದರು. ಆ ದಿನವೇ ಪ್ರಯಾಣಕ್ಕೆ ಬೇಕಾದ ಸನ್ನಾ

ಹವನ್ನು ಮಾಡಿಟ್ಟು, ಮರುದಿನದ ಉದಯದಲ್ಲಿಯೇ ನನ್ನನ್ನು ಮಕ್ಕಳೊಡನೆ, ಮನೆಯಲ್ಲಿ ನಂಬಿಕೆಯುವರಾಗಿದ್ದ ಆಳುಗಳನ್ನು ಜತೆಮಾಡಿ ಬೀಳ್ಕೊಟ್ಟರು. ನಾವು ಒಂದೇ ರಭಸದಿಂದ ದಾರಿಯಲ್ಲಿ ಎಲ್ಲಿಯೂ ನಿಲ್ಲದೆ ಪ್ರಯಾಣಮಾಡಿದರೂ, ಗೊಲ್ಲರ ಪಾಳ್ಯಕ್ಕೆ ಬರುವ ವೇಳೆಗೆ ಕತ್ತಲೆಯಾಯಿತು. ಗೊಲ್ಲರಪಾಳ್ಯದ ಉಕ್ಕಡದಲ್ಲಿಯೇ ಕಾದಿದ್ದ ಗ್ರಾಮದ ಹೆಗ್ಗಡೆಯೂ, ಸತ್ರದ ಪಾರುಪತ್ಯಗಾರನೂ ನಮ್ಮನ್ನು ಅಲ್ಲಿ ತಂಗಿದ್ದು, ಬೆಳಗಾದ ಬಳಿಕ ಹೋಗಬೇಕೆಂದು ಹಿಂಸಿಸಿದರು. ಆದರೆ, ನಾವದಕ್ಕೆ ಒಪ್ಪಲಿಲ್ಲವಾದುದರಿಂದ, ಊಟವನ್ನಾದರೂ ಮಾಡಿ ಹೋಗಬೇಕೆಂದು ಬಹುವಾಗಿ ಬೇಡಿದರು. ಹುಡುಗರೂ, ಆಳುಗಳೂ ಹಸಿದು ಬಳಲಿದ್ದುದರಿಂದ ಸಮ್ಮತಿಸಿ, ಅಲ್ಲಿ ಸ್ವಲ್ಪಹೊತ್ತು ನಿಂತೆವು. ಅವರಿಗೆ ಊಟವಾದ ಬಳಿಕ, ನಾನೂ ಅವರ ಬಲಾತ್ಕಾರಕ್ಕೆ ಕಟ್ಟುಬಿದ್ದು, ಅವರು ತಂದುಕೊಟ್ಟ ಹಾಲನ್ನು ಕುಡಿದೆನು. ಮತ್ತೆ ಎಲ್ಲರೂ ಪ್ರಯಾಣಮಾಡಿದೆವು. ಅಲ್ಲಿ ತೆಗೆದುಕೊಂಡ ಆಹಾರದಿಂದ ಎಲ್ಲರಿಗೂ ತೂಕಡಿಕೆಯುಂಟಾಯಿತು. ನಾನು ಮೈಮರೆತು ಮಲಗಿಬಿಟ್ಟೆನು. ಸುಮಾರು ಗೊಲ್ಲರಪಾಳ್ಯಕ್ಕೆ ನಾಲ್ಕು ಮೈಲಿಯಲ್ಲಿರುವ ಮುಳ್ಳುಮೆಳೆಯ ಚೌಕಕ್ಕೆ ಒಂಡಿಯು ಬಂದು ನಿಂತಿತು. ಆಕಸ್ಮಾತ್ತಾಗಿ ಅಲ್ಲಿ ಉಂಟಾದ ಕೋಲಾಹಲದಿಂದ ದಿಗಿಲುಬಿದ್ದ ನಾನು ಏಳಹೋದೆನು ; ಆಗಲಿಲ್ಲ. ನನ್ನ ಕೈಕಾಲುಗಳು ಹಗ್ಗಗಳಿಂದ ಬಿಗಿಯಲ್ಪಟ್ಟು ಬಂಡಿಕಿಟಿಕಿಗೆ ಕಟ್ಟಲ್ಪಟ್ಟಿದ್ದುವು. ಮಲದಂತೆಯೇ ನೋಡಿದೆನು ; ಮಕ್ಕಳಿರಲಿಲ್ಲ. ಬಂಡಿಯವನು ಗಾಯಪಟ್ಟು ಕೆಳಗೆ ಚೀರುತ್ತಿದ್ದನು. ಉಳಿದಿದ್ದ ಆಳುಗಳು ತಮ್ಮನ್ನು ಸುತ್ತಿದ್ದ ೨೦–೩೦ ಮಂದಿ ಕಳ್ಳರೊಡನೆ ಹೊಡೆದಾಡುತ್ತಿದ್ದರು. ನಾನು ಆ ಭಯಾನಕ ವ್ಯಾಪಾರವನ್ನು ನೋಡಲಾರದೆ ಮೂರ್ಛಿತೆಯಾದೆನು.'

ತಾರಾಪತಿ—ಭಯದಿಂದ 'ಆಮೇಲೆ ?'

ಸುನಂದೆ—ಮತ್ತೆ ನಾನು ಕಣ್ದೆರೆದು ನೋಡುವಷ್ಟರಲ್ಲಿ, ಕಳ್ಳರು ಓಡಿಹೋಗಿದ್ದರು. ನನ್ನ ಬಂಡಿಯಸುತ್ತಲೂ ಆಯುಧಪಾಣಿಗಳಾದ ವೀರಭಟರು ಕಾವಲಿದ್ದು, ನನಗೂ ಮತ್ತು ನಮ್ಮ ಕಡೆಯುವರಿಗೂ ಧೈರ್ಯವನ್ನುಂಟುಮಾಡುತ್ತಿದ್ದರು. ಕಾಲುಗಂಟೆಯೊಳಗಾಗಿ ತರುಣವೀರನೊಬ್ಬನು ಮೋಹನನನ್ನು ಕುದುರೆಯ ಮೇಲೇರಿಸಿಕೊಂಡುಬಂದು ಬಂಡಿಯಲ್ಲಿ ಕುಳ್ಳಿರಿಸಿ, ನನ್ನ ಕಟ್ಟನ್ನು ಬಿಚ್ಚಿ ನನ್ನನ್ನು ಕುರಿತು, 'ತಾಯಿ ! ನಿರ್ಭಯವಾಗಿರಿ. ನಿಮ್ಮ ಮಗನ ಪ್ರಾಣವನ್ನು ತೆಗೆಯುತ್ತಿದ್ದವನು ನನ್ನ ಪಿಸ್ತೂಲಿಗೆ ಬಲಿಯಾದನು ನಿಮ್ಮ ಮಗಳಿಗೆ ಪ್ರಾಣಾಪಾಯವಾಗದಂತೆ ಕರೆತಂದೊಪ್ಪಿಸುವ ಭಾರವೂ ನನ್ನದಾಗಿದೆ. ನಾನಾರೆಂಬುದನ್ನು ನೀವು ಈಗ ಕೇಳಬೇಕಾಗಿಲ್ಲ. ನಿಮ್ಮನ್ನು ನಮ್ಮ ಕಡೆಯುವರು ಜಾಗರೂಕತೆಯಲ್ಲಿ ಕರೆದುಕೊಂಡು ಹೋಗಿ, ನಿಮ್ಮ ನೆಲೆಗೆ ಬಿಟ್ಟು ಬರುವರು.' ಎಂದು ಹೇಳಿ, ನನ್ನನ್ನು ತನ್ನ ಕಡೆಯುವರೊಡನೆ ಇಲ್ಲಿಗೆ ಕಳಿಸಿದನು. ಗಾಯಪಟ್ಟವರನ್ನು ತನ್ನ ಜತೆಯಲ್ಲಿಯೇ ಕರೆದೊಯ್ದನು.

ತಾರಾಪತಿ—ಕುತೂಹಲದಿಂದ 'ಆತನಾರಿರಬಹುದು ?'

ಚಂದ್ರಮತಿ—ಯಾರಾದರೂ ಆಗಿರಲಿ. ಭಗವಂತನೇ ಅವನಾಗಿ ಬಂದಿದ್ದನೆಂದು ನಂಬಿದ್ದರಾಗದೇ ! ಹೇಗಾದರೂ, ಯಾರದಯೆಯಿಂದಾದರೂ ಮಗು ಸಿಕ್ಕಿದರೆ ಸಾಕು.

ತಾರಾಪತಿ—ದೈವೇಚ್ಛೆ ! ಮೃತ್ಯುಮುಖದಲ್ಲಿದ್ದ ಮೋಹನನನ್ನು ತಂದಿತ್ತವನೇ, ಕೈತಪ್ಪಿಹೋಗಿರುವ ಇಂದೆಯನ್ನೂ ಕರೆತರಬಹುದು. ಆದರೆ, ಆ ಭಾಗ್ಯವು ನನ್ನ ಅದೃಷ್ಟದಲ್ಲಿದೆಯೋ ; ಇಲ್ಲವೋ ?

ಯಮುನಾ—ಅಣ್ಣಾ ! ಇಂದೆಗೆ ಅಪಾಯವೇನೂ ಇಲ್ಲವೆಂಬುದು ನನಗೆ ಗೊತ್ತಿದೆ. ಪ್ರತ್ಯಕ್ಷವಾಗಿರುವ ಭಾಗ್ಯದೇವತೆಯ ಮುಂದೆ, ಹೀಗೆ

ಅಭದ್ರವನ್ನಾಡಬಾರದು. ಮಗನನ್ನು ನೋಡಿರಿ. ನಿಮ್ಮಿಬ್ಬರನ್ನೂ ನೋಡಿ ಬೆರಗಾಗಿ ಕುಳಿತಿದ್ದಾನೆ.

ತಾರಾಪತಿ—ಮಗನನ್ನು ತನ್ನೆರಡು ಕೈಗಳಿಂದೆಯೂ ಹಿಡಿದೆತ್ತಿ ತೊಡೆಯಲ್ಲಿ ಕುಳ್ಳಿರಿಸಿ, ಮುಡಿಯನ್ನು ಮೂಸುತ್ತ, ಸಂತೋಷಾತಿಶಯದಿಂದ–' ಭಗವಂತ ! ಇದೆಲ್ಲವೂ ನಿನ್ನ ಅನುಗ್ರಹ ; ಮುಂದೆಯೂ ನಿನ್ನ ಅನುಗ್ರಹದಿಂದಲೇ ಅಭ್ಯುದಯವನ್ನು ಹೊಂದಬೇಕು. ಎಂದೆಂದೂ ನಿನ್ನನುಗ್ರಹವು ಸ್ಥಿರವಾಗಿರಲಿ.' ಎಂದು ಹೇಳುತ್ತಿದ್ದನು. ಆನಂದ-ಶೋಕಸಂತಾಪಗಳ ವೇಗವು ತಕ್ಕಮಟ್ಟಿಗೆ ಶಾಂತಸ್ಥಿತಿಯನ್ನು ತಾಳಿತು. ಸುನಂದೆಯು ಅತ್ತೆಯಕಾಲನ್ನು ಹಿಡಿದು ' ಅಮ್ಮಾಯಿ ! ಅನುಗ್ರಹಮಾಡಿರಿ. ಈ ಪಾದಸೇವೆಯಿಂದ ಜನ್ಮಸಾರ್ಥಕವಾಗುವಂತೆ ಆಶಿರ್ವಾದಮಾಡಿರಿ.' ಎಂದು ಕೇಳಿಕೊಂಡಳು. ಚಂದ್ರಮತಿಗೆ ಹೊಟ್ಟೆ ಹಿಡಿಯಲಾರದಷ್ಟು ದುಃಖವಾಯಿತು. ಅಳುತಳುತ್ತ ಸೊಸೆಯನ್ನೆಬ್ಬಿಸಿ, ಬಳಿಯಲ್ಲಿ ಕುಳ್ಳಿರಿಸಿಕೊಂಡು ಹೇಳಿದಳು,–' ಎಲ್ಲವೂ ಭಗವತ್ಕೃಪೆ. ತಾಯಿ ! ಅವನೇ ನಿನಗೆ ರಕ್ಷಕನಾಗಿರುವನು , ಚಿಂತಿಸಬೇಡ.'

ಸುನಂದೆ—ಸುತ್ತಲೂನೋಡಿ ವಿಸ್ಮಯ-ಕುತೂಹಲಗಳಿಂದ ಅತ್ತೆಯನ್ನು ಕುರಿತು ' ಅಮ್ಮಾಯಿ ! ಮನೆಯ ಯಜಮಾನಿಯೆಲ್ಲಿ ? ಕಾಣುವುದಿಲ್ಲವಲ್ಲ ! '

ಚಂದ್ರಮತಿ—ಜ್ಞಾಪಿಸಿಕೊಂಡವಳಂತೆ ಸುತ್ತಲೂ ನೋಡುತ್ತ ಕೂಗಿದಳು–' ಗಂಗಾ ! ಎಲ್ಲಿರುವೆ ? '

ಏನಿದು ? ಅನ್ಯಾಯ ! ಸೋದರಿಯರೇ ! ಈವರೆಗೂ ಗಂಗೆಯ ನೆನೆವೇ ಇರಬೇಡವೇ ? ಹೇಗಾದೀತು ? ಸ್ನೇಹಮಯಿ ಸುನಂದೆಯನ್ನು ನೋಡಿ, ಆನಂದೋದ್ರೇಕದಿಂದಾಡುವ ತಾರಾನಾಥನ ಸ್ತುತಿವಚನಗಳಿಗೆ ತಲೆದೂಗಿ ಜಡರಾಗಿದ್ದವರಿಗೆ ಗಂಗೆಯ ನೆನೆವಾದರೂ ಹೇಗಾಗಬೇಕು ?

ಈಗಲೂ ಮುಳುಗಿಹೋಗಲಿಲ್ಲ. ಗಂಗೆಯೇ ಇಲ್ಲಿಗೆ ಬರುತ್ತಿರುವಳು ; ನೋಡಿರಿ. ಇವಳ ಮುಖವು ಬಾಡಿಹೋಗಿದೆ ; ಕಣ್ಣಿನಲ್ಲಿ ನೀರು ಸೋರುತ್ತಿದೆ ; ತಲೆಯು ಬಾಗಿದೆ. ಹೀಗಾದುದೇಕೆ ? ಮೊದಲಿದ್ದ ಉತ್ಸಾಹವೀಗೆಲ್ಲಿಹೋಯಿತು ? ಯಾರಿಗೆಗೊತ್ತು ? 'ಈವರೆಗೂ ಬಾರದೆ ಎಲ್ಲಿದ್ದಳು ? ಏನುಮಾಡುತ್ತಿದ್ದಳು ?' ಎಂದು ಕೇಳುವಿರಿ. ಅಂಗಳದಲ್ಲಿದ್ದೇ, ವಿಚಾರಗಳನ್ನು ನೋಡಿ-ಕೇಳಿ ತಿಳಿಯುತ್ತಿದ್ದಳೆಂದು ಮಾತ್ರ ಹೇಳಬಲ್ಲೆವು. ಬಾರದಿದ್ದುದೇಕೆಂದರೆ, ಅಬಲಾಸ್ವಭಾವದಲ್ಲಿ ಅಭಿಮಾನವೂ ಬಹುವಾಗಿರಬೇಕಲ್ಲವೇ ? ಕರೆಯಿಸಿಕೊಳ್ಳದೆ ತಾನಾಗಿಯೇ ಇವರ ಸುಖಸಲ್ಲಾಪದ ಮಧ್ಯದಲ್ಲಿ, ಹೋಗುವುದುಸರಿಯಲ್ಲವೆಂದು ನಿಂತಿದ್ದಳೆಂದರೆ ಆಕ್ಷೇಪವೇ? ಅದು ಹೇಗೂ ಇರಲಿ. ಗಂಗೆಯು ಬಂದು ಸುನಂದೆಗೆ ವಂದಿಸಿದಳು.

ಸುನಂದೆ—ಗಂಗೆಯ ಕೈಹಿಡಿದು 'ತಂಗಿ ! ಬಾ ; ಕುಳಿತುಕೊ. ಭಗವಂತನು ನಮ್ಮಿಬ್ಬರನ್ನೂ ಸಮಾನಸುಖಿಗಳನ್ನಾಗಿ ಮಾಡಿರಲಿ. ಇದೇ ನನ್ನ ಹರಕೆ.' ಎಂದು ಬಳಿಯಲ್ಲಿ ಕುಳ್ಳಿರಿಸಿಕೊಂಡಳು.

ಗಂಗೆ—ಸುನಂದೆಯಬಳಿಯಲ್ಲಿ ಕುಳಿತು, ಮೋಹನಕುಮಾರನ ಕೈಹಿಡಿದು ಕಂಪಿತಸ್ವರದಿಂದ 'ಅಕ್ಕ ! ಇಂದಿನವರೆಗೂ ಯಜಮಾನರಲ್ಲಿ ಉತ್ಸಾಹವೆಳ್ಳಷ್ಟನ್ನಾದರೂ ನಾನು ನೋಡಿರುವುದಿಲ್ಲ. ಸಾಕು ; ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಫಲವು, ಇಂದು ಕೈಸೇರಿತೆಂಬ ಒಂದು ಸಂತೋಷವೇ ನನಗೆ ಅನಂತವಾಗಿದ್ದರೆ ಸಾಕು. ಆದರೆ, ನಾನು, ಈವರೆಗೂ ಮರೆಯಾಗಿ ಕೇಳುತ್ತ, ವಿಚಾರವೆಲ್ಲವನ್ನೂ ತಿಳಿದೆನು. ಹುಡುಗಿಯು ಕೈತಪ್ಪಿಹೋಗಿರುವುದು ಶೋಚನೀಯ ಸಂಗತಿಯಾಗಿದೆ. ಅವಳೂ ಸಿಕ್ಕಿದರೆ, ನಮ್ಮ ಆನಂದಕ್ಕೆ ಮೇರೆಯೇ ಇಲ್ಲದಂತಾಗುವುದು.'

ತಾರಾಪತಿರಾಯನಿಗೆ ಗಂಗೆಯ ಹಿತವಚನಗಳಿಂದಾದ ಆತ್ಮಸಮಾಧಾನವು ಅಷ್ಟಿಷ್ಟೆಂದು ವಿವರಿಸುವಂತಿಲ್ಲ. ಈವರೆಗೂ ಇವಳ

ಬಾಯಿಂದ ಇಂತಹ ಅಮೃತತುಲ್ಯವಾದ ವಾಣಿಯು ಹೊರಬಿದ್ದುದನ್ನು ಅವನು ಕಂಡು ಕೇಳಿರಲಿಲ್ಲವಾದುದರಿಂದ, ಇಂದಿನ ಪತ್ನಿಯ ಪರಿವರ್ತನವೂ ದೈವಾಯತ್ತವೆಂದೇ ಭಾವಿಸಿ, ಪತ್ನೀದ್ವಯವನ್ನು ನೋಡಿನೋಡಿ ತಣಿಯಲಾರದವನಾಗಿದ್ದನು ಸುನಂದೆಯ ಜತೆಯಲ್ಲಿ ಬಂದಿದ್ದ ಭಟರೆಲ್ಲರೂ ಅಪ್ಪಣೆಹೊಂದಿ ಹೊರಟುಹೋದರು. ಮನೆಯಲ್ಲಿದ್ದ ದಿವಾನ-ಗೊಲ್ಲ-ಕರಣಿಕರೇ ಮೊದಲಾದವರೆಲ್ಲರೂ ಒಬ್ಬೊಬ್ಬರಾಗಿ ಬಂದು ಸುನಂದೆಯನ್ನು ಕಂಡು, ಕೈಮುಗಿದು ಕೆಲಸಗಳಿಗೆ ಹೋದರು. ಜಮೀನ್ದಾರನು ಪತ್ನೀಪುತ್ರಸಹಿತನಾಗಿ ಭೋಜನಾನಂತರದಲ್ಲಿ ಲಕ್ಷ್ಮೀನಿಲಯವನ್ನು ಪ್ರವೇಶಿಸಿದನು. ಅಂದಿನ ಸಂಭ್ರಮವನ್ನು ಹೇಳುವಂತಿರಲಿಲ್ಲ. ಆದರೆ, ಸಂಭ್ರಮಮಧ್ಯದಲ್ಲಿಯೂ ಸುನಂದೆಯು, ಪುತ್ರಿಕಾವಿರಹಸಂತಾಪವನ್ನು ತಡೆಯಲಾರದೆ ಮನದಲ್ಲಿಯೇ ಮರುಗುತ್ತಿದ್ದಳು, ಪತಿಯ ಮುಖೋಲ್ಲಾಸಕ್ಕಾಗಿ ಹೃತ್ತಾಪವನ್ನಡಗಿಸಿಕೊಂಡು ಪ್ರಸನ್ನಮುಖಿಯಾಗಿದ್ದಳು. ಇದಲ್ಲವೇ, ಸಾಧ್ವೀವರ್ತನವೆಂಬುದು ! ಹೀಗಲ್ಲವೇ ಇರಬೇಕು ? ನಮ್ಮ ಮಹಿಳಾವ್ರಾತಕ್ಕೆ ಕಾಂತಿದಾಯಕವಾದ ಭೂಷಣವಾದರೂ ಇದೇ ಅಲ್ಲವೇ ? ಅಂತಾದರೆ ಅದು ನಿರಂತರವೂ ನಮ್ಮನ್ನೆಡಬಿಡದೆ ಅಲಂಕರಿಸುತ್ತಿರಲಿ

|| ಶ್ರೀ ||

## ಚತುರ್ದಶಪರಿಚ್ಛೇದ.

(ಆಗ್ರಹ.)

ರಾವಬಹದ್ದೂರ ರಾಧಾನಾಥರಾಯನು ಚಿತ್ರಶಾಲೆ (Drawing Room) ಯಲ್ಲಿ ಕುಳಿತಿದ್ದನು. ಬಳಿ ಯಲ್ಲಿಯೇ ಉಪಾಹಾರಪಾತ್ರೆಯನ್ನು ಹಿಡಿದಿದ್ದ ಆತನ ಪತ್ನಿ ಸುಕನ್ಯಾಬಾಯಿಯು ನಿಂತಿದ್ದಳು. ಹೊತ್ತು, ಇನ್ನೂ ಮೂರು ಗಂಟೆಯಾಗಿರಲಿಲ್ಲ. ಬಹದ್ದೂರನು ಬೇಗ ಬಂದಿದ್ದನು. ಸ್ವಲ್ಪ ತಾಳಿರಿ, ಮಹನೀಯರೇ ! ಸುಖವೆಲ್ಲಿರುವುದು ? ಸಂತೋಷವಾರನ್ನು ಸೇರಿರುವುದು ? ಹೇಳಬಲ್ಲಿರೇನು ? ಸಂಪತ್ತಿನಲ್ಲಿಯೇ ಸುಖ, ಸಂತಾನದ ಲ್ಲಿಯೇ ಸಂತೋಷವೆನ್ನುವಿರೋ ? ಹೇಗೆ ? ಸಂಪದವೊಂದರಲ್ಲಿಯೇ ಸುಖ ವಿರುತ್ತಿದ್ದರೆ, ಸಂಸಾರದ ತಾಪವೇಕೆ ? ಸಂತಾನದಲ್ಲಿಯೇ ಸಂತೋಷವೆಂ ದರೆ, ಸಂತಾನವನ್ನು ಹೊಂದಿಯೂ ಅಳುತ್ತಿರುವವರೆಷ್ಟುಮಂದಿಯಿಲ್ಲ ? ಸಂಪದವೂ, ಸಂತಾನವೂ ಇಲ್ಲದೆಯೇ ಅಖಂಡಸುಖಸಾಮ್ರಾಜ್ಯವನ್ನನು ಭವಿಸಿದ ಮಹನೀಯರೆಷ್ಟುಮಂದಿಯಿಲ್ಲ ? ವಿಚಾರಮಾಡಬೇಕಲ್ಲವೇ ?

ಚ್ಯವನಮಹರ್ಷಿಯ ಸುಖಾಧಾರವಸ್ತುವಾವುದು ? ರಾಜಕನ್ಯೆ ಯಾದ ಸುಕನ್ಯೆಯ ಪಾತಿವ್ರತ್ಯವೊಂದೇ ಅಲ್ಲವೆ ? ಅವಳ ನೈಸರ್ಗಿಕ ಪ್ರೇಮವೊಂದೇ ಅಲ್ಲವೆ ಆತನನ್ನು ಸುಖಸಾಮ್ರಾಜ್ಯದಲ್ಲಿ ನಲಿದಾಡುವಂತೆ ಮಾಡಿದುದು? ಅದೇ ಅಲ್ಲವೇ ಪಿತೃಕುಲವನ್ನುದ್ಧರಿಸಿದುದು ? ಅದೇ ಅಲ್ಲವೇ ಪತಿಯನ್ನು ನಿತ್ಯಯೌವನಸಂಪನ್ನನಾಗಿ ಮಾಡಿದುದು ? ಅಶ್ವಿನಿ ದೇವತೆ ಗಳಿಗೆ ಹವಿರ್ಭಾಗವನ್ನು ಸಲ್ಲಿಸುವಂತೆ ಮಾಡಿದುದು ? ಮತ್ತೂ ಹೇಳ ಬೇಕೇ ? ಅನುಕೂಲವತಿಯಾದ ಸತಿಯಿಂದೆಯೇ ಸಮಸ್ತ ಪುರುಷಾರ್ಥ

ಗಳೂ ಸಾಧ್ಯವಾಗುವುವೆಂದು ತಿಳಿಯಲಿಲ್ಲವೋ ? ಪತಿರಾಜನು ದುಡಿದು ತಂದುದನ್ನು ಅಲ್ಪವೆಂದಲ್ಲಗಳೆಯದೆ, ಪೂರ್ಣಶ್ರದ್ಧೆಯಿಂದ ಕಾಲವರಿತು ಉಚಿತರೀತಿಯಲ್ಲಿ ಉಪಯೋಗಿಸುವ ಸತಿಯಿದ್ದರೆ, ಆತನ ಸಂಸಾರದಲ್ಲಿ ತಾಪವೆಲ್ಲಿರುವುದು ? ಆಯಾಸದಿಂದ ಜಡನಾಗಿರುವ ಪತಿಯನ್ನು ಸುಮನೋಹರವಾಣಿಯಿಂದ ಸಂತಯಿಸಿ ಸೇವಿಸುವ ಸತಿಯುದ್ದರೆ, ಆತನ ಸುಖಕ್ಕೆ ಕೊರತೆಯೆಂತಹುದು ? ಪತಿರಾಜನು ಗುರುದೈವಭಕ್ತನಾಗಿರಲು, ನಿರ್ಮಲಾಂತಃಕರಣದಿಂದ ಆತನಿಗೆ ಸಹಕಾರಿಣಿಯಾಗಿರುವ ಸತಿಯಿದ್ದರೆ, ಆತನ ಆತ್ಮಸಂತೋಷಕ್ಕೆ ಅಂತವಾದರೂ ಇರುವುದೋ ?

ಹಾಗಾದರೆ, ಸೋದರಿಯರೇ ! ನಮ್ಮಲ್ಲಿ ಎಷ್ಟುಮಂದಿ ಸುಕನ್ಯೆಯರಿರಬಹುದು ? ವಿಚಾರಮಾಡಿ ಹೇಳಿರಿ. ಅಭಿಮಾನವನ್ನುಳಿದು, ಆತ್ಮಸಾಕ್ಷಿಯಾಗಿ ತನ್ನರಸನಿಗೆ ಸಹಚಾರಿಣಿಯಾಗಿರುವ ಕೋಮಲಾಂತಃಕರಣೆಯರು, ನಮ್ಮವರಲ್ಲಿ, ಎಷ್ಟುಮಂದಿಯಿರಬಹುದು ? ನಮ್ಮ ನಮ್ಮಲ್ಲಿಯೇ ವಿಚಾರಮಾಡಿ, ತಿಳಿದುಕೊಳ್ಳುವುದು ಮೇಲಲ್ಲವೆ ?

ಸ್ಥೂಲವಾಗಿ ನೋಡಿದರೆ, ನಮ್ಮಾ ಸ್ತ್ರೀವರ್ಗವನ್ನು ದುರಭಿಮಾನ, ಮಾತ್ಸರ್ಯಾದಿ ರೋಗಗಳು ಮುತ್ತಿ, ಅಪವಾದಗ್ರಸ್ತೆಯರನ್ನಾಗಿ ಮಾಡುತ್ತಿರುವುದೆಂದು ತಿಳಿಯುತ್ತಿದೆ. ಆದರೂ, ನಮ್ಮ ಸುಕನ್ಯಾದೇವಿಯಂತಹ ಮಹಿಳೆಯರ ತಪೋಜ್ವಾಲೆಯಿಂದ, ಇನ್ನೂ ನಮ್ಮವರು ಸಂಪೂರ್ಣವಾಗಿ ಅದರ ಬಾಯಿಗೆ ತುತ್ತಾಗುವಂತಿಲ್ಲ. ಈಗಲೇ ನಮ್ಮವರಲ್ಲಿ ಪ್ರತಿಯೊಬ್ಬರೂ ಒಬ್ಬೊಬ್ಬ ಸುಕನ್ಯೆಯಾಗಿ ನಿಂತರೆ, ಆ ಭೀಕರರೋಗಗಳಿಗೆ ಅರಣ್ಯವಾಸವೇ ಗತಿಯಾಗಬೇಕಾದೀತು ! ಆದುದರಿಂದ, ನಾವೆಲ್ಲರೂ ಈಗೀಗಲೇ ಎಚ್ಚೆತ್ತುಕೊಂಡು, ನಮ್ಮ ಧರ್ಮರಾಜ್ಯದಲ್ಲಿ ನೆಲೆಯಾಗಿ ನಿಂತು, ಸುಖ-ಸಮಾಧಾನಗಳನ್ನು ಸೂರೆಗೊಳ್ಳುವುದು ಮುಖ್ಯವಾಗಿದೆ.

ಸದ್ಯಸ್ಥಿತಿಯಲ್ಲಿ, ವಿದ್ಯಾ, ಬುದ್ಧಿ, ವಿನಯ, ವಿತರಣೆ, ದಕ್ಷತೆ ಮೊದಲಾದ ಸಮಸ್ತ ವಿಚಾರಗಳಲ್ಲಿಯೂ, ರಾಧಾನಾಥ ರಾವಬಹದ್ದೂರ

ನಿಗೆ ಅನುಗುಣೆಯಾಗಿರುವ ಸುಕನ್ಯಾಬಾಯಿಯೊಬ್ಬಳು, ನಮ್ಮ ಸತೀಜೀವನಕ್ಕೆ ಪರಮಾದರ್ಶಳಾಗಿರುವಳು. ಸುಕನ್ಯಾಸಹಚರ್ಯೆಯಿಂದೆಯೇ ರಾಧಾನಾಥನು ಸಂತಾನವಿಲ್ಲದಿದ್ದರೂ, ಪರಮಸುಖಿಯಾಗಿಯೇ ಇರುವನು. ಈತನು ಯಾವುದೇ ಒಂದು ಕಾರ್ಯವನ್ನು ಮಾಡುವಾಗಲೂ, ಪತ್ನಿಯ ಪರಾಮರ್ಶವನ್ನು ತೆಗೆದುಕೊಳ್ಳದೆ ಮಾಡುವವನಲ್ಲ. ಈ ದಿನವೂ ಯಾವುದನ್ನೋ ಕೇಳಿ ಹೇಳಬೇಕೆಂದೇ ನ್ಯಾಯಸ್ಥಾನದ ಕಾರ್ಯವನ್ನು ಬೇಗ ಮುಗಿಯಿಸಿ ಬಂದು ಇಲ್ಲಿ ಕುಳಿತಿರುವನು. ಸುಕನ್ಯೆಯೂ ಪತಿಯಿಂಗಿತವರಿತು, ಪತಿಯ ಬಳಿಯಲ್ಲಿ ನಿಂತು, ಆಲೋಚನೆಗೆ ಅನುವಾಗಿರುವಳು ಸೋದರಿಯರೇ ! ಅಡಿಗಡಿಗೂ ಅವಾವುದೋ ಅರಣ್ಯರೋದನಗಳನ್ನೆತ್ತಿ ಕಾಲಕಳೆವೆವೆಂದು ಬೇಸರಿಸಬಾರದು. ಯುಕ್ತವಿಚಾರದಲ್ಲಿ, ಅವಶ್ಯವಿಷಯಗಳನ್ನು ಸವಿಸ್ತರವಾಗಿ ವರ್ಣಿಸುವುದೇ ಈ ಲೇಖಿನಿಗೆ ಕರ್ತವ್ಯವೆನ್ನಿಸಿದೆ; ಕ್ಷಮೆಯಿರಲಿ.

ರಾಧಾನಾಥರಾವ್ ಬಹದ್ದೂರನು ಪತ್ನಿಯ ಕಯ್ಯಲ್ಲಿದ್ದ ಹಣ್ಣು ಮತ್ತು ಟೀ ಕಷಾಯಗಳನ್ನು ತೆಗೆದು ಮೇಜಿನ ಮೇಲಿಟ್ಟು, ಪತ್ನಿಯೊಡನೆ ವಿನೋದಸಂಭಾಷಣೆಯನ್ನು ಬೆಳೆಯಿಸುತ್ತ, ಮೆಲ್ಲಮೆಲ್ಲನೆ ಫಲಾಹಾರವನ್ನು ತೆಗೆದುಕೊಳ್ಳುತ್ತಿದ್ದನು. ಸುಕನ್ಯೆಯೂ ಪತಿಯ ಮಾತನ್ನು ವಿಾರಲಾರದೆ, ಆತನಿತ್ತುದನ್ನು ಮೆಲ್ಲುತ್ತ, ಸವಿನುಡಿಯಿಂದ ನಲವೇರಿಸುತ್ತಿದ್ದಳು. ಸಂಭಾಷಣೆಯ ನಡುವೆ, ಜಮಿೀನ್ದಾರನ ಮನೆಯ ವಿಚಾರವೂ ಹೊರಟಿತು. ಸುಕನ್ಯೆಯು ಪತಿಯನ್ನು ಕುರಿತು ಕುತೂಹಲದಿಂದ ಕೇಳಿದಳು–' ಪ್ರಾಣೇಶ್ವರ ! ಬಾಲ್ಯಸಖಿ–ಸುನಂದಾಬಾಯಿಯು ಬಂದುದನ್ನು ಕೇಳಿ, ಮನಸ್ಸಿಗೆ ಆನಂದವು ಉಕ್ಕೇರಿಬರುತ್ತಿದೆ. ಆದರೆ, ವಿಂದೆಯು ಕಳುವಾದಳೆಂಬ ಭಯಂಕರ ವರ್ತಮಾನದಿಂದ, ಮನಸ್ಸು ತಲ್ಲಣಿಸುತ್ತಿದೆ. ' ಶೋಕಾರ್ತೆಯಾದವಳನ್ನು ಹೇಗೆ ನೋಡಿ ನುಡಿಯಿಸಲಿ ? ' ಎಂಬ ವಿಚಾರದಿಂದಲೇ ಕಾಲಕಳೆಯುತ್ತಿರುವೆನು.'

ರಾಧಾನಾಥ—ಇಂತಹ ಸಂಕಟಕಾಲದಲ್ಲಿ, ತಕ್ಕಷ್ಟು ಹಿತವನ್ನಾಡಿ ಸಂತಯಿಸುವುದೇ ಸ್ನೇಹದ ಲಕ್ಷಣವು ; ಹಿಂತೆಗೆದು ಸುಮ್ಮನಿರುವುದು ನಿಜವಾದ ಸ್ನೇಹವೆನ್ನಿಸದು.

ಸುಕನ್ಯಾ—ಹಾಗಾದರೆ, ಇಷ್ಟರಲ್ಲಿಯೇ ವಿರಾಮಹೊಂದಿ, ಹೋಗಿ ನೋಡಿ ಬರುವೆನು. ಇರಲಿ; ಈಚೆಗೆ ವಿಂದೆಯ ವರ್ತಮಾನವೇನಾದರೂ ಬಂದಿದೆಯೇ ? ಸಮಾಚಾರವೇನು ?

ರಾಧಾನಾಥ—ಇನ್ನೂ ಯಾವ ವಿಚಾರವೂ ಬಂದಿಲ್ಲ. ವಿಚಾರಿಸಬೇಕೆಂದೇ ಇಂದು ಬೇಗ ಬಂದೆನು.

ಸುಕನ್ಯಾ—ಈ ಪಟ್ಟಣದಲ್ಲಿ ಅಲ್ಲಲ್ಲಿ ನಡೆಯುತ್ತಿದ್ದ ಪುಂಡಾಟಗಳೆಲ್ಲವೂ ಒಂದುಗೂಡಿ, ಜಮೀನ್ದಾರರ ಮನೆಯ ಮೇಲೆ ತಿರುಗಿಬಿದ್ದಿರುವಂತೆ ತೋರುತ್ತಿದೆ. ಇದರ ಪರಿಣಾಮವು ಹೇಗಾಗುವುದೋ ತಿಳಿಯದು.

ರಾಧಾನಾಥ—ಮಾಡುವುದೇನು ? ಪುಂಡಾಟವನ್ನಡಗಿಸಿ, ನಮ್ಮದಿಯನ್ನು ಕಾಪಾಡಲಿಕ್ಕೆಂದೇ ನೇಮಿಸಲ್ಪಟ್ಟಿರುವ ನಮ್ಮ ವಾಸುದೇವನು, ಇಷ್ಟು ಅನರ್ಥವಾಗಿದ್ದರೂ ಸುಮ್ಮನಿರುವುದನ್ನು ನೋಡಿದರೆ, ಸಂಶಯವಾಗುತ್ತಿದೆ.

ಸುಕನ್ಯಾ—ನಮ್ಮ ವಾಸುದೇವನ ನಡತೆಯು ನನಗೆ ತೃಪ್ತಿಕರವಾಗಿಲ್ಲ. ಈಗ ಪಳೆಂಟು ದಿನಗಳಿಂದ ಅವನ ಮುಖವೇ ವಿಕಾರವಾಗಿ ಕಾಣುತ್ತಿದೆ ; ಅವನ ಬಾಯಿಂದ ಹೊರಡುವ ಪ್ರತಿಮಾತುಗಳೂ, ಪೂರ್ವಾಪರ ವಿರುದ್ಧಗಳಾಗಿಯೇ ತೋರುತ್ತಿವೆ. ಈಗ ಅವನು ನಿಸ್ಪೃಹನಾಗಿಲ್ಲವೆಂಬುದನ್ನು ಆತನ ನಡೆ-ನುಡಿ-ನೋಟಗಳಿಂದ ಚೆನ್ನಾಗಿ ತಿಳಿಯಬಹುದು. ಈಚೆಗೆ, ಅವನು ದುಸ್ಸಹವಾಸದಲ್ಲಿ ಸೇರಿ ಕೆಡುತ್ತಿರುವನೆಂಬುದೇ ನನ್ನ ಭಾವನೆಯಾಗಿದೆ. ಅದಲ್ಲದೆ, ಮೊನ್ನೆಯ ರಾತ್ರಿ ಹೊರಟುಹೋದವನು, ಇನ್ನೂ ಮನೆಗೆ

ಬಂದಿಲ್ಲ. ಇದನ್ನು ಚೆನ್ನಾಗಿ ಪರಿಶೀಲಿಸಿದ ಬಳಿಕ, ನಿಮ್ಮಲ್ಲಿ ಹೇಳ ಬೇಕೆಂದು ಸುಮ್ಮನಿದ್ದೆನು.

ರಾಧಾನಾಥ—ಅಹುದಹುದು! ಈಗ ನಮಗಾಗಿರುವ ಸಂಶಯವೂ ಇದೇ! ಆದರೆ, ನಿನ್ನ ತಮ್ಮನ ದೋಷಗಳನ್ನು ನಿನ್ನಲ್ಲಿಯೇ ಹೇಳ ಬಾರದೆಂದು ಸುಮ್ಮನಿದ್ದೆನು.

ಸುಕನ್ಯಾ—ತಮ್ಮಲ್ಲಿ ಈ ಭೇದಭಾವನೆಗೆ ಕಾರಣವಾದರೂ ಯಾವುದು? ನನ್ನ ಚಿತ್ತವೃತ್ತಿಯು ತಮ್ಮ ಚಿತ್ತವೃತ್ತಿಗೆ ಭೇದಿಸಿದ್ದರೆ, ನಮ್ಮ ದಾಂಪತ್ಯಕ್ಕೆ ಫಲವೇನಾದ ಹಾಗಾಯಿತು? ಈ ಬಗೆಯ ಲೋಭ ಮೋಹಗಳಿಗೆ ನಾನು ಅಧೀನಳಾಗುವ ಪಕ್ಷದಲ್ಲಿ, ನ್ಯಾಯ ಮೂರ್ತಿಯಾಗಿರುವ ನಿಮಗೆ, ನಾನು ಸಹಧರ್ಮಿಣಿಯೆನ್ನಿಸಬಲ್ಲೆನೆ? ಇನ್ನುಮುಂದೆ ಈ ಬಗೆಯ ಸಂಶಯವನ್ನು ಬಿಟ್ಟುಕೊಟ್ಟು, ನನ್ನಲ್ಲಿ ಭರವಸೆಯಿಡಬೇಕು. ಇದನ್ನು ನಾನು ಇಷ್ಟಕ್ಕೆ ಬಿಡುವೆ ನೆಂದು ತಿಳಿಯಬಾರದು. ಧರ್ಮವನ್ನು ತಪ್ಪಿದವರು, ಹೊಟ್ಟೆ ಯಲ್ಲಿ ಹುಟ್ಟಿದ ಮಕ್ಕಳಾಗಿರಲಿ, ಒಡಹುಟ್ಟಿದವರಾಗಿರಲಿ, ಕಡೆಗೆ ಹೆತ್ತ ತಂದೆತಾಯಿಯರೇ ಆಗಿರಲಿ-ಯಾರಾಗಿದ್ದರೂ ಅವರು ತ್ಯಾಜ್ಯರೇ ಸರಿ. ಅಂತವರಲ್ಲಿ ಅನುಕಂಪವು ಹೇಗೂ ಸಲ್ಲದು. ಅದು ಹಾಗಿರಲಿ; ವಿಧರ್ಮಿಗಳ ಸೊಕ್ಕನ್ನು ಮುರಿಯುವುದರಲ್ಲಿ ನಿಸ್ಸೀಮನೆನ್ನಿಸಿರುವ ನಮ್ಮ ಕುಮಾರನಿಗೇಕೆ ಇದನ್ನು ತಿಳಿಸಿಲ್ಲ?

ರಾಧಾನಾಥ—ಅವನಿಗೆ ತಿಳಿಯದುದಲ್ಲ. ಅವನೇ ಇಲ್ಲಿಗೆ ಈಗ ನಾಲ್ಕು ದಿನಗಳ ಕೆಳಗೆ ಬಂದಿದ್ದು, ಜಮೀನ್ದಾರರನ್ನು ಕಂಡು, ಸುನಂ ದೆಯ ಜೀವಿತವೃತ್ತಾಂತವನ್ನು ಹೇಳಿ ಹೋದನು.

ಸುಕನ್ಯಾ—ಆತುರದಿಂದ-'ಏನು? ಇಲ್ಲಿಗೆ ಬಂದಿದ್ದನೇ? ನನ್ನನ್ನೇಕೆ ನೋಡಲಿಲ್ಲ?'

ರಾಧಾನಾಥ—ತಾನೊಂದು ಮಹಾಕಾರ್ಯಸಾಧನೆಗಾಗಿ ರಹಸ್ಯಮಾರ್ಗ ದಲ್ಲಿ ಬಂದಿರುವುದರಿಂದ, ಈಗ ಎಲ್ಲಿಗೂ ಬರಲಾಗದೆಂದು ಹೇಳಿ, ನ್ಯಾಯಸ್ಥಾನದ ಗುಪ್ತಗೃಹದಲ್ಲಿಯೇ ಇದ್ದು, ಬಂದಿದ್ದ ಕೆಲಸ ವನ್ನು ನೆರವೇರಿಸಿಕೊಂಡು ತೆರಳಿದನು.

ಸುಕನ್ಯಾ—ಹೋಗಲಿ ; ಈ ವಿಷಯದಲ್ಲಿ ಅವನೇನೆಂದನು ?

ರಾಧಾನಾಥ—ಶ್ರೀನಗರದ ಸುತ್ತಮುತ್ತಲ ಹಳ್ಳಿಗಳಲ್ಲಿ ರೈತರು ದಂಗೆ ಯೇಳುತ್ತಿರುವ ಕಾರಣ, ಅವರ ಧಾಂದಳಿಯನ್ನಡಗಿಸಬೇಕೆಂದು, ಸರ್ಕಾರದವರು ಆತನಿಗೆ ಇನ್ನೂರುಮಂದಿ ಭಟರುಳ್ಳ ಒಂದು ಸಣ್ಣ ದಳವನ್ನು ವಶಪಡಿಸಿರುವರಂತೆ. ಅವರ ರಂಧ್ರಾನ್ವೇಷಣ ದಲ್ಲಿರುವ ತಾನು, ಕಾರ್ಯಸಾಧನೆಯಾಗುವ ವರೆಗೂ ತನ್ನ ನೆಲೆಯ ನ್ನಾರಿಗೂ ತೋರಿಸಲಾರನಂತೆ ! ಮಾಡುವುದೇನು ?

ಸತಿಪತಿಯರ ಸಂಭಾಷಣದ ಮಧ್ಯದಲ್ಲಿಯೇ ಹೊರಗೆ ಕಾವ ಲಿದ್ದ ರೈವಾನನು ಬಂದು ವಿನಯದಿಂದ–' ಪೋಲೀಸು ಇನ್‌ಸ್ಪೆಕ್ಟರ್ ದಳ ವಾಯಿಸಿಂಗರವರು ಬಂದಿರುವರು. ' ಎಂದು ತಿಳಿಸಿದನು. ಬಹದ್ದೂರನು ಥಟ್ಟನೆದ್ದು ಹೊರಗೆಬಂದು, ವಾಚನಶಾಲೆಯ ಬಳಿಯಲ್ಲಿ ನಿಂತಿದ್ದ ದಳ ವಾಯಿಸಿಂಗನ ಕೈಹಿಡಿದು, ವಾಚನಶಾಲೆಯೊಳಹೊಕ್ಕು ಆತನೊಡನೆ ಕುಳಿತು, ಸ್ನೇಹಭಾವದಿಂದ ಕೇಳಿದನು–' ಪ್ರಿಯಮಿತ್ರ ! ಇಂದಿನ ವಿಶೇ ಷವೇನು ? ನಿನ್ನ ಮುಖಭಾವವೇನೋ ಹೊಸಸುದ್ದಿಯನ್ನು ತಂದಿರುವಂತೆ ಹೇಳುತ್ತಿದೆಯಲ್ಲ ? '

ದಳವಾಯಿ—' ಹೊಸಸುದ್ದಿಯೇ ಅಹುದು. ಏನೆಂಬುದನ್ನು ಈ ನೋಟೀ ಸಿನಿಂದಲೇ ತಿಳಿಯಬಹುದು ! ' ಎಂದು ಅಂಗಿಯ ಕಿಸೆಯಲ್ಲಿದ್ದ ಕಾಗದವೊಂದನ್ನು ತೆಗೆದು ಬಹದ್ದೂರನ ಕೈಗಿತ್ತನು.

ಬಹದ್ದೂರ—ಕಾಗದವನ್ನು ಮೂರುನಾಲ್ಕುಬಾರಿ ತಿರುತಿರುಗಿಸಿನೋಡಿ. ಮತ್ತೆ ದಳವಾಯಿಸಿಂಗನ ಕೈಯಲ್ಲಿಯೇ ಇರಿಸಿ–' ಅಯ್ಯಾ ! ಈಗ

ನಾನು ಜಡನಂತಾಗಿ ಹೋಗಿರುವೆನು. ಇದರ ಅರ್ಥವನ್ನು ಗ್ರಹಿಸಲಿಕ್ಕಾದರೂ ನನ್ನ ಮಿದುಳಿಗೆ ರಸವಿಲ್ಲವೆಂದು ಕಾಣುತ್ತಿದೆ. ನೀನೇ ಓದಿಹೇಳಿದರೆ, ತಿಳಿದುಕೊಳ್ಳುವೆನು.'

ದಳವಾಯಿ—ಆಗಬಹುದೆಂದು ಕಾಗದವನ್ನು ತೆಗೆದುಕೊಂಡು, ಕೆಳಗೆ ವಿವರಿಸುವಂತೆ ಓದಿದನು: —' ನಮ್ಮನ್ನು ಕಂಡುಹಿಡಿಯಬೇಕೆಂದು ಮಹಾಪ್ರಯತ್ನದಲ್ಲಿರುವ ಸರ್ಕಾರದವರ ಕಣ್ಣಿಗೆ ಮಣ್ಣೆರಚಿ, ಉದ್ದೇಶಕ್ಕೊಳಪಟ್ಟ ಜೀವರತ್ನವನ್ನು ಅಪಹರಿಸಿದೆವು. ಇನ್ನೂ ಉಳಿದಿರುವ ಸಂಕಲ್ಪವನ್ನಾದರೂ ಈಡೇರಿಸಿಕೊಳ್ಳದಿರಲಾರೆವು. ನಮ್ಮನ್ನು ಹಿಡಿಯಬೇಕೆಂದು ಮಾಡುವ ಕಾರ್ಯಗಳಾವುವೂ ನಮಗೆ ಗಣನಾರ್ಹವಾಗಿಲ್ಲವೆಂದೂ, ಸಿಂಹ ಶಾರ್ದೂಲಾದಿ ಕ್ರೂರಮೃಗ ಸಂಕೀರ್ಣವಾದ ನಮ್ಮ ದುರ್ಗಮೂಲವನ್ನು ಕಂಡುಹಿಡಿಯಬೇಕೆಂಬ ದುರಾಶೆಯು, ಈ ಕಲ್ಪದಲ್ಲಿ ಫಲಕಾರಿಯಾಗದೆಂದೂ ಇದರಿಂದ ಚೆನ್ನಾಗಿ ತಿಳಿದಿರಲಿ!'

ಬಹದ್ದೂರ—ಖತಿಯಿಂದ ' ಅಯ್ಯಾ! ನಮ್ಮ ಪ್ರಯತ್ನವು ಹೆಚ್ಚಿದಂತೆಲ್ಲಾ ಅವರ ಪುಂಡಾಟವೂ ಹೆಚ್ಚುತ್ತಿದೆಯೆಂದರೆ, ಹೇಳಿ ಕೇಳುವುದೇನು ?

ದಳವಾಯಿ—ರಾವಬಹದ್ದೂರ್! ಪ್ರಜೆಗಳ ಸುಖ, ಮಾನ, ಧನಗಳನ್ನು ಕಾಪಾಡುವುದಕ್ಕಾಗಿ ಗೊತ್ತಾಗಿರುವವರೇ ವಿಚಾರಶೂನ್ಯತೆಯಿಂದ ದುರಾಶೆಯಲ್ಲಿ ಬಿದ್ದರೆ, ಹೇಗಾಗಬೇಕು ?

ಬಹದ್ದೂರ—ಆತುರದಿಂದ,–' ಏಕೆ ? ಪೋಲೀಸು ಇಲಾಖೆಯವರ ಕೆಲಸಗಳು ತೃಪ್ತಿಕರವಾಗಿಲ್ಲವೆ ?

ದಳವಾಯಿ—ಇಲಾಖೆಯನ್ನೇ ನಿಂದಿಸುವಂತಿಲ್ಲವಾದರೂ, ಕ್ಷುದ್ರಜನರ ದ್ರೋಹಚಿಂತನೆಗಳಿಂದ ಅಪವಾದವೇನೋ ತಪ್ಪುವಂತಿಲ್ಲ.

ಬಹದ್ದೂರ—ಹಾಗೆಂದರೆ, ಅಭಿಪ್ರಾಯವೇನು ?

ದಳವಾಯಿ—ಮತ್ತೇನೂ ಅಲ್ಲ; ನಿಮ್ಮ ಮೈದುನರ ಕೈ ಕೆಳಗಿನವರನ್ನು ಕುರಿತು ಹೇಳುವ ಮಾತು.

ಬಹದ್ದೂರ—ನಿಜ; ನನಗೂ ಅದೇ ಸಂಶಯವಾಗಿದೆ. ಆದರೆ, ಈಗಲೇ ಅವರನ್ನು ಕೆಲಸದಿಂದ ಬಿಡಿಸಿ, ಬೇರೆಯವರನ್ನು ಗೊತ್ತುಮಾಡ ಬಾರದೋ?

ದಳವಾಯಿ—ಹೇಗಾದೀತು? ಸಕಾರಣವಾಗಿ ಕೆಲಸಮಾಡಬೇಕಲ್ಲದೆ, ಕಾರಣವಿಲ್ಲದೆ ಮಾಡಬಾರದು. ಈಗವರ ತಪ್ಪಿತವೇನೆಂಬುದೇ ಹೊರಪಡುವಂತಿಲ್ಲವಾದುದರಿಂದ, ಆ ಮಾತನ್ನು ಎತ್ತುವುದೂ ಸರಿಯಾಗಿಲ್ಲ. ಹಾಗೂ ಒಂದುವೇಳೆ, ಇವರನ್ನು ಕೆಲಸದಿಂದ ಬಿಡಿಸಿದೆವಾದರೆ, ಅವರ ಅತ್ಯಾಚಾರಕ್ಕೆ ಅನುಕೂಲವೇ ಆಗುವುದ ರಲ್ಲಿ ಸಂಶಯವಿಲ್ಲ.

ಬಹದ್ದೂರ—ನಿಜ! ಸ್ವಚ್ಛಂದಗಾಮಿಗಳನ್ನು ತಕ್ಕಷ್ಟು ಬಂಧನದಲ್ಲಿರಿಸ ಬೇಕಾದುದು ಅಗತ್ಯವೇ. ಆದರೆ, ಈಗ ನಾವೇನನ್ನು ಮಾಡ ಬಹುದು?

ದಳವಾಯಿ—ವಿದ್ರೋಹಿಗಳನ್ನು ದುರ್ಗಸಹಿತವಾಗಿ ಹಿಡಿಯಲು ಪ್ರಯ ತ್ನಪಡಬೇಕು.

ಬಹದ್ದೂರ—ಅಹುದು; ಆದರೆ, ಅಂತಹ ಸಾಹಸಪರನಾದ ಚಾಣಾಕ್ಷ ನೊಬ್ಬನಾಗಬೇಕಷ್ಟೆ?

ದಳವಾಯಿ—ಕಿರುನಗೆಯಿಂದ 'ಚಾಣಾಕ್ಷನು ಗೋಚರನಾಗಿಯೇ ಇರುವನು. ನಾವು ಹೇಳದೆಯೇ ಈ ಕೆಲಸವನ್ನು ಮಾಡಲು, ಅವನು ಸಂಕಲ್ಪಿಸಿರಬಹುದೆಂದೂ ಹೇಳಬಲ್ಲೆನು.'

ದಳವಾಯಿಸಿಂಗನ ಮಾತು ಮುಗಿಯುವುದರೊಳಗಾಗಿಯೇ ಬಾಡಿದ ಮುಖದಿಂದ ನಿಟ್ಟುಸಿರಿಡುತ್ತಿದ್ದ ಜಮಾದಾರ ವಾಸುದೇವ ರಾಯನು (ಈತನೇ ನಮ್ಮ ಪಾಠಕರಿಗೆ ಪೂರ್ವಪರಿಚಿತನಾದ ತರು

ಣನು) ಮನೆಗೆ ಬಂದುದನ್ನು ತಿಳಿದ ರಾವ್‌ಬಹದ್ದೂರನು ಕಿರು ನಗೆಯಿಂದ, ‘ ವಾಸುದೇವಾ ! ಇತ್ತ ಬಾ. ’ ಎಂದು ಕೂಗಿದನು. ವಾಸುದೇವನು ಬಹದ್ದೂರನ ಕೂಗಿಗೆ ಮತ್ತೂ ವಿವರ್ಣನಾಗಿ ನಡುಗಿದನು ; ಆದರೂ, ಅನಿವಾರ್ಯಹಕ್ಕಾಗಿ ಬಂದು ತಲೆಬಾಗಿ ನಿಂತನು.

ಸುಹೃದರೇ !

ಸಹವಾಸದ ಬಲವಾದರೂ ಎಂತಹುದು ? ಸತ್ಯ, ಧರ್ಮ, ದಯೆ, ಭಕ್ತಿ, ಶ್ರದ್ಧೆಗಳಿಂದ ಅಭ್ಯುದಿತನಾಗುತ್ತಿದ್ದ ಈ ತರುಣ ವಿದ್ಯಾವಂತನು, ದುಸ್ಸಹವಾಸ ಬಲದಿಂದ, ಎಷ್ಟು ಬೇಗ ಈಯವಸ್ಥೆಗೆ ಗುರಿಯಾದನು ! ಇನ್ನಿವನು ಸನ್ಮಾರ್ಗವನ್ನು ಹಿಡಿಯಬೇಕೆಂದರೆ ಸಾಧ್ಯವೆ ? ವಿದ್ಯಾವಿನಯಾದಿಗಳಿಂದ ಕಾಂತಿಪೂರ್ಣವಾಗಿದ್ದ ಈತನ ಮುಖವು ಈ ಬಗೆಯಲ್ಲಿ ಕಪ್ಪಾಗಿ ಹೋಗಿರುವುದನ್ನು ನೋಡಿ, ಯಾರಿಂದ ಸಹಿಸಲಾದೀತು ? ರಾವ್‌ಬಹದ್ದೂರನ ಇದಿರಿಗೆ ನಿಂತಿರುವ ಈತನನ್ನು ನೋಡಿದರೆ, ನ್ಯಾಯಾಧೀಶನಮುಂದೆ ನಿಲ್ಲಿಸಲ್ಪಟ್ಟ ಅಪರಾಧಿಯು ಮರಣದಂಡನೆಗೆ ಗುರಿಯಾಗುವ ವೇಳೆಯಲ್ಲಿ, ಅವನ ಮುಖವು ಹೇಗಾಗುವುದೋ ಹಾಗೆಯೇ ಇವನಿಗೂ ಆಗುವಂತೆ ಕಾಣುತ್ತಿದೆ ! ಹೀಗಾದುದೇತರಿಂದ ? ಇವನ ದುರಾಶೆಯ ಫಲದಿಂದಲ್ಲವೆ ! ಹಾಗಾದರೆ, ಕರ್ಮಫಲವನ್ನು ಅನುಭವಿಸಲೇಬೇಕು. ಆ ಕರ್ಮವು ನಮಗೆ ಮಾತ್ರ ಎಚ್ಚರವನ್ನುಂಟುಮಾಡುತ್ತಿರಲಿ.

ಬಹದ್ದೂರ—ವಾಸುದೇವ ! ಈಗ ನಾಲ್ಕಾರು ದಿನಗಳಿಂದ ನೀನು ಕಾಣಿಸಿಕೊಳ್ಳಲಿಲ್ಲವೇಕೆ ?

ವಾಸುದೇವ—ಈಗ ಒಂದು ವಾರದ ಕೆಳಗೆ ಇನ್‌ಸ್ಪೆಕ್ಟರು, ದಂಗೆಕೋರರನ್ನು ಕಂಡುಹಿಡಿಯಬೇಕೆಂದು ಕಟ್ಟುಮಾಡಿದರು. ಅದು ನನ್ನ ಪಾಲಿಗೆ ಬಂದ ಕೆಲಸವಾದುದರಿಂದ, ಅದರಲ್ಲಿ ನಿರತನಾಗಿದ್ದೆನು.

ಬಹದ್ದೂರ—ಹಾಗಾದರೆ, ಏಷ್ಟುಮಂದಿಯನ್ನು ಹಿಡಿದಿರುವೆ ?

ವಾಸುದೇವ—ಇನ್ನೂ ಸಿಕ್ಕಿರುವುದಿಲ್ಲ ; ಸಿಕ್ಕುವ ಸ್ಥಿತಿಯಲ್ಲೂ ಇಲ್ಲ.

ಬಹದ್ದೂರ—ಮೊನ್ನೆಯಿಂದ ಮನೆಗೇಕೆ ಬರಲಿಲ್ಲ ?

ವಾಸುದೇವ—ಮೊನ್ನೆಯ ಸಾಯಂಕಾಲ ಪೊಲೀಸುಠಾಣಕ್ಕೆ (Police Station) ಹೋಗಿದ್ದ ವೇಳೆಯಲ್ಲಿ ಗೊಲ್ಲರ ಪಾಳ್ಯದಬಳಿ, ಕೊಲೆ ಸುಲಿಗೆಗಳಾದುವೆಂದು ವರ್ತಮಾನಬರಲು, ಅಲ್ಲಿಗೆ ಹೋಗಿದ್ದೆನು.

ಬಹದ್ದೂರ—ಏನಾಯಿತು ?

ವಾಸುದೇವ—ಜಮಿಾನ್ದಾರರ ಪತ್ನಿಯು ಬರುತ್ತಿದ್ದ ವೇಳೆಯಲ್ಲಿ, ಕಳ್ಳರು ದಾರಿಗಟ್ಟಿ ಹುಡುಗಿಯನ್ನು ಕದ್ದೊಯ್ದರೆಂದೂ, ಆ ವೇಳೆಯಲ್ಲಿ ಯೇ ಹಿಂದಿನಿಂದ ಬಂದ ರಾಜಭಟರು ಹೊಡೆದ ಗುಂಡಿನೇಟಿನಿಂದ ಕಳ್ಳರಲ್ಲಿ ಕೆಲವರು ಸತ್ತುಹೋದರೆಂದೂ, ಜಮಿಾನ್ದಾರರ ಪತ್ನಿ ಪುತ್ರರು ಬಂದರೆಂದೂ ತಿಳಿದುಬಂದಿದೆ.

ದಳವಾಯಿ—ನಿನಗೆ ಹೇಗೆ ತಿಳಿಯಿತು ?

ವಾಸುದೇವ—ನಾನು ಸುದ್ದಿಯನ್ನು ಕೇಳಿದೊಡನೆಯೇ ನಿಲ್ಲದೆ ಹೋಗಿ ನೋಡಿದೆನು. ಈ ಅತ್ಯಾಚಾರವು ನಡೆದುಹೋಗಿದ್ದುದರಿಂದ ಅಲ್ಲಲ್ಲಿ ಹುಡಕುತ, ಒಬ್ಬ ದಾರಿಗನನ್ನು ವಿಚಾರಿಸಿ ತಿಳಿದೆನು. ಕಳ್ಳರು ಮಾತ್ರ ಸಿಕ್ಕಲಿಲ್ಲ.

ದಳವಾಯಿ—ಪ್ರಯತ್ನಪರರಿಗೆ ಅಸಾಧ್ಯವಾವುದೂ ಇರಲಾರದು ; ಹಾ ಗೂ ಧೈರ್ಯ-ಸ್ಥೈರ್ಯ-ಸಾಹಸಾದಿಗಳೂ, ಸತ್ಯನಿಷ್ಠೆಯೂ ಇದ್ದರೆ ವಿಫಲವೆಂದಿಗೂ ಆಗದು. ಇರಲಿ.

ವಾಸುದೇವ—ತಾವು ಹೇಳುವುದು ಯುಕ್ತವೇ ಆಗಿರಬಹುದಾದರೂ ವಿಧರ್ಮಿಗಳು ಸಾಮಾನ್ಯರಲ್ಲವೆಂದೂ, ಚತುರೋಪಾಯ ವಿಶಾ ದರೆಂದೂ ನನಗೆ ತೋರುತ್ತಿದೆ.

ದಳವಾಯಿ—ಪರಿಹಾಸದಿಂದ 'ಸಾಮಾನ್ಯರೆಂದು ಹೇಳುವವರಾರು ? ನೀತಿಬಾಹಿರರು ಎಂದಿಗಾದರೂ ದೈವಾಗ್ರಹಕ್ಕೆ ಬಲಿಯಾಗಲೇ ಬೇಕು. ಕಾಲಬಲದಿಂದ ಒಂದೆರಡು ಸಣ್ಣ ವಿಷಯಗಳಲ್ಲಿ ಗೆದ್ದರೂ, ಧರ್ಮವಿದ್ದಲ್ಲಿಯೇ ಜಯವು ಸ್ಥಿರವೆಂಬುದು ತಿಳಿದಿರಲಿ.'

ಬಹದ್ದೂರ—ಹೋಗು,-ವಾಸುದೇವ! ಊಟಮಾಡಿ ಬಾ. ಕರ್ಮಕ್ಕೆ ತಕ್ಕಫಲವಿದ್ದೇ ಇರುವುದು. ನಿನ್ನ ಕಾರ್ಯದಲ್ಲಿ ನೀನು ನಿಸ್ಪೃಹನಾಗಿದ್ದರೆ ಸಾಕಾಗಿರುವುದು.

ವಾಸುದೇವನು ನಿರುತ್ತರನಾಗಿ ಹೊರಟುಹೋದನು. ದಳವಾಯಿಸಿಂಗನೂ ಎದ್ದುನಿಂತು, 'ಅವಶ್ಯವಾದ ವೇಳೆಯಲ್ಲಿ ದರ್ಶನವನ್ನು ತೆಗೆದುಕೊಳ್ಳುವೆನು.' ಎಂದು ಹೇಳಿ ಅಪ್ಪಣೆಹೊಂದಿ ಹೊರಟುಹೋದನು. ರಾವ್‌ಬಹದ್ದೂರ್ ರಾಧಾನಾಥನೂ ಎದ್ದು, ವಾಚಕಶಾಲೆಯ ಬಾಗಿಲನ್ನು ಮುಚ್ಚಿ ವಾಯುಸೇವನೆಗಾಗಿ ಹೊರಹೊರಟನು.

|| ಶ್ರೀ ||

## ಪಂಚದಶ ಪರಿಚ್ಛೇದ.

(ದೀಕ್ಷೆ.)

ರಾತ್ರಿ ಒಂಭತ್ತೂವರೆಗಂಟೆ ಹೊಡೆದುಹೋಗಿದೆ. ಕೃಷ್ಣಪಕ್ಷದ ಯಾಮಿನೀಸ್ವರೂಪವು ಭೀಕರಪ್ರಕೃತಿಯನ್ನೇ ತಾಳಿದೆ. ಆದರೂ, ಶ್ರೀ ನಗರದ ಪ್ರಸನ್ನರಾಘವಮಾರ್ಗದಲ್ಲಿ ಅಲ್ಲಲ್ಲಿಗೆ ಹೊತ್ತಿಸಿರುವ ಪ್ರಕಾಶವಾದ ವಿದ್ಯುಚ್ಛಕ್ತಿಯ ದೀಪಗಳು, ಚಂದ್ರಿಕೆಯಂತೆಯೇ ಬಗೆಗಾನಂದವನ್ನು ಬೀರುತ್ತಿವೆ. ಮೊದಲನೆಯ ಉಪ್ಪರಿಗೆಯ ಮನೆಯನ್ನು ನೋಡಿ

ದರೆ, ಅದು ಲಕ್ಷ್ಮೀದೇವಿಯ ವಿಲಾಸಸ್ಥಾನವೆಂದೇ ಹೇಳಬಹುದು. ಮನೆಯಮುಂದಿನ ವಿಸ್ತಾರವಾದ ಹಜಾರದಲ್ಲಿ ಒಂದೆಡೆಯಲ್ಲಿ ಬಿಲ್ಲೆಯವರೂ, ಮತ್ತೊಂದೆಡೆಯಲ್ಲಿ ಆಯುಧಪಾಣಿಗಳಾದ ವೀರಭಟರೂ ಕುಳಿತು, ಎಚ್ಚರಿಕೆಯಿಂದ ಕಾದಿದ್ದರು. ಮನೆಯು, ಅಂತರ್ಬಹಿಪ್ರದೇಶಗಳಲ್ಲಿಯೂ ಅರಸುತನದವರ ನಿವಾಸದಂತೆಯೇ, ಅಲಂಕೃತವಾಗಿ ಕಂಗೊಳಿಸುತ್ತಿದ್ದಿತು. ಇದಕ್ಕೂ ಹೆಚ್ಚಾಗಿ ವಿವರಿಸುತ್ತ ಕುಳಿತರೆ, ವಾಚಕರ ಬೇಸರಕ್ಕೆ ಕಾರಣವಾದೀತೆಂಬ ಭೀತಿಯಿಂದ ಹೆಚ್ಚಿನ ವಿಚಾರಕ್ಕೆ ಕೈಹಾಕದೆ ಬಿಟ್ಟಿರುವೆವು.

ನಮ್ಮ ವಾಚಕರ ಚಿರಪರಿಚಿತನಾದ ದಳವಾಯಿಸಿಂಗನು, ಅಶ್ವಾರೋಹಿಯಾಗಿ ಬಂದು, ಮೇಲೆವಿವರಿಸಲ್ಪಟ್ಟಿರುವ ರಮಾವಿಲಾಸಭವನದ ಮುಂದಿಳಿದು, ಹಾಲಿನಲ್ಲಿ ಬಂದು ನಿಂತನು. ಕುಳಿತಿದ್ದವರೆಲ್ಲರೂ ಎದ್ದು ವಿನಯದಿಂದ ಪ್ರಣಾಮಮಾಡಿದರು. ದಳವಾಯಿಸಿಂಗನು ಭಟರನ್ನು ಕುರಿತು ‘ ಅಯ್ಯಾ! ಸರ್ದಾರ್‌ಧರ್ಮಪಾಲರ ಸಮಯವೇನು ? ಮಲಗಿರುವರೊ ? ’ ಎಂದು ಕೇಳಿದನು.

ಭಟರು—‘ ಸ್ವಾಮಿ ! ಸರ್ದಾರರು ಇಷ್ಟುಬೇಗ ಮಲಗುವ ಪದ್ಧತಿಯಿಲ್ಲ. ಆದರೂ, ಒಂಭತ್ತು ಗಂಟೆಯಾದ ಬಳಿಕ ಮನೆಯೊಳಗೆ, ಯಾರನ್ನೂ ಬಿಡಕೂಡದೆಂದು ಕಟ್ಟಪ್ಪಣೆ ಮಾಡಿರುವರು.

ದಳವಾಯಿ—‘ ಸಂತೋಷ ! ಈ ದಂಡವನ್ನು ತೆಗೆದುಕೊಂಡು ಹೋಗಿ ಸರದಾರರಿಗೆ ತೋರಿಸಿ, ಅವರ ಅಪ್ಪಣೆಯೇನೆಂಬುದನ್ನು ತಿಳಿದು ಬಂದು ಹೇಳು.’ ಎಂದು ಕೈಯಲ್ಲಿದ್ದ ಬೆಳ್ಳಿಯ ಕಟ್ಟಿನಿಂದ ಹೊಳೆಯುತ್ತಿದ್ದ ಕೋಲನ್ನು ಭಟನ ಕೈಗಿತ್ತನು. ಭಟನು ದಂಡಸಹಿತನಾಗಿ ಭವನದೊಳಹೊಕ್ಕು, ಸ್ವಲ್ಪ ಹೊತ್ತು ಕಳೆದಬಳಿಕ, ಮತ್ತೆ ಬಂದು ದಳವಾಯಸಿಂಗನಿಗೆ ಕೋಲನ್ನೊಪ್ಪಿಸಿ, ವಿನಯದಿಂದ ಹೇಳಿದನು- ‘ ಸ್ವಾಮಿಾ! ಸರ್ದಾರರು ಕಲಾಶಾಲೆಯಲ್ಲಿರುವರು ; ಅಲ್ಲಿಗೆ ದಯೆಯಿಟ್ಟು ಬರಬೇಕೆಂದು ಹೇಳಿರುವರು.’

ದಳವಾಯಿಸಿಂಗನು ಸಂತೋಷದಿಂದ ಭಟನೊಡನೆ ಒಳ ಹೊಕ್ಕು, ಉಪ್ಪರಿಗೆಯನ್ನು ಹತ್ತಿ ಭಟನುತೋರಿದ ಕಿರುಮನೆಯು ಬಳಿಗೆ ಬಂದು ನಿಂತು, ಬಗ್ಗಿ ನೋಡಿದನು. ಮನೆಯೊಳಗೆ ಅಲ್ಲಲ್ಲಿ ಯಂತ್ರಗಳೂ, ಯಂತ್ರೋಪಕರಣಗಳೂ ಇರಿಸಲ್ಪಟ್ಟಿದ್ದುವು. ಮರದ ಒರಗುಮಂಚದಮೇಲೆ, ಛಾಯಾಗ್ರಾಹಕ ಯಂತ್ರವನ್ನೂ ಶಬ್ದಗ್ರಾಹಕ ಯಂತ್ರವನ್ನೂ ಮುಂದಿಟ್ಟು, ಅದನ್ನೇ ನೋಡುತ್ತ ಕುಳಿತಿದ್ದ ನಮ್ಮ ಶ್ರೀದತ್ತ ಕುಮಾರನನ್ನು ಕಂಡು, ದಳವಾಯಿ ಸಿಂಗನ ಮುಖವು ಪ್ರಫುಲ್ಲವಾಯಿತು. ಪ್ರೀತಿವ್ಯಂಜಕ ಸ್ವರದಿಂದ ಹೇಳಿದನು– ' ಸರದಾರರಿಗೆ ಜಯಲಕ್ಷ್ಮಿಯು ಕೈಸೇರಲಿ. '

ಶ್ರೀದತ್ತಕುಮಾರನು ಎದ್ದುಬಂದು ದಳವಾಯಿಸಿಂಗನಿಗೆ ಹಸ್ತಲಾಘವ (Shake hands) ವಿತ್ತು, ಮನ್ನಣೆಯಿಂದ ಕರೆತಂದು ಮಂಚದಮೇಲೇರಿಸಿ, ತಾನೂ ಕುಳಿತು ಕಿರುನಗೆಯಿಂದ ಕೇಳಿದನು.– ' ದಳವಾಯಿಸಿಂಗಜೀ ! ವಿಶೇಷವೇನು ? '

ದಳವಾಯಿ——ಸುಹಾಸದಿಂದ–'ಸರದಾರರನ್ನು ವರಿಸಲು ಜಯಲಕ್ಷ್ಮಿಯು ಕಾದಿರುವಳೆನ್ನುವುದೇ ವಿಶೇಷವು.'

ಸುಹೃದರೇ! ಕ್ಷಮಿಸಿರಿ. ಇಂದಿನವರೆಗೂ, ಶ್ರೀದತ್ತಕುಮಾರನ ಆಜನ್ಮವೃತ್ತಾಂತವನ್ನು ಹೇಳದೆ ಬಿಟ್ಟಿದ್ದುದು ತಪ್ಪು. ಆದರೆ, ಕಾಲವು ಅನುಕೂಲಿಸಲೆಂದು ಬಿಟ್ಟಿದ್ದ ನಮಗೆ ಈಗಲೇ ವಿವರಿಸುವುದು ಸರಿಯಾಗಿ ಕಾಣುತ್ತಿದೆ. ಶ್ರೀದತ್ತಕುಮಾರನು, ರಾವ್‌ಬಹದ್ದೂರ್ ರಾಧಾನಾಥ ರಾಯನ ಅಕ್ಕನ ಮಗನು. ಈತನ ತಂದೆಯು ಶ್ರೀನಗರದ ರಾಜಸನ್ನಿಧಿ ಯಲ್ಲಿ ಪ್ರಮುಖನಾದ ದಳಪತಿಯಾಗಿದ್ದನು. ಕುಮಾರನ ಹೊರತು ಉಳಿದ ಆತನ ಒಡಹುಟ್ಟಿದವರೆಲ್ಲರೂ ಮಾರಿಕೋಪದ್ರವದಿಂದ ಚಿಕ್ಕಂದಿನಲ್ಲಿಯೇ ಕಾಲವಾದರು. ಪುತ್ರಶೋಕಸಂತಪ್ತನಾಗಿ, ಕುಮಾರನ ತಂದೆಯೂ ಮಗನ 17 ನೆಯ ವರ್ಷದಲ್ಲಿಯೇ, ಅವನನ್ನೂ ಮತ್ತು ಪತಿಪರಾಯಣೆಯಾ

ಗಿದ್ದ ತನ್ನ ಹೆಂಡತಿಯನ್ನೂ ಬಿಟ್ಟು, ಪರಲೋಕಕ್ಕೆ ತೆರಳಿದನು. ಪತಿ ವಿಯೋಗವಾದ ಬಳಿಕ, ಸತೀಮಣಿಯಾದ ಕುಮಾರನ ತಾಯಿಯೂ ಪತಿಯ ಗತಿಯನ್ನೇ ಅನುಸರಿಸಿದಳು. ಅಂದಿನಿಂದೀಚೆಗೆ ಕುಮಾರನ ದೇಹ ಪೋಷಣೆಗೆ ಆತನ ಸೋದರತ್ತೆಯೇ ನಿಲ್ಲಬೇಕಾಯಿತು.

ಕುಮಾರನು, ತಂದೆಯ ಮರಣಕಾಲದಲ್ಲಿ ಬಿ.ಎ., ತರಗತಿಯಲ್ಲಿ ವ್ಯಾಸಂಗಿಸುತ್ತಿದ್ದನು. ತಂದೆಯು ಸತ್ತ ಒಂದೆರಡು ವರ್ಷಗಳೊಳಗಾಗಿಯೇ ಬಿ. ಎ., ಪ್ರಶಸ್ತಿಯನ್ನು ತಾಳಿ, ತನ್ನ ವಿದ್ಯಾಗೌರವಕ್ಕೆ ತಕ್ಕಂತೆ 'ವಿದ್ಯಾನಿಧಿ' ಎಂಬ ಬಿರುದನ್ನು ಪಡೆದನು. ಆ ತರುವಾಯದಲ್ಲಿಯೂ, ಮಾತುಲನಾದ ರಾಧಾನಾಥನ ಸತ್ಪರಾಮರ್ಶದಂತೆಯೂ, ತನ್ನ ತಂದೆಯ ಕುಲದ ಗೌರವಕ್ಕೆ ತಕ್ಕಂತೆಯೂ ದಂಡನೀತಿಶಾಸ್ತ್ರಗಳಲ್ಲಿ ತಕ್ಕಷ್ಟು ಪರಿಶ್ರಮವನ್ನು ಹೊಂದಿದನು ಅಲ್ಲದೆ, ತನ್ನ ಕಲ್ಪನಾಶಕ್ತಿ ಬಲದಿಂದ ಇತರ ಯಂತ್ರನಿರ್ಮಾಣ, ಕೈಗಾರಿಕೆ, ಕುಶಲವಿದ್ಯೆಗಳನ್ನು ಪರಿಶೋಧಿಸುತ್ತ ಬಂದನು. ಸ್ವಾಭಿಮಾನ, ಸ್ವಾವಲಂಬನ, ಸ್ವಾತಂತ್ರ್ಯ, ಸ್ವದೇಶಭಕ್ತಿ, ಸ್ವಕರ್ತವ್ಯನಿಷ್ಠೆಗಳೆಂಬ ಶಕ್ತಿ ಪಂಚಕಗಳೂ ಇವನಲ್ಲಿ ಚೆನ್ನಾಗಿ ನೆಲೆಗೊಂಡಿರುವುದರಿಂದ, ದೇಶಕ್ಷೋಭೆಗೆ ಕಾರಣಭೂತರಾದ ವಿಧರ್ಮಿಗಳ ಹುಟ್ಟನ್ನು ಅಡಗಿಸಿ, ದೇಶಸೇವೆಯನ್ನು ಮಾಡಬೇಕೆಂಬ ಸಂಕಲ್ಪವು, ಇವನನ್ನು ಸೇರಿರುವುದೂ ಸಹಜವಲ್ಲವೇ ? ಹೆಚ್ಚೇಕೆ, ಕುಮಾರನು ತನ್ನಪ್ರತಿಭಾವಿಶೇಷಗಳಿಂದ ದಿನಂಪ್ರತಿಯಲ್ಲಿಯೂ ಅಹಿತವ್ರಾತವನ್ನು ಕಂಡುಹಿಡಿದು ರಾಜಾಜ್ಞೆಗೆ ಗುರಿಪಡಿಸುತ್ತಿದ್ದುದಲ್ಲದೆ ತನ್ನ ಈ ತರುಣವಯಸ್ಸಿಗಾಗಲೇ ನಾಲ್ಕಾರು ದರೋಡೆಗುಂಪಿನವರನ್ನೂ ಹಿಡಿದುದರಿಂದ, ಈತನ ಸಾಹಸಕಾರ್ಯಕ್ಕೆ ಸುಪ್ರೀತನಾದ ಶ್ರೀನಗರದರಸನು, ಈತನಿಗೆ '**ಸರದಾರ್ ಧರ್ಮಪಾಲ**' ಎಂಬ ಬಿರುದನ್ನು ಕೊಟ್ಟು, ಈತನನ್ನು ಇನ್ನೂರು ಮಂದಿ ವೀರಭಟರಿಗೆ ಅಧಿಕಾರಿಯನ್ನಾಗಿಮಾಡಿದ್ದನು. ಇದರಿಂದ ಕುಮಾರನು ಮತ್ತೂ ಉತ್ಸಾಹಹೊಂದಿ, ತನ್ನ ಕರ್ತವ್ಯವನ್ನು ದಕ್ಷತೆಯಿಂದ ನಡೆಯಿಸುತಿರುವನು.

ಈಗ ಈತನಿಗೆ 21ನೆಯ ವರ್ಷವು ನಡೆಯುತ್ತಿರುವುದು. 25 ವರ್ಷವಾಗುವುದಕ್ಕೆ ಮೊದಲು ವಿವಾಹಮಾಡಿಕೊಳ್ಳಲಾರೆನೆಂದು ಹೇಳಿ, ಬಂದ ಬಂದ ಕನ್ಯೆಯರನ್ನೆಲ್ಲಾ ಕಡೆಗಣಿಸಿ, ಈತನಿನ್ನೂ ಅವಿವಾಹಿತನಾಗಿಯೇ (ಬ್ರಹ್ಮಚಾರಿ) ಇರುವನು. ಇರಲಿ; ಇನ್ನು ಇಲ್ಲಿಗೆ ಸಾಕುಮಾಡುವ.

ಸರದಾರನ ಅಭಿನಂದನಕ್ಕೆ ಕುಮಾರನು, ಕಿರುನಗೆಯಿಂದ ತಲೆದೂಗಿ ಹೇಳಿದನು—'ಸಿಂಗಜೀ! ತಮ್ಮ ಅನುಗ್ರಹವುಂಟಾದರೆ, ಕೊರತೆ ಯೇನು? ಅದಿರಲಿ; ಎಲ್ಲರೂ ಕುಶಲಿಗಳಷ್ಟೆ?'

ದಳವಾಯಿ—ಎಲ್ಲರೂ ಕುಶಲಿಗಳೇ ಆಗಿರುವರು; ಜಮೀನ್ದಾರರ ಮನೋರಾಜ್ಯದಲ್ಲಿ ಮಾತ್ರ ಕುಶಲತೆಗೆ ಕೊರತೆ.

ಶ್ರೀದತ್ತ—ಹೇಗೆ? ಪುತ್ರನೊಡನೆ ಜಮೀನ್ದಾರರ ಜ್ಯೇಷ್ಠಪತ್ನಿಯು ಬರಲಿಲ್ಲವೇ?

ದಳವಾಯಿ—ಭಗವದನುಗ್ರಹದಿಂದ ಬಂದುಸೇರಿದಳು ಆದರೇನು? ಅವರ ಪ್ರೇಮಪುತ್ರಿಯು ಕಳ್ಳರಪಾಲಾದಳು!

ಶ್ರೀದತ್ತ—ಹುಡುಗಿಯು ಮಾತ್ರ ಕಳುವಾಗಿ, ಉಳಿದವರು ಹೇಗೆ ಬಂದು ಸೇರಿದರು?

ದಳವಾಯಿ—ಹುಡಗನೂ ದುರಾತ್ಮರ ಕೈಸೇರಿಹೋಗಿದ್ದನು. ಆದರೆ, ಆಪದ್ಬಂಧುವಾಗಿ ಬಂದು ಸಂರಕ್ಷಿಸಿದ ಒಬ್ಬ ಮಹನೀಯನ ದಯೆಯಿಂದ ಮತ್ತೆ ಸಿಕ್ಕಿದನು.

ಶ್ರೀದತ್ತ—ಕಿರುನಗೆಯಿಂದ—'ಹಾಗೆಯೇ ಹುಡುಗಿಯೂ ದೊರೆಯಬಹುದು. ಇರಲಿ; ನೀವು ಬಂದುದೇನು?'

ದಳವಾಯಿ—ಕಿಸೆಯಲ್ಲಿರಿಸಿಕೊಂಡಿದ್ದ ಕಾಗದವನ್ನು ತೆಗೆದು ಮುಂದಿಟ್ಟು-'ಕುಮಾರ! ಇದು ನಿನ್ನೆಯ ಅಂಚೆಯಲ್ಲಿ ಬಂದಿತು. ಇದರಿಂದಲೇ ವಿಚಾರವನ್ನು ತಿಳಿಯಬೇಕು.'

ಶ್ರೀದತ್ತ—ಕಾಗದವನ್ನು ಸ್ವಲ್ಪಮಟ್ಟಿಗೆ ನೋಡಿ, ಗರ್ವದಿಂದ ನಗುತ್ತೆ ಕಿಸೆಯಲ್ಲಿರಿಸಿಕೊಂಡನು.

ದಳವಾಯಿ—ಇದಕ್ಕೆ ಪ್ರತೀಕಾರವೇನು ?

ಶ್ರೀದತ್ತ—ನೊಣವನ್ನು ಹಿಡಿದು ತೀಡಲಿಕ್ಕೆ ಗಾಣವನ್ನೂ ಹುಡುಕಬೇಕೋ ?

ದಳವಾಯಿ—ಗಾಣದ ಸವಿಯು ಧರ್ಮಪಾಲನಲ್ಲಲ್ಲದೆ, ಮತ್ತಾರಲ್ಲಿಯೂ ಇರಲಾರದು !

ಶ್ರೀದತ್ತ—ಸಿಂಗಜೀ ! ನೀವು ನನಗೆ ಬಾಲ್ಯವಿದ್ಯಾಗುರುಗಳಾಗಿಯೂ, ನಮ್ಮ ಮಾತುಲನಿಗೆ ಬಾಲ್ಯಸಖರಾಗಿಯೂ ಇರುವಿರಾದುದರಿಂದ, ಪೂಜ್ಯರಾದ ನಿಮ್ಮಲ್ಲಿ ನಾನು ಯಾವ ವಿಚಾರವನ್ನೂ ಮರೆಮಾಜಲಾರೆನು. ಸುನಂದಾದೇವಿಯು ಹೊರಟ ಸುದ್ದಿಯನ್ನೂ, ಗೊಲ್ಲರ ಪಾಳ್ಯದಲ್ಲಿ ಅವರನ್ನು ಕೊಲ್ಲಬೇಕೆಂದು ನಡೆಯಿಸಿದ್ದ ಕುಹಕವನ್ನೂ ತಿಳಿದ ನಾನು, ನನ್ನವರೊಡನೆ ವಿಳಂಬಸದೆ ಹೊರಟು, ಅಲ್ಲಿಗೆ ಹೋದೆನು. ಆದರೆ, ಕಾಲವಿಶೇಷದಿಂದ ಅಷ್ಟರಲ್ಲಿಯೇ ವಿಂದೆಯು ಅಪಹೃತಳಾಗಿದ್ದುದರಿಂದ, ಆಗಲೇ ಸಿಕ್ಕಲಿಲ್ಲ ಮೋಹನಕುಮಾರನನ್ನು ಮತ್ತೆ ಲಭಿಸುವಂತೆ ಮಾಡಿದ ಭಗವತ್ಕೃಪೆಯು ಚಿರಸ್ಮರಣೀಯವಾಗಿದೆ ! ಮತ್ತೂ ಹೇಳುವೆನು ಕೇಳಿರಿ, ಎಂದು–ನಾನು ವಿದ್ರೋಹಿಮತಖಂಡನ ವ್ರತದಲ್ಲಿ ದೀಕ್ಷೆಯನ್ನು ವಹಿಸಿನಿಂದೆನೋ, ಎಂದು–ಜಮೀನ್ದಾರರ ಪತ್ನಿಗೆ ನಾನು ವಾಗ್ದಾನವಿತ್ತೆನೋ ಅಂದೇ–ಆ ಘಾತುಕರು ಮೃತ್ಯುಪಥದಲ್ಲಿ ಬಿದ್ದಂತಾಯಿತೆಂದು ತಿಳಿಯಬೇಕು. ಆಗಲೇ ಅವರಲ್ಲಿ ಆರೇಳುಮಂದಿ ನನ್ನ ಕೋಪಕ್ಕೆ ಬಲಿಯಾಗಿರುವರು. ಇನ್ನುಮುಂದೆ ಹೇಳುವುದೇನು ! 'ಆದರೆ, ಈ ವಿಚಾರವನ್ನು ನಮ್ಮ ಮಾತುಲನಿಗೆ ವಿವರವಾಗಿ ಹೇಳಬಾರದು. ಏಕೆಂಬುದನ್ನು ನಾನು ಹೇಳಬೇಕಾದುದಿಲ್ಲವಷ್ಟೆ ?

ದಳವಾಯಿ—ಸಂಭ್ರಮದಿಂದ ಕುಮಾರನ ಭುಜದ ಮೇಲೆ ಕೈಯಿರಿಸಿ, 'ಕುಮಾರ! ನನ್ನ ಊಹೆಯು ವ್ಯರ್ಥವಾಗಲಿಲ್ಲ, ನಿಜವೇ ಆಯಿತು ನನ್ನಿಂದ ಆಗಬೇಕಾದುದೇನಿದ್ದರೂ ಕಟ್ಟುಮಾಡಬಹುದು.'

ಶ್ರೀದತ್ತ—ತಮ್ಮಿಂದಾಗಬೇಕಾದ ಕೆಲಸಗಳು ಬಹುವಾಗಿವೆ; ಆದರೆ, ಜಮಿನಾನ್ದಾರರ ಮನೆಯ ವಿಚಾರಗಳನ್ನು ಯಮುನೆಯ ಮುಖ ದಿಂದ ತಿಳಿದು, ನನಗೆ ತಿಳಿಸುತ್ತಿರಬೇಕು. ಉಳಿದ ವಿಷಯಗಳಿಗೆ ನಾನು ಕಾಲಬಂದಾಗ ತಿಳಿಸುವೆನು.

ದಳವಾಯಿ—ಅಗತ್ಯವಾಗಿಯೂ ನಡೆಯಿಸುವೆನು ; ಮುಖ್ಯವಾಗಿ, ಜಯ ಲಕ್ಷ್ಮಿಯು ನಿನ್ನ ಕೈಹಿಡಿದು, ಸುಖಸಂತೋಷಗಳು ಹೆಚ್ಚಬೇ ಕೆಂಬುದೊಂದೇ ನನ್ನ ಕೋರಿಕೆಯಾಗಿದೆ! ಇನ್ನು ನಾನುಹೊರಡಲೆ?

ಶ್ರೀದತ್ತ—ಸಂತೋಷ! ನನ್ನೀ ಅಮೋಘವ್ರತಕ್ಕೆ ಇಂದೇ ದೀಕ್ಷೆಯನ್ನು ವಹಿಸಿದೆನೆಂದುತಿಳಿದು, ಧೈರ್ಯವಾಗಿ ತೆರಳಬಹುದು. ಭಗವತ್ಕೃ ಪೆಯಿಂದ ಎಲ್ಲವೂ ಅನುಕೂಲಿಸುವುದರಲ್ಲಿ ಸಂಶಯವಿಲ್ಲವು.

ದಳವಾಯಿಸಿಂಗನು ಅಪ್ಪಣೆಹೊಂದಿ, ಹೊರಟುಹೋದನು.

ಶ್ರೀ

# ದ್ವಿತೀಯ ಭಾಗ.

## ಪ್ರಥಮಪರಿಚ್ಛೇದ.

(ಅನ್ವೇಷಣೆ)

ಶುಕ್ಲಪಕ್ಷದ ಪೂರ್ಣಿಮಾಚಂದ್ರನು, ಕೌಮುದೀಪ್ರಪಂಚವನ್ನು ಸ್ಥಾಪಿಸಿದ್ದನು. ಸಮಸ್ತವಸ್ತುನಿಕರವೂ ಕೌಮುದೀ ಸಂಸರ್ಗದಿಂದ ಶುದ್ಧ ಮತ್ತು ಶುಕ್ಲ ಸ್ವರೂಪವನ್ನು ತಾಳಿ, ಮೋಹಕರವಾಗಿ ಬೆಳಗುತ್ತಿದ್ದಿತು. ಅಖಿಲ ಜನಾಹ್ಲಾದಿನಿಯಾದ ಕೌಮುದಿಯು ಈ ವೇಳೆಯಲ್ಲಿಯೂ, ರಜನೀಚರ ಸಮೂಹಕ್ಕೆ ಮಾತ್ರ ಆತಂಕ ಕಾರಣಿಯಾಗಿಯೇ ಇದ್ದಳು. ಆದರೇನು? ದೀರ್ಘೋದ್ಯೋಗಿಗಳಿಗೆ, ಕೌಮುದಿಯಷ್ಟು ಶಾಂತಿಪ್ರದಾತರು ಮತ್ತಾರೂ ಇರಲಾರರು! ಅದಿರಲಿ. ಈ ವೇಳೆಯಲ್ಲಿ, ಗೊಲ್ಲರ ಪಾಳ್ಯದ ಕುರುಚಲು ಮೆಳೆಯ ಕಾಡು ಹೇಗಿದ್ದಿತೆಂಬುದನ್ನು ಇಲ್ಲಿ ವಿಚಾರಮಾಡುವ.

ದಟ್ಟವಾಗಿಬೆಳೆದ ದೊಡ್ಡ ದೊಡ್ಡ ಮುಳ್ಳುಮೆಳೆಗಳು, ದಾರಿಯುದ್ದಕ್ಕೂ ಅಡ್ಡಗೋಡೆಯಂತಾಗಿರುವುವು. ಅಲ್ಲಿಗಲ್ಲಿಗೆ ಹೆಮ್ಮರಗಳೂ ಬೆಳೆದು ಒತ್ತಾಗಿ ಸೇರಿ, ದಾರಿಯಲ್ಲಿ ಸೂರ್ಯರಶ್ಮಿಗೂ ಅವಕಾಶ ಕೊಡದಂತೆ ಅಂಧಕಾರವನ್ನುಂಟುಮಾಡಿ, ದಾರಿಗರಿಗೆ ಕಾಣದಂತೆ ಅಡಗಿದ್ದು ಹೊಂಚಿ ಬಿದ್ದು, ಪ್ರಾಣ-ಧನಗಳನ್ನು ಸೂರೆಗೊಳ್ಳುವ ಕ್ರೂರಮೃಗಗಳಿಗೂ,

ಕಳ್ಳರಿಗೂ ಬಹು ಅನುಕೂಲತೆಯನ್ನು ಕಲ್ಪಿಸಿದ್ದಿತು. ಇಲ್ಲಿ ಕಳ್ಳಕಾಕರ ಅವಾಂತರವು ಅಷ್ಟಿಷ್ಟೆಂದು ಹೇಳಲಾಗುತ್ತಿರಲಿಲ್ಲ. ರಾತ್ರಿಯವೇಳೆಯಲ್ಲಿಯಾಗಲೀ, ಹಗಲುವೇಳೆಯಲ್ಲಿಯಾಗಲೀ ಈ ದಾರಿಯಲ್ಲಿ ಯಾರೂ ಒಬ್ಬಿಬ್ಬರಂತೆ ಪ್ರಯಾಣಮಾಡಿ ಬರುತ್ತಿರಲಿಲ್ಲ. ದುರ್ಗಾಪುರಕ್ಕೂ ವಿಷಹರಪುರಕ್ಕೂ ನಡುವೆ ಇರತಕ್ಕ ಗೊಲ್ಲರಪಾಳ್ಯದ ಕಳ್ಳರಕಾಡೇ ಇದಾಗಿರುವುದು.

ಇಂತಹ ಪ್ರದೇಶದಲ್ಲಿ, ಹಾಗೂ ಈ ವೇಳೆಯಲ್ಲಿ ಏಕಾಂಗಿಯಾದ ದಾರಿಗನೊಬ್ಬನು, ಗೊಲ್ಲರ ಪಾಳ್ಯಕ್ಕೆ ಅಭಿಮುಖನಾಗಿ ಬರುತ್ತಿದ್ದನು. ದಾರಿಗನು ಒಂದು ಬಿಳಿಯ ಒಟ್ಟೆಯನ್ನುಟ್ಟು, ಮೊಣಕಾಲವರೆಗೂ ಬೀಳುವ ಕರಿಯಬಣ್ಣದ ನಿಲುವಂಗಿಯನ್ನು ತೊಟ್ಟು, ತಲೆಗೆ ಕೆಂಬಣ್ಣದ ಪಾಗು ಸುತ್ತಿ, ಕೈಯಲ್ಲಿ ದಪ್ಪ ದೊಣ್ಣೆಯನ್ನು ಹಿಡಿದು ಒಬ್ಬ ಗಣ್ಯನಾದ ರೈತನಂತೆ ಕಾಣುತ್ತಿದ್ದನು. ಈತನು ಅತ್ತಿತ್ತನೋಡದೆ, ನೆಲವನ್ನೇ ನೋಡುತ್ತ ಮಂದಗಮನದಿಂದ ನಡೆಯುತ್ತಿದ್ದನು. ಬರುತ್ತಿದ್ದಾತನಿಗೆ ಮುಂದೆ ವಿಸ್ತಾರವಾದ ಕಳ್ಳರ ಚೌಕವು ಕಂಡುಬಂದಿತು. ದಾರಿಗನು, ಅವಸರದಿಂದ ಬಂದು ಚೌಕದ ಮಧ್ಯಪ್ರದೇಶದಲ್ಲಿ ನಿಂತು, ಸುತ್ತಲೂ ನೋಡುತ್ತ ಮೆಲ್ಲನೆ ಒಂದುಬಾರಿ ಕೈತಟ್ಟಿದನು. ಕೂಡಲೇ ಪೊದರುಗಳಿಂದ ಒಂದು ಬಗೆಯ ಸಾಂಕೇತಿಕಶಬ್ದವು ಹೊರಟಿತು. ದಾರಿಗನು ತಲೆದೂಗಿ, ಅದೇ ಬಗೆಯ ಶಬ್ದದಿಂದ ಉತ್ತರವನ್ನು ಹೇಳಿ, ಮತ್ತೊಮ್ಮೆ ಕೈತಟ್ಟಿದನು. ಈತನ ಕರಾಸ್ಫಾಲನದ ಶಬ್ದವು ನಿಲ್ಲುವುದರೊಳಗಾಗಿ, ಇವನಂತೆಯೇ ವೇಷಧರರಾಗಿದ್ದ ಎಂಟುಮಂದಿ ರೈತರು ದೊಣ್ಣೆಗಳನ್ನು ಹಿಡಿದು ಕುಣಿಯುತ್ತ ಓಡಿಬಂದು ದಾರಿಗನನ್ನು ಸುತ್ತಿಮುತ್ತಿ, ಕುತೂಹಲದಿಂದ ರೆಪ್ಪೆಮುಚ್ಚದೆ ಬಿಡುಗಣ್ಣಿನಿಂದ ನೋಡುತ್ತ ನಿಂತರು.

ದಾರಿಗನು ವ್ಯಂಗ್ಯವಾಗಿ ನಕ್ಕು, ಮತ್ತೊಮ್ಮೆ ಗಟ್ಟಿಯಾಗಿ ಕೈತಟ್ಟಿದನು. ಈತನ ಪರಿಹಾಸಕ್ಕೆ ರೈತರು ಕಳೆಗುಂದಿ ತಲೆಬಾಗಿ ನಿಲ್ಲಬೇಕಾ

ಯಿತು. ಹಾಗೆ ನಿಂತವರನ್ನು ನೋಡಿ, ದಾರಿಗನಿಗೆ ಮತ್ತೂ ನಗುವುಂಟಾಯಿತು. ತಲೆಯನ್ನು ಕುಣಿಸುತ್ತ ಹೇಳಿದನು,–'ಸರಿಸರಿ ; ಬಿಡಿಬಿಡಿ. ನೀವೇನಪ್ಪ ! ಎಲ್ಲರೂ ಚೆನ್ನಾಗಿ ಕುಡಿದು, ಮಲೆತುಹೋಗಿರುತ್ತೀರಿ. ನಿಮಗೆ ಮೈಮೇಲೇನಾದರೂ ನೆನಪಿದ್ದರಲ್ಲವೆ, ನನ್ನ ಗುರುತಾಗುತ್ತಿದ್ದಿತು ! ನಿಮ್ಮ ಜತೆಗಾರನಾಗಿದ್ದರೂ, ಮೂರುದಿನ ಅಗಲಿದ್ದ ಮಾತ್ರಕ್ಕೆ ಮರೆತಿರಿ ; ಹೇಳುವುದೇನು ! '

ರೈತರು —ಮತ್ತೆನೋಡಿ,–' ಯಾರೋ ? ನರಸಿಂಗನೇನೋ ? ಸರಿಸರಿ, ಈಗ ಗೊತ್ತಾಯಿತು !'

ದಾರಿಗ—ಹೂಂ ! ಅವನೇ ನಾನು.

ರೈತರು—ವಿಷಹರಪುರಕ್ಕೆ ಹೋಗಿದ್ದೆಯಲ್ಲ ; ಈಗಲೇ ಹ್ಯಾಗೆ ಬಂದೆ ?

ದಾರಿಗ—ಕೆಲಸವು ಹಾಗಿತ್ತು ; ನಿಲ್ಲದೆ ಓಡಿಬಂದೆ.

ರೈತರು—ಅಲ್ಲಿ ಪುಟ್ಟಮ್ಮಣ್ಣಿಯವರನ್ನು ನೋಡಿದ್ದೆಯಾ ? ಏನೆಂದರು ?

ದಾರಿಗ—ನೋಡಿದ್ದೆ ; ಉಳಿದ ವಿಚಾರವನ್ನು ಇಲ್ಲಿ ಹೇಳಲಿಕ್ಕಾಗದು.

ರೈತರು—ಹಾಗಾದರೆ, ನಡೆ ; ಧಣಿಯ ಹತ್ತಿರದಲ್ಲೇ ಹೇಳುವೆ.

ದಾರಿಗನು ಮುಂದಾದನು. ರೈತರು ದಾರಿಗನಾಗಿ ಬಂದ ನರಸಿಂಗನೊಡನೆ, ಚೌಕಕ್ಕೆ ಈಶಾನ್ಯದಿಕ್ಕಿಗೆ ತಿರುಗಿ ಮುಳ್ಳು, ಕಲ್ಲು, ಹಳ್ಳ, ತಿಟ್ಟು, ಬಂಡೆ, ಮೆಳೆಗಳಿಂದ ಅಸಹ್ಯವಾಗಿದ್ದ ದಾರಿಯಲ್ಲಿ ಸುತ್ತಿಸುತ್ತಿ ನಡೆಯುತ್ತ, ಚೌಕಕ್ಕೆ ಅರ್ಧಮೈಲಿ ದೂರದಲ್ಲಿದ್ದ ಗುಡ್ಡವನ್ನು ಹತ್ತಿಬಂದರು. ಗುಡ್ಡದ ಮೇಲಿನ ಕಲ್ಲುಮಂಟಪದಲ್ಲಿ, ಎತ್ತರವಾದುದೊಂದು ಜಗಲಿಯ ಮೇಲೆ ಕುಳಿತಿದ್ದ ಕರಾಳವದನನನ್ನೂ, ಅವನ ಮುಂದೆ ನಿಂತು, ಬೆಸನೇನೆಂದು ಕೇಳುತ್ತಿದ್ದ ಸುಂದರ ಯುವಾಪುರುಷನನ್ನೂ ಕಂಡು, ಮುಂದೆ ಬಂದುನಿಂತು ಕೈಮುಗಿದರು.

ಕರಾಳ—ಕುತೂಹಲದಿಂದ,–' ಯಾರೋ ? ನರಸಿಂಗನೇ ? ಇದೇನಿಷ್ಟು ಅವಸರದಿಂದ ಬಂದೆ ? ಸಮಾಚಾರವೇನು ? '

ನರಸಿಂಗ(ದಾರಿಗ)—ಸ್ವಾಮಿಾ ! ನಾನು ಹೋಗಿ ನೋಡಿದೆ ; ಮನೆಯಲ್ಲಿ ಎಲ್ಲರೂ ಸಡಗರದಲ್ಲಿದ್ದರು. ಪುಟ್ಟಮ್ಮಣ್ಣಿಯವರಿಗೆ ತಮ್ಮ ಕಾಗದವನ್ನು ಕೊಟ್ಟೆ; ಅವರದನ್ನು ಓದಿಕೊಂಡು, ಬಾಯಿಮಾತಿನಿಂದಲೇ ನಿಮಗೂ, ಮಗಳಿಗೂ ಹೀಗೆ ಹೇಳೆಂದು ಹೇಳಿದರು.

ಕರಾಳ—ನಮಗೆ ಹೇಗೆ ಹೇಳಿದರು ?

ನರಸಿಂಗ—' ಈಗ ನನಗೆ ಕಾಟವು ಹೆಚ್ಚಾಗುತ್ತಿದೆ ; ಕಾವಲು ಬಲವಾಗಿದೆ ; ಅಧಿಕಾರವೇ ಇಲ್ಲದಂತಾಗಿಹೋಗಿದೆ. ನಿನ್ನ ಬಳಿಯಲ್ಲಿ ಮಾತನಾಡಲಿಕ್ಕೆ ನನಗೆ ಅವಕಾಶವಿಲ್ಲ ; ನಿಲ್ಲದೆ ಹೊರಟುಹೋಗು. ಇನ್ನುಮುಂದೆ ನನ್ನ ಹಂಬಲೇ ಬೇಡವೆಂದು ಹೇಳಿಬಿಡು.' ಹೀಗೆ ಹೇಳಿದರು.

ಕರಾಳ—ನಿಟ್ಟುಸಿರಿಟ್ಟು,–' ಇರಲಿ , ಮಗಳಿಗೆ ಹೇಳಿರುವುದೇನು ? '

ನರಸಿಂಗ—ಅದನ್ನು ಮತ್ತಾರಮುಂದೆಯೂ ಹೇಳಕೂಡದಂತೆ !

ಕರಾಳ—ಅದೂ ಸರಿಯೆ ; ದಿವಾನ ಯಶವಂತರಿಗೆ ಕಾಗದ ಕೊಟ್ಟೆಯಾ? ಏನೆಂದರು ?

ನರಸಿಂಗ—ಕಾಗದವನ್ನು ತೆಗೆದುನೋಡಿ, ಪಿತ್ತಲಕಡೆಗೆ ನನ್ನನ್ನು ಕರೆದುಕೊಂಡುಹೋದರು. ಅಲ್ಲಿ ಸ್ವಲ್ಪಹೊತ್ತು ನನ್ನೊಡನೆ ಮಾತನಾಡುತ್ತಿದ್ದು, ಹೇಳಬೇಕಾದುದನ್ನು ಬಾಯಿಂದಲೇ ಹೇಳಿ ಹೋದರು.

ಕರಾಳ—ಅದೇನು ?

ನರಸಿಂಗ—' ಕಾಗದ ಬರೆಯಲಿಕ್ಕೆ ಸಮಯವಿಲ್ಲ. ಈಗ ಮನೆ ಯಜಮಾನರಿಗೆ ನನ್ನ ಮೇಲೆ ಅನುಮಾನವುಂಟಾಗಿ, ಪ್ರತಿಕ್ಷಣದಲ್ಲಿಯೂ ತಪ್ಪುಗಳನ್ನು ಕಂಡುಹಿಡಿಯುತ್ತಿರುವರು. ಸರ್ಕಾರದವರ ಗಲಭೆಯೂ ಹೆಚ್ಚಿಹೋಗಿದೆ. ನಿರ್ವಹಿಸುವುದೆಂದರೆ ಕಷ್ಟವಾಗಿ ಕಾಣುತ್ತದೆ. ಇದನ್ನು ತಪ್ಪಿಸಿಕೊಳ್ಳಬೇಕಾದರೆ, ನಾವು ಕೆಲವು ದಿನಗಳವರೆಗಾದರೂ ತಡೆದಿದ್ದು ಎಚ್ಚರದಲ್ಲಿರಬೇಕು. ಇಲ್ಲದಿದ್ದರೆ,

ಅವರು ನಮ್ಮನ್ನು ಕಂಡುಹಿಡಿದಾರು!' ಹೀಗೆ ಹೇಳಿ, ನನ್ನನ್ನು ಅಲ್ಲಿಂದ ಆಗಲೇ ಹೊರಡಿಸಿ, ತಾವೂ ಹೊರಟುಹೋದರು. ನಾನು ಅಲ್ಲಿಂದ ಹೊರಟವನು, ಆ ಊರಲ್ಲಿ ಮತ್ತೆಲ್ಲಿಯೂ ನಿಲ್ಲಲು ಧೈರ್ಯ ವಿಲ್ಲದೆ, ಅದೇ ಮುಖದಿಂದಲೇ ಹೊರಟುಬಂದೆನು.

ಯುವಕ—ಸಂಶಯದಿಂದ,–'ಅದಿರಲಿ; ಇದೇಕೆ? ನಿನ್ನ ಗಂಟಲು ಹೀಗೆ ಒಡೆದು, ನಾಲ್ಕಾರು ಕಂಠಗಳಾಗಿ ತೋರುತ್ತಿದೆ?'

ನರಸಿಂಗ—ಸ್ವಾಮೀ! ಗಂಟಲು ಒಡೆಯುವುದು ಹೆಚ್ಚೇ? ಮೂರು ದಿನಕ್ಕೂ 200 ಮೈಲಿ ನಡೆಯುವುದು ಸುಮ್ಮನಾಗುವುದೇ? ಅದರಲ್ಲಿ ಅನ್ನ ನೀರು ಇಲ್ಲದೆ, ಒಂದೆಡೆ ನಿಲ್ಲಲಿಕ್ಕಾದರೂ ಆಗದೆ, ನಿದ್ದೆಯನ್ನು ತೊರೆದು, ಸಿಕ್ಕಿದ ನೀರು ಕುಡಿದು, ಬಿಸಿಲಲ್ಲಿ-ಗಾಳಿ ಯಲ್ಲಿ ಸುತ್ತಿಬಂದರೆ, ಗಂಟಲು ಒಡೆಯದಿದ್ದೀತೇ! ಹೊಟ್ಟೆಯು ಲ್ಲೆಲ್ಲಾ ಹುಣ್ಣಾಗಿಹೋಗಿದೆ.

ಯುವಕ—ತಲೆಗೆ ಸುತ್ತಿರುವುದೇನು? ಮುಖದಮೇಲೆ ಪಟ್ಟಿಯೇಕೆ?

ನರಸಿಂಗ—ಬರುವಾಗ ಬಾಯಾರಿಕೆ ಹೆಚ್ಚಾಗಿದ್ದುದರಿಂದ, ದಾರಿಯಲ್ಲಿದ್ದ ಕೆರೆಯಲ್ಲಿಳಿದು ನೀರುಕುಡಿಯ ಹೋದೆನು. ತಲೆಸುತ್ತಿ ಕೆಳಗೆ ಬಿದ್ದು ಬಹಳ ಹೊತ್ತು, ಮೈಮರೆದಿದ್ದು, ಆ ಬಳಿಕ ಎಚ್ಚೆತ್ತು ನೋಡಿದೆನು. ಮೈಯೆಲ್ಲಾ ಗಾಯವಾಗಿತ್ತಲ್ಲದೆ ತಲೆಯಲ್ಲಿಯೂ, ಮುಖದಲ್ಲಿಯೂ ಎರಡೆರಡು ಕಡೆಗಳಲ್ಲಿ ದೊಡ್ಡ ದೊಡ್ಡ ಗಾಯ ಗಳಾಗಿದ್ದು, ರಕ್ತವು ಸುರಿಯುತ್ತಿತ್ತು. ರಕ್ತವನ್ನು ತಡೆಗಟ್ಟ ಲಿಕ್ಕೆಂದು ಬಟ್ಟೆಯನ್ನು ಹರಿದು, ಕಾಡುಸೊಪ್ಪಿನ ರಸದಲ್ಲಿ ಅದ್ದಿ, ಗಾಯಕ್ಕೆ ಪಟ್ಟಿಹಾಕಿದೆನು. ಆದರಿಂದ ಬಾಧೆ ಹೆಚ್ಚಾಗದಿದ್ದರೂ ಜ್ವರವೇನೋ ಬಲವಾಗಿ ಬಂದಿದೆ.

ಕರಾಳ—ಹಾಗಿದ್ದರೆ, ಹೋಗಿ ಗುಣವಾಗುವವರೆಗೂ ಇದ್ದು, ಸುಧಾರಿಸಿ ಕೊಂಡಬಳಿಕ ಬಾ.

ನರಸಿಂಗ—ಹಾಗೆಯೇ ಮಾಡಬೇಕು; ಆದರೆ, ಪುಟ್ಟಮ್ಮಣ್ಣಿಯವರು, ಮಗಳಿಗೆ ಹೇಳಿರುವ ಮಾತನ್ನೂ ಹೇಳಿ ಹೋಗಬೇಕಾಗಿದೆ. ಯಾರಾದರೂ ಜತೆಗೆ ಬಂದರೆ ಹೇಳಿ ಹೋಗುತ್ತೇನೆ

ಕರಾಳ—ಯುವಕನನ್ನು ನೋಡಿ,–' ಮಗು, ಸುಪಂಧ ! ನಡೆ ; ನೀನೇ ಹೋಗಿ ಬಾ.'

ಯುವಕನು, ನರಸಿಂಗನನ್ನು ಜತೆಗೊಂಡು, ಗುಡ್ಡದಿಂದಿಳಿದು, ಗುಡ್ಡದ ಕೆಳಗಿನ ಗುಹೆಯನ್ನು ಪ್ರವೇಶಿಸಿ, ಅಲ್ಲಿಂದತ್ತ ಹೊರಟು, ಒಂದು ಸಣ್ಣ ತೋಟವನ್ನು ಸೇರಿ, ತೋಟದಲ್ಲಿದ್ದ ಕಲ್ಲುಕಟ್ಟಡದ ಹಳೆಯಮನೆಯ ಬಳಿಗೆ ಬಂದುನಿಂತನು ಮನೆಬಾಗಲಿಗೆ ಹೊರಗಡೆಯಿಂದ ಬೀಗಹಾಕಿದ್ದಿತು. ಸುಪಂಧನು ಬೀಗವನ್ನು ತೆಗೆದು ಬಾಗಲನ್ನು ತಳ್ಳಿದನು ; ತೆರೆಯಲಿಲ್ಲ. ಒಳಗೆ ಅಗಣಿ ಹಾಕಿದ್ದಿತು. ಕುತೂಹಲದಿಂದ ಕಿಟಿಕಿಯ ಕದಗಳನ್ನು ಬಲವಾಗಿ ತಟ್ಟಿದನು. ಹಳೆಯದಾಗಿದ್ದುದರಿಂದ, ಅದು ಸೀಳಿ ಕೆಳಗೆ ಬಿದ್ದಿತು ಸುಪಂಧನು ಕಿಟಿಕಿಯಲ್ಲಿ ಮುಖವಿಟ್ಟುನೋಡಿದನು. ಮನೆಯೊಳಗಡೆ ಮಂಚದಮೇಲೆ ಯಾರೋ ಮುಸುಕಿಟ್ಟುಮಲಗಿದ್ದಂತೆ ಕಂಡುಬರಲು, ಮೆಲ್ಲನೆ ಕೂಗಿದನು,–' ಹೂಂ ! ಏಳು, ಏಳು ; ಬಾಗಿಲನ್ನು ತೆಗೆ ! ನಿನ್ನನ್ನು ನೋಡಲು, ನಿಮ್ಮೂರಿನವನು ಬಂದಿರುವನು.' ಉತ್ತರವು ಹೊರಡುವ ಮಾತು ಹಾಗಿರಲಿ ; ಮಲಗಿದ್ದ ವ್ಯಕ್ತಿಯು ಕದಲಿದಂತೆಯೂ ಕಾಣಲಿಲ್ಲ. ಮತ್ತೆಮತ್ತೆ ಕೂಗಿದನು. ಆದರೂ ಉತ್ತರವಿಲ್ಲದಿದ್ದುದರಿಂದ, ದಿಗಿಲು ಬಿದ್ದು ಹೇಳಿದನು,–' ನರಸಿಂಗ ! ಇದೇನೋ ವಿಪರ್ಯಾಸವಾಗಿದೆ.'

ನರಸಿಂಗ—ತಲೆದೂಗಿ.–' ಸ್ವಾಮಿಾ ! ದುಡುಕಿ ಗಲಭೆಮಾಡಬೇಡಿರಿ ; ನಾನೇ ಕೂಗಿ ನೋಡುತ್ತೇನೆ ; ಇರಲಿ.' ಎಂದು ತಡೆದು ನಿಲ್ಲಿಸಿ, ತಾನೇ ಕಿಟಿಕಿಯ ಬಳಿಗೆ ಬಂದು ಕೂಗಿಹೇಳಿದನು,–' ತಾಯಿಾ ! ಭಯಪಡಬೇಡಿರಿ. ನಾನು ವಿಷಹರಪುರದಿಂದ ಬಂದವನು. ತಮ್ಮ ತಾಯಿ, ಸುನಂದಾದೇವಿಯವರೇ ನನ್ನನ್ನು ಕಳಿಸಿದ್ದಾರೆ. ನಿಮ್ಮ

ನ್ನುನೋಡಿ, ನಿಮ್ಮಲ್ಲಿ ಒಂದೆರಡು ಮಾತುಗಳನ್ನು ಹೇಳಿ ಬಾರೆಂದು ಅಂದಿರುವರು. ಎದ್ದು ಕುಳಿತು ಕೇಳಿದರೆ, ಹೇಳಿಹೋಗುತ್ತೇನೆ.' ಮಲಗಿದ್ದ ವ್ಯಕ್ತಿಯು ಹಾಗೆಯೇ ಮೆಲ್ಲನೆ–' ಯಾವ ಮಾತಿದ್ದರೂ ಹಾಗೆಯೇ ಹೇಳಿಹೋಗು.' ಎಂದು ಹೇಳಿದಳು.

ನರಸಿಂಗ—ಹಾಗೂ ಆಗಲಿ. ನಿಮ್ಮ ತಾಯಿಯವರು ಹೀಗೆ ಹೇಳಿರುವರು–' ಮಗು ! ನೀನು ಭಯಪಡಬಾರದು. ನೀನು ಅನ್ಯರ ಕೈಸೇರಿಹೋಗಿಲ್ಲ. ನಿಮ್ಮ ಚಿಕ್ಕಮ್ಮನ ತಂದೆಯಬಳಿಯಲ್ಲಿರುತ್ತೀಯೆ. ಧೈರ್ಯವಾಗಿರು ! ನಾನಿಲ್ಲಿಗೆ ಬಂದು ಮೋಹನನೊಡನೆ ಸುಖವಾಗಿದ್ದೇನೆ. ನಿಮ್ಮ ಚಿಕ್ಕಮ್ಮನು ನನ್ನಲ್ಲಿ ಬಹು ಪ್ರೇಮವಿರಿಸಿರುತ್ತಾಳೆ. ಅವಳ ಪ್ರೀತಿಗೆ ನಾನು ಕಟ್ಟುಬಿದ್ದಿರುತ್ತೇನೆ. ಯಾವ ಭಾಗಕ್ಕೂ ಕೊರತೆಯಿಲ್ಲ. ಅದಲ್ಲದೆ, ನಿಮ್ಮ ಚಿಕ್ಕಮ್ಮನ ತಮ್ಮನಾದ ಸುಪಂಥನೆಂಬುವವನಿಗೆ ನಿನ್ನನ್ನು ಕೊಟ್ಟು ಮದುವೆಮಾಡಬೇಕೆಂಬ ಇಷ್ಟವಿದೆ. ಅವಳ ಈ ಇಷ್ಟವನ್ನು ನಾವು ಒಪ್ಪಬೇಕಾಗಿರುವುದರಿಂದ, ನೀನು ಇದಿರಾಡದೆ ಒಪ್ಪಿಕೆಯನ್ನು ಕೊಡಬೇಕಾಗಿದೆ.'

ವ್ಯಕ್ತಿ—ಇಷ್ಟೇಯೋ–ಇನ್ನೂ ಇದೆಯೋ ?

ನರಸಿಂಗ—ನೀವು ಇದಕ್ಕೆ ಒಪ್ಪಿದರೆ, ಬೇಗನೆಯೇ ನಿಮ್ಮನ್ನು ತಮ್ಮಲ್ಲಿಗೆ ಕರೆಯಿಸಿಕೊಳ್ಳುತ್ತಾರಂತೆ !

ವ್ಯಕ್ತಿ—ವಿಕೃತಸ್ವರದಿಂದ ' ನನ್ನ ಒಪ್ಪಿಗೆಯನ್ನು ಕೇಳಬೇಕಾಗಿಲ್ಲ. ಬೇಕಾದಹಾಗೆ ಮಾಡಬಹುದು. ನೀನು ಹೋಗು.'

ಸುಪಂಥನಿಗೆ ಸಂತೋಷಾತಿಶಯದಿಂದ ಮುಖವು ರಂಗೇರಿ, ಮೆಯ್ಯುವಿರೆದ್ದು, ಹೃದಯದಲ್ಲಿ ಆತುರವು ತಲೆದೋರಿತು. ನಿಲ್ಲಲಾರದೆ, ಅವಸರದಲ್ಲಿ ಬಾಗಿಲಿಗೆ ಮತ್ತೆ ಬೀಗಹಾಕಿ, ನರಸಿಂಗನನ್ನು ಕುರಿತು ಹೇಳಿದನು–' ನರಸಿಂಗ ! ನಾನು ಈಗಲೇ ಹೋಗಿ, ತಂದೆಯಬಳಿಯಲ್ಲಿ ಈ

ಸಂತೋಷವಾರ್ತೆಯನ್ನು ತಿಳಿಸಿ, ಮುಂದಿನ ಕೆಲಸಗಳನ್ನು ಜಾಗ್ರತೆಪಡಿಸುವೆನು ; ನೀನಿನ್ನು ಹೊರಡು.'

ನರಸಿಂಗನು, ಆಗಲೆಂದೊಪ್ಪಿ ಅಲ್ಲಿಂದಹೊರಟು, ಸ್ವಲ್ಪದೂರಹೋಗಿ ಮರದಮರೆಯಲ್ಲಿ ಮರೆಯಾದನು. ಭ್ರಾಂತನಾಗಿದ್ದ ಸುಪಂಥನಿಗೆ ಅದಾವುದೂ ತಿಳಿಯಲಿಲ್ಲ ; ಒಂದೇ ಓಟದಲ್ಲಿ ಓಡಿಹೋದನು. ಈತನು ಹೊರಟು ಹೋದ ಉತ್ತರಕ್ಷಣದಲ್ಲಿಯೇ ಮರೆಯಾಗಿದ್ದ ನರಸಿಂಗನು ಮತ್ತೆಬಂದು, ಕಿಟಕಿಯಬಳಿಯಲ್ಲಿ ನಿಂತು ಕೂಗಿದನು. ' ಏಂದಾ ! ಏಂದಾ !! '

ಮಲಗಿದ್ದವ್ಯಕ್ತಿ—ಬೆದರಿಬಿದ್ದೆದ್ದು ಕುಳಿತು ಕೇಳಿದಳು–' ಯಾರದು ? ಹೆಸರೆತ್ತಿಕೂಗುವರು ? ಇಲ್ಲೇನುಕೆಲಸ ? '

ನರಸಿಂಗ—' ಭಯಪಡಬೇಡ ! ನಾನೊಬ್ಬ ರಾಜಕರ್ಮಚಾರಿ. ಉಳಿದ ವಿಚಾರವೆಲ್ಲವೂ, ಈ ಕಾಗದದಿಂದಲೇ ತಿಳಿಯುತ್ತದೆ. ನಿಧಾನಿಸಿ ನೋಡಿ ತಿಳಿ ನಾಳೆಯರಾತ್ರಿ ಮತ್ತೆಯೂ ನಿನಗೆ ಕಾಣಿಸಿಕೊಳ್ಳುವೆನು.' ಎಂದು ಹೇಳಿ, ಪಾಗಿಸೊಳಗಡೆಯಲ್ಲಿ ಅಡಗಿದ್ದ ಪತ್ರವನ್ನು ತೆಗೆದು ಕಿಟಕಿಯಿಂದ ಕೆಳಗೆ ಬಿಸುಟು, ಅಂಗಿಯ ಕಿಸೆಯಲ್ಲಿದ್ದ ಮೇಣದ ಬಿಲ್ಲೆಯನ್ನು ಹೊರತೆಗೆದು, ಬಾಗಿಲಿಗೆ ಹಾಕಿದ್ದ ಬೀಗಕ್ಕೆ ಒತ್ತಿ, ಅದರ ಆಕಾರವನ್ನು ತೆಗೆದುಕೊಂಡು, ಅಲ್ಲಿ ನಿಲ್ಲದೆ ಹೊರಟುಹೋದನು. ನರಸಿಂಗನಾಮಧಾರಣೆಯಿಂದ ಬಂದಿದ್ದ ದಾರಿಗನಾರೋ, ಅವನ ಈ ಅನ್ವೇಷಣದ ಮೂಲಮಂತ್ರವೆಂತಹದೋ, ಮುಂದೆ ತಿಳಿಯಬಹುದಲ್ಲವೇ ? (ಆಗಬಹುದು.)

|| ಶ್ರೀ ||

# ದ್ವಿತೀಯಪರಿಚ್ಛೇದ.

(ಪೂರ್ವಸ್ಮರಣೆ.)

ವಿಂದೆಯು ಹಾಸಿಗೆಯಿಂದೆದ್ದುಬಂದು, ಕಿಟಕಿಯಿಂದ ಕೆಳಗೆ ಬಿದ್ದ ಪತ್ರವನ್ನು ಕೈಕೊಂಡು, ಕಿಟಕಿಯಲ್ಲಿ ಮುಖ ವಿಟ್ಟು, ಒಂದುಬಾರಿ ಹೊರಗಡೆಯನ್ನು ಚೆನ್ನಾಗಿ ನೋಡಿದಳು ; ಯಾರೂ ಇರಲಿಲ್ಲ. ಮನಸ್ಸಿಗೆ ಧೈರ್ಯ ವಾಯಿತು. ಮಿಣಗುಟ್ಟುತ್ತಿದ್ದ ದೀಪದ ಬತ್ತಿಯನ್ನೆತ್ತಿ, ಆದರ ಬಳಿಯಲ್ಲಿ ಕುಳಿತು, ಕುತೂಹಲ, ಭಯ, ವಿಸ್ಮಯಗಳಿಂದ ಪತ್ರವನ್ನು ಓದಿದಳು.

(ಪತ್ರವು ಈ ಬಗೆಯಾಗಿ ವಿಲಿಖಿತವಾಗಿದ್ದಿತು.)

‘ ಸುನಂದಾನಂದನೆ !

ಬಂಧನವೆಂಬುದು ಯಾರಿಗೂ ತಪ್ಪಿದುದಲ್ಲ. ಮೊದಲು ಸೀತೆಯ ವನವಾಸ, ಚಂದ್ರಮತಿಯ ದಾಸ್ಯ, ಪಾಂಚಾಲಿಯ ಅಜ್ಞಾತವಾಸ ಇವುಗಳನ್ನು ನೀನು ಚೆನ್ನಾಗಿ ಓದಿ ತಿಳಿದೇಇರುವೆಯಲ್ಲವೆ ? ಆದುದರಿಂದ, ಈಗ ನಿನಗಾಗಿರುವ ಬಂಧನ ಕ್ಲೇಶಗಳನ್ನು ಕುರಿತು, ನೀನು ನಿರಾಶಳಾಗುವುದು ಸರಿಯಲ್ಲ.

ಸತ್ಯಕ್ಕೆ ಯಾವಾಗಲೂ ಜಯವೇ ಸಿದ್ಧವಾಗಿರುವುದು. ಈಗ ನೀನು ದ್ರೋಹಿಗಳ ಕೈಗೆ ಸಿಕ್ಕಿರುತ್ತೀಯಾದರೂ, ಸತ್ಯಸಂಧರೂ, ಭಗವದ್ಭಕ್ತರೂ ಆದ ನಿನ್ನ ತಾಯ್ತಂದೆಗಳ ಮತ್ತು ಗುರುಜನರ ಅನುಗ್ರಹದಿಂದೆಯೂ, ನಿನ್ನ ಸೌಶೀಲ್ಯಪ್ರಭಾವದಿಂದೆಯೂ ನಿನ್ನಲ್ಲಿ ದೈವಬಲವು ಸಿದ್ಧವಾಗಿರುವುದು. ಕಾಲಬಲವು ಸಂತಾಪವನ್ನುಂಟುಮಾಡಬಹುದಾದರೂ,

ದೈವಬಲವನ್ನು ಅದು ಹೇಗೂ ಪ್ರತಿಭಟಿಸಲಾರದು. ಸತ್ಯಾತ್ಮರಿಗೊದವಿದ ಆಪದವೂ, ದುರಾತ್ಮರಿಗುಂಟಾದ ಸಂಪದವೂ ಅತ್ಯಲ್ಪಕಾಲದಲ್ಲಿಯೇ ಅದೃಶ್ಯವಾಗುವುವೆಂಬ ಸೂಕ್ತಿಯು ಎಂದಿಗೂ ತಪ್ಪಾಗಲಾರದು. ಇದನ್ನ ರಿತು ಧೈರ್ಯದಿಂದಿರು.

ಮಿತ್ರವಿಂದಾ !

ಈಗ ನಿನಗೊದವಿದ ಸಂಕಟವನ್ನು ತಿಳಿದು ಅನುತಾಪಪಡುವೆನಲ್ಲದೆ, ನಿನ್ನ ಬಂಧಮೋಚನಕ್ಕೂ, ವಿಧರ್ಮಿಗಳನ್ನು ನಾಶಮಾಡುವುದರಿಂದಾಗುವ ಶ್ರೇಯೋಭಿವೃದ್ಧಿಗೂ ಇದೇ ಸಹಕಾರಿಯಾಗಿ ಪರಿಣಮಿಸುವುದೆಂಬ ನೂತನ ಶಕ್ತ್ಯುತ್ಸಾಹದಿಂದ ನಿನ್ನ ಬಿಡುಗಡೆಗಾಗಿ ಪ್ರಯತ್ನವನ್ನೂ ಮಾಡುತ್ತಿರುವೆನು. ಈಗಾಗಲೇ ತಕ್ಕ ಏರ್ಪಾಟುಗಳೂ ನಡೆದು-ನಡೆಯುತ್ತಿರುವುವು. ಮತ್ತು ಇಷ್ಟರಲ್ಲಿಯೇ ಅಹಿತರು ಸಿಕ್ಕಿಬಿದ್ದು, ಪ್ರಯತ್ನಕಾರ್ಯವೂ ಫಲಿಸುವ ಸೂಚನೆಯು ಕಾಣುತ್ತಿರುವುದು.

ಮತ್ತೊಂದುವಿಚಾರ—ನಿನಗೆ ಇಂದು ಪತ್ರವನ್ನು ತಂದಿತ್ತವನೇ ನಾಳೆಯ ರಾತ್ರಿಯಲ್ಲಿಯೂ ನಿನಗೆ ಕಾಣಿಸಿಕೊಳ್ಳುವನು. ಆ ವೇಳೆಯಲ್ಲಿ, ನೀನು ಕೂಗಿಕೊಳ್ಳುವುದಾಗಲೀ, ಹಟಮಾಡುವುದಾಗಲೀ ಸರಿಯಲ್ಲ. ಆದರೆ, ಆ ಬರುವವನು ತನ್ನ ನೈಜವಾದ ಸ್ವರೂಪದಲ್ಲಿಯೇ ಬರದೆ ವೇಷಾಂತರದಿಂಡ ಬರುವನಾದುದರಿಂದ, ಪತ್ರದ ವಿಚಾರವನ್ನೆತ್ತದೆಯೇ ನೀನು ಬಾಗಿಲನ್ನು ತೆರೆಯಲಾಗದು. ನಿನ್ನನ್ನು ನೋಡಬರುವಾತನೇ ನಿನ್ನ ಬಿಡುಗಡೆಗೆ ಉಪಾಯವನ್ನೂ, ಮತ್ತು ನನ್ನ ಪರಿಚಯವನ್ನೂ, ಸೂಚಿಸುವನು. ಈ ವಿಚಾರಗಳನ್ನು ಚೆನ್ನಾಗಿ ನೆನಪಿಟ್ಟು, ಎಚ್ಚರಿಕೆಯಿಂದಿರು.

ಇತಿ ನಿನ್ನ ಶ್ರೇಯೋಭಿಲಾಷಿ.'

ಪತ್ರಾಲೋಕನದಿಂದ ವಿಂದೆಯ ಮನಸ್ಸಿಗುಂಟಾದ ಆನಂದವನ್ನು ಇಲ್ಲಿ ವಿವರಿಸಲಿಕ್ಕಾಗಲಾರದು. ಹತಾಶರಾಗಿ ಬಿದ್ದಿದ್ದವರಿಗೆ, ಸುಖವೂ ಯಸ್ವರೂಪವೇ ಪ್ರತ್ಯಕ್ಷವಾದಂತಾದರೆ, ಹೇಳುವುದೇನು ! ಹೇಗೂ ಇರಲಿ, ವಿಂದೆಯು ಪತ್ರವನ್ನು ಮತ್ತೊಮ್ಮೆ ಓದಿದಳು ; ತಣಿಯಲಿಲ್ಲ. ಮತ್ತೆ

ಮತ್ತೆ ಓದಿದಳು. ಎಷ್ಟುಸಾರಿ ಓದಿದರೂ ತಣಿಯದೆ, ಅಷ್ಟಷ್ಟಕ್ಕೂ ಆಶೆಯು ಹೆಚ್ಚುತ್ತಲೇ ಇದ್ದಿತು. ತನಗೀವಿಪತ್ತನ್ನು ತಂದೊಡ್ಡಿದ ವಿದ್ರೋಹಿಗಳನ್ನು ಶಪಿಸಿದಳು. ತನ್ನ ಬಿಡುಗಡೆಗಾಗಿ ಹೇಳಿರುವ ಮಾತುಗಳನ್ನು ಅಡಿಗಡಿಗೂ ನೋಡಿನೋಡಿ, ನಲಿದಾಡುತ್ತಿದ್ದಳಲ್ಲದೆ, ದಾರದಮೇಲಾದರೂ ತನ್ನ ವಿಷಯದಲ್ಲಿ ಕೃಪೆತೋರಿದುದಕ್ಕಾಗಿ, ಆ ಭಗವಂತನನ್ನು ಭಕ್ತಿಪೂರ್ವಕವಾಗಿ ವಂದಿಸಿದಳು. ಅನಾಥಬಂಧುವಾಗಿ, ಆಪತ್ಕಾಲದಲ್ಲಿ ಅಭಯವಿತ್ತ ಪತ್ರಕಾರನನ್ನು ಮನದಲ್ಲಿಯೇ ನೆನೆನೆನೆದು ಹಿಗ್ಗುತ್ತಿದ್ದಳು. ಕ್ರೋಧ-ವಿಸ್ಮಯ-ಕುತೂಹಲ-ಕೃತಜ್ಞತೆ ಇತ್ಯಾದಿಗಳಿಂದ ಅಧೀರಳಾಗಿ ಕಡೆಗೆ, ಒಂದೆಡೆಯಲ್ಲಿ ನಿಲ್ಲಲಾರದೆ ಬಂದು ಹಾಸಿಗೆಯಮೇಲೆ ಮಲಗಿದಳು, ನಿದ್ದೆಬಾರದೆ ಒದ್ದಾಡಿದಳು. ಎಷ್ಟುಹೇಳಿದರೇನು ? ಅವಳು ಆ ರಾತ್ರಿಯಲ್ಲಿ ಹೇಗಾಗಿದ್ದಳೆಂದರೆ—ಏಳುವಳು, ಬೀಳುವಳು, ಬೆದರಿನೋಡುವಳು, ಮತ್ತೆ ಪತ್ರವನ್ನು ನೋಡಿ ತಲೆದೂಗಿ ಹಿಗ್ಗುವಳು. ಹೆಚ್ಚೇಕೆ ? ಪರಮಾತ್ಮನನ್ನು ಕೊಂಡಾಡುವುದರಲ್ಲಿಯೂ, ಪತ್ರಕಾರರನ್ನು ವಂದಿಸುವುದರಲ್ಲಿಯೂ, ಅಹಿತರನ್ನು ಶಪಿಸುವುದರಲ್ಲಿಯೂ ಆ ರಾತ್ರಿಯನ್ನು ಕಳೆದಳೆಂದರೆ ಸಾಕು.

ಕಾಲಚಕ್ರವು ಹೇಗಿದ್ದರೂ, ತನ್ನ ನಿಯಮಕ್ಕೆ ಸರಿಯಾಗಿ ಸುತ್ತುತ್ತಿರುವುದನ್ನು ಬಿಡಲೊಲ್ಲದಷ್ಟೆ ! ಬಿಂದೆಯ ಈ ವಿಧವಾದ ರೋದನದಲ್ಲಿಯೇ ಕತ್ತಲೆಕಳೆದು, ಬೆಳಕು ತಲೆದೋರಿತು. ಪ್ರಭಾತರಾಗವು ತಲೆದೋರಿದಬಳಿಕ, ಬಿಂದೆಯ ಮನಸ್ಸ್ಥಿತಿಯೂ ಸ್ವಲ್ಪಮಟ್ಟಿಗೆ ಶಾಂತಿಯನ್ನು ವಹಿಸುವಂತಾಯಿತು. ಮನವು, ಸಮಾಧಾನಸ್ಥಿತಿಗೆ ಬಂದಮೇಲೆ ಬಿಂದೆಗೆ ಹಸಿವು, ಬಾಯಾರಿಕೆಗಳ ಬಾಧೆಯೂ ಕಂಡುಬಂದಿತು. ಮಲಗಿದ್ದವಳು, ಹಾಸಿಗೆಯನ್ನುಳಿದೆದ್ದು ಬಂದು, ಅಡ್ಡಗೋಡೆಯಬಳಿಯಲ್ಲಿದ್ದ ಜಲದ್ವಾರದ ಬಳಿಯಲ್ಲಿ ನಿಂತು ಅಲ್ಲಿಯೇ ಪಾತ್ರೆಯಲ್ಲಿದ್ದ ನೀರಿನಿಂದ ಕೈಕಾಲು ಮುಖಗಳನ್ನು ತೊಳೆದುಕೊಂಡಳು, ಮತ್ತೆ ಬಂದು ಹಾಸಿಗೆಯಮೇಲೆ

ಕುಳಿತು ಆಹಾರನಿರೀಕ್ಷೆಯಲ್ಲಿದ್ದಳು. ಎಷ್ಟೆಷ್ಟು ತಡೆದರೂ ನಿಲ್ಲದೆ, ಸಂಕಟದಿಂದ ಇವಳ ಕಣ್ಣುಗಳಲ್ಲಿ ಬಿಸಿಬಿಸಿಯಾದ ನೀರು ಸುರಿಯುತ್ತಿದ್ದಿತು. ಎಷ್ಟೋಹೊತ್ತಿನಮೇಲೆ, ಹೊರಗಡೆ ಬೀಗವನ್ನು ತೆಗೆವಂತೆ ಶಬ್ದವಾಯಿತು. ವಿಂದೆಯು ಭಯದಿಂದೆದ್ದುಬಂದು, ಬಾಗಿಲಬಳಿಯಲ್ಲಿ ನಿಂತಳು.

ಹೊರಗಡೆಯಲ್ಲಿ ಬೀಗವನ್ನು ತೆಗೆದವನು, ಮೊದಲು ಗುಡ್ಡದಲ್ಲಿ ಕುಳಿತಿದ್ದ ಕರಾಳವದನನಾಗಿದ್ದನು. ಕರಾಳನು ಬೀಗವನ್ನು ತೆಗೆದು ಬಾಗಿಲನ್ನು ತಳ್ಳಿದನು. ಅದೂ ತೆಗೆಯಲ್ಪಡಲಿಲ್ಲ; ಉತ್ತರವೂ ಹೊರಡಲಿಲ್ಲ. ಕರಾಳನು ಕಿಟಕಿಯಬಳಿಗೆ ಬಂದು ಬಗ್ಗಿನೋಡಿದನು. ವಿಂದೆಯು ಕಣ್ಣಿಗೆ ಬೀಳಲಿಲ್ಲವಾದುದರಿಂದ, ಕೂಗಿಹೇಳಿದನು- -' ಹುಚ್ಚುಹುಡುಗಿ! ಸುಮ್ಮನೇಕೆ ಹಟಮಾಡಿ ಸಾಯುತ್ತೀಯೆ? ಭಯಪಡುವುದೇಕೆ? ಬಾಗಿಲನ್ನು ತೆರೆದು, ಆಹಾರವನ್ನು ತೆಗೆದುಕೊ.'

ವಿಂದೆ—ಮರೆಯಾಗಿಯೇ ಇದ್ದು ಹೇಳಿದಳು–' ಈಗಲೇ ನನಗೆ ಆಹಾರವು ಬೇಕಿಲ್ಲ; ನಾನು ಬಾಗಿಲನ್ನು ತೆಗೆಯಲಾಗಲಿಕ್ಕಿಲ್ಲ.'

ಕರಾಳ—ಪ್ರೀತಿವ್ಯಂಜಕಸ್ವರದಿಂದ ' ಮಗು! ಹೀಗಾಡಬಾರದು. ಹಸಿದುಸಾಯುವುದು ಯಾವಧರ್ಮ? ಅಂತಹ ವಿಪತ್ತು ನಿನಗೇಕೆ ಬಂದೀತು? ನಿನ್ನನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿಯೇ ನೋಡುವೆವಲ್ಲದೆ, ನಿನಗೆ ಕೆಡುಕೇನನ್ನೂ ಮಾಡುವವರು ನಾವಲ್ಲ. ನನ್ನಲ್ಲಿ ನಿನಗೆ ಭಯಕ್ಕಾದರೂ ಕಾರಣವೇನು? ನಿನ್ನನ್ನು ಪುತ್ರವಧುವ (ಸೊಸೆಯ) ನ್ನಾಗಿ ಮಾಡಿಕೊಳ್ಳಬೇಕೆಂದಿರುವ ನನ್ನನ್ನು ನಿನ್ನ ಮಾವನೆಂದೇ ತಿಳಿದು, ನಿಶ್ಶಂಕೆಯಿಂದ ಬಾಗಿಲನ್ನು ತೆರೆ; ಆಹಾರವನ್ನು ತೆಗೆದುಕೊ; ಸಮಾಧಾನದಿಂದಿರು.'

ವಿಂದೆ—ನಾನು, ಈಗ ಮಲಗಿರುವೆನು; ಏಳಲೊಲ್ಲೆನು. ನನಗೆ ಈಗ ಆಹಾರವೇನೂ ಬೇಕಾಗಿಲ್ಲ. ಯಾವುದನ್ನು ತಂದಿದ್ದರೂ ಕಿಟಿಕಿಯಲ್ಲಿರಿಸಿದ್ದರೆ, ಬೇಕಾದವೇಳೆಯಲ್ಲಿ ತೆಗೆದುಕೊಳ್ಳುವೆನು.

ಬಲವಂತನು ಮತ್ತೆ ಕೂಗಿಹೇಳಿದನು ; ಆದರೂ ಫಲವಾಗಲಿಲ್ಲ. ಹೇಳಿಹೇಳಿ ಬೇಸತ್ತನು ; ನಿಂತುನಿಂತು ಕಾಲುಗಳೂ ಸೋತುಹೋದುವು. ಏಂದೆಯ ಹಟವು ತಗ್ಗಲಿಲ್ಲ. ಕಡೆಗೆ ಉದಾಸೀನದಿಂದ 'ಹೇಗಾದರೂ ಮಾಡು ; ಹಟಮಾರಿಗೆ ಯಾರೇನುಮಾಡಲಾದೀತು ?' ಎಂದು ಹೇಳಿ ತಂದಿದ್ದ ಎರಡುರೊಟ್ಟಿಗಳನ್ನು ಕಿಟಕಿಯಿಂದೆಸೆದು, ಹಾಲಿನಕುಡಿಕೆಯನ್ನು ಕಿಟಕಿಯಲ್ಲಿರಿಸಿ, ಮತ್ತೆ ಬೀಗಹಾಕಿಕೊಂಡು ಹೊರಟುಹೋದನು.

ಏಂದೆಯು ಆತ್ಮನು, ಕ್ಷುದ್ಬಾಧೆಯಿಂದ ಒಳಲಿದ್ದಕಾರಣ ಬಲವಂತನು ಹೊರಟುಹೋಗುವುದನ್ನೇ ನಿರೀಕ್ಷಿಸುತ್ತಿದ್ದು ಅವನತ್ತಹೋದುದನ್ನು ಕಂಡು, ಎದ್ದುಬಂದು ಕುಡಿಕೆಯಲ್ಲಿದ್ದ ಹಾಲನ್ನು ಮಾತ್ರ ಕುಡಿದು, ರೊಟ್ಟಿಯನ್ನು ಕಡೆಗಣ್ಣಿಂದಾದರೂ ನೋಡದೆ, ಹಾಸಿಗೆಯಮೇಲೆ ಮಲಗಿದಳು. ಒಂದುಪಾವು ಹಾಲಿಂದ ಇವಳ ಹಸಿವು, ಬಾಯಾರಿಕೆ, ಬಳಲಿಕೆಗಳಿಂಗಲಿಲ್ಲ. ಪಾಪ ! ಹನ್ನೆರಡುವರ್ಷದ ಹುಡುಗಿಗೆ ಹಸಿವನ್ನು ತಡೆಯಬೇಕೆಂದರೆ, ಹೇಗಾದೀತು ?

ಏಂದೆಯು ಬಡಕುಟುಂಬದಲ್ಲಿ ಹುಟ್ಟಿದವಳಲ್ಲ ; ಆಗರ್ಭಶ್ರೀಮಂತರ ಮನೆತನದಲ್ಲಿ ಹುಟ್ಟಿದವಳು ; ಸುಧಾರಕ ಮಂಡಲಿಯಲ್ಲಿ ಪ್ರಖ್ಯಾತನಾದ, ಶ್ರೀಮಂತನ ಪ್ರೇಮಾತಿಶಯದಿಂದಲೇ ಬೆಳೆದವಳು. ಇಂತಹ ಸುಕುಮಾರಿಯು, ತನಗೆ ಈಗ ಬಂದೊದವಿದ ಸಂಕಟವನ್ನು ಹೇಗೆ ಸಹಿಸಬೇಕು ? ಆಪ್ತೇಷ್ಟರನ್ನೂ ತೊರೆದು, ಹೆತ್ತವರಿಗೆರೆವಾಗಿ, ಎಂದೂ ಕಂಡು-ಕೇಳದ ನಟ್ಟಡವಿಯಲ್ಲಿ, ಕಳ್ಳರಕೈಗೆ ಸಿಕ್ಕಿ ನರಳುವಾಗ ಹೇಗಾಗಿರಬೇಕೋ ! ಅನುಭವಶಾಲಿಗಳೇ ತಿಳಿದು ಹೇಳಬೇಕು.

ಏಂದೆಯು, ತನ್ನ ತಾತನಬಳಿಯಲ್ಲಿ ತಾನು ಹೊಂದುತ್ತಿದ್ದ ಸುಖಸಂತೋಷಗಳನ್ನೂ, ತನ್ನ ವ್ಯಾಸಂಗದಿಂದ ನಲಿನಲಿದು ಮುದ್ದಿಸುತ್ತಿದ್ದ ಆಪತ್ಬಾಂಧವರ ಅವ್ಯಾಜವಾತ್ಸಲ್ಯವನ್ನೂ ಸ್ಮರಿಸಿಸ್ಮರಿಸಿ ಹಂಬಲಿಸುತ್ತ, ತನ್ನನ್ನು ಈಗಾಗಿರುವ ಕಷ್ಟದಿಂದ ಪಾರುಮಾಡಿ, ಕಾಪಾಡೆಂದು ಭಗವಂತನನ್ನು ಕುರಿತು ದೈನ್ಯದಿಂದ ಬೇಡುತ್ತಿದ್ದಳು. ಇವಳ ಈ ಬಗೆಯ ಭಕ್ತಿಪುರಸ್ಸರವಾದ ಭಗವದ್ಧ್ಯಾನದಿಂದ ಮನಸ್ಸು ಪರವಶವಾಗಿ, ಇವಳು ಮೈಮರೆತು ಮಲಗಿ ನಿದ್ದೆಹೊಂದಿದಳು.

|| ಶ್ರೀ ||

## ತೃತೀಯಪರಿಚ್ಛೇದ.

(ಅಭಯಪ್ರದಾನ.)

ಹೇ, ನಿದ್ರೆಯೆ! ನಿನ್ನ ಸಾಮರ್ಥ್ಯವೇ ಸಾಮರ್ಥ್ಯ! ನೀನೆಂದೆಂದೂ, ಯಾರಿಗಾದರೂ ಅವಶಳಾಗಿಯೂ, ಅಬದ್ಧಳಾಗಿಯೂ ಇದ್ದು, ನಿನ್ನೀ ಮೋಹಬಲೆಯಲ್ಲಿ ಎಂದಾದರೂ, ಹೇಗಾದರೂ, ಪ್ರಾಣಿಗಳನ್ನು ವಶಪಡಿಸಿಕೊಳ್ಳದಿರಲಾರೆಯಲ್ಲವೆ! ನೀನು ಯಾರನ್ನೂ ಗಣಿಸಲೊಲ್ಲೆ; ಮತ್ತು ಕಾಲಾಕಾಲಗಳನ್ನಾಗಲೀ, ಸ್ಥಾನಪ್ರಸ್ಥಾನಗಳನ್ನಾಗಲೀ ನೀನು ಗಣಿಸಲಾರೆ. ಎಲ್ಲಿ, ನೀನು ಯಾರನ್ನು, ಯಾವವೇಳೆಯಲ್ಲಿ ಗುರಿಕಟ್ಟಿನೋಡುವೆಯೋ,-ಅಲ್ಲಿಯೇ ಅವರು, ಮತ್ತಾವುದನ್ನೂ ನೆನೆಯದೆ ಮೈಮರೆತು ಮಲಗುವಂತೆ ಮಾಡುವೆ. ಹಾಗಿಲ್ಲದಿದ್ದರೆ, ಮಧ್ಯಾಹ್ನದಲ್ಲಿ ಮಲಗಿದ ವಿಂದೆಯು, ರಾತ್ರಿ ಹತ್ತುಗಂಟೆ ಹೊಡೆದುಹೋಗಿದ್ದರೂ, ಎಚ್ಚರವೇ ಇಲ್ಲದೆ ಜಡಳಾಗಿ ಮಲಗಿರುತ್ತಿದ್ದಳೇನು? ಚಿಃ, ನೀನೆಷ್ಟರ ಧೂರ್ತಳಾಗಿರುವೆ! ನಡೆ ದೂರ; ಬಳಿಸಾರದಿರು. ನಮ್ಮನ್ನೂ ನಿನ್ನ ಬಲವತ್ಪಾಶದಲ್ಲಿ ಬಂಧಿತರನ್ನಾಗಿ ಮಾಡಬೇಕೆನ್ನುವೆಯೋ? ಬೇಡಬೇಡ, ಹಾಗೆ ಯೋಚಿಸಲೇಬೇಡ. ಕರ್ತವ್ಯದಲ್ಲಿ ಜಾಗ್ರತರಾಗಿರುವಂತೆ ಮಾತ್ರ-ನಮ್ಮನ್ನು ಉಲ್ಲಾಸಗೊಳಿಸುತ್ತಿದ್ದರೆ ಸಾಕು.

ಮುಳಿಯಬೇಡಿರಿ; ಪ್ರಿಯಪಾಠಕರೇ! ಮುಳಿದುಕೂಗಾಡಬೇಡಿರಿ. ನಿಮ್ಮ ಹರಕೆಯೇ ಕೈಕೂಡಿತು! ಅದೇನೋಡಿರಿ; ಕೆಟ್ಟಗೂಬೆಯೊಂದು ಮನೆಯಮೇಲೆಯೇ ಕುಳಿತು, ಕಕ್ಕಸದನಿಯಿಂದ ಕೂಗುತ್ತಿದೆ.

ಇನ್ನಿಹರ ಕೂಗನ್ನು ಕೇಳಿ, ಹನ್ನೆರಡುವರ್ಷದ ಬಾಲಿಕೆಯಾದ ನಮ್ಮ ವಿಂದೆಯು ಹೇಗೆ ಸಹಿಸಬೇಕೋ-ನೀವೇ ಊಹಿಸಿ ಹೇಳಿರಿ?

ಚಿಃ! ಕೆಟ್ಟಗೂಬೆ! ನೀನಿಲ್ಲಿಗೇಕೆಬಂದೆ? ಹೀಗೇಕೆಕೂಗಿದೆ? ಸುಖನಿದ್ರೆಯಲ್ಲೊರಗಿದ್ದ ಸುಕುಮಾರಿಯ ವಿರತಿಸುಖಕ್ಕೆ, ನೀನೇಕೆ, ವಿಘ್ನಕಾರಿಯಾಗಿ ಪರಿಣಮಿಸಿದೆ? ಸರಿಸರಿ! ನಿನ್ನೀಕಠಿಣತೆಗಾಗಿಯೇ ನಿನ್ನನ್ನು ಕೇಡಿಗನೆಂದೆಲ್ಲರೂ ಕಂಡಕಂಡಲ್ಲಿ ಬಡಿದಟ್ಟುತ್ತಿರುವರು. ಸಾಕುಸಾಕು, ತೊಲಗತ್ತ; ಕೂಗದಿರು. ವಿಂದೆಯನ್ನು ಸಂತಯಿಸುವೆವು.

ಪಾಪ! ವಿಂದೆಯು ಗೂಬೆಯ ಕೂಗಿಗೆ ದಿಗಿಲುಬಿದ್ದೆದ್ದು ಕುಳಿತು, ಸುತ್ತಲೂ ನೋಡಿದಳು. ನಟ್ಟಿರುಳು; ಕಗ್ಗತ್ತಲೆ, ಸಾಲದುದಕ್ಕೆ ಸುತ್ತಮುತ್ತಲೂ ಸಂಚರಿಸುವ ಕಾಡುಮೃಗಗಳ ಕೂಗಾಟ. ಇಂತಿವುಗಳಿಂದ ಆವಳ ಮನಸ್ಸು ಹೊಡೆದುಕೊಳ್ಳತೊಡಗಿತು; ತಲೆಯು ಮಿದುಳೇ ಹಾರಿ ಹೋದಂತಾಯಿತು. ಸಂಕಟವನ್ನು ತಡೆಯಲಾರದೆ ಅಳುತಳುತ್ತ-ಗಟ್ಟಿಯಾಗಿ ಕೂಗಿ ಮೊರೆಯಿಟ್ಟಳು-'ಅಯ್ಯೋ, ದೇವರೇ! ನಿನಗೆ ಕಣ್ಣಿಲ್ಲವೇ? ಕೂಗಿದರೂ ಕೇಳುವುದಿಲ್ಲವೇ? ಕರುಣವೆಳ್ಳಷ್ಟೂ ಬೇಡವೇ? ಸಾಕು, ನನಗೀಸುಖವು ಇಷ್ಟಕ್ಕೇ ಸಾಕು! ಇನ್ನಾದರೂ ಪ್ರಸನ್ನನಾಗಲೊಲ್ಲೆಯಾ?'

ವಿಂದೆಯ ಆರ್ತಾಲಾಪಕ್ಕೆ ಉತ್ತರವಾಗಿ ಕಿಟಕಿಯಿಂದ 'ಪ್ರಸನ್ನನಾಗಿರುವನು; ಶಾಂತಳಾಗಿರು.' ಎಂಬ ಸ್ವರವು ಹೊರಟಿತು.

ವಿಂದೆಯ ಬಾಯಲ್ಲಿ ಮಾತು ಹೊರಡಲಿಲ್ಲ. ಮೌನದಿಂದೆದ್ದು ಬಂದು ಬಾಗಿಲಬಳಿಯಲ್ಲಿ ನಿಂತಳು. ಮತ್ತೆ, ಆದೇಸ್ವರದಿಂದೆಯೇ, 'ವಿಂದಾ! ಬಾಗಿಲನ್ನು ತೆಗೆ.' ಎಂದು ಯಾರೋ ಹೊರಗೆ ಕೂಗಿದರು. ಕೂಗಿದೊಡನೆಯೇ ಬೀಗವೂ ತೆಗೆಯಲ್ಪಟ್ಟಂತಾಯಿತು. ವಿಂದೆಯು ಸಂಶಯದಿಂದ ಮೆಲ್ಲನೆ ಕೇಳಿದಳು-'ಕೂಗುವವರಾರು?'

ಉತ್ತರ—ನಾನೊಬ್ಬ ರಾಜಕರ್ಮಚಾರಿ.

ಏಂದೆ—ಹಾಗೆಂದರೆ ಸಾಲದು. ಸರಿಯಾದ ಹೆಸರುಬೇಕು.

ಉತ್ತರ—ನಿನ್ನೆಯ ರಾತ್ರಿಯಲ್ಲಿ ಪತ್ರವನ್ನು ತಂದಿದ್ದವನೇ ರಾಜಕರ್ಮಚಾರಿ. ಇನ್ನು ವಿಳಂಬಿಸದೆ, ನನ್ನಲ್ಲಿ ಸಂಶಯಪಡದೆ ಬಾಗಿಲನ್ನು ತೆಗೆ. ನನ್ನಿಂದ ನಿನಗಾವ ಅರಿಷ್ಟವೂ ಉಂಟಾಗುವುದಿಲ್ಲ.

ಏಂದೆಯು ಪತ್ರವನ್ನು ನೆನೆದು, ಬಿಡುಗಡೆಗೆ ಸಹಾಯವಾಯ್ತೆಂಬ ಧೈರ್ಯದಿಂದ ಬಾಗಿಲನ್ನು ತೆರೆದಳು. ಒಡನೆಯೇ ಕಳೆದ ರಾತ್ರಿಯಲ್ಲಿ ನರಸಿಂಗನ ವೇಷಧರನಾಗಿ ದಾರಿಗನಂತೆ ಬಂದಿದ್ದವನೇ ಇಂದು, ವೀರಭಟನಂತೆ ಎಡಗೈಯಲ್ಲಿ ಪಿಸ್ತೂಲನ್ನೂ, ಬಲಗೈಯಲ್ಲಿ ಲಾಂದ್ರವನ್ನೂ, ಬಗಲೊಳಗೆ ಗಂಟೊಂದನ್ನೂ ತಂದಿದ್ದ ಕರ್ಮಚಾರಿಯು ಒಳಹೊಕ್ಕು, ಬಾಗಿಲನ್ನು ಮುಚ್ಚಿ, ಅಗಣಿಯನ್ನು ಬಲವಾಗಿ ತಗಲಿಸಿದನು ; ಕಿಟಿಕಿಗೆ ಕೆಳಗೆ ಸೀಳಿಬಿದ್ದಿದ್ದ ಹಲಗೆಗಳನ್ನು ಮತ್ತೆ ಮುಚ್ಚಿ, ಮೊಳೆಗಳನ್ನು ಹೊಡೆದು ಹೊರಗೆ ತೆಗೆಯಲಾಗದಂತೆ ಬಲಪಡಿಸಿದನು. ಆ ಬಳಿಕ ಬಗಲೊಳಗಿದ್ದ ಗಂಟನ್ನು ಕೆಳಗಿಟ್ಟು, ಲಾಂದ್ರವನ್ನೆತ್ತಿ ಏಂದೆಯ ಮುಖಕ್ಕೆ ತೋರಿಸಿ, ತನ್ನ ಕಾರ್ಯಗಳಿಗೆ ಶಂಕೆಗೊಂಡು ನೋಡುತ್ತಿದ್ದವಳ ಮನೋಭಾವವನ್ನು ತಿಳಿದು ತಲೆದೂಗಿ ನಸುನಗುತ್ತ, ಪಿಸ್ತೂಲನ್ನು ಮುಂದಕ್ಕೆ ನೀಡಿ ಹೇಳಿದನು–'ಏಂದಾ ! ಇದೇ ನೋಡು, ನಿನ್ನ ಆತ್ಮರಕ್ಷಣಾರ್ಥವಾಗಿ ನಿನ್ನಲ್ಲಿ ಭದ್ರವಾಗಿಡಬೇಕಾದ ಸಾಧನವು. ಇಂದಿನ ನನ್ನ ಕೆಲಸಗಳಿಂದ ನೀನು ಶಂಕೆಗೊಂಡಂತೆ ಕಾಣುವುದು ? ನನ್ನ ವಿಷಯದಲ್ಲಿ ನೀನು ಸಂಶಯಪಡಲಾಗದು. ಇನ್ನು ಇದನ್ನು ನಿನ್ನಲ್ಲಿ ಗೋಪ್ಯವಾಗಿಟ್ಟುಕೋ. ಇದರಿಂದ ನಿನಗೆ ಇತರರ ಭಯವೇ ಇಲ್ಲವಾಗುತ್ತದೆ.' ಎಂದು ಹೇಳಿ ಅದನ್ನು ಪ್ರಯೋಗಿಸುವ ವಿಧಾನವನ್ನೂ ತಿಳಿಯಪಡಿಸಿದನು.

ಏಂದೆ—ಕರ್ಮಚಾರಿಯ ಮುಖವನ್ನು ನೋಡಿ, ಯಾರನ್ನೋ ಜ್ಞಾಪಿಸಿಕೊಂಡು ಆತುರದಿಂದ ಹೇಳಿದಳು–' ಮೊದಲು, ಸ್ಪಷ್ಟಪರಿಚಯವಾಗಬೇಕು ; ಉಳಿದ ಆಯುಧಗಳಮಾತು ಆಬಳಿಕಾಗಬಹುದು.'

ಕರ್ಮಚಾರಿ—ನೀನೇ ಊಹಿಸಿ ಹೇಳಲಾರೆಯಾ ? ನನ್ನನ್ನು ನೀನೆಂದೂ ನೋಡಿಲ್ಲವೆ ?

ವಿಂದೆ—ಈಗ ಸ್ವಲ್ಪದಿನಗಳ ಹಿಂದೆಯೇ ನೋಡಿದ್ದ ನೆನಪಿದೆ. ಆದರೆ, ಹೀಗೆಯೇ ಸರಿಯೆಂದು ಹೇಳಲಾರೆ.

ಕರ್ಮಚಾರಿ—ಹೋಗಲಿ. ನೀನು ಸರ್ದಾರ್ ಧರ್ಮಪಾಲನನ್ನು ನೋಡಿರುವೆಯೋ ?

ವಿಂದೆ—ಆತನನ್ನು ಸಾಕ್ಷಾತ್ತಾಗಿ ನೋಡಿಲ್ಲ. ಆದರೂ, ಆತನ ಅದ್ಭುತ ಕಲ್ಪನಾಶಕ್ತಿ, ವಿದ್ಯಾ, ಸಾಹಸಾದಿ ಗುಣವರ್ಣನೆಗಳನ್ನು ಪತ್ರ ಮೂಲಕವಾಗಿಯೂ, ನಮ್ಮ ತಾತನ ಮುಖದಿಂದಲೂ ಕೇಳಿ ತಿಳಿದಿರುವೆನು.

ಕರ್ಮಚಾರಿ—ಹಾಗಾದರೆ, ಆತನನ್ನೇ ಸಾಕ್ಷಾತ್ಕರಿಸಿಕೊಂಡಿರುವುದಾಗಿ ತಿಳಿ.

ವಿಂದೆ—ಭಯ-ಗೌರವಗಳಿಂದ ಒಂದೆರಡು ಹೆಜ್ಜೆ ಹಿಮ್ಮೆಟ್ಟಿ ತಲೆಬಾಗಿ ನಿಂತು, ಏನನ್ನೋ ಹೇಳಹೋದಳು ; ಆಗಲಿಲ್ಲ. ಕಣ್ಣುಗಳಲ್ಲಿ ನೀರುತುಂಬಿತು ; ಕೊರಳು ಕಟ್ಟಿತು. ಹಾಗೂ ಬಿಡದೆ ಪ್ರಯಾಸದಿಂದ-'ಮಹಾತ್ಮರು ನಿಂತಿರುವುದೇಕೆ ? ' ಎಂದು ಮಾತ್ರವೇ ಹೇಳಿ ಸುಮ್ಮನಾದಳು.

ಧರ್ಮಪಾಲ (ಕರ್ಮಚಾರಿ)—ತಲೆದೂಗಿ ನಕ್ಕು ಮಂಚದ ಮೇಲೆ ಕುಳಿತು, ವಿಂದೆಯ ಕೈಹಿಡಿದು ಸಲಿಗೆಯಿಂದ-'ವಿಂದಾ ! ನಿನ್ನೀ ಮರ್ಯಾದೆಯು ನನಗೆ ಬೇಕಾಗಿಲ್ಲ ; ನಾನು ನಿನಗೆ ಅನ್ಯನೂ ಅಲ್ಲ ; ನಿನಗೆ ಆತ್ಮೀಯನೆಂದೇ ತಿಳಿದು, ನಿನ್ನೀ ಸಂಕುಚಿತಭಾವವನ್ನು ದೂರ ಮಾಡು ; ಸಲಿಗೆಯಿಂದ ಮಾತನಾಡು.'

ವಿಂದೆ—ಕುತೂಹಲದಿಂದ ತಲೆಯೆತ್ತಿ ಕೇಳಿದಳು-'ನಾನಿಲ್ಲಿರುವುದು ಹೇಗೆ ತಿಳಿಯಿತು ? ನಿನ್ನೆಯ ರಾತ್ರಿಯಲ್ಲಿ ಕರ್ಮಚಾರಿಯೆಂದು

ಹೇಳಿಕೊಳ್ಳಲು ಕಾರಣವೇನು ? ಪತ್ರವನ್ನು ಬರೆದವರಾರು ? ಇವನ್ನು ನಾನು ಕೇಳಬಹುದೇ ?'

ಧರ್ಮಪಾಲ—ಹೇಗೆ-ಏನು-ಯಾರು-ಎಂದರೆ ಹೇಳುವುದೇನು ? ಪ್ರತಿಜ್ಞಾಪರಿಪಾಲನೆಗಾಗಿ ನಾನೇ, ಅಲ್ಲಲ್ಲಿ ಗೂಢಚಾರರನ್ನಿಟ್ಟು ವರ್ತಮಾನವನ್ನು ತರಿಸುತ್ತಿರುವುದರಿಂದ ತಿಳಿಯಿತು. ಕಾರ್ಯಸಾಧನೆಗಾಗಿ ಹೊರಟವನಿಗೆ ವಿಷಹರಪುರಕ್ಕೆ ಹೋಗುತ್ತಿದ್ದ ನರಸಿಂಗನೆಂಬವನು ಸಿಕ್ಕಿ, ಅವನನ್ನು ಬೆದರಿಸಿ ಇಲ್ಲಿಯ ಸಂಗತಿಗಳನ್ನು ಆದ್ಯಂತವಾಗಿ ತಿಳಿದು, ಅವನಂತೆಯೇ ವೇಷಹಾಕಿಕೊಂಡು ಬಂದು ಇವರನ್ನು ಮೋಸಪಡಿಸಿ, ನಿನ್ನನ್ನು ಕಂಡೆನು. ನಾನು ಬಂದಿರುವುದನ್ನು ನಿನಗೆ ತಿಳಿಸಿ, ಧೈರ್ಯದಿಂದಿರ ಹೇಳಬೇಕೆಂದು ನಾನೇ ಪತ್ರವನ್ನು ಬರೆದಿಟ್ಟು ಹೋದೆನು. ಮತ್ತೇನು ? ನಿನಗೆ ಮೊದಲೇ ಇಲ್ಲಿ ಸೆರೆಯಾಗಿ ಬಿದ್ದಿದ್ದ ನಿಮ್ಮ ತಂದೆಮನೆಯ ಪಹರೆಯುವರನ್ನೂ ಈ ರಾತ್ರಿಯೇ ಬಿಡಿಸಿ ಬಂದಿರುವೆನು.'

ವಿಂದೆ—ಆತುರದಿಂದ-' ನನಗೆ ಬಿಡುಗಡೆ ಯಾವಾಗ ?

ಧರ್ಮ—ಈಗಲೇ ಆದರೂ ಆಗಬಹುದು. ಆದರೆ, ನಿನ್ನ ವಿದ್ಯಾ-ಬದ್ಧಿ-ಮನಸ್ಸ್ಥೈರ್ಯಗಳಿಗೆ ಇದು ಕಳ್ಳತನವಾಗಿ ಪರಿಣಮಿಸುವುದರಿಂದ ಸರಿಯಾಗಿ ಕಾಣುತ್ತಿಲ್ಲ. ನಿನ್ನ ಕರಕೌಶಲ, ವಾಕ್ಪೌರುಷಗಳಿಂದಿಯೇ ನೀನಿವರನ್ನು ಜಯಿಸಿ ಬರಬೇಕೆಂಬುದು ನನ್ನ ಸಂಕಲ್ಪ !

ವಿಂದೆ—ಹೇಗೆ ?

ಧರ್ಮಪಾಲ—ಇದೇ ಇಲ್ಲಿರುವ ಗಂಟನ್ನು ಬಿಚ್ಚಿನೋಡಿದರೆ, ಎಲ್ಲವೂ ಗೊತ್ತಾಗುವುದು. ಅದರಂತೆ ನಡೆಯುವುದು ನಿನ್ನ ಕೆಲಸವಾಗಿರುವುದು. ನಿನ್ನ ಬೆಂಬಲಕ್ಕೆ ನಾನಿದ್ದೇ ಇರುವೆನು. ಅಧೈರ್ಯದಿಂದ ದುಡುಕಿ, ಕೆಲಸವನ್ನು ಕೆಡಿಸಿಕೊಳ್ಳುವುದು ಸರಿಯಲ್ಲ.

ವಿಂದೆ—ನಿಮ್ಮ ಸಹಾಯವಿದ್ದರೆ ಭಯವೇನು ?

ಧರ್ಮಪಾಲ—ಮತ್ತೊಂದು ವಿಚಾರ—ಇಲ್ಲಿಂದ ಬಿಡುಗಡೆಯಾಗಿ ಬಂದ ಬಳಿಕ, ನೀನು ನನ್ನ ಮನೆಯಲ್ಲಿಯೇ ಕೆಲವು ದಿನಗಳವರೆಗೆ, ಗೋಪ್ಯವಾಗಿರಬೇಕಾದೀತು ?

ಏಂದೆ—ಹೇಳಿದಂತೆ ಕೇಳುವೆನು. ಆದರೆ, ಇಲ್ಲಿ ಒಂದು ಗಳಿಗೆಯಾದರೂ ಇರಲಾರೆನು.

ಧರ್ಮಪಾಲ—ಇರಲಿ ; ಚಿಂತಿಸಬಾರದು. ನಾನಿನ್ನು ಹೋಗುವೆನು. ನೀನು ನಾಳೆಯೇ ತಪ್ಪದೆ ಗೊತ್ತುಮಾಡಿರುವ ಸ್ಥಳಕ್ಕೆ ಬಂದರೆ, ಕಾದಿದ್ದು ಕರೆದೊಯ್ಯುವೆನು. ಆ ವರೆಗೂ ಈ ಪಿಸ್ತೂಲನ್ನು ನಿನ್ನ ಉಡಿಯ ಮರೆಯಲ್ಲಿ ಬಚ್ಚಿಡಬೇಕು.

ಏಂದೆ—ವ್ಯಾಕುಲದಿಂದ-' ಈ ರಾತ್ರಿಯೆಲ್ಲಾ ಇಲ್ಲಿ ಹೇಗಿರಲಿ ?'

ಧರ್ಮಪಾಲ—ಹಾಗಿರದಿದ್ದರೆ ಯತ್ನವಿಲ್ಲ. ಆದರೂ, ನಾನಿಲ್ಲಿಯೇ ಕಾದಿರುವೆನೆಂದು ತಿಳಿದು ಸಮಾಧಾನದಿಂದಿರು. ಅದಿರಲಿ ; ನೀನು ಶ್ರೀದತ್ತಕುಮಾರನನ್ನು ಮರೆತಿರುವೆಯಾ ?

ಏಂದೆ—ವಿಸ್ಫಾರಿತನೇತ್ರಳಾಗಿ ನೋಡುತ್ತ-' ಇಲ್ಲ. ತಾತನ ಇದಿರಿಗೆ, ಆತನು ನನ್ನ ವಿದ್ಯಾವ್ಯಾಸಂಗವನ್ನು ಪರೀಕ್ಷಿಸಿ, ಬಹುಮಾನಿಸಿದುದನ್ನು ಎಂದಿಗೂ ಮರೆಯುವಂತಿಲ್ಲ. ಏಕೆ ? ಆತನೇನಾಗಬೇಕು ? '

ಧರ್ಮಪಾಲ—ನಗುತ್ತ,-'ಮತ್ತೇನೂ ಬೇಕಾಗಿಲ್ಲ. ನಿನಗಾತನು ಚಿರಸ್ಮರಣೀಯನಾಗಿದ್ದರೆ, ಈಗ ನಿನ್ನಲ್ಲಿ ಮಾತನಾಡುವವನು ಅವನೆಂದೇ ತಿಳಿದು ಭರವಸೆಯನ್ನಿಡು ; ನನಗಿನ್ನು ಸಮ್ಮತಿಯನ್ನು ಕೊಡು ; ಈ ರಾತ್ರಿಯನ್ನು ಸಾರಾಸಾರ ವಿಚಾರದಲ್ಲಿ ಕಳೆಯುತ್ತಿರು.'

ಏಂದೆಯು ವಿಸ್ಮಯಾನಂದ ಕೌತುಕಗಳಿಂದ ನೋಡುತ್ತ ನಿಂತಳು. ಧರ್ಮಪಾಲನು ಮತ್ತೊಮ್ಮೆ ಏಂದೆಗೆ ಅಭಯವಿತ್ತು, ಬಾಗಿಲನ್ನು ತೆರೆದು ಹೊರಗೆ ಬಂದು ಮತ್ತೆ ಬೀಗಹಾಕಿ, ಆ ನಟ್ಟಿರುಳಲ್ಲಿ ಕಣ್ಮರೆಯಾದನು.

|| ಶ್ರೀ ||

## ಚತುರ್ಥ ಪರಿಚ್ಛೇದ.

### (ಮುಯ್ಯಿಗೆಮುಯ್ಯಿ)

ಮಾನಿನೀಯರೇ! ಮುಯ್ಯಿಗೆ ಮುಯ್ಯಿ ತೀರಿಸುವುದು ನಮ್ಮಲ್ಲಿ ವಾಡಿಕೆಯಾಗಿದೆಯಲ್ಲವೇ? ಕರ್ಮಕ್ಕೆ ತಕ್ಕ ಫಲಾನುಭವವಿದೆಯೆಂದು ಹೇಳುವ ಮಾತೂ ಇದಕ್ಕೆ ಸರಿಹೋಲುವುದಲ್ಲವೇ? ಏಕೆಂದರೆ, ಸನ್ಮಾನವನ್ನು ಅಪೇಕ್ಷಿಸುವವರು ಇತರರನ್ನು ಸನ್ಮಾನಿಸಲೇಬೇಕು. ಹಾಗಿಲ್ಲವಾದರೆ, ಇವರಿಗೆ ಸನ್ಮಾನವು ಸ್ಥಿರವಾಗಿರಲಾರದು. ಹಾಗೆಯೇ ಸುಖವನ್ನು ಕೋರುವವರೂ ಇತರರ ಕಷ್ಟಸುಖಗಳನ್ನು ಚೆನ್ನಾಗಿ ತಿಳಿದು ನಡೆಯಬೇಕು. ಹಾಗಿಲ್ಲದೆ ಇತರರನ್ನು ಪೀಡಿಸಿ, ತಾವು ಸುಖಪಡಬೇಕೆಂಬ ಬಯಕೆಗೆ ಎಂದಿಗೂ ಸತ್ಫಲವು ದೊರೆಯದು. ನ್ಯಾಯಾರ್ಜಿತವಾದ ಸುಖ–ಭೋಗ–ಸಂಪದಗಳಿಂದಾಗುವ ಸಂತೋಷವೇ ಸುಸ್ಥಿರವು. ಅನ್ಯಾಯಾರ್ಜಿತವಾದ ಸಂಪದಗಳು ಶಾಶ್ವತ ನರಕಾರ್ಣವದಲ್ಲಿ ಮುಳುಗಿಸಿ ನರಳಿಸುವ ದುಷ್ಪರಿಣಾಮಕಾರಕಗಳಾಗಿವೆ. ಹೇಗೆಂಬುದನ್ನು ತಿಳಿಯಬೇಕೆಂಬುವವರು ವಿಂದೆಯನ್ನು ಸೆರೆಹಿಡಿದಿದ್ದ ಬಲವಂತನ ಫಲಾನುಭವವನ್ನೇ ವಿಚಾರಕ್ಕೆ ತಂದರೆ ಸಾಕಾಗಿದೆ.

ವಿಂದೆಗೆ ಧರ್ಮಪಾಲನ ಅಭಯಪ್ರದಾನವಾದ ಮರುದಿನ ಮಧ್ಯಾಹ್ನದಲ್ಲಿ, ಆಹಾರವನ್ನು ಕೊಡಲು ಬಲವಂತನು ಎಂದಿನಂತೆಯೇ ಬಂದು, ಬಾಗಲಿಗೆ ಹಾಕಿದ್ದ ಬೀಗವನ್ನು ತೆಗೆದು, ಬಾಗಿಲನ್ನು ಮೆಲ್ಲನೊಮ್ಮೆ ಹಿಂದಕ್ಕೆ ತಳ್ಳಿದನು. ಒಳಗಡೆ ಅಗಣಿಯನ್ನು ತಗಲಿಸಿರಲಿಲ್ಲವಾದುದರಿಂದ, ಬಾಗಿಲು ಹಿಂದಕ್ಕೆ ತೆರೆದುಹೋಯಿತು. ಬಲವಂತನು ಒಳಹೊಕ್ಕು

ನೋಡಿದನು. ಏಂದೆಯು ಶಬ್ದವಿರಲಿಲ್ಲ; ಮುಂದೆಬಂದು ಮತ್ತೆ ಚೆನ್ನಾಗಿ ನೋಡಿದನು. ಮಂಚದಮೇಲೆ ಅವಳ ಸೀರೆ ಕುಪ್ಪುಸಗಳು ಬಿದ್ದಿದ್ದುವು; ಅವಳು ಅಲ್ಲೆಲ್ಲಿಯೂ ಕಾಣಲಿಲ್ಲ. ಬಲವಂತನು ದಿಗಿಲುಬಿದ್ದು, ಅಡ್ಡ ಗೋಡೆ-ಬಜ್ಜಲು-ಹಿಂದಿನಕೋಣೆ ಮೊದಲಾದೆಡೆಯಲ್ಲಿಯೂ ನೋಡಿದನು. ಅಲ್ಲಿಯೂ ಏಂದೆಯನ್ನು ಅವನು ಕಾಣಲಿಲ್ಲ. 'ಮನೆಗೆ ಬೀಗವು ಹಾಕಿದಂತೆಯೇ ಇತ್ತು. ಆದರೂ, ಅವಳು ಯಾವಮಾಯೆಯಿಂದ-ಎಲ್ಲಿಗೆ ಹೋದಳು? ಹೋಗಲು ದಾರಿಯೆಲ್ಲಿತ್ತು? ಕರೆದೊಯ್ದವರಾರು?' ಹೀಗೆ ಯೋಚಿಸುತ್ತ ಬಾಗಿಲಬಳಿಗೆ ಬಂದನು; ತಲೆಯೆತ್ತಿ ಬೀದಿಯ ಕಡೆಗೆ ನೋಡಿದನು. ಬಾಗಿಲಿಗೆ ಅಡ್ಡವಾಗಿ ನಿಂತು, ಕರಿಯ ತುಪಟದ ಉಡುಗೆ ಯನ್ನುಟ್ಟು, ತಲೆಯಿಂದ ಕಾಲಿನವರೆಗೂ ಇಳಿಬಿದ್ದಿರುವ ಕಂಬಳಿಯಿಂದ ವೇಷವನ್ನು ಮರೆಯಿಸಿ, ಕೈಯಲ್ಲಿ ಸಣ್ಣ ತುಬಾಕಿ (Pistol) ಯೊಂದ ನ್ನು ಹಿಡಿದು, ಬಿರಬಿರನೆ ನೋಡುತ್ತಿದ್ದ ಹನ್ನೆರಡು ವರ್ಷದ ಹುಡುಗಿಯೊ ಬ್ಬಳನ್ನು ಕಂಡನು; ಭಯಭ್ರಾಂತನಾಗಿ ನಿಂತಲ್ಲಿಯೇ, ಉಸಿರೆತ್ತದೆ ಕುಳಿ ತುಬಿಟ್ಟನು.

ಹುಡುಗಿ—ಪರಿಹಾಸದಿಂದ-'ಮೂರ್ಖ! ಇನ್ನೂ ನಿನಗೆ ಕಾಲಬಂದಿಲ್ಲ. ನಿನ್ನ ಅಕಾರ್ಯದಫಲವನ್ನು ನೀನು ಅನುಭವಿಸಬೇಕು; ಏಳು, ಏಳು.'

ಬಲವಂತ—ಧಿಗ್ಗನೆದ್ದುನಿಂತು-'ಏನುಏನು! ಅಕಾರ್ಯ!! ಫಲಾನುಭವ!!! ಯಾರಿಗೆ? ನೀನಾರು?'

ಹುಡುಗಿ—ಮತ್ತಾರಿಗೂ ಅಲ್ಲ; ನಿನಗೇ. ನಾನು ನಿನ್ನಭಾಗದ ಮೃತ್ಯುವೇ!

ಬಲವಂತ—ಏನು? ಮೃತ್ಯುವಾಗಿದ್ದರೆ, ಹಾಗಿರು. ಏಂದೆಯೆಲ್ಲಿ? ಮೊದ ಲುಹೇಳು. ನೀನಿಲ್ಲಿಗೇಕೆ ಬಂದೆ? ನಿನ್ನನ್ನು ಕರೆದವರಾರು?

ಹುಡುಗಿ—ನಾನು ಅವಳ ಉಪಾಸ್ಯದೇವತೆ. ನನ್ನನ್ನು ಅವಳೇ ಕರೆದಳು. ಅವಳನ್ನು ಬಿಡಿಸುವುದಕ್ಕೆಂದೇ ನಾನಿಲ್ಲಿಗೆ ಬಂದುದು. ಇನ್ನೂ ತಿಳಿಯಲಿಲ್ಲವೋ?

ಬಲವಂತ—ಬಿಡಿಸಬಂದೆಯಾ! ಹೇಗೆ? ಯಾರನ್ನು?

ಹುಡುಗಿ—ಅಹುದು, ಅದಕ್ಕೋಂದೇ ಬಂದೆನು. ಈ ತುಬಾಕಿ ಮದ್ದಿನಿಂದಲೇ ಆಗಬೇಕು. ಇದರಿಂದಲೇ ವಿಂದೆಗೆ ವಿಮೋಚನೆ !

ಬಲವಂತ—ಹೋ ! ತಾಳು ; ಹಾರಾಡಬೇಡ. ಮೊದಲು ನೀನೇಕೆ ಬಂದೆ, ನಿಜವನ್ನು ಹೇಳು ?

ಹುಡುಗಿ—ಹೇಳದಿದ್ದರೆ ನೀನೇನು ಮಾಡಬಲ್ಲೆ ?

ಬಲವಂತ—ಹಿಡಿದು ಕಟ್ಟಿಹಾಕುವೆನು.

ಹುಡುಗಿ—ಹಾಗಿದ್ದರೆ ಸಾಹಸಿಯೇ ಸರಿ. ಆದರೂ ಭಯವಿಲ್ಲ ; ಕೇಳು, ಹೇಳುವೆನು. ವಿಂದೆಯು ಒಬ್ಬ ಪ್ರಬಲಪುರುಷನ ಆಶ್ರಯವನ್ನು ಸೇರಿದಳು. ನೀನಿನ್ನು ಅವಳನ್ನು ಕಾಣಲಾರೆ. ನಿನ್ನ ಆಶೆಯನ್ನು ಬಿಡು. ನನ್ನನ್ನು ಕಟ್ಟಿಹಾಕುವುದಕ್ಕೆ ನೀನೊಬ್ಬನಲ್ಲ ; ನಿನ್ನ ಗುಂಪಿನವರೆಲ್ಲರೂ ಒಟ್ಟಾಗಿ ಬಂದರೂ ಸಾಗುವಂತಿಲ್ಲ. ಸುಮ್ಮನೇಕೆ ಬಳಲುವೆ ?

ಬಲವಂತನು ಉತ್ತರವನ್ನು ಕೊಡದೆ, ಪಿಸ್ತೂಲನ್ನು ಕಸಿದುಕೊಳ್ಳಲು ಕೈಯೆತ್ತಿದನು. ಆದರೆ, ಹುಡುಗಿಯು ಚಿಗರೆಯಂತೆ ಒಂದೇ ಲಂಗನೆಯಿಂದ ಹಿಂದಕ್ಕೆ ಸರಿದುಹೋಗಿ, ಬಾಗಿಲನ್ನೆಳೆದು ಚಿಲಿಕೆಯನ್ನು ತಗುಲಿಸಿ ಬೀಗವನ್ನೂ ಹಾಕಿದಳು. ಬಲವಂತನು ಗಟ್ಟಿಯಾಗಿ ಕೂಗಲಾರಂಭಿಸಿದನು. ಹಾಗೂ ಹುಡುಗಿಗೆ ದಯೆಯುಂಟಾಗಲಿಲ್ಲ. ಆಗ್ರಹ-ಆಟೋಪಗಳೇ ಹೆಚ್ಚಿದುವು. ಅವಳು ಕಿಟಿಕಿಯಬಳಿಗೆ ಬಂದು-(Pistol) ತುಬಾಕಿಯನ್ನು ತೋರಿಸಿ-'ಹೇಡಿ, ಕಳ್ಳ ; ಕೊಲೆಗೇಡಿ ನಿನ್ನನ್ನು ಈಗಲೇ ಈ ಕೈಕೋವಿಯ ಬೆಂಕಿಯಿಂದಲೇ ಸುಟ್ಟುಹಾಕುತ್ತಿದ್ದೆನು. ಆದರೆ, ನಿನಗೆ ಈ ಶಿಕ್ಷೆಯು ಸರಿಯಿಲ್ಲವೆಂದೂ, ರಾಜಾಗ್ರಹದ ಕಠಿಣ ಶಿಕ್ಷೆಯಾಗತಕ್ಕುದಿದೆಯೆಂದೂ ಬಿಟ್ಟಿರುತ್ತೇನೆ. ನಾನೇ ವಿಂದೆ ! ನೀನು ನನ್ನನ್ನೇ ವಂಚಕನೆಂದು ತಿಳಿದು ಹಿಗ್ಗುತ್ತಿದ್ದೆಯಲ್ಲವೆ ? ನಿನ್ನನ್ನೂ ವಂಚಿಸಿದ ದೈವಕ್ಕೆ ಈಗೇನು ಹೇಳುವಿಯೋ ಹೇಳಿ, ಬಿದ್ದು ಒದ್ದಾಡುತ್ತಿರು ; ಮುಯ್ಯಿಗೆ ಮುಯ್ಯಿ ತೀರಿಸಿರುವೆನು.' ಎಂದು ಹೇಳಿ ನಿಲ್ಲದೆ ಮನೆಯ ಹಿಂಗಡೆಗೆ ತಿರುಗಿ ಹೊರಟುಹೋದಳು.

ಸುಹೃದರೇ !

ಹನ್ನೆರಡು ವರ್ಷದ ಬಾಲೆಯಿಂದ ಇಷ್ಟು ಸಾಹಸಕಾರ್ಯಗಳಾಗುವುದು ಅಸಂಗತವೆಂದೂ, ಅವಳ ಬಾಯಿಂದ ಇಷ್ಟು ಭಾವಗರ್ಭಿತವಾದ ವಾಕ್ಯಗಳು ಹೊರಡಲಾರವೆಂದೂ ಆಕ್ಷೇಪಿಸುವಿರೇನು ? ಸುಶಿಕ್ಷಣೆ, ಸಾಧನೆ, ಪ್ರತ್ಯಕ್ಷವಿಚಾರವಿಮರ್ಶೆಗಳಿಂದ ಬೆಳೆದ-ಹಾಗೂ ಸುಧಾರಕಾಗ್ರಣಿಗಳಾದ ಶ್ರೀಮಂತರ ಮಗಳಾಗಿರುವ ವಿಂದೆಗೆ ಧೈರ್ಯ, ಸ್ಥೈರ್ಯ, ಸಾಹಸಗಳಿಗೇನು ಅಭಾವವು ? ಹಾಗೂ ಇವಳ ಬುದ್ಧಿ, ಸ್ವಭಾವಗಳೂ ಸಾಮಾನ್ಯವಾಗಿಲ್ಲ. ಇವಳು ತನ್ನ ಹತ್ತು ಹನ್ನೊಂದನೆಯ ವರ್ಷದಲ್ಲಿಯೇ ಈಡಿಗೆ ಮಿಂಚಿದ ಬುದ್ಧಿ(Precocious) ವಿಶೇಷದಿಂದ ಪ್ರಥಮಪರೀಕ್ಷೆಯಲ್ಲಿ ತೇರಿದ್ದಳು. ಅಲ್ಲಿಂದೀಚೆಗೆ ಇವಳು ಸಂಸ್ಕೃತ, ಕನ್ನಡ, ಆಂಗ್ಲೇಯ (English) ಭಾಷೆಗಳನ್ನು ಸಮತುಲನವಾಗಿ ಅಭ್ಯಾಸ ಮಾಡುತ್ತಿದ್ದಳು. ಇದಲ್ಲದೆ ತಾಯಿ, ಮತ್ತು ತಾಯಿಯ ತಾಯಿ ಇವರ ಗೃಹಕಾರ್ಯಶಿಕ್ಷಣೆಯೂ, ಕುಶಲಕಲಾಬೋಧನೆಯೂ, ಕಾಲೋಚಿತವಾದ ಹಿತಸೂಚನೆಯೂ ಇವಳನ್ನು ತಕ್ಕಮಟ್ಟಿಗೂ ಸುಧಾರಣೆಗೆ ತಂದಿದ್ದುವು.

ಹೀಗಿದ್ದವಳ ಮನಸ್ಸ್ಥೈರ್ಯವು ಹೇಗಿರಬೇಕು ? ಹಾಗೂ ಆಕಸ್ಮಿಕವಾಗಿ ಕ್ರೂರರ ಕೈಗೆ ಸಿಕ್ಕಿ, ಪ್ರಾಣವನ್ನೇ ತೊರೆಯಬೇಕೆಂದು ದೃಢಮಾಡಿದ್ದವಳಿಗೆ, ಕುಶಲಮತಿಯಾದ ಶ್ರೀದತ್ತಕುಮಾರನೇ ಪ್ರತ್ಯಕ್ಷವಾಗಿ ಬಂದು, ಹೇಳಿ, ತೋರಿಸಿ, ಕಲಿಸಿಕೊಟ್ಟ ಉಪಾಯ (ಸಾಧನ) ಗಳಿಂದಲೂ, ಅಭಯಪ್ರದಾನದಿಂದಲೂ ಇವಳು ಹೀಗೆ ನಿರ್ಭೀತಳಾಗಿ ಹೋರಿ, ಕಷ್ಟದಿಂದ ಪಾರಾದುದರಲ್ಲಿ ಆಶ್ಚರ್ಯವೇನಿದೆ ? ಇಂತಹ ಸಾಹಸಕಾರ್ಯಗಳನ್ನು ಮಾಡಿ-ಮಾಡುತ್ತಿರುವ ಬಾಲೆಯರನ್ನು ಈ ಕಾಲದಲ್ಲಿಯೇ ನಾವು ನೋಡಬಹುದಲ್ಲವೇ ? ಹೇಗೂ, ಇವಳಿಂದ ಮುಯ್ಯಿ ತೀರಿಸಲ್ಪಟ್ಟಿತೆಂಬ ಸಂತೋಷವುಂಟಾದುದೇ ಸದ್ಯಕ್ಕೆ ಸಾಕಲ್ಲವೇ ?

|| ಶ್ರೀ ||

# ಪಂಚಮ ಪರಿಚ್ಛೇದ.

## (ವಿಪರ್‍ಯಾಸ.)

ಸೋದರಿಯರೇ ! ಬಲವಂತನನ್ನು ಬಂದಿಯಾಗಿ ಮಾಡಿ, ಮಾರುವೇಷದಿಂದ ಹೊರಟುಹೋದ ಇಂದಿಯ ಮುಂದಿನ ವಿಚಾರವೇನಾಯಿತೆಂದು ಕೇಳುವಿರಲ್ಲವೇ ? ನಿಮ್ಮ ಕೋಮಲ ಹೃದಯದಲ್ಲಿ ಇಂದಿಯನ್ನು ಕುರಿತು, ಕನಿಕರವುಂಟಾಗುವುದೂ ಸಹಜವೇ ಸರಿ. ಆದರೆ, ಈಗಲೇ ಅವಳ ವಿಚಾರವನ್ನಿಲ್ಲಿ ವಿವರಿಸುವಂತಿಲ್ಲವಾದುದರಿಂದ ತಾಳ್ಮೆಯಿರಲಿ ಮೊದಲು, ಬಲವಂತನ ಸ್ಥಿತಿಯನ್ನೇ ವಿಚಾರಮಾಡಿ ನೋಡುವ.

ಪಾಪ ! ಬಲವಂತನೇನು ಮಾಡಬಲ್ಲನು ? ರಾತ್ರಿ ಏಳುಗಂಟೆಯಾಗುತ್ತ ಬಂದಿದೆ. ಇನ್ನೂ ಬಾಗಿಲನ್ನು ತೆಗೆಯಲಿಕ್ಕಾರೂ ಬಂದಂತೆ ಕಾಣಲಿಲ್ಲ. ಹೊರಗೆ ಹೊರಡಲು ಬೇರೆ ಮಾರ್ಗವಿಲ್ಲ. ಹಸಿವು, ಬಾಯಾರಿಕೆ, ಬಳಲಿಕೆಗಳನ್ನು ತಡೆಯುವಷ್ಟರ ತ್ರಾಣವಾದರೂ ಈ ಮುದಿಪ್ರಾಣಿಗೆ ಹೇಗೆ ಬರಬೇಕು ? ಕೂಗಿಕೂಗಿ ಬೇಸತ್ತನು. ಆ ಬೆಂಗಾಡಿನಲ್ಲಿ ಇವನ ಕೂಗನ್ನು ಕೇಳುವವರಾರು ? ಹಾಗೂ ಇವನಿಲ್ಲಿ ಸೆರೆಯಾಗಿ ಬಿದ್ದಿರುವುದಾದರೂ ತಿಳಿಯುವುದು ಹೇಗೆ ? ಈ ವೇಳೆಯಲ್ಲಿ ಇವನನ್ನು ಸಂತಯಿಸುವವರಾರು ?

ಸುಮಾರು ಎಂಟುಗಂಟೆ ಹೊತ್ತಿಗೆ ಹೊರಗಡೆಯ ಬೀಗವನ್ನು ಯಾರೋ ತೆಗೆದಂತಾಯಿತು. ಬಲವಂತನು ಎದ್ದುಬಂದು, ಬಾಗಿಲ ಬಳಿಯಲ್ಲಿ ನಿಂತು ಹಮ್ಮೈಸಿನೋಡಿದನು. ಬಾಗಿಲು ಹಿಂದಕ್ಕೆ ತೆರೆಯಲ್ಪಟ್ಟು

ಲಾಂದ್ರವನ್ನು ಹಿಡಿದಿದ್ದ ಕಪಟನರಸಿಂಗನು ಒಳಹೊಕ್ಕು ಮುಂದೆನಿಂತನು; ಮತ್ತು ಬಂದಿಯಾಗಿದ್ದ ಬಲವಂತನನ್ನು ನೋಡಿ ಭ್ರಾಂತನಂತೆ ನಟಿಸಿದನು.

ಬಲವಂತ—ಗದ್ಗದಸ್ವರದಿಂದ-'ನರಸಿಂಗ! ಬಂದೆಯಾ? ಬಾ, ಇನ್ನು ನಮ್ಮ ಗತಿಯೇನು?'

ಕ-ನರಸಿಂಗ—ಹಾಗೆಂದರೇನು?

ಬಲವಂತ—ತತ್ತರಿಸುತ್ತ-ಮೆಲ್ಲನೆ ಬಂದು, ಮಂಚದಮೇಲೆ ಕುಳಿತು ಹೇಳಿದನು-'ಏನು ಹೇಳುವುದು? ಇಲ್ಲಿ ಬಂದಿಯಾಗಿದ್ದ ವಿಂದೆಯು ನನ್ನನ್ನೇ ಬಂದಿಯಾಗಿಮಾಡಿ ತಾನು ತಪ್ಪಿಸಿಕೊಂಡಳು.'

ಕ-ನರಸಿಂಗ—ಏನು! ತಪ್ಪಿಸಿಕೊಂಡಳೇ? ಹೇಗೆ? ಯಾರ ಸಹಾಯದಿಂದ?

ಬಲವಂತ—ದೈವಸಹಾಯವೇ ಇರಬೇಕು! ಹಾಗಿಲ್ಲದಿದ್ದರೆ, ಒಳಗಿದ್ದವಳಿಗೆ ಕೈಕೋವಿ (Revolver) ಹೇಗೆ ಬರಬೇಕು? ಉಳಿದ ಸಾಧನಗಳಾದರೂ ಹೇಗೆ ದೊರೆಯಬೇಕು?

ಕ-ನರಸಿಂಗ—ಸ್ವಾಮಿಾ! ಇದೆಲ್ಲಾ ಕಣ್ಣುಕಟ್ಟುಮಾಯವಾಗಿದೆಯಲ್ಲದೆ, ಮುಳ್ಳುಮೆಳೆಯ ಚೌಕದಲ್ಲಿಯೂ ವಿಪರೀತವು ನಡೆದುಹೋಗಿದೆ.

ಬಲವಂತ—ಅದೇನಪ್ಪ, ಮತ್ತೆ?

ಕ-ನರಸಿಂಗ—ಮಧ್ಯಾಹ್ನ ಹನ್ನೆರಡುಗಂಟೆಯ ಹೊತ್ತಿನಲ್ಲಿ, ಒಬ್ಬ ಕುರುಬರ ಹುಡುಗಿಯು, ಕಾಡುಬೆರಣಿ-ಸೌದೆಗಳನ್ನು ಆರಿಸುತ್ತ ಅಲ್ಲಿಗೆ ಬಂದಳು. ನಾನೂ ಈ ದಿನ ಅಲ್ಲಿಗೆ ಹೋಗಿ ಕಾದಿದ್ದುದರಿಂದ ಅವಳನ್ನು ಮುಂದಕ್ಕೆ ಬಿಡದೆ ತಡೆದೆವು, ಮತ್ತು ಶೋಧನೆ ಕೊಟ್ಟು ಹೋಗೆಂದು ಬಲಾತ್ಕರಿಸಿದೆವು. ಅದಕ್ಕವಳು ಕೆರಳಿ, ಕೈಲಿದ್ದ (Pistol) ತುಬಾಕಿಯನ್ನು ಹಾರಿಸಿ ಇಬ್ಬರಿಗೆ ಗಾಯ

ಮಾಡಿದಳು ; ಮತ್ತಿಬ್ಬರಿಗೆ ತಿರುಗಿದಳು. ಅಷ್ಟರಲ್ಲಿ ಆ ದಾರಿಯಲ್ಲಿಯೇ ಬರುತಿದ್ದ ಪೋಲೀಸು ಜವಾನನೊಬ್ಬನು (Police constable) ಅಲ್ಲಿಗೆ ಬಂದು, ಅವಳನ್ನು ತುಬಾಕಿಯೊಡನೆ ಹಿಡಿದೆಳೆದೊಯ್ದನು.

ಬಲವಂತ—ಅಯ್ಯೋ ! ಇವಳೇ ಅವಳು !! ಈಗ ಏನುಮಾಡಲಿ ? ಎಲ್ಲಿರುವಳು ?

ಕ-ನರಸಿಂಗ—ಎಲ್ಲಿಯೋ-ಠಾಣೆಯಲ್ಲಿರಬೇಕು. ನಾನೂ ಆ ವಿಚಾರವನ್ನು ನಿಮಗೆ ಹೇಳಬೇಕೆಂದು ಎಲ್ಲೆಲ್ಲಿಯೂ ಹುಡುಕಿ ಹುಡುಕಿ ಸಾಕಾದೆನು. ಕಡೆಗೆ, ಸೆರೆಮನೆಯ ಬಳಿಯಲ್ಲಿದ್ದರೂ ಇರಬೇಕೆಂದೆಣಿಸಿ, ಅಲ್ಲಿಗೆ ಹೋಗಿ ನೋಡಿದೆನು ; ನೀವೂ ಅಲ್ಲಿರಲಿಲ್ಲ. ಅಲ್ಲದೆ, ಅಲ್ಲಿಯೂ ಮತ್ತೊಂದು ವಿಪರೀತವೇ ಕಂಡುಬಂದಿತು.

ಬಲವಂತ—ಮತ್ತೇನು ಬಂತಪ್ಪ, ನನಗೆ ವಿಪತ್ತು !

ಕ-ನರಸಿಂಗ—ನಮ್ಮ ಸೆರೆಯಾಳುಗಳಾಗಿದ್ದ ಆ ಮುಸಲ್ಮಾನರಿಬ್ಬರೂ ಇರಲಿಲ್ಲ. ಅವರಿದ್ದ ಮನೆಯ ಗೋಡೆಗೆ ಕಂಡಿಗಳು ಬಿದ್ದಿವೆ ; ಬಾಗಿಲು ತೆರೆದುಹೋಗಿದೆ. ಅವರು ಎಲ್ಲಿಗೆ ಹೋದರೆಂಬುದೇ ಯಾರಿಗೂ ಗೊತ್ತಾಗದಿದೆ.

ಬಲವಂತ—ತಲೆಯನ್ನು ಹೊಡೆದುಕೊಳ್ಳುತ್ತ ವಿಕೃತಸ್ವರದಲ್ಲಿ-' ಅಯ್ಯೋ! ಇನ್ನೇನುಗತಿಯಪ್ಪ!! ನನಗೇನೋ ಕೇಡುಗಾಲದಂತಿದೆಯಲ್ಲಾ!!!'

ಕ-ನರಸಿಂಗ—ನನಗೂ ಹಾಗೆಯೇ ಭಯವಾಯಿತು. ಚಿಕ್ಕಬುದ್ಧಿಯವರಾದರೂ ಸುಖವಾಗಿರಬೇಕೆಂದು ನೆನೆದು, ಅವರನ್ನು ನೋಡಲು ಗುಡ್ಡಕ್ಕೆ ಹೋಗಿ, ಸಂಜೆಯವರೆಗೂ ಕಾದಿದ್ದೆನು ; ಬರಲಿಲ್ಲ. ಈಗ ಮತ್ತೆ ನೋಡಿದಾಗ ಬಂದಿದ್ದರು. ಅವರಿಗೆ ಇದೆಲ್ಲವನ್ನೂ ಹೇಳಿದೆ. ಅದಕ್ಕವರು, ಮೊದಲು ಇಲ್ಲಿಗೆ ಹೋಗಿ ನೋಡಬೇಕೆಂದೂ, ತಾವೂ ಹಿಂದೆಯೇ ಬರುವೆವೆಂದೂ ಹೇಳಿ, ನನ್ನನ್ನು ಇಲ್ಲಿಗೆ ಕಳಿಸಿದರು.

ಬಲವಂತ—ನರಸಿಂಗ! ನಾವು ಮಾಡಬೇಕೆಂಬುದು ಒಂದಾಗಿದ್ದರೆ, ಆಗುವುದೇ ಬೇರೊಂದಾಗಿದೆ! ಹೀಗಾದರೆ ಇನ್ನು ನಮ್ಮ ಯತ್ನ ವೇನು ?

ಕ-ನರಸಿಂಗ—ಬುದ್ಧಿ! ಕಾಲವೇ ನಮಗೆ ಪ್ರತಿಕೂಲವಾದರೆ, ಏನುಮಾಡುವುದು ?

ಇವರ ಮಾತು ಮುಗಿಯುವುದಕ್ಕೆ ಮೊದಲೇ, ಹೊರಗೆ ಯಾರೋ ಮಾತನಾಡಿದಂತೆ ಕೇಳಿಸಿತು. ಕಪಟನರಸಿಂಗನು-'ಬುದ್ಧಿ! ಯಾರೋ ಬರುವಂತಿದೆ; ನೋಡಿ ಬೇಗ ಬರುತ್ತೇನೆ, ಸ್ವಲ್ಪ ಕುಳಿತಿರಿ.' ಎಂದು ಹೇಳಿ ಹೊರಹೊರಟು, ಎಲ್ಲಿಯೋ ಕಣ್ಮರೆಯಾದನು. ಈತನು ಹೊರಟುಹೋದ ಒಂದೆರಡು ನಿಮಿಷದಲ್ಲಿಯೇ ಸೇವಕನಿಂದ ದೀಪವನ್ನು ತೆಗೆಯಿಸಿಕೊಂಡು ಬಂದ ಸುಪಂಥನು ಮುಂದೆ ನಿಂತನು.

ಬಲವಂತ—ಮಗನ ಕೈಹಿಡಿದು, ತೊದಲು ನಾಲಿಗೆಯಿಂದ-'ಮಗು! ಇನ್ನು ನಮ್ಮ ಪಾಡೇನು ? ಹೇಳು; ಇದೇಕೆ, ನೀನೂ ಹೀಗೆ ಕೆರಳಿ ನೋಡುತ್ತೀಯೆ ?'

ಸುಪಂಥ—ನಿಟ್ಟುಸಿರಿಟ್ಟು-'ಅಪ್ಪ! ಅದೆಲ್ಲಾ ಆ ಬಳಿಕಾಗಲಿ. ಮೊದಲು ಕಪಟನರಸಿಂಗನೆಲ್ಲಿ ಹೋದನೋ ಹೇಳಿರಿ. ಅವನಿಲ್ಲಿಗೆ ಬಂದುದಾಗಿ ನಮ್ಮವರು ಹೇಳಿದರು. ಈಗಲೇ ಅವನನ್ನು ಹಿಡಿಯಬೇಕಾಗಿದೆ.'

ಬಲವಂತ—ವಿಸ್ಮಯದಿಂದ-'ಅವನು ಕಪಟಿಯೇ ? ಹೇಗೆ ಹೇಳುವೆ!'

ಸುಪಂಥ—ಅದೆಲ್ಲವನ್ನೂ ನಿಧಾನವಾಗಿ ಹೇಳುವೆನು. ಈಗಾತನೆಲ್ಲಿ ?

ಬಲವಂತ—ಇದೇ, ಈಗಲೇ ಯಾರೋ ಬರುತ್ತಾರೆ, ನೋಡಿ ಬರುತ್ತೇನೆಂದು ಹೇಳಿಹೋದನು ; ಇನ್ನೂ ಬಂದಿಲ್ಲ.

ಸುಪಂಥನು, ಉಸಿರೆತ್ತದೆ, ಅದೇ ನಿಮಿಷದಲ್ಲಿಯೇ ಸೇವಕನೊಡನೆ ಹೊರಟು, ವನಪ್ರದೇಶವನ್ನೆಲ್ಲಾ ಚೆನ್ನಾಗಿ ಹುಡುಕಿಯೂ ಕಪಟನರ

ಸಿಂಗನನ್ನು ಕಾಣದೆ ನಿರಾಶನಾಗಿ ಬಂದು, ತಂದೆಯ ಬಳಿಯಲ್ಲಿ ನಿಟ್ಟುಸಿರಿಡುತ್ತ ಕುಳಿತನು. ಸೇವಕನು ಬಾಗಿಲಬಳಿಯಲ್ಲಿ ಕಾವಲಿಗಾಗಿ ನಿಂತನು.

ಬಲವಂತ—ಭಯಕೌತುಕಗಳಿಂದ-' ಅವನು ಸಿಕ್ಕಲಿಲ್ಲವೇ ? ಇಷ್ಟುಬೇಗ ಎಲ್ಲಿಗೆ ಹೋಗುವನು ? '

ಸುಪಂಥ—ಎಲ್ಲಿ ಹಾಳಾಗಿ ಹೋಗಿರುವನೋ, ಯಾರು ಬಲ್ಲರು ; ಹೇಗೂ ಕೈಕೊಟ್ಟಿರುವನು !

ಬಲವಂತ—ಸಮಾಚಾರವೇನು ? ಹೇಳಬಲ್ಲೆಯಾ ?

ಸುಪಂಥ—ಅಪ್ಪ ! ಈದಿನ ಬೆಳಗಾಗುವುದಕ್ಕೆ ಮೊದಲೇ ನಾನು, ಗದ್ದೆಗೆ ಹೊರಟುಹೋದೆನಷ್ಟೆ; ಹೋಗಿದ್ದು, ಅಲ್ಲಿಯ ಕೆಲಸಗಳನ್ನು ಮುಗಿಯಿಸಿ ಸಾಯಂಕಾಲ ಹಿಂತಿರುಗಿ ಬರುತ್ತಿದ್ದೆನು. ದಾರಿಯಲ್ಲಿಯೇ ಚೌಕದಲ್ಲಿ ನಡೆದ ವಿಚಾರವು ನಮ್ಮವರಿಂದ ತಿಳಿದುಬಂದಿತು. ಆದರೆ, ನಾನು ಅದನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಳ್ಳದೆ, ನಿಮ್ಮನ್ನು ನೋಡಬೇಕೆಂಬ ತವಕದಿಂದ ಗುತ್ತಕ್ಕೆ ಬಂದು ನೋಡಿದೆನು. ಅಲ್ಲಿ ನೀವು ಇರಲಿಲ್ಲ. ಕಾವಲುಗಾರರನ್ನು ಕೇಳಿದುದಕ್ಕೆ ತಮಗೆ ತಿಳಿಯದೆಂದು ಹೇಳಿದರು. ಆದರಮೇಲೆ ಎಲ್ಲಿಗೋ ಕಾರ್ಯಗೌರವದಿಂದ ಹೋಗಿರಬೇಕೆಂದೂ, ಬೇಗ ಬರಬಹುದೆಂದೂ ಯೋಚಿಸುತ್ತ ಅಲ್ಲಿಯೇ ಕುಳಿತು, ನಿಮ್ಮನ್ನೇ ಇದಿರುನೋಡುತ್ತಿದ್ದೆನು. ಅಷ್ಟರಲ್ಲಿಯೇ ವಿಷಹರಪುರದಿಂದ ಬಂದು ಹೇಳಿದ ಈ ಆಳಿನಿಂದ ವಿಚಾರವೆಲ್ಲವೂ ಸ್ಪಷ್ಟವಾಗಿ ತಿಳಿದುಬರಲಾಯಿತು. ಹಾಗೂ ಯೋಚಿಸುತ್ತಿರುವಲ್ಲಿಯೇ ಮುಸಲ್ಮಾನಿ ಸೆರೆಯಾಳುಗಳು ತಪ್ಪಿಸಿಕೊಂಡಿರುವರೆಂದೂ, ನರಸಿಂಗನು ಅವರ ಬಳಿಯಲ್ಲಿ ಮಾತನಾಡುತ್ತಿದ್ದುದು, ಒಂದು ಬಗೆಯ ಸಾಂಕೇತಿಕವಾಗಿತ್ತಾದುದರಿಂದ ಅವನೇ ಇದಕ್ಕೆ ಕಾರಣನಾಗಿರಬೇಕೆಂದೂ, ಸೆರೆಮನೆಯ ಕಾವಲುಗಾರನು ಬಂದು ಹೇಳಿದನು. ಇನ್ನು ನನಗೆ ಅಲ್ಲಿರಲಾಗ

ಲಿಲ್ಲ. ಹುಡುಗಿಯ ಚಿಂತೆಯೂ, ನಿಮ್ಮನ್ನು ಕುರಿತು ಭಯವೂ ಹುಟ್ಟಿದುವು. ಆಗಲೇ ಅಲ್ಲಿಂದೆದ್ದು ಅಲ್ಲಲ್ಲಿ ವಿಚಾರಿಸಿದೆನು. ಅದರಿಂದ ನರಸಿಂಗನು ಈಗಲೇ ದೀಪವನ್ನು ಹಿಡಿದು ತೋಟದಮನೆಗೆ ಹೋಗುತ್ತಿದ್ದನೆಂದು ಒಬ್ಬಿಬ್ಬರು ಹೇಳಿದರು. ಅದನ್ನು ಕೇಳಿದ ನಾನು ಮತ್ತೂ ದಿಗಿಲುಬಿದ್ದು ಆಳಿನೊಡನೆ ಇಲ್ಲಿಗೆ ಓಡಿಬಂದೆನು. ಇಲ್ಲಿಯಾದರೂ ವಿಪರೀತವೇ ನಡೆದುಹೋಗಿದೆ.

ಬಲವಂತ—ಇದೇನನ್ಯಾಯ! ನನಗೆ ಅವನಲ್ಲಿ ಸಂಶಯವೇ ತೋರಬೇಡವೆ? ಬಹು ಸತ್ಯಸಂಧನಂತೆಯೇ ತೋರುತ್ತಿದ್ದನಲ್ಲಾ!

ಸುಪಂಥ—ಅಹುದು; ಅದೇ ಮಾಟಗಾರರ ಲಕ್ಷಣವು. "ಕಳ್ಳರಜಾಡೆ ಕಳ್ಳರಿಗರಿವು" ಎಂಬಂತೆ ಅವನ ಹುಳುಕನ್ನು ಆ ದಿನವೇ ಕಂಡು ಹಿಡಿಯುತ್ತಿದ್ದೆನು. ಆದರೆ ಅಷ್ಟರಲ್ಲಿ ನೀವು ತಡೆದುಬಿಟ್ಟುದರಿಂದ ಆಗಲಿಲ್ಲ. ಈಚೆಗೆ ಅವನು ನನಗೆ ಕಾಣಿಸಿಕೊಂಡುದೇ ಇಲ್ಲ.

ಬಲವಂತ—ಹಾಗಾದರೆ ಇವನಾರಾಗಿರಬಹುದು? ನಮ್ಮವನ ಅವಸ್ಥೆಯೇನಾಯಿತು?

ಸುಪಂಥ—ಇವನಾವನೋ ಪತ್ತೇದಾರ (Detective) ನಾಗಿ ಬಂದ ರಾಜಕರ್ಮಚಾರಿಯಾಗಿರಬೇಕು. ಇಲ್ಲದಿದ್ದರೆ, ಇಲ್ಲಿಯ ರಹಸ್ಯಗಳನ್ನಾದರೂ ತಿಳಿಯುತ್ತಿದ್ದುದು ಹೇಗೆ? ಸಲಕರಣೆಗಳೆಲ್ಲಿಂದ ಪಡೆಯಬೇಕು? ನಮ್ಮವನು ದುರ್ದೈವದಿಂದ ಮಾರ್ಗದ ಮಧ್ಯದಲ್ಲಿ ಇವನ ಕೈಗೆ ಸಿಕ್ಕಿಹೋಗಿರಬೇಕು. ಅವನಿಂದ ಇಲ್ಲಿಯ ಸಂಗತಿಗಳೆಲ್ಲವನ್ನೂ ತಿಳಿದು, ಇವನು ಈ ವೇಷದಿಂದ ಇಲ್ಲಿಗೆ ಬಂದು, ಇಷ್ಟು ಅನರ್ಥವನ್ನೂ ಮಾಡಿ ಹೋಗಿರಬೇಕು.

ಬಲವಂತ—ಹೇಗಿರಬಹುದೋ ಪರಮೇಶ್ವರನೊಬ್ಬನಿಗೇ ಗೊತ್ತು! ಏಷ ಹರಪುರದ ವರ್ತಮಾನವೇನಂತೆ?

ಸುಪಂಥ—ವರ್ತಮಾನವೇನು?—'ಸುನಂದೆಯು ಬಂದುದು ಮೊದಲು, ನಮ್ಮ ಕೆಲಸದಮೇಲೆ ಜಮೀನ್ದಾರರ ಪೂರ್ಣಗಮನವಿರುವುದು.

ದಿನವೂ ಒಬ್ಬೊಬ್ಬರಂತೆ ಸೇವಕರು ಸೊಕಲ್ಪಡುತ್ತಿರುವರು. ಆದರೂ, ಅವರೆಲ್ಲರನ್ನೂ ನಾನು ಪ್ರತ್ಯೇಕವಾದುದೊಂದು ಗುಪ್ತಸ್ಥಳದಲ್ಲಿರಿಸಿರುವೆನು. ಸುನಂದೆಯು ಒಂದಂದಿನಿಂದ ನಮ್ಮ ಗಂಗೆಯನ್ನು ಮೂರುದಿನಕ್ಕೊಂದುಬಾರಿಯಂತೆ ನೋಡಲಿಕ್ಕಾದರೂ ಅವಕಾಶವಿಲ್ಲ. ಗಂಗೆಯನ್ನು ಯಾವಾಗಲೂ ತನ್ನ ಬಳಿಯೇ ಇರಿಸಿಕೊಂಡಿರುವಳು. ಈಚೆಗೆ ನಮ್ಮ ಅಧಿಕಾರದ ಸೊಕ್ಕೇ ಅಡಗಿಹೋಗಿರುವುದು. ಸಾಲದುದಕ್ಕೆ ಈಗ ಒಂದೆರಡು ವಾರಗಳಿಂದ ನಿಮ್ಮ ಕಡೆಯ ಸಮಾಚಾರಗಳೇ ಇತ್ತ ಬಾರದಿರುವುದರಿಂದ, ನಮಗೆ ದಿಕ್ಕೇ ತೋರದೆ, ಹುಚ್ಚು ಹಿಡಿದಂತಾಗಿ ಹೋಗಿರುವುದು. ವಾಸುದೇವರಾಯರಿಗೆ ನಾವು ಮಾಡಿಕೊಟ್ಟಿದ್ದ ವಾಗ್ದಾನವನ್ನು ನಡೆಯಿಸಿಕೊಡುವ ಪಕ್ಷದಲ್ಲಿ, ಅವರು ಈ ನಮ್ಮ ಕೆಲಸಗಳಿಗೆಲ್ಲಾ ಸಹಾಯಕೊಡುತ್ತೇವೆಂದು ಹೇಳಿ, ತ್ವರೆಪಡಿಸುತ್ತಿರುವರು. ಯಾವುದಕ್ಕೂ ನಿಮ್ಮ ಅಭಿಪ್ರಾಯ—ಅಲ್ಲಿಯ ಅನುಕೂಲತೆಗಳು ತಿಳಿದುಬಂದಲ್ಲದೆ, ನಮ್ಮ ಪ್ರಯತ್ನವಾವುದೂ ನಡೆಯುವಂತಿಲ್ಲ. ವಿಳಂಬಸದೆ ಈ ಆಳಿನ ಮೂಲಕವೇ ಉತ್ತರವನ್ನು ಖಂಡಿತವಾಗಿಯೂ ಕಳಿಸಿಕೊಡುವಿರೆಂದು ನಿರೀಕ್ಷಿಸುತ್ತಿದ್ದೇವೆ.' ಹೀಗೆಂದು ಅಣ್ಣನು ಕಾಗದವನ್ನು ಬರೆದು ಕಳಿಸಿರುವನು. ಅಲ್ಲಿಯ ಅವಸ್ಥೆಯು ಹೀಗಾಗಿರುವುದು. ಇಲ್ಲಿಂದರೆ, ಕಪಟನರಸಿಂಗನಿಂದ ಇಷ್ಟೊಂದು ಅನರ್ಥಗಳು ನಡೆದುಹೋಗಿರುವುವು.

ಬಲವಂತ—ಮಗು ! ನನಗೆ ಬುದ್ಧಿಶಕ್ತಿಯೇ ಲೋಪವಾಗಿಹೋಗಿದೆ. ಹನ್ನೆರಡು ವರ್ಷಗಳಿಂದ ಮಾಡಿದ ಪ್ರಯತ್ನಗಳಲ್ಲಿ, ಈ ವರೆಗೂ ನಮಗೆ ಒಂದಾದರೂ ವಿರೋಧವಾಗಿ ನಡೆದಿರುವುದೆಂಬುದನ್ನು ನಾವು ನೋಡಿರುವುದಿಲ್ಲ. ನಮ್ಮ ಉದ್ದೇಶಸಿದ್ಧಿಗೆ ಕಾಲವಿದೆಂದು ನಂಬಿ ನಿರೀಕ್ಷಿಸಿದ್ದರೆ, ಈಗ ಹೀಗೆ ಪ್ರತಿಯೊಂದೂ ವಿಪರ್ಯಾಸವಾಗಿಯೇ ತೋರುತ್ತಿದೆ. ಏನುಮಾಡಬಹುದು ?

ಸುಪಂಥ—ಮಾಡುವುದೇನು ? ಮೊದಲು ಜಮೀನ್ದಾರನ ಮನೆಯಿಂದ ಯಮುನೆಯನ್ನು ಹೊರಡಿಸಬೇಕು. ಆ ಬಳಿಕ, ಮಗನೊಡನೆ ಸುನಂದೆಯನ್ನು ಕೊಲ್ಲಬೇಕು. ಅಂದಿನವರೆಗೂ-ಎಂದರೆ, ಸುನಂದೆಯು ಮಗನೊಡನೆ ಸಾಯುವವರೆಗೂ, ನಮ್ಮ ಪ್ರಾಣಭಯವಾಗಲೀ, ಕಷ್ಟವಾಗಲೀ ತಪ್ಪುವುದಿಲ್ಲ.

ಬಲವಂತ—-ಉಪಾಯವೇನು ?

ಸುಪಂಥ—ಇನ್ನು ಸ್ವಲ್ಪಾವಧಿಯಲ್ಲಿಯೇ ಸುನಂದೆಯ ಮಗನಿಗೆ ವರ್ಷಂತಿಯ ಉತ್ಸವವು, ಬಹು ಅಟ್ಟಹಾಸದಿಂದ, ನಡೆಯುವುದಂತೆ. ಆ ದಿನ ಎಲ್ಲರೂ ಮೈಮರೆತಿರುವ ವೇಳೆಯಲ್ಲಿ, ಇದನ್ನು ಬಹು ಸುಲಭವಾಗಿ ಸಾಧಿಸಬೇಕೆಂದೂ, ಇದಕ್ಕಾಗಿ ವಾಸುದೇವರಾಯರು ಬಹು ಶ್ರದ್ಧೆಯನ್ನು ವಹಿಸಿರುವರೆಂದೂ ಅಣ್ಣನು ಪತ್ರದಲ್ಲೇ ಸೂಚಿಸಿರುವನು.

ಬಲವಂತ—ತಲೆದೂಗಿ-' ಅದೀಗ ತಕ್ಕ ಉಪಾಯವು.'

ಸುಪಂಥ—ತಕ್ಕ ಉಪಾಯವೇನೋ ಅಹುದು ; ಆದರೆ, ಅನರ್ಥಕಾರಿ ಕಪಟನರಸಿಂಗನನ್ನು ಹಿಡಿದು ಸೆರೆಹಾಕುವವರೆಗೂ ಇದು ಸಾಗಲಾರದು. ಸಾಲದುದಕ್ಕೆ ಏಂದೆಯೂ ತಪ್ಪಿಸಿಕೊಂಡಿರುವಳು.

ಬಲವಂತ—ಅವಳನ್ನು ಪೋಲೀಸ್ ಸ್ಟೇಷ (Police station) ನ್ನಿಗೆ ಕರೆದೊಯ್ದರಂತೆ.

ಸುಪಂಥ—ಬರಿಯ ಸುಳ್ಳುಸುದ್ದಿ. ಇವನೇ, ಆ ವೇಷದಿಂದ ಬಂದು, ಬಿಡಿಸಿಕೊಂಡು ಹೋಗಿರಬೇಕು.

ಬಲವಂತ—ಹಾಗೆ ಇವನೇ ಬಿಡಿಸಿಕೊಂಡುಹೋಗಿದ್ದರೆ, ಈಗ ಇಲ್ಲಿಗೇಕೆ ಬರುತ್ತಿದ್ದನು ?

ಸುಪಂಥ—ಏಕೆಂದರೆ, ನಮ್ಮ ರಹಸ್ಯಗಳನ್ನು ಭೇದಿಸಬೇಕೆಂದು. ಹಾಗಿಲ್ಲವಾದರೆ, ಏಂದೆಯು ಕೊಂಡುಹೋಗಿದ್ದ ಬೀಗದಕೈ, ಇವನಿಗೆ ದೊರೆತ ಬಗೆ ಯಾವುದು ?

ಬಲವಂತ—ಹಾಗಿದ್ದರೆ ಈಗೇನುಮಾಡುವ ?

ಸುಪಂಥ—ಮಾಡುವುದೇನು ? ಮೊದಲು, ನಮ್ಮ ಸ್ಥಾನಗಳನ್ನೂ-ಕಾರ್ಯಕ್ರಮಗಳನ್ನೂ ಬದಲಾಯಿಸಿ, ಬೇರೆಕಡೆಯಲ್ಲಿ ಗೊತ್ತುಮಾಡಿಕೊಳ್ಳಬೇಕು. ವಿಷಹರಪುರಕ್ಕೆ ತಕ್ಕಂತೆ ಉತ್ತರವನ್ನು ಬರೆದುಕಳುಹಬೇಕು. ಆ ಕಪಟನರಸಿಂಗ-ಪತ್ತೇದಾರನನ್ನು ಸರ್ವಪ್ರಯತ್ನದಿಂದಲೂ ಕಂಡುಹಿಡಿದು, ಆ ಬಳಿಕ ವಿಂದೆಯನ್ನು ಹುಡುಕಬೇಕು. ಇಷ್ಟು ಮಾಡಿದಲ್ಲದೆ, ನಮ್ಮ ಉದ್ದೇಶವು ಫಲಕಾರಿಯಾಗಲಾರದು.

ಇವನ ಮಾತು ಮುಗಿವುದಕ್ಕೆ ಸರಿಯಾಗಿ, ಮನೆಯ ಮೇಗಡೆಯಿಂದ ಘನಗಂಭೀರಘರ್ಜನೆಯಲ್ಲಿ ಈ ಬಗೆಯ ವಾಙ್ಮಾಲೆಯು ಹೊರಟಿತು.

**“ ಇಲ್ಲ ! ನಿಮ್ಮ ದುರುದ್ದೇಶವು ಎಂದಿಗೂ ಫಲಕಾರಿಯಲ್ಲ !! ವಂಚಕರ ಹುಟ್ಟನ್ನೇ ನಾಶಮಾಡಲು ಹೊಂಚಿಕೆಯಲ್ಲಿರುವ ನೃಪಂಚಮುಖನು ಎಲ್ಲೆಲ್ಲಿಯೂ ವ್ಯಾಪಿಸಿರುವನು. ನೀವೆಲ್ಲಿ ಅಡಗಿದರೂ ಪ್ರಾಣದಿಂದ ಉಳಿಯಲಾರಿರಿ ! ಚೆನ್ನಾಗಿ ತಿಳಿದುಕೊಳ್ಳುತ್ತಿರಿ !! ”**

ಮೂವರ ಹೃದಯವೂ ಚದರಿಹೋಯಿತು. ನಡುನಡುಗುತ್ತ ಮೂವರೂ ಮನೆಯ ಮುಂಗಡೆಗೆ ಬಂದು, ಮೇಲೆ ನೋಡಿದರು. ಇವರು ನೋಡುತ್ತಿದ್ದಂತೆಯೇ ಮೇಲಿಂದ ಕಪಟನರಸಿಂಗನು ಕೆಳಗೆ ಧುಮ್ಮಿಕ್ಕಿ, ಸೇವಕನನ್ನು ಒಮ್ಮೆ ಒದ್ದು ಸರಿದನು. ಸೇವಕನು ಚೀರುತ್ತ, ಕಪಟನರಸಿಂಗನನ್ನು ಹಿಡಿಯಲು ಓಡಿದನು. ಸುಪಂಥ, ಬಲವಂತರೂ-‘ ಹಿಡಿ ಹಿಡಿ ; ಬಿಡಬೇಡ ! ’ ಎಂದು ಕೂಗುತ್ತ ಓಡಿಬಂದರು. ಆದರೇನು ? ಕುಶಲಕಲಾನಿಪುಣನಾದ ನರಸಿಂಗವೇಷಧಾರಿಯು, ಅವರ ಕೈಗೆ ಸಿಕ್ಕುವನೇನು ? ಎಂದಿಗೂ ಇಲ್ಲ ! ಸುಪಂಥನ ತಲೆಕೂದಲನ್ನೆಳೆದು ನಿಲ್ಲಿಸಿ, ಬೆನ್ನಿನ ಮೇಲೆ ಬಲವಾಗಿ ಗುದ್ದಿ, ಮುಂದಕ್ಕೆ ತಳ್ಳಿದನು. ಪಾಪ ! ಸುಪಂಥನು ವಿಕೃತ

ಸ್ವರದಲ್ಲಿ ಕೂಗುತ್ತ ನೆಲದಮೇಲೆ ಬಿದ್ದನು. ಇವನ ಕೂಗನ್ನು ಕೇಳಿ, ಒಂದೊಂದು ಕಡೆಯಲ್ಲಿ ಹುಡುಕುತ್ತಿದ್ದ ಬಲವಂತ, ಸೇವಕರಿಬ್ಬರೂ ಓಡಿ ಬಂದು, ಸುಪಂಥನನ್ನು ಎತ್ತಿಕುಳ್ಳಿರಿಸಿ, ಉಪಚರಿಸಿ ಎಚ್ಚರಿಸಿದ ಬಳಿಕ, ವಿಚಾರವೇನೆಂದು ಕೇಳಿದರು.

ಸುಪಂಥ—ಯಾತನಾಸ್ವರದಿಂದ-'ಪಾಪಿಯುವನು, ಹೊಡೆದನು ; ತಲೆತಪ್ಪಿಸಿಕೊಂಡನು , ನಮ್ಮ ಮಂತ್ರವು ಭೇದಿಸಿತು. ಎಲ್ಲವೂ ವಿಪರ್ಯಾಸ ! ಅಯ್ಯೋ, ನನಗೆ ಈಗ ಮಿತಿಮೀರಿದ ಆಯಾಸ !! ತಡೆಯಲಾರೆ ; ಗುಡ್ಡಕ್ಕೆ ನಡೆಯಿರಿ. ಈ ರಾತ್ರಿ ಕಳೆದುಳಿದರೆ, ನಾಳೆ ಮುಂದಿನ ಕೆಲಸವನ್ನು ಆಲೋಚಿಸುವ.' ಎಂದು ಹೇಳಿ ಕಣ್ಣು ಮುಚ್ಚಿದನು. ಬಲವಂತನು ಸೇವಕನ ಸಹಾಯದಿಂದ ಮಗನನ್ನು ಹೆಗಲಮೇಲೇರಿಸಿಕೊಂಡು, ಭಯ-ಶೋಕಗಳಿಂದ ನಡುನಡುಗುತ್ತ ಗುಡ್ಡದ ಕಡೆಗೆ ನಡೆದನು.

|| ಶ್ರೀ ||

## ಷಷ್ಠ ಪರಿಚ್ಛೇದ.

**(ಪುನರ್ವಿಯೋಗಶಂಕೆ.)**

ಮೋಹನದತ್ತಕುಮಾರನ ವರ್ಧಂತಿಯುತ್ಸವವು, ಇಂದಿಗೆ ನಾಲ್ಕನೆಯ ದಿನದಲ್ಲಿಯೇ, ನಡೆಯಬೇಕಾಗಿರುವುದು. ಉತ್ಸವಸಮಾರಂಭವು ಈಗಳಿಂದಲೇ ತೋರಿಬರುತ್ತಿರುವುದು. ಜಮೀನ್ದಾರನ ಭವನದ ಶೃಂಗಾರವಂತೂ ಅಭೂತಪೂರ್ವವಾಗಿ, (ಹಿಂದೆಂದೂ ನೋಡದುದು) ನೋಟಕರ ಕಣ್ಮನಂಗಳನ್ನೂ ಸೆಳೆದೊಯ್ಯುವಂತಿರುವುದು. ಯಶವಂತ-ಗೋಪಾಲ, ಇವರಿಬ್ಬರ ಮುಖದಲ್ಲಿಯೂ, ಅಂತರ್ಗತ ನಾಡೀಜ್ವರದ ಮಹೋಗ್ರಸಂತಾಪವು

ಹೊರಸೂಸುತ್ತಿರುವಂತೆ, ಕಪ್ಪುಹಿಡಿದಿರುವುದು. ಗಂಗೆಯೂ ಸುನಂದೆಯು ಸುಖ-ದುಃಖಗಳಲ್ಲಿ ಸಮಭಾಗಿನಿಯಾಗಿರುವಳು. ವಿಂದಾವಿರಹ ಸಂತಾಪವು ಸುನಂದೆಯನ್ನು ಅಧಿಕವಾಗಿ ಸಂತಪಿಸುತ್ತಿರುವುದು. ಗಂಗೆಯೂ, ಯಮುನೆಯೂ ಹತ್ತಿರದಲ್ಲಿದ್ದು ಬಹುವಿಧದಿಂದ ಸಂತಯಿಸುತ್ತಿರುವರು. ಚಂದ್ರಮತಿಗೆ ಸಂತೋಷ-ಸಮಾಧಾನಗಳೆರಡೂ ಸಮವಾಗಿದ್ದರೂ, ಮಗನು ಸುಖಸಂಗತಿಗೆ ಪಾತ್ರನಾದನೆಂಬ ಸಮಾಧಾನದಿಂದ ಶಾಂತಿಯನ್ನೇ ಹಿಡಿದಿರುವಳು. ಜಮೀನ್ದಾರನು, ಮಗಳ ವಿಷಯಕವಾದ ದುಃಖವು ಅಧಿಕವಾಗಿದ್ದರೂ, ಯಮುನೆ, ದಳವಾಯಿಸಿಂಗ್, ರಾವ್‌ಬಹದ್ದೂರ್ ಇವರ ಸಮಾಧಾನವಚನಗಳಿಂದ ಅಂತರಂಗ ಕ್ಲೇಶವನ್ನು ಹೊರಪಡಿಸದಿರುವನು. ಆದರೂ, ಹತ್ತುವರ್ಷಗಳಿಂದ ತನ್ನ ಮನೆಯಲ್ಲಿ ಸುಖ-ಸಂತೋಷವೆಂಬುದೇ ಇಲ್ಲದಿದ್ದು, ಈಗ ವಂಶವರ್ಧಕನಾದ ಪುತ್ರನು ದೊರೆತು, ಉತ್ಸವದ ಕಾರಣವನ್ನುಂಟುಮಾಡಿರುವಲ್ಲಿ, ಇಂತಹ ಸುಯೋಗವನ್ನೇಕೆ ಕೆಡಿಸಿಕೊಳ್ಳಬೇಕು ? ಈ ಮೂಲಕವಾಗಿಯೇ ಬಹುಜನ ಬ್ರಾಹ್ಮಣ ಸಂತರ್ಪಣೆಯಾದರೂ ಆಗಲೆಂದು ನಿಶ್ಚಯಿಸಿ, ಮಗನ ವರ್ಧಂತಿಯುತ್ಸವವನ್ನು ಸಂಭ್ರಮದಿಂದ ನಡೆಯಿಸಲು, ತಕ್ಕ ಏರ್ಪಾಟುಮಾಡಿದ್ದನು. ಗೃಹಸ್ವಾಮಿಯ ಈ ಬಗೆಯ ನಿಶ್ಚಿತಾರ್ಥದಿಂದ ಉತ್ಸವದ ಕಾರ್ಯಗಳೆಲ್ಲವೂ ಸುಸೂತ್ರವಾಗಿ ನಡೆಯುವಂತಿದ್ದುವು. ಆದರೆ,-'ಶ್ರೇಯಾಂಸಿ ಬಹುವಿಘ್ನಾನಿ' ಎಂಬುದೊಂದಿದೆಯಲ್ಲವೇ ! ಆ ಶಂಕೆಯೊಂದು ಮಾತ್ರ ಈ ಉತ್ಸವದ ನಡುವೆ ತಟ್ಟದಿರಬೇಕೆಂದು ಕೋರುವೆವು. ಏಕೆಂದರೆ, ಹಿಂದೆಯೇ ಸುಪಂಥನ ಬಾಯಿಂದ ಹೊರಬಿದ್ದ ನುಡಿಯನ್ನು ಕೇಳಿರುವಿರಷ್ಟೆ ! ಭವಿಷ್ಯವನ್ನು ಬಲ್ಲವರಾರು ? ಇರಲಿ. ಜಮೀನ್ದಾರನು ಈಗೆಲ್ಲಿರುವನೆಂಬುದನ್ನು ವಿಚಾರಮಾಡುವ.

'ಭಲೆ ! ತಾರಾಪತಿ ! ಭಲೆಭಲೆ !! ರೋಹಿಣೀಸಮೇತನಾಗಿ ಇಲ್ಲಿ ಕುಳಿತಿರುವೆಯಲ್ಲವೆ ? ಆಗಲಿ ; ಪ್ರಕಾಶಿಸುತ್ತಿರು. ಶುಭದಾಯಕನಾದ

ಸುಪುತ್ರನಿಂದ ಚಿರಕಾಲ ಪ್ರಕಾಶಿಸುತ್ತಿರು. ಆದರೆ, ಈ ನಿನ್ನ ಪ್ರಕಾಶಕ್ಕೆ ಇನ್ನಾದರೂ ನಡುನಡುವೆ ಎಡರುಗಳಿಲ್ಲದಿರಬೇಕು.

ಪ್ರಿಯ ಸೋದರಿಯರೇ !

ಸುಸ್ವಾಂತರಾಗಿ ನೋಡಿರಿ. ಜವಿೂನ್ದಾರ ತಾರಾಪತಿರಾಯನು, ಸುನಂದಾದೇವಿಯೊಡನೆ ಮಾತನಾಡುತ್ತ ಲಕ್ಷ್ಮೀನಿಲಯವನ್ನೇ ಬೆಳಗಿಸುತ್ತಿರುವನು. ಸುನಂದಾದೇವಿಯು, ಮನೋವ್ಯಾಕುಲವೆಷ್ಟಿದ್ದರೂ ಅದನ್ನಡಗಿಸಿ, ಪತಿಯ ಮುಖೋಲ್ಲಾಸಕ್ಕಾಗಿ ಪ್ರಸನ್ನಮುಖದಿಂದ ಕುಳಿತಿರುವಳು. ಇದಲ್ಲವೇ, ಇವಳ ಸ್ವಾಧೀನಶಿಕ್ಷಣದ ಲಕ್ಷಣವು ! ಅದೂ ಹಾಗಿರಲಿ; ಗಂಗಾದೇವಿಯನ್ನಿದೊ ನೋಡಿರಿ !! ಮೋಹನದತ್ತಕುಮಾರನಿಗೆ ಪಾಠವನ್ನು ಕಲಿಸುತ್ತಿರುವ ಕ್ರಮವನ್ನಾದರೂ ನೋಡಿ ತಲೆದೂಗಿರಿ !!! ಇವಳ ಬೋಧನಾಶಕ್ತಿ, ಅಭಿಮಾನೋತ್ಕರ್ಷತೆಗಳನ್ನು ಸಾಧಾರಣ ನಾರಿಯರಲ್ಲಿ ನೋಡಲಾಗುವುದೇನು ? ಇಲ್ಲ, ಎಂದಿಗೂ ಇಲ್ಲ ! ಏಕೆಂದರೆ, ಕುಮಾರನು ತನ್ನ ಹೆತ್ತತಾಯಿಯನ್ನು ಮರೆವಷ್ಟರ ಮಮತಾಪೂರ್ಣತೆಯಿಂದಿರುವ ತನ್ನ ಕಿರುತಾಯಿಯಲ್ಲಿ ವಿನೀತನಾಗಿರುವನೆಂದರೆ, ಕೌತುಕವೇನು ? ಕೇಳಿಲ್ಲವೇ ? ‘ ಲಾಲಿಸಿದಲ್ಲಿ ಮಕ್ಕಳು; ಪೂಜಿಸಿದಲ್ಲಿ ದೇವರು. ’ ಸಾಧು ! ಗಂಗಾದೇವಿ ! ಸಾಧು ಸಾಧು !! ಮಕ್ಕಳಿಲ್ಲದ ಬಂಜೆತನವಿನ್ನೆನಗೇಕೆಂದು, ಕಕ್ಕುಲಿತೆಯಿಂದ ಮುಸುಕಿಟ್ಟು ಮಲಗಿರದೆ, ಇದ್ದಮಕ್ಕಳೇ ತನ್ನವೆಂದೆಣಿಸಿ, ನಲಿಯುತ್ತಿರುವ ನಿನ್ನೀ ನಲ್ಮೆಗೆ ನಮ್ಮ ಸಾಧುವಾದನಗಳಿರಲಿ.’ ಸಾಕಿನ್ನು, ಇತ್ತ ಗಮನವಿರಲಿ.

ಸುನಂದಾಸಹಿತನಾಗಿ ಕುಳಿತಿದ್ದ ತಾರಾಪತಿರಾಯನಲ್ಲಿಗೆ ಯಮುನೆಯು ಬಂದು ವಿನೀತೆಯಾಗಿ ನಿಂತು, ಅಂಟುಹಾಕಿದ್ದ ಪತ್ರವೊಂದನ್ನು ಮುಂದಿಟ್ಟು–‘ ಪತ್ರವನ್ನು ತಂದ ದೂತನು ಬಾಗಿಲಲ್ಲಿರುವನು ’ ಎಂದು ಹೇಳಿ ಸರಿದುನಿಂತಳು.

ತಾರಾಪತಿಯು ಪತ್ರವನ್ನು ತೆಗೆದು ಓದಲು ಮೊದಲುಮಾಡಿದನು.

ಸುನಂದೆ—ಕುತೂಹಲದಿಂದ-'ಅದಾರು ಬರೆದಿರುವರು ?'

ತಾರಾಪತಿ—ನಿನ್ನ ತಂದೆಯೇ ಬರೆದಿರಬೇಕು.

ಸುನಂದೆ—ಏನೆಂದೋ ?

ತಾರಾಪತಿ—'ಗಟ್ಟಿಯಾಗಿಯೇ ಓದುವೆನು ; ಕೇಳು' ಎಂದು ಪತ್ರವನ್ನು ಸ್ಫುಟವಾಗಿ ವಾಚಿಸಿದನು.

(ವಾಚಕರ ತಿಳಿವಿಗಾಗಿ ಪತ್ರದ ವಿವರವು ಕೊಡಲ್ಪಟ್ಟಿದೆ.)

"ಆಯುಷ್ಮಂತರಾದ ಜವಿಾನ್ದಾರರೇ !

ತಮ್ಮ 1-8-15 ರ ಪತ್ರಾಭಿಪ್ರಾಯದಂತೆಯೇ ನಾನು, ತಮ್ಮ ಪತ್ನೀಪುತ್ರರನ್ನು ಸರಿಯಾದ ಸಹಾಯದೊಡನೆ ನಿಮ್ಮಲ್ಲಿಗೆ ಕಳುಹಿದೆನು. ಆದರೆ, ಅವರು ಸುಖವಾಗಿ ಸೇರಿದರೆಂಬ ಉತ್ತರವು ಈವರೆಗೂ ನನಗೆ ಬಂದಿರುವುದಿಲ್ಲವೆಂದು ಬರೆಯಲು ಚಿಂತೆಯಾಗುತ್ತಿದೆ. ಇಲ್ಲಿಂದ ಹೊರಟವರು ನಡುದಾರಿಯಲ್ಲಿ ಕಳ್ಳರಕೈಗೆ ಸಿಕ್ಕಿದ್ದರೆಂದೂ, ಹುಡುಗಿ ಕಳ್ಳರ ಪಾಲಾಗಿಹೋದಳೆಂದೂ, ಹುಡುಗನ ವಿಚಾರವೇನಾಯಿತೆಂಬುದನ್ನರಿದವರಿಲ್ಲವೆಂದೂ ಇಲ್ಲಿಯ ಸಂತೆಯ ಸುದ್ದಿಗಳು ಹಬ್ಬಿವೆ. ಈ ವರ್ತಮಾನವು ಕಿವಿಗೆ ಬಿದ್ದಂದಿನಿಂದ ಮನೆಯಲ್ಲಿ ಯಜಮಾನಿ (ನನ್ನ ಪತ್ನಿ) ಯು ಮನೋರೋಗಕ್ಕೆ ಗುರಿಯಾಗಿದ್ದು, ಈಗ ವಾರದಿಂದೀಚೆಗೆ ಹಾಸಿಗೆ ಹತ್ತಿ ಮಲಗಿರುವಳು. ಅವಳ ದೇಹಸ್ಥಿತಿಯೂ ವಿವರಿಸುವಂತಿಲ್ಲ. ನೋಡುವುದರಿಂದ ಮಾನವಪ್ರಯತ್ನದಲ್ಲಿ ನಿರಾಶೆಯೂ, ಈ ಒಡಲ ಬೇಗೆಯೇ ಅವಳ ಅಂತಿಮಕಾಲದ ವ್ಯಾಧಿಯಾಗಿಯೂ ತಿಳಿದುಬರುತ್ತಿದೆ. ಮಾಡತಕ್ಕುದೇನು ? ಎಲ್ಲವೂ ದೈವೇಚ್ಛೆ !

ಈ ವೇಳೆಯಲ್ಲಿ ನಾನಾದರೂ ಹತ್ತಿರದಲ್ಲಿರಬೇಕೆಂದರೆ, ಅದಕ್ಕೂ ಕೇಳಿಬರಲಿಲ್ಲವೆನ್ನಬೇಕಾಗಿದೆ. ಇಲ್ಲಿ ನಾನು ಬಲವತ್ತರವಾದ ರಾಜಕಾರ್ಯದ ನಿರ್ಬಂಧಕ್ಕೆ ದೇಹವನ್ನೊಪ್ಪಿಸಿ ಕುಳಿತು, ಇಂದಿಗೆ ಮೂರುದಿನಗಳಾದುವು. ಅವಳ ಉಪಚಾರ-ವಿಚಾರಾದಿಗಳಿಗೆ ತಕ್ಕವರನ್ನು ಏರ್ಪಡಿಸಿ ಬಂದಿರುತ್ತೇ

ನಾದರೂ,–'ಯಾವ ವೇಳೆಗೆ, ಎಂತಹ ಸುದ್ದಿಯು ಬರುವುದೋ, ಈ ವೇಳೆಗೆ ಅವಳು ಏನಾಗಿರಬಹುದೋ?' ಎಂಬ ತಳಮಳವು ಮಾತ್ರ ತಪ್ಪಲಾರದು. ಆಗತಕ್ಕುದೆಲ್ಲವನ್ನೂ ಧೈರ್ಯದಿಂದ ಅನುಭವಿಸುತ್ತಿರಬೇಕಲ್ಲವೇ? ಆದರೆ, ಈ ಅಂತಿಮಕಾಲದಲ್ಲಿ, ಅವಳ ಅಂತ್ಯಪ್ರಾರ್ಥನೆಯನ್ನಾದರೂ ನಡೆಯಿಸಬೇಕೆಂಬ ಆಶೆಯು ನನಗೆ ಅತ್ಯುತ್ಕಟವಾಗಿರುವುದು. ಅವಳ ಆತ್ಮನು, ಮತ್ತೊಂದುಬಾರಿ,–ಒಂದೇ ಒಂದುಬಾರಿ, ಪುತ್ರಿಯ ಮುಖಾವಲೋಕನದ ಸುಖಾನುಭವ ಮಾಡಿ, ನಿಶ್ಚಿಂತನಾಗಬೇಕೆಂದು ತಪಿಸುವಂತೆ ಕಾಣುತ್ತಿದೆ. ಇದನ್ನು ಪೂರ್ಣಮಾಡಿಕೊಡುವ ಭಾರವು ತಮ್ಮನ್ನು ಸೇರಿರುವುದಲ್ಲವೇ?

ನಾನೂ ಇಲ್ಲಿಗೆ ಬಂದ ಬಳಿಕ, ಮಗನೊಡನೆ ಸುನಂದೆಯು ಸುಖವಾಗಿ ಬಂದು ಸೇರಿದಳೆಂಬ ಸುದ್ದಿಯನ್ನರಿತು, ಅದನ್ನೇ ದುರ್ಗಾಪುರಕ್ಕೂ ಪತ್ರಮೂಲಕವಾಗಿ ಬರೆದುಕಳಿಸಿರುವೆನು –'ಅಂತ್ಯಸ್ಥಿತಿಯಲ್ಲಿ, ದೇಹವಿಸ್ಮೃತಳಾಗಿರುವವಳಿಗೆ ನನ್ನ ಪತ್ರಾಭಿಪ್ರಾಯವು ಮುಟ್ಟುವ ಬಗೆ ಹೇಗೆ?' ಇದೊಂದು ಯೋಚನೆ! ಇದಕ್ಕಾಗಿ ನಾನೇ ಅಲ್ಲಿಗೆ ಬಂದು, ಮಗನೊಡನೆ ಸುನಂದೆಯನ್ನು ಕರೆದುಕೊಂಡು ಹೋಗಬೇಕೆಂದು ಯೋಚಿಸಿದೆನು. ಆದರೆ, ನನಗೆ ಇನ್ನೂ ನಾಲ್ಕಾರುವಾರಗಳವರೆಗೂ ಬಿಡುಗಡೆಯಾಗುವಂತಿಲ್ಲ. ಇದ್ದ ಸಂಗತಿಯೆಲ್ಲವನ್ನೂ ವಿಸ್ತರಿಸಿರುವೆನು. ತಮಗೂ ಈ ಅಭಿಪ್ರಾಯವು ಯುಕ್ತವಾಗಿ ಕಂಡುಬರುವುದಾದರೆ, ತಮ್ಮ ಪತ್ನೀಪುತ್ರರನ್ನು ದುರ್ಗಾಪುರಕ್ಕೆ, ಸಹಾಯಕರೊಡನೆ ಕಳಿಸಿಕೊಡಬೇಕೆಂದು ಕೋರುವೆನು. ಹಾಗೆ ಕಳುಹುವುದಕ್ಕೂ, ಇಲ್ಲದಿರುವುದಕ್ಕೂ ಈ ಭೃತ್ಯನ ಮೂಲಕವೇ ಉತ್ತರವು ಬಂದೀತೆಂಬ ದೃಢವಿಶ್ವಾಸದಿಂದ ನಿರೀಕ್ಷಿಸುತ್ತಿರುವ,

| | |
|---|---|
| (ಮುಕ್ಕಾಂ) ಶ್ರೀನಗರ,<br>26–8–15. | ನಿಮ್ಮ ನಿರಂತರದ ಶ್ರೇಯೋಭಿಲಾಷಿ,<br>ಲಕ್ಷ್ಮಣರಾವ್." |

ಸುನಂದೆಯು ಶೋಕಾತಿರೇಕದಿಂದ ತಡೆಯಲಾರದೆ, ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು. ಯಮುನೆಯು ಎಷ್ಟೋ ಸಮಾಧಾನವನ್ನು ಹೇಳಿದರೂ ಫಲವಾಗದಿರಲು ಖತಿಗೊಂಡು, ಚಂದ್ರಮತಿಯಿದ್ದಲ್ಲಿಗೆ ಓಡಿಹೋದಳು. ಇಷ್ಟರಲ್ಲಿ ಮೋಹನನಿಗೆ ಪಾಠವನ್ನು ಮುಗಿಯಿಸಿ, ಗಂಗೆಯೂ ಮಗನೊಡನೆ ಬಂದು ಸೇರಿ, ಸಮಾಚಾರವೇನೆಂಬುದನ್ನು ಕೇಳಿ ತಿಳಿದು, ಪಶ್ಚಾತ್ತಾಪಪಡುತ್ತ ಕುಳಿತಳು.

ಮೋಹನ—ಅಳುತ್ತಳುತ್ತ ತಂದೆಯ ಗಲ್ಲವನ್ನು ಹಿಡಿದು,–' ಅಪ್ಪ! ಅಮ್ಮಯ್ಯನನ್ನು ನೋಡಲು, ಯಾವಾಗ ಕರೆದುಕೊಂಡುಹೋಗುವೆ ? ' ಎಂದು ಕೇಳಿದನು.

ತಾರಾಪತಿ—ಮಗನ ಮುಡಿದಡಪಿ ಒಳಿಯಲ್ಲಿ ಕುಳ್ಳಿರಿಸಿಕೊಂಡು–' ಮಗು! ನಾಳೆಯೇ ಹೋಗುವ. ಸುಮ್ಮನಿರು ; ಅಳಬಾರದು ' ಎಂದು ಸಂತಯಿಸಿ, ಪತ್ನಿಯನ್ನು ಕುರಿತು ಕೇಳಿದನು,–' ಪ್ರಾಣೇಶ್ವರಿ ! ನಿನ್ನ ಇಷ್ಟವೇನು ? '

ಸುನಂದೆ—ಗದ್ಗದಸ್ವರದಿಂದ–' ನಾನೇನನ್ನು ಹೇಳಲಿ ? ಹತ್ತು ವರ್ಷಗಳಿಂದ ವಿಯೋಗವ್ಯಸನದಲ್ಲಿ ಕೊರಗಿ-ನರಳಿ ಸಾಕಾಗಿದ್ದು, ಈಗ ಒಂದೆಡೆಯಲ್ಲಿ ಸೇರಿ, ಇನ್ನೂ ಒಂದು ಮಾಸಾವಧಿಯಾದರೂ ನಡೆದಿರುವುದಿಲ್ಲ. ಈಗಲೇ ಇದೊಂದುಶೋಕವೃತ್ತಾಂತವು ಬಂದರೆ, ಇನ್ನೇನನ್ನು ಹೇಳಲಾದೀತು ? ನಮ್ಮ ತಾಯಿಯೂ ನನ್ನಿಂದ ಅನೇಕವೇಳೆ, ತನ್ನ ಅಂತ್ಯಕಾಲದಲ್ಲಿ ನಾನು ಬಳಿಯಲ್ಲಿರುವಂತೆ ಭಾಷೆಯನ್ನು ತೆಗೆದುಕೊಂಡಿರುವಳು. ಆದರೆ, ಈಗೇನು ಮಾಡಬೇಕೆಂಬುದೇ ನನಗೆ ತಿಳಿಯದಿದೆ. ಮಗಳಿಗಾಗಿ ಅಳುವುದೋ ? ನನಗಾಗಿ ಕೊರಗಿ ಪ್ರಾಣಬಿಡುತ್ತಿರುವ ತಾಯಿಗಾಗಿ ದುಃಖಿಸುವುದೋ ? ನಿಮ್ಮನ್ನು ಬಿಟ್ಟಿರುವುದಕ್ಕಾಗಿ ತಪಿಸುವುದೋ ? ಏನು ಮಾಡಲಿ ? '

ಇಷ್ಟರಲ್ಲಿ ಚಂದ್ರಮತಿ, ಯಮುನೆಯರೂ ಬಂದು ಸೇರಿ, ಪಶ್ಚಾತ್ತಾಪಪಡುತ್ತ ಕುಳಿತರು. ತಾರಾಪತಿರಾಯನು ತಾಯಿಯ ಕಡೆಗೆ ತಿರುಗಿ ಕೇಳಿದನು.–'ಅಮ್ಮಯ್ಯಾ? ಈಗೇನುಮಾಡಬಹುದು? ಅವರ ಅಂತ್ಯಕಾಲದ ವಾಂಛೆಯನ್ನು ನಡೆಯಿಸಿಕೊಡುವುದೇ ಧರ್ಮವಾಗಿದೆ. ಯಾರ ಸಹಾಯದಲ್ಲಿ ಕಳುಹಬಹುದು?'

ಚಂದ್ರಮತಿ—ಮಗು! ಸುನಂದೆಯನ್ನೂ, ಮೋಹನನನ್ನೂ ಬಿಟ್ಟು, ಅರೆ ಗಳಿಗೆಯಾದರೂ ನಾನಿಲ್ಲಿ ಇರಲಾರೆನು. ಅವಳನ್ನು ಹೇಗೆ ಕಳಿಸುವುದು?

ಗಂಗೆ—ಹಾಗೆನ್ನಲಾದೀತೇ? ಇವರನ್ನು ಬಿಟ್ಟಿರಲು ಯಾರಿಗೂ ಮನವೊಡಂಬಡುವಂತಿಲ್ಲ. ಆದರೂ ಈ ವೇಳೆಯಲ್ಲಿ, ಕಳುಹದಿರಲಿಕ್ಕಾದೀತೇ? ಸರಿಯಾದವರೊಡನೆ ಕಳಿಸಿ, ಬೇಗ ಬರುವಂತೆ ಏರ್ಪಾಟುಮಾಡುವುದು, ನನ್ನ ಮನಸ್ಸಿಗೆ ಹಿತವಾಗಿ ಕಾಣುವುದು. ಇನ್ನು ಇದರ ಮೇಲೆ ನಿಮ್ಮ ಇಷ್ಟವು ಹೇಗಿದೆಯೋ?

ತಾರಾಪತಿ—ಅದೇ ನನಗೂ ಸರಿಯಾದ ಆಲೋಚನೆಯಾಗಿದೆ. ಯಮುನೆಯನ್ನೇ ಸಹಾಯಕ್ಕಾಗಿ ಕಳುಹಬೇಕೆಂದಿರುತ್ತೇನೆ.

ಸುನಂದೆ—ಯಮುನೆಯು ನನ್ನೊಡನೆ ಬಂದರೆ, ಇಲ್ಲಿ ಅಮ್ಮಯ್ಯಾಯವರಿಗೂ, ಗಂಗಾಬಾಯಿಗೂ ತೊಂದರೆಯಾದೀತು.

ಗಂಗೆ—ನನಗೇನೂ ತೊಂದರೆಯಿಲ್ಲ. ಅಮ್ಮಯ್ಯಾಯವರ ಕೆಲಸಕ್ಕಾದರೂ ಬೇರೆ ಏರ್ಪಾಟು ಮಾಡಿಕೊಳ್ಳಬಹುದು. ಆದರೆ, ಅವಳು ಮನೆಯಲ್ಲಿ ಒಂದು ಗಳಿಗೆಯಿಲ್ಲದಿದ್ದರೂ ಮನೆಯಾಡಳಿತವೇ ಸಡಿಲವಾದಂತೆ ತೋರುವುದು. ಇದೊಂದಲ್ಲದೆ ಮತ್ತಾವ ಶಂಕೆಯೂ ಇಲ್ಲ.

ಸುನಂದೆ—ನಿಜ. ಗಂಗೆಯ ಮಾತು ನನಗೂ ಸಹಜವಾಗಿದೆ. ಯಮುನೆಯು ಇಲ್ಲಿಯೇ ಇರಬೇಕು. ನನ್ನ ಸಹಾಯಕ್ಕೆ ನಂಬಿಕೆಯುಳ್ಳ ಆಳುಗಳನ್ನು ಕಳುಹಿದರೂ ಸಾಕಾದೀತೆಂದು ತೋರುವುದು.

ತಾರಾಪತಿ—ಹಾಗೆಯೇ ಮಾಡಬೇಕು. ನಾನೇ ನಿನ್ನನ್ನು ಕರೆದುಕೊಂಡು ಹೋಗಿ ಬಿಟ್ಟು, ಅವರನ್ನೂ ಕಣ್ಣಾರ, ನೋಡಿಬರಬೇಕೆಂಬ ಇಷ್ಟವಿದೆ. ಆದರೆ, ನಿಂತಂತೆಯೇ ಹೊರಡಲಿಕ್ಕಾಗದು. ಹೊರಡ ಬೇಕೆಂದರೆ, ಮೂರುನಾಲ್ಕು ದಿನಗಳಾದರೂ ಬೇಕಾಗುವುದು. ಅಷ್ಟರವರೆಗೂ, ನಿನ್ನನ್ನು ತಡೆದಿರುವುದೂ ಸರಿಯಾಗಿಲ್ಲ. ಭವಿತವ್ಯ ವನ್ನು ಕಂಡು ಹೇಳುವವರಿಲ್ಲ. ಹೇಗೂ ನಾಳೆಯೇ ಪ್ರಯಾಣ ಮಾಡುವರೆಂದು ಉತ್ತರವನ್ನು ಬರೆದು ಕಳುಹುವೆನು. ದೈವೇಚ್ಛೆ ಯಿದ್ದಂತಾಗಲಿ.

ಎಲ್ಲರೂ ಸುಮ್ಮನಾದರು. ತಾರಾಪತಿರಾಯನು ಹೊರಟು ಬಂದು, ಆಗಲೇ ಉತ್ತರವನ್ನು ಬರೆದುಕೊಟ್ಟು ಕಳುಹಿದನು. ದೂತನೂ ಉತ್ತರಪತ್ರವನ್ನು ಕೈಕೊಂಡು ಹೊರಟುಹೋದನು. ವಾಯುವೇಗದಿಂದ ಹಾರಿಹೋಗುತ್ತಿದ್ದ ಅಶ್ವಗತಿಯನ್ನು, ಕರಕೌಶಲದಿಂದ ಥಟ್ಟನೆ ಹಿಡಿದು ಕಟ್ಟಿದಂತೆ, ಜಮೀನ್ದಾರನ ಮನೆಯ ಉತ್ಸವಕಾರ್ಯವು ಇದೊಂದು 'ಪುನ ರ್ವಿಯೋಗಶಂಕೆ' ಎಂಬ ವಿಘ್ನದಿಂದ ಥಟ್ಟನೆ ಹಿಡಿದು ನಿಲ್ಲಿಸಲ್ಪಟ್ಟಿತು. ಇದನ್ನೇ ಅಲ್ಲವೇ 'ದೈವೀವಿಚಿತ್ರಾಗತಿಃ' ಎಂದು ಹೇಳುವುದು? ಇದಕ್ಕೆಂದಲ್ಲವೇ ನಾವು ಹಿಂದೆಯೇ ಭಯ-ಸಂಶಯಾವಿಷ್ಟರಾಗಿ ಸೂಚಿಸಿ ದುದು? ಭಗವತಿಯೊಲ್ಮೆಯಿಂದ ವಿಘ್ನನಿವಾರಣೆಯಾಗಿ, ಸುಖಸಂಗತಿಯು ಸಂಗಡಿಸಲಿ.

|| ಶ್ರೀ ||

# ಸಪ್ತಮ ಪರಿಚ್ಛೇದ.

(ಅಂಚೆಗೆ ಸೂಚನೆ)

ಸೋದರಿಯರೇ! ಸತ್ಯವೆಂಬುದು ಈ ಕಾಲದಲ್ಲಿ ಸಹಜ ರೂಪದಿಂದಿರಬೇಕಾದರೆ, ಎಲ್ಲಿರಬೇಕು? ಸಾಮಾನ್ಯವಾಗಿ ವಿಚಾರಮಾಡುವೆವಾದರೂ, ಸದ್ಯಸ್ಥಿತಿಯಲ್ಲಿ ಸತ್ಯವೆಂಬುದು ಅಂಚೆಯವರ (Postal Departmant) ಲ್ಲಿ ಮಾತ್ರವೇ ಇದೆಯೆಂದು ಹೇಳಬೇಕು. ಆದರೆ, ಕೆಲವು ಮಂದಿ ಸೋಮಾರಿಗಳ, ಮತ್ತು ಆಶಾಪರರ ಅವಿಚಾರಣೆಯಿಂದ ಅನೇಕ ವೇಳೆಗಳಲ್ಲಿ ಅಂಚೆಮನೆಯ (Post office) ಲ್ಲಿಯೂ, ಯಾರಿಗೂ ತಿಳಿಯದಂತೆ ಅಂಚೆಯವರ ಕಣ್ಣಿಗೆ ಮಣ್ಣೆರಚಿಯೋ, ಇಲ್ಲವೇ ಧನಲೋಭವೆಂಬ ಜೇಳುವೆಯ ಬೂದಿಯಿಂದ ಮರುಳುಮಾಡಿಯೋ, ಹೇಗೂ ತಮ್ಮ ಕೆಲಸಗಳನ್ನು (ಅದು ಎಂತಹುದೇ ಆಗಿರಲಿ,) ಸಾಧಿಸಿಕೊಳ್ಳುವ ಕುಟಿಲ ನಟನೆಯವರು, ಈಗ ಎಷ್ಟುಮಂದಿಯನ್ನಾದರೂ ಕಾಣಬಹುದು.

ಅಂಚೆಮನೆಯ ಅಧಿಕಾರಿ (Postmaster) ಯಾದವನು ಸತ್ಯ ಮತ್ತು ಕರ್ತವ್ಯಗಳಲ್ಲಿ ನಿಷ್ಠೆಯುಳ್ಳವನಾಗಿದ್ದರೆ, ಇಂತಹ ಕ್ಷುಲ್ಲಕವ್ಯಾಪಾರಗಳಿಗೆ ಅವಕಾಶವು ದೊರೆಯದಂತೆ, ದಕ್ಷತೆಯಿಂದ ನೋಡಿಕೊಳ್ಳುವನು. ಹಾಗಿಲ್ಲದೆ, ಆತನು ವಿಲಾಸಪ್ರಿಯನಾಗಿ ಗೀತೆ, ಚಿತ್ರ, ಕೂಟ-ನೋಟಗಳೇ ಮೊದಲಾದ ದುರ್ವ್ಯಸನಗಳಿಗೇನಾದರೂ ಬಿದ್ದಿರುವವನಾದರೆ. ಅಂಚೆಮನೆಯ ಆಡಳಿತಗಳನ್ನು ಹೇಳಬೇಕಾದುದೇ ಇಲ್ಲ. ಮತ್ತು ಪ್ರಜಾಸೌಕರ್ಯಕ್ಕಾಗಿ ನಿಯಮಿತವಾಗಿರುವ ಈ ಅಂಚೆಯನಡವಳಿಕೆ (Postal arrangements) ಗಳೇ, ಪ್ರಜೆಗಳಪ್ರಾಣಹಾನಿಗೆ ಕಾರಣವಾದಾವೆಂದರೂ ಸುಳ್ಳಾಗಲಾರದು.

ಆದರೆ, ಪೋಸ್ಟ್‌ಮಾಸ್ಟರರು ಇಂತಹ ಪ್ರಮಾದಗಳನ್ನು ದೂರಕ್ಕಟ್ಟಿ, ದೇಶಸ್ವಾಸ್ಥ್ಯವನ್ನು ರಕ್ಷಿಸಬೇಕಾದರೆ, ಮೊದಲು ಸೂಕ್ಷ್ಮಬುದ್ಧಿ, ಶ್ರಮಸಹಿಷ್ಣುತೆ, ನಿರಂತರೋದ್ಯಮಗಳನ್ನು ತಮ್ಮಲ್ಲಿ ಚೆನ್ನಾಗಿ ಬಲಪಡಿಸಿಕೊಂಡಿರಬೇಕು. ಅವುಗಳ ಬಲದಿಂದ ಕಾರ್ಯಾರಂಭಕ್ಕೆ ಮೊದಲು ಅತ್ಯಲ್ಪವಿಷಯವೆಂದೂ, ಇಲ್ಲವೇ ಈ ವಿಚಾರವು ತಮಗೆ ಸೇರಿದುದೇ ಅಲ್ಲವೆಂದೂ ಭಾವಿಸುವ ಭಾಗಗಳೇ, ಕಡೆಗೆ ಮಹತ್ತರವಾಗಿ ಕಂಡುಬರುವುವು. ಇದರ ಮರ್ಮವನ್ನರಿತು, ಅಲ್ಪವಿಷಯಗಳೆಂದು ಉಪೇಕ್ಷಿಸದೆ, ತಮ್ಮದೊಂದು ಕುಡಿನೋಟದಿಂದ ಇವುಗಳನ್ನು ಆಡಿಗಡಿಗೆ ವಿಚಾರಕ್ಕೆ ತೆಗೆದುಕೊಳ್ಳುವುದರಿಂದ, ಪ್ರಜಾಜನರ ಮಾನ, ಪ್ರಾಣ, ಧನ, ಭೋಗ, ಭಾಗ್ಯ, ಸಂಪತ್ತಿಗಳು ಕಾಮುಕಾಕರರ ಕೈಗೆ ಸಿಕ್ಕಿಹೋಗದಂತೆ ಭದ್ರವಾಗಿದ್ದು, ದೇಶೋನ್ನತಿಗೆ ಕಾರಣವಾಗುವುವು. ಇದನ್ನು ನಮ್ಮವರು ನಿಜವೆಂದು ನಿರ್ಧರಿಸಬೇಕಾದರೆ, ಇತ್ತ ಗಮನವಿರಲಿ.

ವಿಷಹರಪುರದ ಅಂಚೆಮನೆಯು (Post office) ಅಷ್ಟು ಪ್ರಧಾನಸ್ಥಾನ (Head-office) ವಲ್ಲದಿದ್ದರೂ, ಮಧ್ಯವರ್ಗಕ್ಕೆ ಸೇರಿದು (Sub-office) ದಾಗಿರುವುದು. ಇಲ್ಲಿಯ ಕಾರ್ಯಭಾಗಗಳು, ತಕ್ಕಮಟ್ಟಿಗೆ ತೃಪ್ತಿಕರವಾಗಿ ನಡೆಯುತ್ತಿರುವುವು. ಅಧಿಕಾರಿಯು ಸತ್ಯ, ಕ್ಷಮಾ, ಕೃತಜ್ಞತೆಗಳಿಗೆ ಬದ್ಧನಾಗಿ, ವಿಷಹರಪುರಕ್ಕೇ ಆಪ್ತಮಿತ್ರನಂತಿರುವನು. ಇಂದು ಈತನು, ಸಾಯಂಕಾಲ ನಾಲ್ಕುಗಂಟೆಯ ವೇಳೆಯಲ್ಲಿ ಒಬ್ಬನೇ ಕುಳಿತು ಏನನ್ನೋ ಬರೆಯುತ್ತಿದ್ದನು. ಈತನ ಬಳಿಗೆ ಗೌರವಸ್ಥನಾದ ಸರದಾರನೊಬ್ಬನು ಬಂದು, ವಂದನಾಪೂರ್ವಕವಾಗಿ–'ಪ್ರವೇಶಕ್ಕೆ ಅಪ್ಪಣೆಯುಂಟೋ ?' ಎಂದು ಬೆಸಗೊಂಡನು.

ಪೋಸ್ಟ್‌ಮಾಸ್ಟರ್—ತಲೆಯೆತ್ತಿನೋಡಿ ಕೌತುಕದಿಂದ ಪ್ರತಿವಂದನೆ ಮಾಡಿ–'ಬರಬಹುದು ; ಆಕ್ಷೇಪವಿಲ್ಲ' ಎಂದು ಹೇಳಿದನು.

ಸರದಾರನು ಸುಹಾಸದಿಂದ ತಲೆದೂಗುತ್ತ ಒಳಹೊಕ್ಕನು ಮಾಸ್ಟರನು ಮರ್ಯಾದೆಯಿಂದ ತನ್ನಿದಿರಾಗಿದ್ದ ಕುರ್ಚಿಯಮೇಲೆ ಕುಳ್ಳಿ ಹೇಳಿದುದರಿಂದ, ಅದನ್ನೆಳೆದು ಕುಳಿತನು.

ಪೋಸ್ಟ್‌ಮಾಸ್ಟರ್—ಸರದಾರನನ್ನೇ ನೋಡುತ್ತ ಸಂಕುಚಿತಸ್ವರದಿಂದ- 'ಬಂದುದೆಲ್ಲಿಂದಲೊ ? ಯಾವ ಕಾರ್ಯಗೌರವಕ್ಕೆಂದೋ ?'

ಸರದಾರ್—ಕಿರುನಗೆಯಿಂದ-'ನಾನು ಬಂದುದು ಶ್ರೀನಗರದಿಂದ ; ನನ್ನ ಸ್ವಂತ ಕಾರ್ಯಕ್ಕಾಗಿಯೇ ಬಂದಿರುವುದು.'

ಇವರ ಮಾತಿನ ಮಧ್ಯದಲ್ಲಿಯೇ ಅಂಚೆಗೆ ಕಾಗದಗಳನ್ನು ತಂದಿದ್ದ ಗೋಪಾಲನು, ತನ್ನ ಜತೆಯವರೊಡನೆ ಅಲ್ಲಿಗೆ ಬಂದು, ಪೆಟ್ಟಿಗೆ (Post-box) ಗೆ ಕಾಗದಗಳನ್ನು ಹಾಕಿ, ಬಂದಂತೆಯೇ ಹಿಂದಿರುಗಿ ದನು. ಇದೆಲ್ಲವನ್ನೂ ನೋಡುತ್ತ ಕುಳಿತಿದ್ದ ಸರದಾರನು, ಮರುಮಾತಾ ಡದೆ ಎದ್ದು ಹೊರಗೆಹೋಗಿ ನೋಡಿಬಂದು, ಮತ್ತೆ ಮೊದಲಿನಂತೆಯೇ ಕುಳಿತನು.

ಪೋಸ್ಟ್‌ಮಾಸ್ಟರ್—ವಿಸ್ಮಯದಿಂದ-'ಇದೇನು, ಮಾತನಾಡುತ್ತಿದ್ದಂ ತೆಯೇ ಎದ್ದುಹೋಗಿದ್ದಿರಿ ?'

ಸರದಾರ—ಮನೆಯಿಂದ ಯಾರೋ ಬಂದಿದ್ದರು ; ಮಾತನಾಡಿ ಕಳುಹಿ ಬಂದೆನು. ಅಷ್ಟೆ ! ಅದಿರಲಿ ; ಎಲ್ಲಿ ? ಈಗ ಪೆಟ್ಟಿಯೊಳಗೆ ಬಿದ್ದ ಕಾಗದಗಳನ್ನು ಹೊರತೆಗೆದು, ವಿಳಾಸವನ್ನು ನೋಡಿ ಹೇಳಿರಿ.'

ಪೋಸ್ಟ್‌ಮಾಸ್ಟರ್—ಪೆಟ್ಟಿಗೆಯ ಬೀಗವನ್ನು ತೆಗೆದು, ಒಳಗಿದ್ದ ಕಾಗದ ಗಳನ್ನು ಒಂದೊಂದಾಗಿ ಹಿಡಿದು ವಿಳಾಸವನ್ನು ಓದಿಹೇಳುತ್ತ ಕಡೆಗೆ, ಒಂದು ಲಕೋಟೆಯನ್ನು ತೆಗೆದು-'ಗೊಲ್ಲರಪಾಳ್ಯದ ಹೊಟೇಲ್ ಸೌಬಲರಾಯರಿಗೆ' ಎಂದಿದ್ದ ವಿಳಾಸವನ್ನು ಓದಿ ಹೇಳಿದನು.

ಸರದಾರ—ಕೈನೀಡಿ-'ಅದನ್ನಿತ್ತ ಕೊಡಿರಿ ; ನೋಡಬೇಕಾಗಿದೆ.'

ಪೋಸ್ಟ್‌ಮಾಸ್ಟರ್—ವಿಳಾಸದಾರರಿಗೆ ಮುಟ್ಟಿಸುವುದಲ್ಲದೆ, ಇತರರಿಗೆ ಹೇಗೆ ಕೊಡಬಹುದು ?

ಸರದಾರ—ಹೇಗೆಂಬುದನ್ನು ಆ ಬಳಿಕ ಚರ್ಚಿಸಬಹುದು. ಮೊದಲು, ಕೊಟ್ಟುಬಿಡುವುದು ಮೇಲು.

ಪೋಸ್ಟ್‌ಮಾಸ್ಟರ್—ಶಂಕಿತನಾಗಿ ' ಸ್ವಾಮಿ ! ತಾವು ಎಲ್ಲವನ್ನೂ ತಿಳಿದವರು ; ನೀವೇ ಯೋಚಿಸಿ ಹೇಳಿರಿ. ಯಾರೇ ಆಗಲಿ, ನಿಯಮವನ್ನು ಮೀರುವುದು ನ್ಯಾಯವೇ ? ಮೀರಿ ನಡೆಯಬಹುದೇ ? ಇದರಿಂದ ನಮ್ಮ ಮೇಲೆ ತಪ್ಪಿತವು ಬೀಳಬಹುದಲ್ಲವೇ ? ಅದಕ್ಕೆ ನಾವಲ್ಲದೆ, ಮತ್ತಾರಾದರೂ ಹೊಣೆಗಾರರಿರುವರೇ ? '

ಸರದಾರ—ಅಯ್ಯಾ, ಈಗ ವಿಶೇಷ ವಿಷಯಗಳಿಗೆ ಅವಕಾಶವಿಲ್ಲ. ಇದನ್ನು ಪರೀಕ್ಷಿಸಲಿಕ್ಕಾಗಿಯೇ ನಾನು ಬಂದಿರುವೆನು. ಇದರಿಂದ ನಿಮಗೇನೂ ತಪ್ಪಿತವು ಬೀಳುವುದಿಲ್ಲ. ಹಾಗೂ ನಿಮ್ಮ ಮೇಲೆ ಬೀಳಬರುವ ಆರೋಪಗಳಿಗೆ, ಪ್ರಬಲ ಸರ್ಕಾರವೇ ಹೊಣೆಯಾಗಿ ನಿಲ್ಲುವುದೆಂದು ತಿಳಿಯಿರಿ.

ಪೋಸ್ಟ್‌ಮಾಸ್ಟರ್—ಹಾಗಾದರೆ ಸಂತೋಷ. ಆದರೂ ಕ್ಷಮೆಯಿರಲಿ. ತಾವು ಯಾರಕಡೆಯ ಪ್ರತಿನಿಧಿಗಳಾಗಿ ಬಂದಿರುವಿರೆಂಬುದನ್ನು ನಿರ್ಧಾರಮಾಡಿರಿ. ಆ ಬಳಿಕ ನಿಮ್ಮ ಮಾತಿಗೆ ಪ್ರತಿಯಿರುವುದಿಲ್ಲ.

ಸರದಾರ—ಸರ್ದಾರ್ ಧಮಪಾಲರನ್ನೇ ಮರೆತಿರೋ ? ಅವರು ನಿಮ್ಮ ನೆನಪಿನಲ್ಲಿದ್ದರೆ, ನಾನು ಅವರ ಪ್ರತಿನಿಧಿಯೆಂದೇ ತಿಳಿಯಬಾರದೇಕೆ ? ಹಾಗೂ ಸಂಶಯವಿದ್ದರೆ ಹೇಳಿರಿ.

ಪೋಸ್ಟ್‌ಮಾಸ್ಟರ್—ಧಿಗ್ಗನೆದ್ದು ಕಾಗದವನ್ನು ಸರದಾರನ ಮುಂದಿಟ್ಟು ವಿನೀತಭಾವದಿಂದ ಹೇಳಿದನು–' ಮಹನೀಯರೇ ! ಕ್ಷಮೆಯಿರಲಿ. ನಾನು, ಸರ್ದಾರ್ ಧರ್ಮಪಾಲರ ಆಜ್ಞೆಗೆ ಯಾವಜ್ಜೀವವೂ ವಿಧೇಯನಾಗಿರತಕ್ಕವನು. ನನ್ನಲ್ಲಿ ಸಂಶಯ ಲೇಶಕ್ಕೂ ಕಾರಣ

ವಿಲ್ಲ. ನನ್ನ ಕರ್ತವ್ಯವನ್ನು ನಾನು, ಸತ್ಯದ ಏಕನಿಷ್ಠೆಯಲ್ಲಿ ನೆರವೇರಿಸಬೇಕಾದುದು ಸಹಜವಾದುದರಿಂದ, ಇಷ್ಟುದೂರ ಚರ್ಚಿಸಿದೆನು. ಅನ್ಯಥಾ ಭಾವಿಸಲಾಗದು.'

ಸರದಾರ—ಕಾಗದವನ್ನು ಕೈಕೊಂಡು ತಲೆದೂಗಿ ನಗುತ್ತ-' ಅಷ್ಟು ಉಪಚಾರೋಕ್ತಿಯೇಕೆ? ಹೀಗಿರುವುದು ಸಂತೋಷಪ್ರದವೇ ಸರಿ.' ಎಂದು ಹೇಳಿ, ಮೇಲೆ ಗಾಜಿನಪಾತ್ರೆಯಲ್ಲಿದ್ದ ನೀರಿನಿಂದ, ಆ ಲಕೋಟೆಗೆ ಹಾಕಿದ್ದ ಅಂಟನ್ನುಬಿಡಿಸಿ, ಉಪಾಯದಿಂದ ಅಂಚೆಯ ಚೀಟಿ (Postage stamp) ಯನ್ನು ತೆಗೆದಿರಿಸಿ, ಕಾಗದವನ್ನು ತೆಗೆದು ತನ್ನಲ್ಲಿಯೇ ಓದಿ ವಿಷಯಗಳನ್ನು ತಿಳಿದು, ಮತ್ತೆ ಕಾಗದವನ್ನು ಪೋಸ್ಟ್‌ಮಾಸ್ಟರ ಕೈಗಿತ್ತು ಹೇಳಿದನು-' ಇದನ್ನು ನೀವೂ ಒಂದುಬಾರಿ ನೋಡಿ ತಿಳಿದುಕೊಳ್ಳಿರಿ.'

ಪೋಸ್ಟ್‌ಮಾಸ್ಟರ್—ಕಾಗದವನ್ನು ಒಂದುಬಾರಿ ಓದಿ, ಮತ್ತೆ ಸರದಾರನ ಕೈಗಿತ್ತು-' ಮುಂದೆ ಉಪಾಯವೇನು?'

ಸರದಾರ—' ಉಪಾಯವಿದೇ ಆಗುವುದು.' ಎಂದು ಹೇಳಿ, ಕಾಗದವನ್ನು ಮೊದಲಿದ್ದಂತೆಯೇ ಮಡಿಸಿ, ಲಕೋಟೆಗೆ ಅಂಟುಹಾಕಿ, ತಲೆಚೀಟಿ (Postage stamp) ಯನ್ನು ಅಂಟಿಸಿ ಪೋಸ್ಟ್‌ಮಾಸ್ಟರ ಕೈಗಿತ್ತು-' ಇದನ್ನು ನಿಮ್ಮ ನಿಯಮಾನುಸಾರವಾಗಿ ವಿಳಾಸದಾರರಿಗೆ ಕಳುಹಿರಿ.' ಎಂದು ಸುಮ್ಮನಾದನು. ಪೋಸ್ಟ್‌ಮಾಸ್ಟರು ಕಾಗದಕ್ಕೆ ಮುದ್ರೆಯನ್ನೊತ್ತಿ ಕಳುಹುವಂತೆ ಮುತ್ಸದ್ದಿಯ (Clerk) ವಶಕ್ಕೊಪ್ಪಿಸಿ, ಮತ್ತೆಸರದಾರನ ಬಳಿಯಲ್ಲಿ ಕುಳಿತನು.

ಸರದಾರ—ಈಗಲಾದರೂ ನ್ಯಾಯವಿಮರ್ಶೆಯನ್ನು ಗ್ರಹಿಸಬಲ್ಲಿರಷ್ಟೆ?

ಪೋಸ್ಟ್‌ಮಾಸ್ಟರ್—ಬಲ್ಲೆನು. ಆದರೆ, ಅದೂ ಧರ್ಮಪಾಲರ ಅಂತಃಕರಣಪ್ರಭಾವದಿಂದ.

ಸರದಾರ—ಸಂತೋಷ ; ನೀವು ಈ ದಿನ ಮಾಡಿದ ಉದಾರವಾದ ಸಹಾಯಕ್ಕಾಗಿ ಧರ್ಮಪಾಲರಿಗೆ ಚಿರಸ್ಮರಣೀಯರಾಗಿರುವಿರಿ.

ಪೋಸ್ಟ್‌ಮಾಸ್ಟರ್—ಸ್ವಾಮಿ ! ಧರ್ಮಪಾಲರೇ ನನ್ನ ಅನ್ನದಾತರಾಗಿರುವರು. ಅನಾಥನಾಗಿ, ಸೋಮಾರಿತನದಿಂದ ಅಲ್ಲಲ್ಲಿ ಅಲೆದಲೆದು ಸಾಯುತ್ತಿದ್ದ ನನ್ನನ್ನು ಉಚಿತಶಿಕ್ಷಣದಿಂದಲೂ, ತಮ್ಮ ಸತ್ಸಹವಾಸ ಬಲದಿಂದಲೂ ವಿದ್ಯಾ–ಬಲ–ಆಶ್ರಯಗಳುಂಟಾಗಿ ನಾಲ್ವರಲ್ಲಿ ಗಣ್ಯನಾಗಿದ್ದು, ಜೀವನನಿರ್ವಾಹಮಾಡಿಕೊಳ್ಳುವಂತೆ ಉದ್ಧರಿಸಿರುವ ಅವರನ್ನು ನಾನು, ನನ್ನ ಇಷ್ಟದೈವವೆಂದೇ ಸಂಭಾವಿಸುತ್ತಿರುವೆನು. ಅವರಿಗೆ, ನಾನು ನನ್ನ ಮರಣಾವಧಿ ದಾಸನಾಗಿರಲುಳ್ಳವನೆಂದೂ, ನನ್ನ ಈ ದೇಹಾದಿ ಸರ್ವಸ್ವವೂ ತಮ್ಮದೆಂದೇ ತಿಳಿದು, ನನಗೆ ಯಾವಕಾರ್ಯದಲ್ಲಿ ಬೇಕಾದರೂ ಕಟ್ಟುಮಾಡಬೇಕೆಂದೂ ತಿಳಿಯಹೇಳಬೇಕಾಗಿರುವುದು.

ಸರದಾರ—ಸಂತೋಷದಿಂದ ತಲೆದೂಗಿ–' ಅಗತ್ಯವಾಗಿ ಹೇಳುವೆನು.'

ಪೋಸ್ಟ್‌ಮಾಸ್ಟರ್—ಅದು ಸರಿಯೆ ; ಸರ್ಕಾರದ ಕಡೆಯ ಅಧಿಕಾರಿಯಾಗಿದ್ದು, ತಾನೇ ಈ ದ್ರೋಹದಲ್ಲಿ ಮುಂದಾಳಾಗಿ ನಿಂತಿರುವ ನೀಚನನ್ನು ಈಗಲೇ ಹಿಡಿದುಹಾಕಲು ವಿಳಂಬವೇಕೆ ?

ಸರದಾರ—ಯಾವುದೇ ಆದರೂ, ಕಾರಣವನ್ನು ಮುಂದಿಟ್ಟು ಕಾರ್ಯವನ್ನು ಮಾಡಬೇಕು. ಇಲ್ಲವಾದರೆ, ಅದು ತೃಪ್ತಿಕರವಾಗಿ ನೆರವೇರಲಾರದು. ಇದನ್ನು ಪ್ರತ್ಯಕ್ಷಪ್ರಮಾಣದಿಂದ ನಿದರ್ಶನಕ್ಕೆ ತರಬೇಕಲ್ಲದೆ, ಬಾಯಿಮಾತಿಂದಾಗದು. ಇದನ್ನರಿತೇ ಧರ್ಮಪಾಲರು, ಇವರು ತಮ್ಮ ಕಾರ್ಯಸಾಧನೆಗೆಂದು ಹೂಡುತ್ತಿರುವ ಮಾಯಾಬಲೆಗಳಿಂದ ಇವರನ್ನೇ ಹಿಡಿದು ಬಂಧಿಸಿ, ಸರ್ವನಾಶ ಮಾಡಬೇಕೆಂದಿರುವರು.

ಪೋಸ್ಟ್‌ಮಾಸ್ಟರ್—ಅವರ ಉದ್ದೇಶಕ್ಕೊಳಪಟ್ಟ ಯಾವುದೇ ಕಾರ್ಯವಾದರೂ ವ್ಯರ್ಥವೆನಿಸಲಾರದು. ಆದರೆ, ಈಗ ನನ್ನಿಂದಾಗಬೇಕಾದ ಕಾರ್ಯವೇನಿದ್ದರೂ ಹೇಳಬಹುದಲ್ಲವೆ ?

ಸರದಾರ—ಮತ್ತೇನೂ ಅಲ್ಲ. ಇಂದಿನಂತೆಯೇ, ಇದೇ ವಿಳಾಸಕ್ಕೆ ಹೋಗುವ ಪ್ರತಿಯೊಂದು ಪತ್ರಿಕೆಯನ್ನೂ ಉಪಾಯಾಂತರದಿಂದ ತಿಳಿದುಕೊಳ್ಳಬೇಕಲ್ಲದೆ, ನನಗೂ ತಂತಿ (Telegram) ಮೂಲಕ ತಿಳಿಸುತ್ತಿರಬೇಕು. ಅಲ್ಲದೆ, ಈ ಆಫೀಸಿಗೆ ಸಂಬಂಧಿಸಿದ ಇತರ ಆಶ್ರಿತಭಾಗ (Branch-office) ಗಳಲ್ಲಿಯೂ ತೋರಿಬರುವ ಹುಳುಕುಗಳನ್ನು ತಕ್ಕಮಟ್ಟಿಗೂ ಕಂಡುಹಿಡಿದು, ನ್ಯಾಯುವನ್ನುದ್ಧರಿಸುವುದೂ, ನಿಮ್ಮ ಆಫೀಸಿಗೆ ಸಂಬಂಧಿಸಿದ ಪ್ರತಿಯೊಬ್ಬರ ಯೋಗ್ಯತೆಗಳನ್ನು ಪರೀಕ್ಷಿಸುವುದೂ, ದುರ್ಮಾರ್ಗಿಗಳ ದ್ರೋಹ ಚಿಂತನೆಗಳಿಗೆ ಇಲ್ಲಿ ಸ್ವಲ್ಪವೂ ಅವಕಾಶವಿರದಂತೆ ಎಚ್ಚರಿಸಬೇಕಾದುದೂ ನಿಮ್ಮ ಕರ್ತವ್ಯದಕ್ಷತೆಯ ಮುಖ್ಯಾಂಗಗಳಾಗಿವೆ. ಇದು ಚೆನ್ನಾಗಿ ನೆನಪಿರಲಿ.

ಪೋಸ್ಟ್‌ಮಾಸ್ಟರ್—ಒಂದುಬಾರಿ ತೂಕಡಿಕೆಯಿಂದ ಹಳ್ಳಕ್ಕೆ ಬೀಳುತ್ತಿದ್ದವನು ಮತ್ತೆಯೂ ತೂಕಡಿಸಿ ಬೀಳುವನೆ ? ಇನ್ನು ನಾನು ಕರ್ತವ್ಯವನ್ನು ಚೆನ್ನಾಗಿ ಗಮನಿಸುವೆನು. ಇದೊ ವಂದನೆ.

ಸರದಾರನು 'ಪ್ರತಿವಂದನೆ, ನಾನಿನ್ನು ಹೊರಡುವೆನು' ಎಂದು ಹೇಳಿ ಹೊರಟುಹೋದನು. ' ಅವನಾರು, ವಿಚಾರವೇನು, ಅಂಚೆಗೆ ಕೊಟ್ಟ ಸೂಚನೆಯ ಉದ್ದೇಶವೇನು ? ' ಎಂಬಿವನ್ನು ತಿಳಿಯಬೇಕಾದರೆ, ತಾಳ್ಮೆಯಿಂದಿರಬೇಕು. ಮುಂದೆ ತಾನಾಗಿ ಹೊರಬೀಳುವುದು.

|| ಶ್ರೀ ||

## ಅಷ್ಟಮ ಪರಿಚ್ಛೇದ.

(ವಿಶ್ರಾಂತಿ)

‘ಗೋಪಾಲ ! ಹೊತ್ತು, ಹತ್ತುಗಂಟೆಯಾಗಿರಬಹುದು ; ಈ ರಾತ್ರಿ-ಅವೇಳೆಯಲ್ಲಿ, ಇನ್ನು ಹೇಗೆ ಪ್ರಯಾಣ ಮಾಡುವುದು ? ಇಲ್ಲಿ ಹತ್ತಿರದಲ್ಲೆಲ್ಲಿಯೂ ಹಳ್ಳಿಗಳಿಲ್ಲವೇ ?’

“ಇಲ್ಲಿ ಹಳ್ಳಿಗಳಾವುವೂ ಇಲ್ಲ. ಗೊಲ್ಲರಪಾಳ್ಯವು ಇಲ್ಲಿಗೆ 7-8 ಮೈಲಿಯಲ್ಲಿರುವುದು. ಅದಕ್ಕೆ ಮೊದಲು, ನಾವು ಎಲ್ಲಿಯೂ ನಿಲ್ಲುವಂತಿಲ್ಲ.”

“ಈ ದಾರಿಯಲ್ಲಿ, ಹಗಲುಹೊತ್ತಿನ ಪಯಣವೇ ದಿಗಿಲನ್ನುಂಟುಮಾಡುವುದಂತೆ! ಇನ್ನು ರಾತ್ರಿಯಲ್ಲಿ, ಅದರಲ್ಲಿಯೂ ಜತೆಬಂಡಿಗಳು ಇಲ್ಲದೆ ಹೊರಟರೆ, ಭಯವಿಲ್ಲವೇ ?”

“ಇಲ್ಲ, ಭಯಕ್ಕೆ ಕಾರಣವಿಲ್ಲ. ಮುಂದಿನ ಸೇತುವೆಯ ಹತ್ತಿರ ಬಂಡಿಗಳೆಲ್ಲವೂ ಒತ್ತರದಿಂದ ಕೂಡಿ ಹೋಗುವುವು. ಅಲ್ಲಿಂದ ಮುಂದೆ ನಮ್ಮ ಪ್ರಯಾಣವೂ ಸುಖವಾಗಿ ಸಾಗುವುದು.”

“ಹೇಗೂ ಭಗವಂತನು ಮಾಡಿದಂತಾಗಲಿ. ಎಚ್ಚರಿಕೆಯಿಂದ ಹೊಡೆಯಿರಿ”

ಈ ಬಗೆಯ ಉತ್ತರ ಪ್ರತ್ಯುತ್ತರಗಳು ದುರ್ಗಾಪುರಕ್ಕಾಗಿ ಹೊರಟುಬರುತ್ತಿದ್ದ ಸುನಂದೆಗೂ, ಗೋಪಾಲನಿಗೂ ದಾರಿಯಲ್ಲಿ ನಡೆಯುತ್ತಿದ್ದುವು. ಸುನಂದೆಯು ಊರಿಂದ ಹೊರಡುವಾಗಲೇ ಪ್ರಾತಃಕಾಲ ಎಂಟು

ಗಂಟೆ ಹೊಡೆದುಹೋಗಿದ್ದಿತು. ಹೊರಟುದು ಮೊದಲು, ಈವರೆಗೂ ಒಂದೇ ರಭಸದಿಂದ ಬಂದಿರುವುದಾದರೂ, ಇಲ್ಲಿಗೇ ರಾತ್ರಿ ಇಷ್ಟು ಹೊತ್ತಾಗಿರುವುದು. ಶುಕ್ಲಪಕ್ಷದ ಚಂದ್ರನಾಗಿದ್ದರೂ, ಮೇಘಸಂಸರ್ಗದಿಂದ ಅಷ್ಟು ಪ್ರಕಾಶಿಸುತ್ತಿರಲಿಲ್ಲ. ಅಲ್ಲದೆ, ಸುನಂದೆಯ ಸಹಾಯಕ್ಕೆ ಗೋಪಾಲ ಮತ್ತು ಇನ್ನು ನಾಲ್ವರು ಆಳುಗಳು ಮಾತ್ರವೇ ಬಂದಿದ್ದರು. ದಾರಿಯೂ ಭಯಂಕರವಾಗಿರುವುದು. ಸಾಲದುದಕ್ಕೆ ವಿಂದಾಪಹರಣವು ಬೇರೆ-ಅಡಿಗಡಿಗೂ ನೆನಪಾಗುತ್ತಿದ್ದರೆ ಕೇಳಬೇಕೆ, ಸುನಂದೆಯ ಮನಸ್ಸ್ಥಿತಿಯನ್ನು ! 'ಈ ಬಾರಿ, ಮಗನೊಡನೆ ತಾನು, ಮಾನಪ್ರಾಣಗಳಿಂದ ಊರುಸೇರಿದರೆ ಸಾಕು. ಸ್ವಾಮಿಯ ಸಹಾಯದಿಂದ ನಿಧಾನವಾಗಿ ಬರದೆ, ಈಗಲೇ ಹೊರಟುಬಂದೆನೇಕೆ ? ನನ್ನ ಆತುರದ ಫಲವು ಮುಂದೆ ಯಾವ ವಿಪತ್ತಿನಲ್ಲಿ ಪರಿಣಮಿಸುವುದೋ ಕಾಣೆನಲ್ಲಾ ! ದೇವರೇ ಗತಿ !! ನನಗೆ ಬುದ್ಧಿಶೂನ್ಯವಾಗಿದೆ. ಈಗೇನು ಮಾಡುವುದು ? ಎಲ್ಲಿ ತಂಗುವುದು ?' ಹೀಗೆಂಬ ವಿಚಾರತರಂಗಗಳಿಂದ ಮನಸ್ಸು ವ್ಯಸ್ತವಾಗಿದ್ದಿತು. ಏನೂ ತೋರದೆ ಕಿಟಿಕಿಗೆ ಮುಖವಿರಿಸಿ, ಇಳಿಯಲನುಕೂಲವಾದ ಸ್ಥಳವೇನಾದರೂ ದೊರೆಯಬಹುದೆಂಬ ಕುತೂಹಲದಿಂದ ದಾರಿಯುದ್ದಕ್ಕೂ ನೋಡುತ್ತ ಕುಳಿತಿದ್ದಳು. ಮೋಹನದತ್ತನು, ತಾಯಿಯ ತೊಡೆಯಮೇಲೆ ಕುಳಿತು, ಭಯದಿಂದ ನಡುನಡುಗುತ್ತ ಅಡಿಗಡಿಗೆ-'ಅಮ್ಮ ! ಆ ಸ್ಥಳವೆಲ್ಲಿ ? ಸಿಕ್ಕಿತೆ ?' ಎಂದು ಕೇಳುತ್ತಿದ್ದನು. ಸುನಂದೆಯು-ಪಾಪ, ಏನುಮಾಡಬಲ್ಲಳು ! ಮೊದಲೇ ಭೀರು ; ಸಾಲದುದಕ್ಕೆ ಮಗನ ಆರ್ತತೆಯೂ ಸೇರಿದುದರಿಂದ 'ಕುರುವಿನ ಮೇಲೆ ಬೊಕ್ಕೆಯೆದ್ದಂತಾಯಿತು !' ಆದರೂ ಕಷ್ಟದಿಂದ ಕಳವಳವನ್ನು ತಡೆದು,-'ಮಗು ! ದೇವರಿಲ್ಲವೆ ? ಆತನೇ ಗತಿ ! ಹೀಗೆ ಸುಮ್ಮನೆ ಭಯಪಡಬಾರದು. ನಮ್ಮ ಜತೆಯಲ್ಲಿ ಗೋಪಾಲನೂ, ಇನ್ನೂ ನಾಲ್ಕು ಮಂದಿ ಆಳುಗಳೂ ಇರುವಾಗ ಭಯವೇಕೆ ?' ಎಂದು ಹೇಳುತ್ತ ಸಂತಯಿಸುತ್ತಿದ್ದಳು.

'ಭಕ್ತವತ್ಸಲ' ನೆಂಬ ಬಿರುದುಳ್ಳ ಆ ಭಗವಂತನ ಮಹಿಮೆಯೇ ಅತ್ಯದ್ಭುತವಲ್ಲವೇ ! ಸಂದೇಹವೇನು ? ಅದು ಈ ವೇಳೆಯಲ್ಲಿ, ಈ ರೂಪದಲ್ಲಿ, ಈ ಪಾತ್ರಗಳಲ್ಲಿ, ಈ ಬಗೆಯಲ್ಲಿ ತನ್ನ ಕಟಾಕ್ಷಕ್ಕೆ ಪಾತ್ರರಾದವರಿಗೆ ಪ್ರಸನ್ನವಾಗುವುದೆಂಬುದನ್ನು ಯಾರೂ ತಿಳಿದು ಹೇಳಲಾರರು ! ಶೀಲ, ಸತ್ಯ, ಧರ್ಮ, ಭೂತದಯೆಗಳೆಲ್ಲಿರುವುವೋ, ಅಲ್ಲಿಯೇ ಇದು ಸಾಕ್ಷಾತ್ಕರಿಸಿರುವುದೆಂಬುದನ್ನು ಮಾತ್ರ ಹೇಳಬಹುದು. ಹಾಗಾದರೆ, ಅದು ಸತೀಕುಲಾದರ್ಶ ರಮಣಿಯಾದ ನಮ್ಮ ಸುನಂದೆಯು ಪ್ರತ್ಯಕ್ಷಾನುಭವಕ್ಕೆ ಒರಲು ಅಭ್ಯಂತರವೇನು ?

ನೋಡುತ್ತ ಕುಳಿತಿದ್ದ ಸುನಂದೆಯು ಮಾರ್ಗಕ್ಕೆ ಸಮೀಪವಾಗಿ, ವಿಸ್ತಾರವಾದುದೊಂದು ಗುಡಾರ (ಪಟಗೃಹ–Tent) ಬಿದ್ದುದನ್ನು ಕಂಡು, ಚಕಿತಳಾಗಿ ಮತ್ತೆ ನೋಡಿದಳು. ಗುಡಾರದ ಸುತ್ತುಮುತ್ತಲೂ ಕುದುರೆ, ಕಾಲಾಳುಗಳು ಸುತ್ತವರಿದಿದ್ದಂತೆ ತಿಳಿದುಬಂದಿತು. ಮತ್ತೆಯೂ ನೋಡಿದಳು ; ಗುಡಾರದ ಮುಂದೆ, ಮುಖ್ಯಸೇವಕನೊಡನೆ ಮಾತಾಡುತ್ತ ನಿಂತಿದ್ದ ಅಧಿಕಾರಿಯನ್ನು ಕಂಡಳು ; ಸಂತಸಗೊಂಡಳು. ಅವರು ತನ್ನ ಆಪ್ತಬಂಧುವರ್ಗಕ್ಕೆ ಸೇರಿದವರೆಂದೂ, ಇಲ್ಲದಿದ್ದರೆ–ತನ್ನ ಮನಸ್ಸಿಗೆ ಹೀಗೆ ಸಮಾಧಾನವಾಗಲು ಕಾರಣವಿರುತ್ತಿರಲಿಲ್ಲವೆಂದೂ ನೆನೆದಳು ; ಭಗವಂತನಿಗೆ ಭಕ್ತಿಪೂರ್ವಕವಾಗಿ ವಂದಿಸಿದಳು.

ಮೋಹನ—'ಅಮ್ಮ ! ಅದಾರು, ಅಲ್ಲಿ ನಿಂತಿರುವವರು ? ತಾತನಂತೆಯೇ ಕಾಣುತ್ತಿಲ್ಲವೇ ?' ಎಂದು ಗೋಪಾಲನ ಕಡೆಗೆ ತಿರುಗಿ–'ಗೋಪಾಲ ! ಅದಾರು ? ನೋಡಿಬಾ' ಎಂದು ಹೇಳಿದನು.

ಗೋಪಾಲ—ಇವರಾರೋ ಸರ್ಕಸ್ ಕಂಪೆನಿಯವರಾಗಿರಬೇಕು. ಗೊಲ್ಲರ ಪಾಳ್ಯದಲ್ಲಿಯೇ ತಂಗಬೇಕಲ್ಲದೆ, ಈ ರಾತ್ರಿ ಇನ್ನೆಲ್ಲಿಯೂ ಉಳಿಯುವಂತಿಲ್ಲ.

ಸುನಂದೆ—ಯಾರೇ ಆಗಿರಲಿ, ಹೋಗಿ ನೋಡಿ–ವಿಚಾರಿಸಿ ಬರಬಾರದೆ ? ಬಂಡಿಯನ್ನು ನಿಲ್ಲಿಸು.

ಗೋಪಾಲ—ಗರ್ವದಿಂದ-' ತಾಯಿಾ ! ಇದೇಕೆ, ಹೀಗೆ ಕೂಗುವಿರಿ ? ನೀವೇನೂ ಹೆದರಬೇಕಾದುದಿಲ್ಲ. ನಾವು ನಿಮ್ಮ ಬೆಂಗಾವಲಿಗಾಗಿ ಬಂದವರಲ್ಲವೇ ? ನಿಮ್ಮ ವಿಚಾರವನ್ನು ತೆಗೆದುಕೊಳ್ಳುವುದು ನಮಗೆ ಮುಖ್ಯವಲ್ಲವೆ ? ಸುಮ್ಮನಿರಿ.' ಎಂದು ಹೇಳಿ, ಕುದುರೆಗಳ ಬೆನ್ನು ಚಪ್ಪರಿಸಿದನು. ಬಂಡಿಯು ಮುಂದಕ್ಕೆ ಹೊರಟಿತು. ಆದರೆ, ಅಷ್ಟರಲ್ಲಿ ಗುಡಾರದ ಮುಂಗಡೆ ನಿಂತಿದ್ದ ಅಧಿಕಾರಿಯು, ಕೂಗಿ ಹೇಳಿದನು-' ಬಂಡಿ ಯಾರದು? ಹೇಳದೆ ಹೋಗಲಾಗದು.'

ಗೋಪಾಲನು ಮಾತಾಡಲಿಲ್ಲ. ಅಧಿಕಾರಿಯು ಕುಪಿತನಾಗಿ ಮುಂದೆ ಬಂದು ತನ್ನ ಸೇವಕನನ್ನು ಕುರಿತು, ಹೇಳಿದನು-' ರಣಸಿಂಗ್ ! ಬಂಡಿಯಾರದ್ದೋ, ತಡೆದು ವಿಚಾರಿಸು. ಬಂಡಿಯೊಳಗೆ, ನಮ್ಮ ಸುನಂದಾ-ಮೋಹನರ ಕಂಠವೇ ಕೇಳುತ್ತಿದೆ. ಅವರೇ ಆಗಿದ್ದರೆ, ಕೆಳಗಿಳಿದು ಬರುವಂತೆ ತಿಳಿಸು. ಮೊದಲು, ಈ ಬಂಡಿಯವನ ಅಹಂಕಾರವನ್ನು ಮುರಿದು ನಿಲ್ಲಿಸು.'

ರಣಸಿಂಗ್—(ಸೇವಕ) ಬಂಡಿಯಬಳಿಗೆ ಬಂದು, ಕುದುರೆಗಳನ್ನು ಹಿಡಿದು ನಿಲ್ಲಿಸಿ, ಗೋಪಾಲನನ್ನು ಕುರಿತು,-' ಯಾರಯ್ಯ, ನೀನು ? ಎಷ್ಟು ಹೇಳಿದರೂ ಕಿವಿಮುಟ್ಟಲೊಲ್ಲದೋ ? '

ಗೋಪಾಲ—ನೀವು ಯಾರೋ, ನಾವೇನುಬಲ್ಲೆವು !

ರಣಸಿಂಗ್—ನಾವು ಯಾರೇ ? ಸರ್ಕಾರದವರು. ತಿಳಿದೆಯೋ ? ಬಂಡಿಯಲ್ಲಿರುವವರಾರು ? ಎಲ್ಲಿಗೆ ಹೋಗುವರು ?

ಗೋಪಾಲ—ಸಂಕುಚಿತಸ್ವರದಿಂದ ' ಇವರು, ವಿಷಹರಪುರದ ಜಮೀನ್ದಾರರ ಮನೆಯವರು ; ದುರ್ಗಾಪುರಕ್ಕೆ ಹೋಗುತ್ತಿರುವರು.'

ರಣಸಿಂಗ್—' ಹಾಗಾದರೆ ಸರಿ.' ಎಂದು ಬಂಡಿಯಬಾಗಿಲನ್ನು ತೆಗೆದು, ' ಕುಮಾರರೇ ! ಮೆಲ್ಲನೆ ಇಳಿಯಿರಿ. ತಾಯಿಾ ! ಯಜಮಾನರು ನಿಮ್ಮನ್ನು ಬರಹೇಳಿ, ಕಾದಿರುವರು ; ಕೆಳಗಿಳಿಯಬೇಕು.'

ಸುನಂದೆ—ಯಾರು ? ರಣಸಿಂಗನೇ ! ಇಲ್ಲಿಗೆ ಯಾವಾಗಬಂದಿರಿ ?

ರಣಸಿಂಗ್—ನಾವು ಈ ದಿನ ಪ್ರಾತಃಕಾಲದಲ್ಲಿಯೇ ಬಂದೆವು. ಇನ್ನೂ ಇಲ್ಲಿಯೇ ಮೂರು ನಾಲ್ಕು ದಿನಗಳು ನಿಲ್ಲಬೇಕಾಗುವುದು.

ಸುನಂದೆಯು ಮಗನೊಡನೆ ಕೆಳಗಿಳಿದು, ಅವಕುಂಠನವನ್ನು ಸರಿಯಾಗಿ ಹೊದ್ದು, ಮಗನೊಡನೆ ಹೊರಟಳು. ರಣಸಿಂಗನು ಇಬ್ಬರನ್ನೂ ಅಧಿಕಾರಿಯ ಬಳಿಗೆ ಕರೆತಂದನು. ಅಧಿಕಾರಿಯು ಇಬ್ಬರನ್ನೂ ನೋಡಿ, ಸಂಭ್ರಮದಿಂದ ಕೇಳಿದನು,–' ತಾಯಿ ! ನೀವು ಹೊರಡುವಾಗ ಎಷ್ಟು ಹೊತ್ತಾಗಿದ್ದಿತು ? '

ಸುನಂದೆ—ಅಪ್ಪ ! ಎಂಟುಗಂಟೆ ಹೊಡೆದುಹೋಗಿದ್ದಿತು.

ಅಧಿಕಾರಿ—ನಿನ್ನ ಸ್ವಾಮಿಯು, ಬರಲಿಲ್ಲವೇಕೆ ?

ಸುನಂದೆ—' ನಾನು ಹೊರಡಬೇಕಾದರೆ, ನಾಲ್ಕಾರುದಿನಗಳು ಬೇಕಾದೀತು. ಆವರೆಗೂ ನಿಮ್ಮನ್ನು ನಿಲ್ಲಿಸಿಕೊಳ್ಳುವುದು ಸರಿಯಾದುದಲ್ಲ.' ಎಂದು ಹೇಳಿ, ನಮ್ಮನ್ನು ಕಳುಹಿದರು. ಅವರೂ ಒಂದೆರಡು ವಾರದೊಳಗೆ ಬರುವರಂತೆ.

ಅಧಿಕಾರಿ—ತಾಯಿ ! ನಿನ್ನ ತಾಯಿಯ ದೇಹಸ್ಥಿತಿಯು ಒಂದೇರೀತಿಯಲ್ಲಿರುವುದೆಂದೂ, ಪ್ರಾಣಭಯವಿಲ್ಲವೆಂದೂ, ವೈದ್ಯರು ಹೇಳುತ್ತಿರುವರೆಂದು ಈ ದಿನ ಬಂದ ಸಮಾಚಾರದಿಂದ ತಿಳಿದಿದೆ. ನೀನೂ ಹೋಗಿ ಸೇರಿದರೆ, ಜಾಗ್ರತೆಯಾಗಿಯೇ ಗುಣವಾಗಬಹುದೆಂದು ನಂಬಿಕೆ.

ಸುನಂದೆ—ಗದ್ಗದಸ್ವರದಿಂದ ' ಅಪ್ಪ ! ಅಲ್ಲಿಂದ ಏಂದೆಯೊಡನೆ ಹೊರಟು ಬಂದ ನಾನು, ಈಗ ಆವಳನ್ನು ಕಳೆದುಕೊಂಡು ಹೋಗಬೇಕಾಯಿತು. ಹೀಗಾಗುವುದೆಂದು ಕನಸಿನಲ್ಲಾದರೂ ತಿಳಿದಿರಲಿಲ್ಲ !

ಅಧಿಕಾರಿ—ತಾಯಿ ! ಕಳವಳಿಸಬಾರದು. ದೈವಕೃಪೆಯಿಂದ ಎಲ್ಲವೂ ಅನುಕೂಲಿಸುವುದು ; ಸಮಾಧಾನದಿಂದಿರು.

ಸುನಂದೆ—ಹಾಗೆಂದೇ ಧೈರ್ಯವನ್ನು ಹಿಡಿದಿರುವೆನು. ಆದರೂ ಒಂದೊಂದು ಬಾರಿ ಮಿತಿಮೀರಿ ಬರುವುದು.

ಅಧಿಕಾರಿ—ನೀವು ಮುಂದೆ ಹೊರಡುವುದಾವಾಗ ?

ಸುನಂದೆ—ಈಗಲೇ ಹೋಗಬೇಕೆಂದು ಆಳುಗಳು ಹಟತೊಟ್ಟಿರುವರು. ನನಗೆಮಾತ್ರ ಮನಸ್ಸು ಹಿಂತೆಗೆಯುತ್ತಿರುವುದು.

ಅಧಿಕಾರಿ—ಹೊರಟರೆ ಪ್ರಮಾದವೇನೂ ಕಾಣುತ್ತಿಲ್ಲ. ಇರಲಿ; ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡಿದ್ದು ಬಳಿಕ, ಹೊರಡುವೆ ; ಒಳಗೆ ನಡೆ.

ಮೋಹನ—'ಅಪ್ಪಯ್ಯ ! ಈಗ ನಾನು ಹೋಗಲೊಲ್ಲೆ ; ನಿನ್ನಲ್ಲಿಯೇ ನಿಲ್ಲುವೆನು.

ಅಧಿಕಾರಿ—'ಹಾಗೆಯೇ ಮಾಡು.' ಸುನಂದೆಯ ಕಡೆಗೆ ತಿರುಗಿ–'ಸುನಂದಾ ! ಪಯಣಕಾಲದಲ್ಲಿ, ಹಾಗೂ ಈ ಅವೇಳೆಯಲ್ಲಿ, ಮಗುವನ್ನು ಹೀಗೆ ಕರೆತಂದಿರುವುದೂ, ನೀನೂ ಶಾಖವಾಗಿ ಹೊದ್ದಿರದೆ, ಗಾಳಿಗೆ ಮೈಯೊಡ್ಡಿ ನಿಂತಿರುವುದೂ ದೇಹಕ್ಕೆ ಅಪಾಯಕರವಲ್ಲವೇ ? ಇರಲಿ ; ಈಗ ಹಾಗೆಯೇ ಒಳಗೆ ನಡೆ. ಸ್ವಲ್ಪಹೊತ್ತು ವಿಶ್ರಮಿಸಿದ್ದು, ಆ ಬಳಿಕ ಸರಿಯಾದ ರೀತಿಯಿಂದ ಹೊರಡಬಹುದು.

ಸುನಂದೆಯು ಸಮ್ಮತಿಸಿ, ಮಗನೊಡನೆ ಗುಡಾರದೊಳಹೊಕ್ಕಳು. ಗೋಪಾಲನು ತ್ವರೆಯಿಂದೋಡಿಬಂದು, 'ಸ್ವಾಮಿ ! ಇದೇನಿದು ? ಹೀಗೆ ಅವರನ್ನು ನಡುದಾರಿಯಲ್ಲಿಳಿಸುವುದು ಸರಿಯಲ್ಲ. ಹೊತ್ತು ಮೀರುತ್ತಿದೆ. ಗೊತ್ತಾದಸ್ಥಳಕ್ಕೆ ಹೋಗಿ–ತಂಗಬೇಕಲ್ಲದೆ, ಯಜಮಾನರ ಮಾತಿಗೆ ವಿರೋಧವಾಗಿ ನಡೆಯಲು, ನಾವು ಸಮ್ಮತಿಸಲಿಕ್ಕಿಲ್ಲ. ಜಾಗ್ರತೆಯಾಗಿ ಕಳುಹಿರಿ.'

ಅಧಿಕಾರಿ—ದರ್ಪದಿಂದ 'ಏನೆಂದೆ ? ಸಮ್ಮತಿಸಲಿಕ್ಕಿಲ್ಲ ! ಹುಚ್ಚ ! ಚೆನ್ನಾಗಿ ಯೋಚಿಸಿ ಮಾತನಾಡು. ಬಂಡಿಯಬಳಿಯಲ್ಲಿ ಕಾದಿರು

ನಡೆ. ಅಷ್ಟೇ ನಿನ್ನ ಕೆಲಸವಲ್ಲದೆ, ವಿಾರಿ ಹೇಳುವುದು ಸರಿಯಾಗಿಲ್ಲ. ಹಾಗೂ ಮರ್ಯಾದೆಯನ್ನು ವಿಾರಿದರೆ, ನೀನೊಬ್ಬನೇ ಗೊತ್ತಾದೆಡೆಗೆ ಹೊರಟುಹೋಗು. ನಾವು ನಮ್ಮೊಡನೆಯೇ ಇವರನ್ನು ಕರೆದೊಯ್ಯುವೆವು.

ಗೋಪಾಲ—ಭ್ರಾಂತನಾಗಿ 'ಸ್ವಾಮಿಾ! ಇಷ್ಟೇಕೆ, ಆಗ್ರಹಿಸುವಿರಿ? ಊಳಿಗದವರಾದ ನಾವು, ನಮ್ಮ ಪಾಲಿಗೆ ಬಂದ ಕೆಲಸವನ್ನು ಸರಿಯಾಗಿ ನಡೆಯಿಸಬೇಕಲ್ಲವೇ?'

ಅಧಿಕಾರಿ—ನಿಜ. ಆಗ್ರಹಿಸಲಿಲ್ಲ. ನಿನ್ನ ಕೆಲಸವನ್ನು ಮಾಡಬೇಕಾದರೂ, ಮಾನ-ಮರ್ಯಾದೆಗಳನ್ನು ತಿಳಿದು ಮಾಡಬೇಕೆಂದೇ ನಿನಗೆ ಹೇಳಿದೆನು.

ಗೋಪಾಲ—ಅವರು ಬರುವುದಕ್ಕೆ ಇನ್ನೂ ಎಷ್ಟುಹೊತ್ತು ಹಿಡಿಯಬಹುದು?

ಅಧಿಕಾರಿ—ಅರ್ಧಘಂಟೆಯಾದರೂ ಬೇಕು. ಹೋಗು; ಬಂಡಿಯುಬಳಿಯಲ್ಲಿರು. (ಗೋಪಾಲನು ಮರುಮಾತಾಡಲು ಧೈರ್ಯವಿಲ್ಲದೆ, ಬಂಡಿಯಬಳಿಗೆ ಹೊರಟುಹೋದನು.)

ಅಧಿಕಾರಿ—ತನ್ನ ಸೇವಕನನ್ನು ಕರೆದು 'ರಣಸಿಂಗ್! ಇಲ್ಲಿಯೇ ಕಾದಿರು. ಸುನಂದಾದೇವಿಯೂ, ವಿಶ್ರಾಂತಿಹೊಂದಿ ಬರುವವರೆಗೂ, ಯಾರನ್ನೂ ಒಳಗೆ ಬಿಡಬೇಡ.' ಎಂದು ಕಟ್ಟುಮಾಡಿ, ತಾನೂ ಗುಡಾರದೊಳಕ್ಕೆ ಹೊರಟುಹೋದನು.

## ನವಮಪರಿಚ್ಛೇದ.

(ಐಂದ್ರಜಾಲ)

‘ಹನ್ನೆರಡುಘಂಟೆ ಹೊಡೆದುಹೋಯಿತು. ಹೊರಟೇತೀರಬೇಕೆಂದು ಹಟತೊಟ್ಟಿರುವೆಯಾಗಿ, ಇನ್ನು ವಿಳಂಬಿಸಬಾರದು ; ಸಹಾಯಕ್ಕೆ ಬೇಕಾದರೆ, ನಮ್ಮವರನ್ನೂ ಕರೆದುಕೊಂಡು ಹೊರಡು.’

“ ಏಕೆ ? ಈಗ ಬಂದಿರುವವರೇ ಸಾಕು. ಬರತಕ್ಕದನ್ನು ಯಾರಿದ್ದರೂ ತಪ್ಪಿಸಿಕೊಳ್ಳಲಾಗುವುದಿಲ್ಲ. ಭಗವತ್ಕೃಪೆಯೊಂದಿದ್ದರೆ, ಯಾರೂ ಬರಬೇಕಾದುದಿಲ್ಲ. ಇದೇ ನನ್ನ ಮನೋಗತವಾಗಿದೆ.”

“ ಅದು ಸರಿಯಾದ ಮಾತು. ಇನ್ನು ಹೊರಡು. ಸರ್ವಾಂಗವೂ ಶಾಖವಾಗಿರುವಂತೆ, ಶಾಲನ್ನು ಹೊದ್ದು, ಗಾಡಿಯನ್ನೇರಬೇಕು. ದಾರಿಯಲ್ಲಿ ಮತ್ತೆಲ್ಲಿಯೂ ಇಳಿಯಬೇಕಾದುದಿಲ್ಲ. ನೆಟ್ಟನೆ ಊರನ್ನೇ ಸೇರಲು ನಿಶ್ಚಯಿಸಿರಿ. ನಾವೂ ನಾಲ್ಕಾರುದಿನಗಳಲ್ಲಿ ಬಂದು ಸೇರುವೆವು. ಎಚ್ಚರಿಕೆಯಲ್ಲಿ ನೋಡುತ್ತಿರಬೇಕು.”

ಹೀಗೆ ತಂದೆಯಿಂದಪ್ಪಣೆಗೊಂಡ ಸುನಂದೆಯು, ಮಗನೊಡನೆ, ತಂದೆಯ ಸಲಹೆಯಂತೆ ಹೊದಿಕೆಯಿಂದ ದೇಹವನ್ನು ಮರೆಯಿಸಿ, ಮೆಲ್ಲನೆ ಬಂದು ಬಂಡಿಯನ್ನೇರಿ ಕುಳಿತಳು ರಣಸಿಂಗನು ಪೆಟ್ಟಿಗೆಯೊಂದನ್ನು ತಂದು, ಸುನಂದೆಯ ವಶಕ್ಕೊಪ್ಪಿಸಿದನು. ಅವಳ ತಂದೆಯಾದ ಅಧಿಕಾರಿಯು, ಗೋಪಾಲನನ್ನು ಕುರಿತು ‘ ಅಯ್ಯ ! ಎಲ್ಲಿಯೂ ನಿಲ್ಲದೆ, ಜಾಗರೂಕತೆಯಿಂದ ಪಯಣಮಾಡಬೇಕು. ಇನ್ನು ಹೊರಡಿರಿ.’

ಗೋಪಾಲನು, ಸಂತೋಷದಿಂದ ಬಂಡಿಯಮೇಲೆ ಹಾರಿ ಕುಳಿತು, ಕುದುರೆಗಳ ಬೆನ್ನುತಟ್ಟಿ ಹುರುಡಿಸಿದನು. ಕುದುರೆಗಳೂ ನಾಗಾಲೋಟ

ದಿಂದ ಹೊರಟವು. ಒಂದು ಗಂಟೆಯೊಳಗಾಗಿಯೇ ಮುಳ್ಳುಮೆಳೆಯ ಚೌಕವು ಸಮೀಪಿಸಿತು ; ಬಂಡಿಯೊಳಕ್ಕೆ ಕಲ್ಲುಗಳೂ ಬಿದ್ದುವು. ಸುನಂದೆಯು ನೋರೆಗೆ ಮುಸುಕಿಟ್ಟು, ಕಂಪಿತಸ್ವರದಿಂದ 'ಗೋಪಾಲ! ಇದೇ ಆ ಸ್ಥಳವು! ಇಲ್ಲಿಯೇ ನನ್ನ ವಿಂದೆ ಕಳುವಾದುದು? ಅಯ್ಯೋ! ಕಷ್ಟ!! ಕಷ್ಟ!!! ಕಲ್ಲುಗಳು ಬೀಳುತ್ತಿವೆ ; ಮುಂದೇನುಗತಿ?' ಎಂದು ಹೇಳುತ್ತ ಬಂಡಿಯ ಕದಗಳನ್ನು ಬಲವಾಗಿ ಹಾಕಿದಳು.

ಗೋಪಾಲ—ಬಂಡಿಯಿಂದಿಳಿದು, ಕೈಕೊಡಲಿಯನ್ನು ಮೇಲಕ್ಕೆತ್ತಿ 'ಅಯ್ಯಯ್ಯೋ! ಕಳ್ಳರು!! ಕಳ್ಳರು!!!' ಎಂದು ಕೂಗುತ್ತ, ಕ್ಷಣಮಾತ್ರದಲ್ಲಿಯೇ ಕುದುರೆಗಳನ್ನು ಕಳೆದುಬಿಟ್ಟನು. ಅವನು ಇಳಿದುದನ್ನು ಕಂಡೊಡನೆಯೇ, ಅವನ ಜತೆಯಾಳುಗಳೂ ಕೆಳಗೆಧುಮ್ಮಿಕ್ಕಿ—'ಪ್ರಾಣಾಪತ್ತು! ಅಯ್ಯೋ ಪ್ರಾಣಾಪತ್ತು!!' ಎಂದು ಕೂಗುತ್ತ ಬಂಡಿಯನ್ನು ಸುತ್ತಿದರು. ಅಷ್ಟಾದರೂ ಬಂಡಿಯಲ್ಲಿದ್ದವರು ಕೂಗಲಿಲ್ಲ ; ಬಾಗಿಲನ್ನೂ ತೆಗೆಯಲಿಲ್ಲ. ಒಳಗೆ ಅಡಗಿ ಏನು ಮಾಡುವರೆಂಬುದೇ ಯಾರಿಗೂ ತಿಳಿಯಲಿಲ್ಲ. ಗೋಪಾಲನು, ಕುತೂಹಲದಿಂದ ಬಾಗಿಲನ್ನು ಹಿಡಿದಳೆದನು ; ಬರಲಿಲ್ಲ. ಕೋಪದಿಂದ ಕೂಗಿ, ಹೇಳಿದನು,-'ಬಾಗಿಲನ್ನು ತೆರೆದು, ಕೆಳಗಿಳಿದು ನಿಲ್ಲಿರಿ.'

ಉತ್ತರ—ಇಳಿಯಬೇಕಾದ ವೇಳೆಯು ಬರುವುದು. ಈಗಲೇ ಏಕೆ?

ಗೋಪಾಲ—ಹಾಗೋ? ಬಂಡಿಯಿಂದಿಳಿದರೆ ಜೀವವುಳಿದರೂ ಉಳಿದೀತು. ಇಲ್ಲವಾದರೆ, ನಿಜವಾಗಿಯೂ ಸಾಯುವಿರಿ.

ಉತ್ತರ—ಹುಚ್ಚರು ಹೇಳುವುದೇ ಹೀಗಲ್ಲವೇ? ಆಗಲಿ.

ಗೋಪಾಲನು ಸುತ್ತಲೂನೋಡುತ್ತ ಶಿಳ್ಳೆಯನ್ನು ಹಾಕಿದನು. ಶಿಳ್ಳೆಯ ಸದ್ದು ನಿಲ್ಲುವುದರೊಳಗಾಗಿ, ಮುಳ್ಳುಮೆಳೆಯ ಮರೆಯಲ್ಲಿ ಅಡಗಿದ್ದ ೨೦ ಮಂದಿ ಕಳ್ಳರು ಹಾರಿಬಂದು, ಕೋಲಾಹಲದಿಂದ ಬಂಡಿ

ಯನ್ನು ಮುತ್ತಿ, ದೊಣ್ಣೆಗಳನ್ನು ಬೀಸಿದರು. ಆದರೂ ಬಂಡಿಯಲ್ಲಿದ್ದವರು ಉಸಿರೆತ್ತದೆ, ನೋಡದೆಯೇ ಇದ್ದರು. ಇವರ ಈ ಬಗೆಯ ಧೈರ್ಯಕ್ಕೆ ಕಾರಣವೇನೆಂಬುದನ್ನು ತಿಳಿಯದೆ, ಕಳ್ಳರ ಮುಂದಾಳು ಕಿಡಿಕಿಡಿಯಾಗಿ ಬಂದು–'ಬಾಗಿಲನ್ನು ತೆಗೆ, ಕೆಳಗಿಳಿ ; ಇಲ್ಲದಿದ್ದರೆ, ಸಾಯುವೆ.'

ಉತ್ತರ—ಇಳಿದರೆ ಸಾಯುವುದಿಲ್ಲವೋ ?

ಮುಂದಾಳು—ಉಳಿದರೂ ಉಳಿಯಬಹುದು. ಆದರೆ, ಸಾಯುವವರೆಗೂ ನಮ್ಮ ಸೆರೆಯಲ್ಲಿರಬೇಕು.

ಉತ್ತರ—ಹಾಗೆಂದಿಗೂ ಆಗಲಾರದೆಂದು ತಿಳಿ. ಗಲಭೆಮಾಡದೆ ಹೊರಟು ಹೋಗು.

ಮುಂದಾಳು—'ಹುಂ ! ಹುಂ !! ಏನೆಂದೆ, ಹೊರಟುಹೋಗಬೇಕೇ ? ಆಗಬಹುದು.' ಎಂದು ಹೇಳಿ, ಬಾಗಿಲನ್ನು ಬಲವಾಗಿ ಪಿಡಿದೆಳೆದನು. ಬಾಗಿಲು ತೆರೆದುಹೋಯಿತು. ತೆರೆಯಲ್ಪಟ್ಟೊಡನೆಯೇ, ಬಂಡಿಯಲ್ಲಿ ಉರಿಯುತ್ತಿದ್ದ ಪ್ರಕಾಶಮಾನವಾದ ದೀಪದ (Gas-light) ತೀಕ್ಷ್ಣಕಿರಣವು ಆ ಪ್ರಾಂತವನ್ನೇ ಆಕ್ರಮಿಸಿ, ನಿಂತಿದ್ದವರೆಲ್ಲರ ಕಣ್ಣುಗಳನ್ನೂ ಮುಚ್ಚಿಸಿತು. ಕಳ್ಳರು ಉಸಿರೆತ್ತದೆ ಭ್ರಾಂತರಾಗಿ ನಿಂತರು. ಇವರ ಭ್ರಾಂತಿಯಲ್ಲಿಯೇ ಬಂಡಿಯಲ್ಲಿ ಕುಳಿತಿದ್ದವರು, ಕೆಳಕ್ಕೆ ಧುಮ್ಮಿಕ್ಕಿದರು. ಮೋಹನಕುಮಾರನಾಗಿದ್ದವನು, ಕಳ್ಳರನ್ನು ಕೂಗಿ ಹೇಳಿದನು–'ಉನ್ಮತ್ತವಾನರರೇ ! ಕುರುಡರಾದಿರೋ ?—ಗತಜೀವಿಗಳಾದಿರೋ ? ಏಕೆ ನಿಂತಿರಿ ? ಬನ್ನಿರಿ, ದೊಣ್ಣೆಗಳನ್ನೆತ್ತಿ ಹಾರಾಡಿರಿ.'

ಕಳ್ಳರೆಲ್ಲರೂ ವಿಕೃತಸ್ವರದಿಂದ ಕೂಗುತ್ತ ಕಣ್ದೆರೆದು ನೋಡಿದರು. ಸುನಂದೆಗೆ ಪ್ರತಿಯಾಗಿ ಪುರುಷವಿಗ್ರಹವೇ ಸಾಕ್ಷಾತ್ಕರಿಸಿದ್ದುದನ್ನೂ, ತಮ್ಮಮೇಲೆ ಮತ್ತೊಬ್ಬ ಕುಮಾರನು ಉರವಣಿಸಿ ಬೀಳುತ್ತಿರುವುದನ್ನೂ ಕಂಡರು. ಬಾಲಕನು, ಕೈಕೋವಿಯನ್ನು ಪಿಡಿದು ನಿಂತು, ಕಳ್ಳ

ರನ್ನು ಚೆದರಿಸುತ್ತಿದ್ದನು. ಗೋಪಾಲನು ನೋಡಿದನು ; ಭ್ರಾಂತನಂತಾದನು. ನಿಂತಿದ್ದಾತನೇ ತಮ್ಮ ಮೃತ್ಯುರೂಪನಾದ ಧರ್ಮಪಾಲನಾಗಿದ್ದನು. ಬಾಲಕನಾವನೋ ತಿಳಿಯಲಿಲ್ಲ. ತನಗೆ ಇಂದೇ ಅವಸಾನಪೂರ್ಣವಾಯ್ತೆಂದು ತಿಳಿದು, ಹುಚ್ಚನಂತಾಗಿ ಕೈಕೊಡಲಿಯನ್ನು ಮೇಲಕ್ಕೆತ್ತಿ–ಕೂಗಿ ಹೇಳಿದನು. 'ಮೋಸ ! ಮೋಸ !! ಮಿತ್ರರೇ ಎಲ್ಲವೂ ಮೋಸ !!! ಇನ್ನು ಉಳಿಗಾಲವಿಲ್ಲ. ಇದೊಂದುಬಾರಿ ಕಡೆಯುಪ್ರಯತ್ನ. ಎಲ್ಲರೂ ಒಟ್ಟಾಗಿ ಮೇಲೆ ಬೀಳಿರಿ.'

ಕಳ್ಳರೆಲ್ಲರೂ ಮೇಲೆ ಬೀಳಬಂದರು. ಧರ್ಮಪಾಲನು ಕೈಯಲ್ಲಿದ್ದ ಯಂತ್ರಕ್ಕೆ ಅಲ್ಲಿ ನಡೆಯುತ್ತಿದ್ದ ವಿಷಯಗಳನ್ನು ಆಕರ್ಷಿಸಿಕೊಳ್ಳುತ್ತ, ಬಳಿಯಲ್ಲಿದ್ದ ಬಾಲಕನನ್ನು ಕುರಿತು, 'ಕೃತಾಂತ ! ಇದೇ ನಿನ್ನ ಕರಕೌಶಲಪ್ರದರ್ಶನಕ್ಕೆ ಸುಸಮಯವಾಗಿದೆ.' ಎಂದು ಎಚ್ಚರಿಸಿದನು. ಕೃತಾಂತನು ನಗುನಗುತ್ತ, ತಮ್ಮಮೇಲೆ ಬೀಳಬರುತ್ತಿರುವ ಗೋಪಾಲನ ಬಲಗೈಯನ್ನು ಕೈಕೋವಿಯ ಮದ್ದಿನಿಂದ ಮೂರುತುಂಡಾಗುವಂತೆ ಮಾಡಿದನು. ಗೋಪಾಲನು ಮೂರ್ಛಿತನಾಗಿ ಕೆಳಗೆಬಿದ್ದನು. ಉಳಿದವರೆಲ್ಲರೂ, ಒಟ್ಟಾಗಿ ಮುತ್ತಿ, ಕೋವಿಯನ್ನು ಕಸುಕೊಳ್ಳಲು ಬಂದರು. ಕೃತಾಂತನು ನಗುತ್ತ ಪ್ರತಿಯೊಬ್ಬರ ದೇಹವೂ ಘಾಸಿಯೊಂದುವಂತೆ ಮದ್ದನ್ನು ಹಾರಿಸುತ್ತಿದ್ದನು ಧರ್ಮಪಾಲನು, ಕೈಯ್ಯಲ್ಲಿದ್ದ ಯಂತ್ರಗಳನ್ನು ಬಂಡಿಯಲ್ಲಿರಿಸಿ, ಶಂಖವನ್ನು ತೆಗೆದು, ಗಟ್ಟಿಯಾಗಿ ಊದಿದನು. ಶಂಖಧ್ವನಿಯಿಂದ ಕಳ್ಳರ ಕಿವಿಗಳು ಕಿವುಡಾಗಿ, ಎಲ್ಲರೂ ನಿಂತಂತೆಯೇ ನಿಂತರು. ಆ ಧ್ವನಿಯು ನಿಲ್ಲುವುದರೊಳಗಾಗಿ, ಸುತ್ತಮುತ್ತಲ ಮರಗಳಲ್ಲಿ ಅಡಗಿದ್ದ ನಾಲ್ವತ್ತುಮಂದಿ ವೀರಭಟರು, ಭಲ್ಲೆಗಳನ್ನು ಹಿಡಿದು ಕೆಳಗೆ ಧುಮ್ಮಿಕ್ಕಿ, ಧೀಂ ಧೀಂ ಶಬ್ದದಿಂದ ಆ ಪ್ರದೇಶವನ್ನೇ ನಡುಗುವಂತೆ ಮಾಡುತ್ತ, ವೇಗದಿಂದ ಬಂದು ಕಳ್ಳರನ್ನು ಮುತ್ತಿ, ಎಲ್ಲರೂ ಒಟ್ಟಾಗಿ ಕೈಯೆತ್ತಿ 'ಜಯ ! ಧರ್ಮಪಾಲರಿಗೆ ದಿಗ್ವಿಜಯ !!' ಎಂದು ಉಚ್ಚಸ್ವರದಿಂದ ಕೂಗಿಹೇಳಿದರು.

ಧರ್ಮಪಾಲ—ಕೈಯೆತ್ತಿ ' ಆಪ್ತರೇ ! ಈ ವಿದ್ರೋಹಿಗಳ ಕೈಕಾಲುಗಳಿಗೆ ಸಂಕಲೆಗಳನ್ನು ತೊಡಿಸಿರಿ. ಈ ಅಧಮಾಧಮನಾದ ಗೋಪಾಲನನ್ನು, ಹಿಂಗಟ್ಟು-ಮುಂಗಟ್ಟುಗಳಿಂದ ಬಿಗಿದು, ಬಂಡಿಯಲ್ಲಿ ಹಾಕಿರಿ. ಎಲ್ಲಿ ? ಬಂಡಿಗಳೂ, ಬೇಡಿಗಳೂ ಬೇಗ ಬರಲಿ.'

ಧರ್ಮಪಾಲನ ಆಜ್ಞೆಯಾದ ನಾಲ್ಕಾರುನಿಮಿಷಗಳಲ್ಲಿಯೇ ಬಂದಿದ್ದ ಭಟರು, ಒಬ್ಬೊಬ್ಬ ಕಳ್ಳನಿಗೂ ಇಬ್ಬಿಬ್ಬರಂತೆ ಮುತ್ತಿ, ದೊಣ್ಣೆಗಳನ್ನು ಕಸಿದು, ಕೈಕಾಲುಗಳಿಗೆ ಬೇಡಿಗಳನ್ನು ತೊಡಿಸಿದರು. ಅಷ್ಟರಲ್ಲಿಯೇ ಬಂಡಿಗಳೂ ಬಂದುಸೇರಿದುವು. ಕೈಕಾಲುಮುರಿದು, ಗಾಯಗೊಂಡಿದ್ದವರು ಬಂಡಿಯೊಳಗೆ ಹಾಕಲ್ಪಟ್ಟರು. ಗೋಪಾಲನ ಅವಸ್ಥೆಯನ್ನು ಹೇಳುವಂತಿರಲಿಲ್ಲ. ಬಲಗೈ ಸುಟ್ಟುಹೋಗಿ, ಯಾತನಾವೇಗದಿಂದ ಕ್ಷಣಕ್ಷಣಕ್ಕೂ ಮೂರ್ಛಿತನಾಗುತ್ತಿದ್ದನು. ಹಾಗೆಯೇ ಭಟರು, ಅವನ ಕೈಯಲ್ಲಿ ರಕ್ತವು ಸುರಿಯದಂತೆ ತಡೆಕಟ್ಟಿ, ಬಂಡಿಯಲ್ಲಿ ಮಲಗಿಸಿದರು. ಧರ್ಮಪಾಲನು ಸಂಭ್ರಮದಿಂದ ಕೃತಾಂತನ ಕೈಹಿಡಿದು ' ಕೃತಾಂತ ! ನಿನ್ನ ಸಾಹಸ-ಕರಕೌಶಲಾದಿಗಳು ಸ್ತುತ್ಯಗಳಾಗಿವೆ. ನೀನು ನಿಜವಾದ ಕೃತಾಂತನೇ ಸರಿಯೆಂದು ಭಾವಿಸುತ್ತೇನೆ.'

ಕೃತಾಂತ—ಸಂಕುಚಿತಭಾವದಿಂದ ತಲೆಬಾಗಿ, ' ಇದೇಕಿಷ್ಟರಸ್ತುತಿ ? ಗುರುದತ್ತವಾಗಿ ಬಂದ ವಿದ್ಯೆಯನ್ನು, ಗುರುಸಮ್ಮುಖದಲ್ಲಿ ತೋರಿಸುವುದು ತಪ್ಪೇನು ? ಈಗ ನಾನು ಮಾಡಿರುವ ಅದ್ಭುತಕಾರ್ಯವಾದರೂ ಏನಿದೆ ? ಕೃತಾಂತನಾಗಬೇಕಾದರೆ, ಉದ್ದೇಶವೆಲ್ಲವೂ ಕೈಸೇರಿದ ಬಳಿಕಲ್ಲವೇ ? '

ಧರ್ಮಪಾಲ—ಕೃತಾಂತನ ಬೆನ್ನುತಟ್ಟಿ, ' ಭಲೆ ! ಮೇಲುಮಾತು ; ಒಪ್ಪಿದೆನು. ಆಗಲಿ; ಇಂದಿನ ಐಂದ್ರಜಾಲವೇನೂ ಅಷ್ಟು ಹೆಚ್ಚಾದುದಲ್ಲ. ಮುಂದಕ್ಕಿದೆ; ನೋಡುವ. ಇನ್ನು ಇಂದಿಗೆ ಇಷ್ಟು ಸಾಕಾಗಿರಲಿ.' ಎಂದು ಹೇಳಿ, ಬಂದ ಬಂಡಿಯಲ್ಲಿಯೇ ಇಬ್ಬರೂ ಕುಳಿತು,

ಎಲ್ಲರಿಗೂ ಹೊರಡುವಂತೆ ಕಟ್ಟುಮಾಡಿದನು. ಕ್ಷಣಮಾತ್ರದಲ್ಲಿ, ಭಟರು ವೀರನಾದಮಾಡುತ್ತ ಸೆರೆಯಾಳುಗಳೊಡನೆ, ಧರ್ಮಪಾಲನ ಬಂಡಿಯನ್ನು ಸುತ್ತಿ ಹೊರಟುಹೋದರು.

ಸುಹೃದರೇ !

ಕರ್ಮಫಲವನ್ನು ನೋಡಿದಿರೋ, ಹೇಗಿದೆ ? ಗೋಪಾಲನೇ ಮೊದಲಾದವರಿಗಾದ ಅವಸ್ಥೆಯನ್ನು ದೂರದಲ್ಲಿಯೇ ನಿಂತು ನೋಡುತ್ತಿದ್ದ ಬಲವಂತನೂ, ಸುಪಂಥನೂ ಹಾಗೆಯೇ ಹಿಂತಿರುಗಿ ಹೋಗಬೇಕಾಯಿತಲ್ಲದೆ ಹತ್ತಿರಕ್ಕೆ ಬಂದು, ತಮ್ಮವರನ್ನು ಬಿಡಿಸುವಷ್ಟರ ಧೈರ್ಯವು, ಅವರಲ್ಲಿ ಉಂಟಾಗಿರಲಿಲ್ಲ. ಮನಸ್ಸು ನಿರ್ಮಲವಾಗಿದ್ದರಲ್ಲವೇ, ಧೈರ್ಯವೂ ಕುಂದದಿರುವುದು ? ಹಾಗಿಲ್ಲದೆ ಮನಸ್ಸು–ದುರಭಿಮಾನದಿಂದ ಬೀಗಿಹೋಗಿದ್ದರೆ, ಹೇಗಾದೀತು ? ಹೇಗೂ, ನಮ್ಮವರಲ್ಲಿ ಗೋಪಾಲನಂತಹ ದ್ರೋಹಿಗಳಿರುವುದಾದರೆ, ಅವರು ಇನ್ನಾದರೂ, ತಮಗಾಗುವ ಫಲವಿಂತಹದೆಂದು ತಿಳಿದು, ಜ್ಞಾನವನ್ನು ಹೊಂದಬೇಕೆಂಬುದೇ ಇಂದಿನ ಐಂದ್ರಜಾಲದ ಉದ್ದೇಶವಾಗಿದೆ.



|| ಶ್ರೀ ||

# ದಶಮಪರಿಚ್ಛೇದ.

(ದ್ವೇಷಸಾಧನೆ)

ಸಹೋದರಿಯರೇ! ಗೃಹಸ್ವಾಮಿನಿಯು ಇಲ್ಲದಿದ್ದರೆ, ಆ ಗೃಹದ ಕಾಂತಿಯೇ ಕುಂದುವುದಲ್ಲವೇ ? ಹಾಗೆಯೆ ನಮ್ಮ ಸುನಂದೆಯು ಇಲ್ಲದಿರುವುದರಿಂದ, ಲಕ್ಷ್ಮೀನಿಲಯದ ಶೋಭೆಯೇ ಅದೃಶ್ಯವಾಗಿದೆ. ಅವಳು, ತಾಯಿಯನ್ನು ನೋಡಲು, ಪ್ರಯಾಣಮಾಡಿ ಇಂದಿಗೆ ಹದಿನಾಲ್ಕು ದಿನಗಳು ಕಳೆದುಹೋದುವು. ಮನೆಯಲ್ಲಿ ಯಾರ ಮುಖದಲ್ಲಿಯೂ-ಉತ್ಸಾಹವೆಳ್ಳಷ್ಟೂ ಕಾಣುತ್ತಿಲ್ಲ. ಒಬ್ಬೊಬ್ಬರ ಮುಖದಲ್ಲಿಯೂ, ಒಂದೊಂದು ಚಿಂತೆಯಾವರಿಸಿದ್ದಂತೆ ತೋರುತ್ತಿದೆ. ತಾರಾಪತಿರಾಯನ ಸ್ಥಿತಿಯನ್ನು ಹೇಳುವಂತೆಯೇ ಇಲ್ಲ. ಪತ್ನಿಯು ಹೊರಟುಹೋದುದು ಮೊದಲು, ಈತನು ಲಕ್ಷ್ಮೀನಿಲಯದ ಕಡೆಗೆ ತಿರುಗಿ ನೋಡಿದವನಲ್ಲ. ಅಲ್ಲಿಯ ಬಾಗಿಲುಗಳೆಲ್ಲಕ್ಕೂ ಬೀಗಹಾಕಿ ಭದ್ರಮಾಡಿರುವರು. ಒಳಗೆ ಯಾರ ಸುಳಿವೂ ಇರುವಂತಿಲ್ಲ.

ತಾರಾಪತಿರಾಯನು ಅಡಿಗಡಿಗೂ ಪುತ್ರನನ್ನು ನೆನೆನೆನೆದು ಕಳವಳಿಸುತ್ತ, ಪತ್ನಿಯನ್ನು ಬೇಗ ಕರೆತರಲು ಹೋಗಬೇಕೆಂದು ಯೋಚಿಸುತ್ತಿದ್ದನು. ಇದಕ್ಕಾಗಿ ಬಹು ಪ್ರಯಾಸದಿಂದ ಅವಕಾಶಹೊಂದಿ, ನಾಳೆಯೇ ದುರ್ಗಾಪುರಕ್ಕೆ ಹೊರಡುವುದಾಗಿ ನಿಶ್ಚಯಿಸಿರುವನು.

ಸಾಮಾನ್ಯವಾಗಿ, ಯಾರೇ ಆಗಲಿ-ಎಲ್ಲಿಗಾದರೂ ಹೊರಡಬೇಕೆಂದರೆ, ಮೊದಲುದಿನದಿಂದ ಊಟ-ನಿದ್ರೆಗಳೂ ಬೇಕಾಗುವುದಿಲ್ಲವಷ್ಟೆ ! ಹಾಗೂ, ಮಾವನ ಮನೆಯ ಕಡೆಗೆ, ಹದಿನೈದು ವರ್ಷಗಳಿಂದ ಹೋಗ

ದಿದ್ದ ಜಮೀನ್ದಾರನು ಈಗ ಹೋಗಬೇಕೆಂದರೆ, ಹೇಗಾಗಬಹುದು ? ಈ ರಾತ್ರಿ, ಈತನಿಗೆ ನಿದ್ದೆಯೇ ಬರಲಿಲ್ಲ ಹನ್ನೆರಡು ಗಂಟೆಯುವರೆಗೂ ಓದುತ್ತಿದ್ದು, ಆ ಬಳಿಕ ಸಾಕಾಗಿ ಎದ್ದುಬಂದು, ಹಾಸಿಗೆಯ ಮೇಲೆ ಮಲಗಿದನು. ಎಷ್ಟು ಹೊತ್ತಾದರೂ ಚಿತ್ತಚಾಂಚಲ್ಯದಿಂದ ನಿದ್ದೆ ಬಾರದಿದ್ದಿತು. ಕಡೆಗೆ ಕಣ್ಣು ಬೀಗಿದಂತಾಗಿ ಹಾಗೆಯೇ ಮಲಗಿದನು. ಹೆಚ್ಚುಹೊತ್ತು ಹಾಗೆ ಮಲಗಿರಲಾಗಲಿಲ್ಲ. ಅರ್ಧಗಂಟೆಯೊಳಗಾಗಿಯೇ—ಹೊರಗೆ ಯಾರೋ ತಿರುಗಿದಂತೆ ಶಬ್ದವಾಯಿತು. ದಿಗಿಲುಬಿದ್ದೆದ್ದು, ಮಲಗಿದ್ದ ಕಿರುಮನೆಯ ಬೀದಿಕಡೆಯ ಬಾಗಿಲನ್ನು ತೆರೆದು, ಹೊರಗೆ ಬಂದು, ಸುತ್ತ ಮುತ್ತಲ ಪ್ರದೇಶವೆಲ್ಲವನ್ನೂ ಚೆನ್ನಾಗಿ ಹುಡುಕಿನೋಡಿದನು. ಯಾರೂ ಇರಲಿಲ್ಲ. ಕಡೆಗೆ ಬೀದಿಯ ಬಾಗಿಲಬಳಿಗೆ ಬಂದು ನೋಡಿದನು. ಬಾಗಿಲು ತೆರೆದುಹೋಗಿದ್ದಿತು ; ಜಗಲಿಯಮೇಲೆ ವಿಷಕಂಠನೂ ಇರಲಿಲ್ಲ. ಹೊತ್ತು ನಾಲ್ಕೂವರೆ ಗಂಟೆಯಾಗಿದ್ದಿತು. ಜಮೀನ್ದಾರನು ಸಂಶಯದಿಂದ ಬೀದಿಯ ಬಾಗಿಲನ್ನು ಹಾಕಿ, ವಿಲಾಸಭವನವನ್ನೇರಿ, ಗಂಗೆಯು ಮಲಗುವ ಮನೆಗೆ ಬಂದು ನೋಡಿದನು. ಗಂಗೆಯು ಕಿರುಮನೆಯ ಕದಗಳನ್ನು ಹಾಕಿಕೊಂಡು ಮಲಗಿದ್ದಳು. ತಾರಾಪತಿಯು ಕದಗಳನ್ನು ತಟ್ಟಿ ಕೂಗಿದನು. ಈತನ ಕೂಗಿಗೆ ಮಲಗಿದ್ದ ಗಂಗೆಯು, ಗಾಬರಿಯಿಂದೆದ್ದುಬಂದು ಬಾಗಿಲನ್ನು ತೆರೆದು–' ವಿಚಾರವೇನು ? ' ಎಂದು ಕೇಳಿದಳು.

ತಾರಾಪತಿ—ಕಿರುಮನೆಯೊಳಗಡೆಯನ್ನು ಒಮ್ಮೆ ಚೆನ್ನಾಗಿ ನೋಡಿ, ಏನೂ ವ್ಯತ್ಯಾಸವಿಲ್ಲವೆಂದು ತಿಳಿದು, ಬಳಿಕ–' ನೀನೇನು, ಕುಂಭಕರ್ಣನ ಮರಿಯಾಗಿರುವೆ ! ಎಷ್ಟು ಕೂಗಿದರೂ ಎಚ್ಚರವಿಲ್ಲ. ಹೀಗೂ ಮಲಗುವರೇನು ? '

ಗಂಗೆ—ನಾನೇನು ಮಾಡಲಿ ! ನಿದ್ರಾಂಗನೆಯು ನಿಮ್ಮಲ್ಲಿ ಆಗ್ರಹಿಸಿದ್ದು, ನನ್ನಲ್ಲಿ ಅನುಗ್ರಹ ಮಾಡಿದರೆ ಮತ್ತೇನು ಮಾಡಬೇಕು ? ಹಾಗೂ ನಾನು ರಾತ್ರಿಯಲ್ಲಿ ನಿಮ್ಮೊಡನೆ ಮಾತನಾಡುತ್ತಿದ್ದು ಬಂದವಳು

ಮಲಗಿದೆನು ; ಈಗಲೇ ಎಚ್ಚರವಾದುದು. ನಿಮ್ಮ ಹೊಸ ಪದ್ಧತಿಯನ್ನು ನಾನು ತಿಳಿದಿಲ್ಲವಾದುದರಿಂದ ಬಾಗಿಲನ್ನು ಹಾಕಿ ಮಲಗಿದ್ದೆನು. ಇದರಲ್ಲಿ ತಪ್ಪೇನು ?

ತಾರಾಪತಿ— ತಲೆದೂಗಿ-' ಅದರಲ್ಲಿ ತಪ್ಪೇನೂ ಇರುವುದಿಲ್ಲ; ಹಾಗೆಯೇ ಮಾಡಬೇಕು. ಆದರೆ, ಬೀದಿಯ ಬಾಗಿಲನ್ನು ಮಾತ್ರ ತೆರೆದು ಹಾಕಿದ್ದವರು ಯಾರೆಂಬುದೇ ತಿಳಿಯಲಿಲ್ಲ.'

ಗಂಗೆ-—ಕೋಳಿ ಕೂಗುತ್ತಿದೆ. ಯಾರೋ ಎದ್ದುಹೋಗಿರಬೇಕು. ಆ ವಿಚಾರವೇ ನನಗೆ ತಿಳಿಯಲು ಕಾರಣವಿಲ್ಲವಷ್ಟೆ !

ತಾರಾಪತಿ—-'ಹೊರಗೆ ಹೋಗುವವರು ಬಾಗಿಲನ್ನು ಬರಿದೆ ಹಾಕಿರಬೇಕು ; ಇದರಲ್ಲಿ ನನಗೇನೋ ಸಂಶಯುವುಂಟಾಗುತ್ತಿದೆ. ಇರಲಿ ; ಪರೀಕ್ಷಿಸುವೆನು.' ಎಂದು ಹಿಂತಿರುಗಿದನು. ಗಂಗೆಯೂ ಬಾಗಿಲನ್ನೆಳೆದು ಹೊರಗೆ ಬೀಗಹಾಕಿ, ಪತಿಯ ಹಿಂದೆ ಹೊರಟಳು.

ಇಬ್ಬರೂ, ಉಪ್ಪರಿಗೆಯಿಂದಿಳಿದುಬಂದು, ಹಿತ್ತಿಲ ಕಡೆಯ ಮನೆಗೆ ಬಂದರು. ಅಲ್ಲಿಯೇ ಯಶವಂತನೂ, ಉಳಿದವರೂ ಮಲಗುತ್ತಿದ್ದರು. ತಾರಾಪತಿರಾಯನು ನೋಡಿದನು ; ಬಾಗಿಲಚಿಲಕವು ಹೊರಗಡೆ ಸಿಲುಕಿದ್ದುದನ್ನು ಕಂಡು, ಕುತೂಹಲದಿಂದದನ್ನು ತೆಗೆದು, ಕಿರುಮನೆಯೊಳಹೊಕ್ಕು ನೋಡಿದನು. ಎಲ್ಲರೂ ದೇಹಸ್ಮರಣೆಯಿಲ್ಲದೆ ಮಲಗಿ ಗೊರಕೆಗಳನ್ನು ಹೊಡೆಯುತ್ತಿದ್ದರು. ತಾರಾಪತಿರಾಯನು ವಿಸ್ಮಿತನಾಗಿ ಕೂಗಿ ಹೇಳಿದನು,-' ಏನಿದು, ನಿದ್ರೆ ! ಹೀಗೂ ಮಲಗುವ ಪುರುಷರುಂಟೋ ? ಚೆನ್ನಾಗಿದೆ ! ಬೀದಿಯ ಬಾಗಿಲನ್ನು ಹಾಕದೆಯೇ ಮಲಗಿದಿರೇನು ? '

ಯಶವಂತ—ತೇಜೋಹೀನನಾಗಿ ತತ್ತರಗೊಳ್ಳುತ್ತ ತೊದಲು ನಾಲಿಗೆಯಿಂದ-' ಹಾಗೆಂದರೇನು ? ನಾನು, ಮಲಗುವುದಕ್ಕೆ ಮೊದಲು ಬಾಗಿಲುಗಳೆಲ್ಲವನ್ನೂ ಹಾಕಿಯೇ ಬಂದು, ಮಲಗಿದೆನು; ಇನ್ನೂ ಎದ್ದುಹೋಗಿಲ್ಲ.'

ತಾರಾಪತಿ— ತಲೆದೂಗುತ್ತ ' ಹೂಂ! ಆಗಲಿ; ಏನೇನಾಗುವುದೋ ಆಗಲಿ.' ಎಂದು ಹೇಳುತ್ತ, ಅಲ್ಲಿಂದ ಹೊರಟು, ಯಮುನೆಯ ಕಿರುಮನೆಗೆ ಬಂದು ನೋಡಿದನು. ಯಮುನೆಯಾಗಲೀ, ಅವಳ ಸಾಮಗ್ರಿಗಳಾಗಲೀ ಅಲ್ಲಿರಲಿಲ್ಲ. ಜಮೀನ್ದಾರನಿಗೆ ಸಂಶಯವುಂಟಾಯಿತು. ಗಂಗೆಯೊಡನೆ, ತಾಯಿಯ ಕಿರುಮನೆಗೆ ಬಂದು ನೋಡಿದನು. ಕದವು ತೆರೆದಿದ್ದಿತು; ದೀಪವೂ ಇರಲಿಲ್ಲ. ಅಷ್ಟರಲ್ಲಿಯೇ, ಯಶವಂತನು ಲಾಂದ್ರವನ್ನು ತಂದನು. ಜಮೀನ್ದಾರನು ಪತ್ನಿಯೊಡನೆ ಕಿರುಮನೆಯೊಳಹೊಕ್ಕು ನೋಡಿದನು. ಚಂದ್ರಮತಿಯು ಕೈಕಾಲುಗಳಿಗೆ ಹಗ್ಗವು ಬಿಗಿಯಲ್ಪಟ್ಟು, ಬಾಯಿಗೆ ಬಟ್ಟೆ ತುರುಕಲ್ಪಟ್ಟಿದ್ದಿತು. ಪಾಪ! ಚಲಿಸಲಿಕ್ಕಾಗಲೀ, ಉಸಿರಾಡಲಿಕ್ಕಾಗಲೀ ಆಗದೆ-ಚಂದ್ರಮತಿಯು, ಉತ್ಕ್ರಮಣಾವಸ್ಥೆಯಲ್ಲಿ ಬಿದ್ದಿದ್ದಳು.

ಗಂಗೆ—ಅತ್ತೆಯನ್ನು ನೋಡಿದಕೂಡಲೇ ಆರ್ತಸ್ವರದಿಂದ—' ಅಯ್ಯೋ! ಅನರ್ಥ! ಅನರ್ಥ!! ' ಎಂದು ಕೂಗುತ್ತ-ಅತ್ತೆಯ ಬಳಿಯಲ್ಲಿ ಕುಳಿತು, ಕೈಕಾಲು ಬಾಯಿಗಳ ಕಟ್ಟನ್ನು ಬಿಚ್ಚಿದಳು ತಾರಾಪತಿರಾಯನೂ, ವಾಕ್ಶಕ್ತಿಶೂನ್ಯನಾಗಿ, ತಾಯಿಗೆ ಶೈತ್ಯೋಪಚಾರ ಮಾಡಲಾರಂಭಿಸಿದನು.

ಈ ಬಗೆಯಾದ ಮಗ-ಸೊಸೆಯರ ಉಪಚಾರಗಳಿಂದ ಚಂದ್ರಮತಿಯು, ಕಾಲುಗಂಟೆಯೊಳಗಾಗಿ ಚೇತರಿಸಿಕೊಂಡು ಮೆಲ್ಲನೆದ್ದು ಕುಳಿತು, ಸುತ್ತಲೂ ನೋಡಿದಳು. ಮುಂದೆ ಕುಳಿತಿದ್ದವರನ್ನೂ, ಬಾಗಿಲಬಳಿ ನಿಂತಿದ್ದ ಯಶವಂತನನ್ನೂ ನೋಡಿ, ಕುಗ್ಗಿದ ದನಿಯಿಂದ ಕೇಳಿದಳು. ' ಮಗು! ಮನೆಯಸ್ಥಿತಿ, ಏನಾಗಿದೆ? ಇನ್ನು ಯಾರಿಗೂ ಏನೂ ಆಗಿಲ್ಲವಷ್ಟೆ? '

ತಾರಾಪತಿ—ಯಾರಿಗೂ ಏನೂ ಆಗಿಲ್ಲ. ನಿಮ್ಮ ದೇಹಸ್ಥಿತಿ, ಹೇಗಾಗಿದೆ?

ಚಂದ್ರಮತಿ—ಆಗುವುದೇನು? ಮೂಗಿನ ರಂಧ್ರಗಳಲ್ಲಿಯೂ, ಗಂಟಲು, ತಲೆಯ ಮಿದಳು, ಹೊಟ್ಟೆಗಳಲ್ಲಿಯೂ ಉರಿಗಾಣುತ್ತಿದೆ. ಅಷ್ಟೆ!

ತಾರಾಪತಿ—ದೈವೇಚ್ಛೆ ! ಅಪಮೃತ್ಯುವಿಗೆ ಗುರಿಯಾಗದಂತೆ ಕಾಪಾಡಿದ ಭಗವತ್ಕೃಪೆಯೊಂದೇ ಸಾಕಲ್ಲವೇ ?

ಚಂದ್ರಮತಿ—ಒಮ್ಮೆ ಸುತ್ತಲೂ ನೋಡಿ, ದಿಗಿಲುಬಿದ್ದೆದ್ದು–' ಅಯ್ಯೊ ! ನನ್ನ ಕೈಪೆಟ್ಟಿಗೆ, ದೇವರಪೆಟ್ಟಿಗೆ, ಜಪದ ಸಾಮಗ್ರಿಗಳೆಲ್ಲವೂ ಹೋಗಿವೆ.' ಎಂದು ಕೂಗಿಕೊಂಡಳು.

ತಾರಾಪತಿ—ತಾಯಿಯ ಕೈಹಿಡಿದು ಮೆಲ್ಲನೆ ಕುಳ್ಳಿರಿಸಿ–' ಅಮ್ಮಾಯಿ ! ಈಗಲೇ ಏಳಬೇಡಿರಿ. ಯಾವುದುಹೋದರೂ ಹೋಗಲಿ. ಜೀವವುಳಿದುದುಕ್ಕಾಗಿ ಸಂತೋಷಪಡಬೇಕು. ಹೋದವಸ್ತುಗಳನ್ನು ಮತ್ತೆ ಸಂಪಾದಿಸಬಹುದು. ಆದರೆ, ಹೋದ ಪ್ರಾಣವನ್ನು ಮತ್ತೆ ಪಡೆಯುಬಲ್ಲೆವೇನು ? '

ಚಂದ್ರಮತಿ—ನಿಟ್ಟುಸಿರಿಟ್ಟು ' ಅಪ್ಪ ! ಮತ್ತೆ ನಮಗೆ ಗ್ರಹಚಾರವು ವಕ್ರಿಸಿರುವಂತೆ ತೋರುತ್ತಿದೆ. ಇದರಿಂದ ಇನ್ನು ಮುಂದೆ ಏನೇನಾಗುವುದೋ ತಿಳಿಯದು.'

ತಾರಾಪತಿ—ಆಗುವುದೆಲ್ಲವನ್ನೂ ನೋಡಿಯೇ ಬಿಡಬೇಕಲ್ಲವೇ ? ಅಮ್ಮಾಯಿ ! ಇದಕ್ಕೇಕೆ, ಇಷ್ಟರ ಕಳವಳವು ? ದೇವರಿಲ್ಲವೇನು ?

ಚಂದ್ರಮತಿ—ಯಮುನೆಯೆಲ್ಲಿ ?

ತಾರಾಪತಿ—ಅವಳಾಗಲೀ, ಅವಳ ಒಟ್ಟೆಬರೆಗಳಾಗಲೀ ಯಾವುದೂ ಇಲ್ಲ.

ಚಂದ್ರಮತಿ—ಹಾ ! ಹಾಗೆಂದರೇನು ? ಏನಾದವು ? ಅವಳೆಲ್ಲಿಹೋದಳು ?

ಗಂಗೆ—ಕಂಡವರಾರು ? ಬೀದಿಯಬಾಗಿಲೂ ತೆರೆದುಹೋಗಿದ್ದಿತು. ವಿಷಕಂಠನೂ ಬೀದಿಯಲ್ಲಿರಲಿಲ್ಲ. ಇಬ್ಬರೂ ಎಲ್ಲಿಗೆ ಹೋದರೋ ಕಂಡವರಿಲ್ಲ.

ಚಂದ್ರಮತಿ—ಧಿಗ್ಗನೆದ್ದು–' ಇದೇನು, ಕೇಡುಗಾಲದ ಸುದ್ದಿ ! ಮಗು ! ನಡೆ ; ವಿಚಾರವೇನೆಂಬುದನ್ನು ಪರೀಕ್ಷಿಸಲೇಬೇಕು.' ಎಂದು ಹೇಳಿ ಹೊರಟಳು. ತಾರಾಪತಿರಾಯನೂ ಗಂಗೆಯೊಡನೆ ಹೊರ

ಟನು. ಯಶವಂತನೂ, ಹಿಂದೆಯೇ ನಡೆತಂದನು. ಎಲ್ಲರೂ ಬೀದಿಯ ಬಳಿಗೆ ಬಂದು, ಬಾಗಿಲನ್ನು ತೆರೆದು ನೋಡಿದರು. ವಿಷಕಂಠನು, ಜಗಲಿಯ ಮೇಲೆ ಕುಳಿತು, ಭ್ರಾಂತನಂತೆ ಮೇಲೆನೋಡುತ್ತಿದ್ದನು. ಯಮುನೆಯು, ಶಂಕಾತಂಕಗಳಿಂದ ಕಳವಳಿಸುತ್ತ-ಆಗಲೇ ಪ್ರಾಕಾರದ ಬಾಗಿಲನ್ನು ತೆರೆದುಕೊಂಡು ಬಂದು, ಹಂತದ ಬಳಿಯಲ್ಲಿ ನಿಂತಳು. ಇವರಿಬ್ಬರ ಮುಖವನ್ನೂ ನೋಡಿ, ಜಮಾನ್ದಾರನು ಕಿಡಿಕಿಡಿಯಾಗಿ ಕೇಳಿದನು,—'ಎಲ್ಲಿಗೆ ಹೋಗಿದ್ದೆ ? ಯಮುನೆ !'

ಯಮುನೆ—ಪುಷ್ಕರಣಿಗೆ ಹೋಗಿದ್ದೆ.

ತಾರಾಪತಿ—ಯಾವಮಾರ್ಗವಾಗಿ ಹೋಗಿದ್ದೆ ?

ಯಮುನೆ—ಹಿತ್ತಿಲಬಾಗಿಲಿಂದಲೇ ಹೋದೆನು.

ತಾರಾಪತಿ—ಹಾಗಾದರೆ, ಹಿತ್ತಿಲಬಾಗಿಲನ್ನು ಹಾಕಿದ್ದವರಾರು ? ಈ ಬಾಗಿಲನ್ನು ತೆರೆದುಹೋದವರಾರು ?

ಯಮುನೆ—ಚಕಿತೆಯಾಗಿ 'ಬೀದಿಯ ಬಾಗಿಲನ್ನು ತೆರೆದವರಾರೋ ನನಗೆ ತಿಳಿಯದು. ನಾನು ಎಂದಿನಂತೆ ಈ ದಿನವೂ ಪುಷ್ಕರಣಿಗೆ ಹೋಗಿ ಮತ್ತೆ ಬಂದು ನೋಡುವಷ್ಟರಲ್ಲಿ, ಹಿತ್ತಿಲಬಾಗಿಲನ್ನು ಯಾರೋ ಹಾಕಿದ್ದರು. ಕೂಗಿಕೂಗಿ ಸಾಕಾದೆನು. ಬಾಗಿಲನ್ನು ಯಾರೂ ತೆರೆಯಲಿಲ್ಲವಾದುದರಿಂದ ಹಿತ್ತಿಲ ಹೊರಬಾಗಿಲಿಂದ ಹೊರಟು, ಈ ಕಡೆಯಲ್ಲಿ ಬಂದೆನು. ಇಷ್ಟಲ್ಲದೆ ನನಗಿನ್ನಾವುದೂ ತಿಳಿಯದು.

ತಾರಾಪತಿ—ವಿಷಕಂಠ ! ನೀನೂ ಇಲ್ಲಿರದೆ ಎಲ್ಲಿಗೆ ಹೋಗಿದ್ದೆ ?

ವಿಷಕಂಠ—ಮಹಾಸ್ವಾಮಿ ! ನಾನು ಇಲ್ಲಿಯೇ ಮಲಗಿದ್ದೆನು. ಆದರೆ ಎಚ್ಚರವಾಗಿ ಕಣ್ದೆರೆದು ನೋಡಿದಾಗ-ಪ್ರಾಕಾರದ ಆಚೆ, ಜರಂಡಿಯಲ್ಲಿ ಬಿದ್ದಿದ್ದೆನು. ಹೀಗಾಗಲು ಕಾರಣವೇನೆಂಬುದನ್ನು ತಿಳಿಯದೆ ಇದೇನೊ ವಿಪರೀತವಾಗಿದೆಯೆಂದೂ, ಇದನ್ನು ಸನ್ನಿಧಾನಕ್ಕೆ ಅರಿ

ಕೆಮಾಡಬೇಕೆಂದೂ ಆತುರದಿಂದ ಬಂದು ಇಲ್ಲಿ ಕುಳಿತೆನು. ನನಗಿನ್ನಾವುದೂ ತಿಳಿಯದು.

ಯಶವಂತ—ಇರಲಿ ; ಅದೇನು ? ನಿನ್ನ ಅಂಗಿಯ ಕಿಸೆಯಲ್ಲಿ ಕಾಣುತ್ತಿರುವುದು ?

ವಿಷಕಂಠ—ಹಿಂದುಮುಂದು ನೋಡದೆ, ಕಿಸೆಗೆ ಕೈಹಾಕಿ, ಕೈಗೆಸಿಕ್ಕಿದ ಕಾಗದದ ಚೀಲವೊಂದನ್ನು ತೆಗೆದು ಮುಂದಿರಿಸಿ, ಭ್ರಾಂತನಂತೆ ನಿಂತನು.

ಯಶವಂತ—ಚೀಲವನ್ನು ಕೈಕೊಂಡು-ಅದರೊಳಗಿದ್ದ ಸೀಸೆಯೊಂದನ್ನು ಹೊರತೆಗೆದುನೋಡಿ, ಜಮಿನ್ದಾರನ ಮುಂದೆ ಕೈನೀಡಿ-'ಸ್ವಾಮಿ! ಪರೀಕ್ಷಿಸಬಹುದು ! ಇದಾವದ್ರಾವಕವೋ ? ಇವನಲ್ಲಿಗೆ ಬರಲು ಕಾರಣವೇನೋ ? '

ವಿಷಕಂಠ—ನಡುನಡುಗುತ್ತ ' ಮಹಾಸ್ವಾಮಿ ! ದೇವರಾಣೆಗೂ, ಈ ಪಾದಸಾಕ್ಷಿಯಾಗಿಯೂ, ನಾನು ಯಾವ ತಪ್ಪನ್ನೂ ಮಾಡಿದವನಲ್ಲ. ಇದೆಲ್ಲಿಂದಬಂದಿತೋ, ನನಗೆ ಗೊತ್ತಿಲ್ಲ.'

ತಾರಾಪತಿ—ಹಲ್ಲನ್ನು ಕಡಿಯುತ್ತ ' ಮೋಸಗಾರ ! ನೀನು ತಿಳಿಯದೆಯೇ-ಇದು ನಿನ್ನಲ್ಲಿಗೆ ಬಂದಿತ್ತಲ್ಲವೇ ? ಆಗಲಿ, ನಿನ್ನೀದ್ರೋಹಕ್ಕೆ ಫಲವನ್ನು ಅನುಭವಿಸುವಾಗಲ್ಲವೇ ತಿಳಿಯಬೇಕು.'

ಗಂಗೆ—ಏನಮ್ಮ ? ಯಮುನೆ ! ನೀನೇನುಹೇಳುವೆ ? ನಿನ್ನನ್ನೂ ಶೋಧಿಸಬೇಕಾಗಿ ಬಂದಿದೆಯಲ್ಲ ?

ಯಮುನೆಯು, ಮರುಮಾತಿಲ್ಲದೆ, ಸೀರೆಯನ್ನು ಕೊಡಹಿದಳು. ಉಡಿಯೊಳಗಿದ್ದ ಸಣ್ಣ ಬಟ್ಟೆಯಗಂಟೊಂದು ಕೆಳಗೆ ಬಿದ್ದಿತು. ಭಯಕುತೂಹಲಗಳಿಂದ ಅದೇನಿರಬಹುದೆಂದು ಬಿಚ್ಚಿನೋಡಿದಳು. ಚಂದ್ರಮತಿಯ ಪೆಟ್ಟಿಗೆಗಳ ಬೀಗದಕೈಗಳು ಅದರಲ್ಲಿದ್ದುವು. ಯಮುನೆಗೆ ತಲೆತಿರುಗಿತು ; ಬುದ್ಧಿಮಾಂದ್ಯವಾಯಿತು ; ನಿಂತಂತೆಯೇ ಸ್ತಬ್ಧಳಾದಳು.

ಗಂಗೆ—ಬೀಗದಕೈಗಳನ್ನು ತೆಗೆದು ಅತ್ತೆಯ ಕೈಯಲ್ಲಿತ್ತು, 'ಅಮ್ಮಾಯಿ! ಈಗಲಾದರೂ ನೋಡಿ ಹೇಳಬಾರದೇ ? ಇವಳ ಸತ್ಯಸಂಧತೆಯನ್ನು ! '

ಚಂದ್ರಮತಿ—ಯಮುನೆ ! ನಿನಗೀದುರ್ಬುದ್ಧಿಯುಂಟಾಯಿತೇಕೆ ? ಇದೇಕೆ ಹೀಗೆ ಮಾಡಿದೆ ?

ಯಮುನೆ—ಅಮ್ಮಾಯಿ ! ನಾನು, ಯಾವದ್ರೋಹವನ್ನೂ ಮಾಡಿರುವುದಿಲ್ಲ. ನನ್ನ ಮನೋನೈರ್ಮಲ್ಯವು-ಆ ಪರಮಾತ್ಮನಿಗೆ ಮಾತ್ರವೇ ಗೊತ್ತು. ಉಳಿದವರು, ಯಾರು ಹೇಗೆಬೇಕಾದರೂ ಹೇಳಿಕೊಳ್ಳಬಹುದು. ಇದು ನನ್ನಿಂದ ನಡೆದುದಲ್ಲ.

ತಾರಾಪತಿ—ಸಾಕು ; ಯಮುನೆ ! ನೀನೆ ನಿನ್ನ ನಂಬಿಕೆಗೆ ಕಂಟಕವನ್ನೊಡ್ಡಿದೆ. ನೀವಿಬ್ಬರೂ ಸಹಕಾರದಿಂದ ಈ ಕಳುವನ್ನು ಮಾಡಿರುವಿರೆಂಬುದು, ಈಗ ನಿರ್ಧರವಾಯಿತು ಆಗಲಿ, ಜ್ಞಾನಮಂಟಪದಲ್ಲಿಯೇ ನಿಮಗೆ ಇದರ ಅನುಭವವಾದೀತು.

ಯಮುನೆ—ಅಪ್ಪ ! 'ಸತ್ಯಕ್ಕೆ ಸಾವಿಲ್ಲವಷ್ಟೆ ! ಇಂದಿನ ದ್ವೇಷಸಾಧನೆಗೆಂದು ಮಾಡಲ್ಪಟ್ಟ ಈ ಮಾಟವು, ಮುಂದೆ ತಾನಾಗಿಯೇ ವ್ಯಕ್ತಪಡುವುದು ಇನ್ನು ನಿಮ್ಮಿಷ್ಟವಿದ್ದಂತೆ ಮಾಡಿರಿ ; ಸಿದ್ಧವಾಗಿರುವೆವು.' ಎಂದು ಸುಮ್ಮನಾದಳು.

'ಮುಂದೆ ವಿಷಕಂಠ-ಯಮುನೆಯರಮೇಲೆ ಕಲಂಕವು ಹೊರಿಸಲ್ಪಟ್ಟು, ಅವರಿಬ್ಬರೂ ಜ್ಞಾನಮಂಟಪಕ್ಕೆ ಒಯ್ಯಲ್ಪಟ್ಟರೆಂದು ಬೇರೆ ಹೇಳತಕ್ಕುದಿಲ್ಲವಷ್ಟೆ. ಇರಲಿ, ಇದರ ಫಲಿತಾಂಶವನ್ನು ಮುಂದೆನೋಡುವ.'

ಶ್ರೀ

# ತೃತೀಯ ಭಾಗ.

## ಪ್ರಥಮ ಪರಿಚ್ಛೇದ.

(ಅನಿಷ್ಟಸಂಘಟನ.)

ಯಮುನೆ-ವಿಷಕಂಠರನ್ನು ಸರ್ಕಾರದವರ ವಶಕ್ಕೊಪ್ಪಿಸಿದ ಬಳಿಕ, ಈವರೆಗೆ ಜಮೀನ್ದಾರರ ಮನೆಯಲ್ಲಿ ಎಷ್ಟೋ ಮಾರ್ಪಾಟುಗಳುಂಟಾಗಿವೆ. ಅವರಿಬ್ಬರಿಲ್ಲದಿರುವುದರಿಂದ, ಯಶವಂತನ ಮನಸ್ಸಿಗೆ ತುಂಬ ಸಮಾಧಾನವಾಗಿ ಕಾಣುತ್ತಿದೆ. ಆದರೂ, ಜಮೀನ್ದಾರನ ಮತ್ತು ಚಂದ್ರಮತಿಯ ಮನಸ್ಸಿಗೆ ಅಧಿಕ ತೊಂದರೆಯುಂಟಾದಂತೆಯೇ ತೋರುತ್ತಿದೆ. ಗಂಗೆಗೆಂದರೆ,— ಹೇಳುವುದೇನು ! ಅಬಲಾಸ್ವಭಾವವೇ ವಿಲಕ್ಷಣವಾದುದಲ್ಲವೇ ? ಅವರ ಹೃದಯಾಕಾಶದಲ್ಲಿ, ಇಂತಹದೇ ವಿಚಾರಗಳಿರುವುವೆಂದು ಹೇಳಬಲ್ಲವರಾರು ? ಸ್ತ್ರೀಹೃದಯವು ನಿರ್ದುಷ್ಟವಾಗಿದ್ದು-ಕರ್ತವ್ಯಕ್ಷಮತೆಯಲ್ಲಿ ನಿರತವಾಗಿದ್ದರೂ-ಇಲ್ಲವೆ ದುರ್ಭಾವನಾರೋಗಗಳಿಗೆ ಪಕ್ಕಾಗಿದ್ದರೂ, ಹೇಗಿದ್ದರೂ, ಅವರ ಅಂತರಾಳವನ್ನು ಹೀಗೆಯೇ ಸರಿಯೆಂದು ನಿರ್ಧರಿಸಿ ಹೇಳುವುದಕ್ಕೆ ಯಾರಿಗೂ ಸಾಧ್ಯವಾಗಲಾರದು. ಅವರ ಹೃದ್ಗತವಿಚಾರವನ್ನು ಕಾರ್ಯತಃ ನೋಡಬೇಕಲ್ಲದೆ, ಎಣಿಸಿ-ಗುಣಿಸಿ ಹೇಳುವೆನೆಂದರೆ, ಮರುಳ್ತನವೆನ್ನಿಸದೆ ಇರಲಾರದು. ಅದು ಹೇಗೂ ಇರಲಿ; ಈಗ ನಮಗೆ ಅಷ್ಟರ ವಿಚಾರವಿಮರ್ಶೆಗೆ ಅವಕಾಶವಿಲ್ಲ.

ಯಮುನೆಯು ಹೊರಟುಹೋದುದರಿಂದ, ಗೃಹಕಾರ್ಯವಿಚಾರಗಳೆಲ್ಲವೂ ಗಂಗೆಯ ಪಾಲಿಗೇ ಬಿದ್ದುವು. ಅವುಗಳಲ್ಲಿಯೂ ಮುಖ್ಯವಾದುದೆಂದರೆ, ಅತ್ತೆಯ ಉಪಚಾರವು. ಹೇಗೆಂದರೆ —ಗಂಗೆಯು ಮೊದಲಿನಂತೆ ಈಗ ವಿಲಾಸಭವನದಲ್ಲಿಯೇ ಇರುವುದಿಲ್ಲ ; ದಿನದಿನಕ್ಕೂ ಗೃಹಕಾರ್ಯಗಳಲ್ಲಿ ಅಧಿಕವಾಗಿ ಆಸಕ್ತಿ ಹೊಂದುತ್ತಿರುವಳು. ಅತ್ತೆಯ ಉಪಚಾರವಿಚಾರಗಳಿಗೆ ಮತ್ತಾರನ್ನಾದರೂ ಗೊತ್ತುಮಾಡುವೆನೆಂದ ಪತಿಯ ಮಾತನ್ನು ತಡೆದು, ಅದು ತನಗೆ ಸೇರಿದ ಕಾರ್ಯವಾದುದರಿಂದ-ತಾನೇ ಮಾಡುವೆನೆಂದು ಹೇಳಿ, ಶ್ರದ್ಧೆಯನ್ನು ವಹಿಸಿರುವುದರಿಂದ ಅತ್ತೆಯ ಪ್ರಾಣಪದಕವಾಗಿ ಗೌರವಿಸಲ್ಪಡುತ್ತಿರುವಳು. ಪತ್ನಿಯ ಈ ಬಗೆಯಾದ ಸೌಜನ್ಯವು, ಜಮೀನ್ದಾರನ ಮನಸ್ಸಿಗೆ ಎಷ್ಟು ಆಹ್ಲಾದವನ್ನುಂಟುಮಾಡುಬಹುದೋ-ಅನುಭವಶಾಲಿಗಳೇ ಊಹಿಸಿ ತಿಳಿಯಬೇಕು.

ಯಮುನೆಯನ್ನು ಹೊರಡಿಸಿ ಇಂದಿಗೆ ನಾಲ್ಕೈದು ತಿಂಗಳಾದುವು. ಗಂಗೆಯು ಈ ಸಾಯಂಕಾಲದಲ್ಲಿ, ಅತ್ತೆಯಮುಂದೆ ಕುಳಿತು, ಏನನ್ನೋ ಓದುತ್ತಿದ್ದಳು. ಹೊರಗೆ ಸಂಚಾರಕ್ಕೆ ಹೋಗಿದ್ದ ಜಮೀನ್ದಾರನು, ಇನ್ನೂ ಬಂದಿರಲಿಲ್ಲ. ಗಂಗೆಯು ಕುಳಿತ ಸ್ವಲ್ಪಹೊತ್ತಿನಲ್ಲಿಯೇ ದೂತನೊಬ್ಬನು ಬಂದು, ಅಂಟುಹಾಕಿದ್ದ ಪತ್ರವೊಂದನ್ನು ಗಂಗೆಯ ಕೈಯಲ್ಲಿತ್ತು, ನಿಲ್ಲದೆ ಹೊರಟುಹೋದನು. ಗಂಗೆಯು ಕುತೂಹಲದಿಂದ, ಪತ್ರದ ಮೇಗಡೆ ಬರೆದಿದ್ದ ವಿಳಾಸವನ್ನು ನೋಡಿದಳು. ತನಗಾಗಿಯೇ ಬರೆಯಲ್ಪಟ್ಟುದೆಂದು ತಿಳಿದಿತು. ಬರಹವಾರದೆಂದು ನೋಡಿದಳು ; ತನ್ನ ಪತಿಯ ಕೈಬರಹವೆಂದೇ ನಿರ್ಧರವಾಯಿತು. ಗಂಗೆಗೆ ಕಳವಳವುಂಟಾಯಿತು.-‘ ಇದೇನಿದು ! ಎಂದೂ ಇಲ್ಲದ ಪತ್ರವ್ಯವಹಾರವು ಇಂದು ಉಂಟಾಗಿರಲು ಕಾರಣವೇನು ? ಸಮಾಚಾರವೇನಾಗಿರಬೇಕು ? ತೋಟದಿಂದ ಹೀಗೆ ಬರೆದಟ್ಟುವ ಪ್ರಸಂಗವಾದರೂ ಎಂತಹದು ? ’ ಹೀಗೆಂದು ತನ್ನಲ್ಲಿಯೇ ಚಿಂತಿಸಿ ಚಿಂತಿಸಿ, ನಡುನಡುಗುತ್ತ, ಪತ್ರವನ್ನು ತೆರೆದು ಮನದಲ್ಲಿಯೇ ಓದಿದಳು. ಪತ್ರದ ವಿಷಯವಾವುದೆಂಬುದನ್ನು ತಿಳಿಯಬೇಕಲ್ಲವೇ ? ಆಗಲಿ.

## ಪತ್ರ.

‘ ಮದೀಯಾಂತರಂಗಪ್ರಿಯೆ !

ಈವರೆಗೂ ನಾನು, ನಿನಗೆ ಪತ್ರವನ್ನೇ ಬರೆದಿರಲಿಲ್ಲ. ಇಂದು ಬರೆಯಲಿಕ್ಕಿರುವ ಮೊದಲು ಪತ್ರದಲ್ಲಿಯೇ, ನಿನ್ನ ಮನಸ್ಸು ಭಗೀರೆನ್ನುವಂತೆ ಮಾಡುವ ಅಪ್ರಿಯವಾರ್ತೆಯನ್ನೇ ಬರೆಯಬೇಕಾಗಿ ಬಂದಿರುವುದೆಂದು ವಿಷಾದಿಸುವೆನು. ಆದರೂ, ನನ್ನ ಸಮಸ್ತ ಸುಖ-ದುಃಖಗಳಿಗೂ ಸಮಭಾಗಿನಿಯಾಗಿರುವ ನಿನ್ನಲ್ಲಿ, ಹೇಳದಿರುವುದು ಹೇಗೆ? ಸಂಧಿಗ್ಧಸಮಯದಲ್ಲಿ ಸಹಚಾರಿಣಿಯಾದ ನಿನ್ನ ಸಹಾಯವಿಲ್ಲದೆ, ನನ್ನ ಸಂಸಾರಯಾತ್ರೆಯಾದರೂ ಹೇಗೆ ನಡೆಯಬೇಕು ? ಇದಕ್ಕಾಗಿ ಈಗ ನನಗೆ ಒದವಿದ ಅನಿಷ್ಟಸಂಗತಿಯನ್ನು ನಿನಗೂ ವಿವರಿಸುವುದಕ್ಕಿರುವೆನು ; ಬೇಸರಿಸಬೇಡ. ಅದೇನೆಂದು ಕೇಳುವಿಯಲ್ಲವೇ-ಗಂಗೆ !

ಈ ಸಾಯಂಕಾಲದಲ್ಲಿ, ನಾನು ವಾಯುಸೇವನೆಗೆಂದು ತೋಟದ ಕಡೆಗೆ ಹೊರಟುಬಂದೆನಷ್ಟೆ ; ಆದರೆ, ನಾನು ಇಲ್ಲಿಗೆ ಬಂದ ನಾಲ್ಕಾರು ನಿಮಿಷಗಳಲ್ಲಿಯೇ ದುರ್ಗಾಪುರದಿಂದ ಸುನಂದೆಯ ಕಾಗದವು ಬಂದು ಕೈಸೇರಿ ನೋಡಲಾಗಿ, ನನ್ನ ತಲೆಯ ಮಿದುಳೇ ಹಾರಿದಂತಾಯಿತು. ಅಲ್ಲಿ ಸುನಂದೆಗೆ ದಿನವೂ ಜ್ವರವು ಬರುತ್ತಿರುವುದಂತೆ ; ಅವಳ ತಾಯಿಗೆ ಶ್ವಾಸವು ಕಾಣುತ್ತಿರುವುದಂತೆ ; ಮೋಹನನು ಇಲ್ಲಿಂದ ಹೊರಟುದು ಮೊದಲು, ಸನ್ನಿಪಾತ ರೋಗದಲ್ಲಿ ಮಲಗಿದ್ದು-ಈಗ ನಾಲ್ಕಾರು ದಿನಗಳಿಂದ ವಾಯುರೋಗಕ್ಕೆ ಪಕ್ಕಾಗಿ, ಅಧಿಕವಾದ ಯಾತನೆಯನ್ನು ಅನುಭವಿಸುತ್ತಿರುವನಂತೆ. ಸುನಂದೆಯ ತಂದೆಗೆ ಈ ಕಾರಣಗಳಿಂದ ಬುದ್ಧಿಯೇ ವಿಕಲ್ಪವಾಗಿರುವುದಂತೆ. ನಾನು ಅಲ್ಲಿಗೆ ಎಷ್ಟು ಜಾಗ್ರತೆಯಾಗಿ ಹೋಗಿ ಸೇರಿದರೆ, ಅಷ್ಟೂ ಕ್ಷೇಮವೆಂದೂ, ಒಡನೆ ಹೊರಟುಬರಬೇಕೆಂದೂ ಬರೆದಿರುವಳು. ಈ ನಿರ್ಭಾಗ್ಯನ ಅದೃಷ್ಟದಲ್ಲಿ ಹೇಗಿದೆಯೋ ತಿಳಿಯದು. ನಾನಂತೂ ಹುಚ್ಚನಾಗಿರುವೆನು. ಏನುಮಾಡಲಿ ? ಗಂಗೆ ! ನೀನು

ನನ್ನ ಪತ್ನಿ, ಸಹಧರ್ಮಿಣಿ ಮತ್ತೂ ಸಹಚಾರಿಣಿ. ನಿನ್ನ ಸಮಕ್ಷದಲ್ಲಿ ಬಂದುಹೇಳಿ, ನಿನ್ನನ್ನೂ ಜತೆಗೊಂಡು ಬರಬೇಕೆಂಬ ಅಭಿಪ್ರಾಯವಿದ್ದರೂ. ಈಗ ಅಷ್ಟಕ್ಕೆ ಅವಕಾಶವಿರುವುದಿಲ್ಲ. ಈ ಸಂಗತಿಯನ್ನು ಈಗಲೇ ಹೀಗೆಂದು ಹೇಳುವುದರಿಂದ, ಅಮ್ಮಾಯಿಾಯವರು ಬಹುವಾಗಿ ವ್ಯಥೆ ಪಡುವರು. ಅದು ನನಗೆ ಸಮ್ಮತವಲ್ಲ. ಇದೂ ಅಲ್ಲದೆ, ಕುಮಾರನ ಅಭ್ಯುದಯವನ್ನು ಕಾಣುವವರೆಗೂ, ಸುಕ್ಕುಹಿಡಿದು ದಿಕ್ಕೆಟ್ಟ ಈ ಮೋರೆಯನ್ನು, ನಾನು ಈ ಊರಲ್ಲಿ ಮತ್ತಾರಿಗೂ ತೋರುವುದಿಲ್ಲವೆಂದು ಸಂಕಲ್ಪಿಸಿರುವೆನು. ಈ ಎಲ್ಲಾ ಕಾರಣಗಳಿಂದಲೂ, ನಾನು ಇಲ್ಲಿಂದ ಹೀಗೆಯೇ ದುರ್ಗಾಪುರಕ್ಕೆ ಹೊರಡುವವನಾಗಿರುವೆನು. ದೈವಸಂಕಲ್ಪದಲ್ಲಿ ಹೇಗಾಗಬೇಕೆಂದಿದೆಯೋ-ಬಲ್ಲವರಾರು ? ನಮ್ಮ ಗ್ರಹಚಾರವು ಬಹು ಕ್ರೂರವಾಗಿರುವುದೆಂಬುದೇನೋ ನಿಜವು

ಇನ್ನು ಹೆಚ್ಚು ಬರೆಯಲು ವೇಳೆಯಿಲ್ಲ ಗಂಗೆ ! ಮನೆಯ ಆಡಳಿತಗಳಲ್ಲಿ ಸಂಪೂರ್ಣ ಗಮನವಿರಬೇಕು ; ಅಮ್ಮಾಯಿಾಯವರು ಶೋಕಕಾತರರಾಗದಂತೆ ನೋಡಿಕೊಳ್ಳುತ್ತಿರಬೇಕು. ಉಳಿದ ವಿಚಾರಗಳಿಗೆ ದುರ್ಗಾಪುರವನ್ನು ಸೇರಿದ ಕೂಡಲೇ ಬರೆಯುವೆನು. ಸಕಲವನ್ನೂ ತಿಳಿದ ನಿನಗೆ ಪ್ರತ್ಯೇಕವಾಗಿ ಹೇಳುವುದಿನ್ನೇನಿದೆ ?

ಇತಿ-ನಿನ್ನ ಮನೋವಲ್ಲಭ, ತಾರಾಪತಿ.'

ಗಂಗೆಯು ಕಡೆಯವರೆಗೂ ಪತ್ರವನ್ನು ಓದಿ ಮುಗಿಯಿಸಿ, ಕುಳಿತಂತೆಯೇ ಸ್ಮೃತಿತಪ್ಪಿದಳು.

ಚಂದ್ರಮತಿ—ಆತುರದಿಂದ-' ಗಂಗೆ ! ಸಮಾಚಾರವೇನು ? ಯಾರ ಕಾಗದವು ? ಹೀಗೇಕೆ ಕುಳಿತೆ ? '

ಗಂಗೆ—ನಿಟ್ಟುಸಿರಿಟ್ಟು-' ಮೋಹನನಿಗೂ, ಅಕ್ಕನಿಗೂ ತುಂಬಾ ಕಾಯಿಲೆಯಂತೆ. ಕೂಡಲೇ ಹೊರಟುಬರಬೇಕೆಂಬ ಪತ್ರವು ಬಂದಿದೆ

ಯಂತೆ ಅದಕ್ಕಾಗಿ ತೋಟದಿಂದ ಹಾಗೆಯೇ ಹೊರಟುಹೋಗು ವೆನೆಂದೂ, ಮನೆಯನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರ ಬೇಕೆಂದೂ, ದುರ್ಗಾಪುರಕ್ಕೆ ಹೋಗಿ ಸೇರಿದ ಕೂಡಲೇ ವಿವರ ವಾಗಿ ಪತ್ರವನ್ನು ಬರೆದು ಕಳುಹುವೆನೆಂದೂ, ಯಜಮಾನರು ತೋಟದಿಂದ ಬರೆದು ಕಳುಹಿರುವರು.

ಚಂದ್ರಮತಿ—ಹಾ ! ಹಾಗೆಂದರೇನು ? ಹಾಗೆಯೇ ಹೊರಟುಹೋದನೇ ?

ಗಂಗೆ —'ಗಾಬರಿಪಡಬೇಡಿರಿ. ವಿಚಾರಿಸಿ ತಿಳಿದು ಹೇಳುತ್ತೇನೆ' ಎಂದು ಹೇಳಿ ಅಲ್ಲಿರದೆ ಎದ್ದು, ಬೀದಿಯಕಡೆಗೆ ಬಂದಳು. ಪತ್ರವನ್ನು ತಂದಿತ್ತ ಸೇವಕನು ಅಲ್ಲಿರಲಿಲ್ಲ. ಗಂಗೆಯು ಯೋಚಿಸುತ್ತ ನಿಂತು ಹೊರಗೆ ನೋಡಿದಳು. ಓಲಗಶಾಲೆಯ ಮುಂಗಡೆಯಲ್ಲಿ ನಿಂತು ಮಾತನಾಡುತ್ತಿದ್ದ ಯಶವಂತ-ವಾಸುದೇವರ ಸ್ಥಿತಿಯನ್ನು, ದೂರ ದಿಂದ ನೋಡಿ ಶಂಕೆಗೊಂಡಳು ; ಸ್ವಲ್ಪಹೊತ್ತು ಹಾಗೆಯೇ ನಿಂತು ಕೇಳುತ್ತಿದ್ದಳು. ಆದರೆ, ಇವಳು ತಮ್ಮನ್ನು ನೋಡುತ್ತಿರುವ ರೀತಿಯನ್ನು ಕಂಡ ಯಶವಂತನು, ವಾಸುದೇವನನ್ನೊಡಗೊಂಡು ಹೊರಟುಹೋದನು. ಗಂಗೆಯ ಅನುಮಾನವು ದ್ವಿಗುಣವಾಯಿತು. ಆದರೆ, ಈ ಅಂತರಂಗವನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಮೊದಲೇ, ಗದ್ದಲವೆಬ್ಬಿಸುವುದರಿಂದ ತೊಂದರೆಯುಂಟಾಗುವು ದೆಂದು ಚಿಂತಿಸಿ, ಉಸಿರೆತ್ತದೆ ಸುಮ್ಮನಿದ್ದು, ರಾತ್ರಿಯ ಊಟದ ಕಾಟವನ್ನು ಮುಗಿಯಿಸಿ ಬಂದು, ತನ್ನ ಕಿರುಮನೆಯಲ್ಲಿ ಮಲಗಿ ದಳು. ನಿದ್ದೆಬರಲಿಲ್ಲ. ಒಂದೆರಡು ಗಂಟೆಯವರೆಗೂ ಹಾಗೆಯೇ ಒದ್ದಾಡುತ್ತಿದ್ದು ಬಳಿಕ, ಸ್ವಲ್ಪ ಮೈಮರೆತಳು.

ಇವಳ ವಿಸ್ಮೃತಿಯನ್ನೇ ಕಾದಿದ್ದ ಕನಸು, ಇದೇ ಸಮಯ ವೆಂದು ಕಾಣಿಸಿಕೊಂಡಿತು. ಅದೇನೆಂಬುದನ್ನು ಕೆಳಗೆ ವಿವರಿಸುವುದರಿಂದ ತಿಳಿಯಲಾದೀತಲ್ಲವೇ ?

## (ಸ್ವಪ್ನ.)

ಅಂಧಕಾರಾವೃತವಾದ ರಾತ್ರಿಯಲ್ಲಿ, ಭಯಂಕರವಾದ ಸಾಗರ ಮಧ್ಯದಲ್ಲಿ ಸಣ್ಣದೊಂದು ನಾವೆಯು. ಮಂದಗಮನದಿಂದ ನಡೆಯುತ್ತಿದ್ದಿತು. ನಾವೆಯ ಒಂದು ಕಡೆಯಲ್ಲಿ ಗಂಗೆಯೊಬ್ಬಳೇ ಕುಳಿತಿದ್ದಳು. ಮತ್ತೊಂದು ಕಡೆಯಲ್ಲಿ, ಬಲವಂತ-ಸುಪಂಥ-ಯಶವಂತ--ವಾಸುದೇವರುಗಳು ಕುಳಿತಿದ್ದರು. ಯಶವಂತ-ವಾಸುದೇವರಿಬ್ಬರೂ ಜವಿಾನ್ದಾರನನ್ನು ಹಗ್ಗಗಳಿಂದ ಬಿಗಿದುಹಾಕಿ, ನಾವೆಯ ಮುಂಗಡೆಯಲ್ಲಿ ಬಿಗಿದುಕಟ್ಟಿದ್ದರು. ಸಾಗರದ ಅಲೆಗಳು, ವೇಗವಾಗಿ ಬಂದು ಇವನ ದೇಹವನ್ನು ಬಡಿಬಡಿದು ಸೀತವೇರಿ ಜರೆತುಹೋಗುವಂತೆ ಮಾಡುತ್ತಿದ್ದುವು.

ಗಂಗೆಯು ನೋಡಿದಳು ; ಸಹಿಸಲಾಗಲಿಲ್ಲ. ಪತಿಯಬಳಿಗೆ ಧಾವಿಸಿ ಬರುತ್ತಿದ್ದಳು. ಆದರೆ, ಅಷ್ಟರಲ್ಲಿಯೇ ಸುಪಂಥ-ಬಲವಂತರು, ತಾರಾಪತಿಯನ್ನು ಕಟ್ಟುಗಳೊಡನೆಯೇ ಸಾಗರದಲ್ಲಿ ಕೆಡಹಿದರು. ತಾರಾಪತಿರಾಯನು ಮುಳುಗಿ ತೇಲಾಡುತ್ತಿದ್ದನು. ಗಂಗೆಯು ಚೀರಿದಳು. ಯಶವಂತನು, ವಾಸುದೇವನನ್ನು ಕುರಿತು-'ನೀನಿನ್ನು ಇವಳನ್ನು ನಿನ್ನ ಇಷ್ಟಬಂದಲ್ಲಿಗೆ ಕರೆದೊಯ್ಯಬಹುದು.' ಎಂದು ಹೇಳಿ, ತಂದೆ-ತಮ್ಮಂದಿರ ಬಳಿ ಸಾರಿದನು. ವಾಸುದೇವನು, ಓಡಿಬಂದು ಗಂಗೆಯನ್ನು ಅಡ್ಡಗಟ್ಟಿ-'ಗಂಗೆ ! ಇನ್ನೇಕೆ ಅಲ್ಲಿಗೆ ಹೋಗುವೆ ? ನನ್ನೊಡನೆ ಹೊರಟು ಬಾ.' ಎಂದು ಕೈಹಿಡಿದನು.

ಗಂಗೆ——ಕ್ಲೇಶ-ರೋಷಗಳಿಂದ ಮೈಮರೆದು-ಕೈಬಿಡಿಸಿಕೊಂಡು, ಆರ್ತಸ್ವರದಿಂದ-'ಭಗವಂತ ! ಕಾಪಾಡು ! ಕಾಪಾಡು!! ಈ ದ್ರೋಹಿಗಳಿಂದ ನನ್ನನ್ನು ಪಾರುಮಾಡಿ ಕಾಪಾಡು !!!' ಎಂದು ಕೂಗಿದಳು. ಗಂಗೆಯ ಮಾತಿಗೆ ಉತ್ತರವಾಗಿ-'ಭಯವಿಲ್ಲ. ಕಾಪಾಡುವೆನು.' ಎಂಬದೊಂದು ಘನಗಂಭೀರಧ್ವನಿಯು ಹೊರಟು ನಾವೆಯನ್ನು ವೇಗದಿಂದ ಮುಳುಗಿಸಿಬಿಟ್ಟಿತು. ಆದರ ಮಹತ್ತರವಾದ ರಭಸದಿಂದ ಭೀತಳಾದ ಗಂಗೆಯು-'ಅಯ್ಯೋ ! ಅನಿಷ್ಟಸಂಘಟನೆ !' ಎಂದು ಕೂಗುತ್ತ ಕಣ್ದೆರೆದುಬಿಟ್ಟಳು.

|| ಶ್ರೀ ||

# ದ್ವಿತೀಯ ಪರಿಚ್ಛೇದ.

## (ಪರಿಷ್ಕರಣ.)

'ಅನಿಷ್ಟಸಂಘಟನೆ' ಎಂದು ಕೂಗಿ ಕಣ್ತೆರೆದ ಗಂಗೆಯು, ಭ್ರಾಂತಳಾಗಿ ಎದ್ದು ಕುಳಿತು, ಸುತ್ತಲೂ ನೋಡಿದಳು. ಸಾಗರವೂ ಇಲ್ಲ, ನಾವೆಯೂ ಇಲ್ಲ, ಸುಪಂಥಾದಿಗಳು ಮೊದಲೇ ಇರಲಿಲ್ಲ. ತಾನು ಮನೆಯಲ್ಲಿ ಹಾಸಿಗೆಯ ಮೇಲೆ ಮಲಗಿರುವೆನೆಂಬುದು ನಿರ್ಧರವಾಯಿತು. ಹೊತ್ತು, ಆಗಲೇ ಬೆಳಗಾಗುತ್ತಿದ್ದಿತು. ಭ್ರಾಂತಳಾಗಿ–'ಸ್ವಪ್ನ ! ಅಯ್ಯೋ ! ನಿಜವಾಗಿಯೂ ಇದು ಸ್ವಪ್ನ !! ಹೀಗಾಯಿತೇಕೆ ?' ಎಂದು ಕೂಗುತ್ತ ಧಿಗ್ಗನೆದ್ದು ನಿಂತಳು. ನಿಂತೊಡನೆಯೇ ಇವಳ ಸೀರೆಯ ಸೆರಗಿನಿಂದ ಮಡಿಸಿದ್ದ ಪತ್ರವೊಂದು ಕೆಳಗೆ ಬಿದ್ದಿತು. ಗಂಗೆಯು ಕುತೂಹಲದಿಂದ ಕೈಗೆತ್ತಿ ನೋಡಿದಳು ; ವಿಳಾಸವು ತನ್ನದಾಗಿಯೇ ಇದ್ದಿತು. ಅಕ್ಷರವು ಮಾತ್ರ ಯಾರದೆಂಬುದೇ ಗೊತ್ತಾಗಲಿಲ್ಲ. ಅಲ್ಲಿಯೇ ಕುಳಿತು, ಪತ್ರವನ್ನು ತೆರೆದು ನೋಡಿದಳು. ಪತ್ರದ ವಿಷಯವನ್ನು ನಮ್ಮ ಸೋದರಿಯರ ಅವಗಾಹನೆಗೆಂದು ಯಥಾವತ್ತಾಗಿ ವಿವರಿಸಿರುವೆವು.

## (ಪತ್ರ.)

'ಪತಿಯುಳಿದು ಹಿತರಿಲ್ಲ. ಪತಿಯುಳಿದು ಗತಿಯಿಲ್ಲ. ಪಾತಿವ್ರತ್ಯಕ್ಕೆಣೆಯಾದ ಭೂಷಣವೇ ಇರುವುದಿಲ್ಲ. ಇದು ಸುಳ್ಳಲ್ಲ.

ಪಾತಿವ್ರತ್ಯವೇ ನಮ್ಮ ಸತಿಯರ ಅನರ್ಘಾಭರಣವು. ಪತಿಸೇವೆಯೊಂದರಿಂದಲೇ ಇವರ ಜನ್ಮಸಾಫಲ್ಯವು. ಪತಿಯನ್ನು ಆಪದದಿಂದ ಪಾರುಮಾಡಬಲ್ಲವಳೇ ನಿಜವಾದ ಪತ್ನಿಯು. ಇದೇ ಸಿದ್ಧಾಂತವು. ಇದೇ ಸ್ತ್ರೀಧರ್ಮದ ರಹಸ್ಯಮಂತ್ರವು:

ಹೆತ್ತ ತಾಯಿತಂದೆಗಳು ಹೆಣ್ಣುಮಕ್ಕಳ ಲಾಲನೆ–ಪಾಲನೆಗಳಿಗೆ ಮಾತ್ರವೇ ಹಕ್ಕುದಾರರು. ಅವರ ಸಹವಾಸ–ಸಂಸರ್ಗವೇ ಮೊದಲಾದ ಸಮಸ್ತ ಭೋಗಾನುಭವಕ್ಕೂ, ಅವರ ಪತಿರಾಜರೇ ಬಾಧ್ಯರಾಗಿರುವರು. ಮರಣಾನತರವೂಂ ಈಸತಿಪತಿಯರ ಸಂಬಂಧ–ಬಾಧ್ಯತೆಗಳು ನಾಶವಾಗ ಲಾರವು. ಸತಿಯರ ಜೀವನಸರ್ವಸ್ವರಾದ ಪತಿರಾಜರಿಗೆ ಹಿತವರಾರಾ ರುಂಟೋ, ಅವರೆಲ್ಲರೂ–ಇವರಿಗೂ ಹಿತವರೆಂದು ತಿಳಿಯಬೇಕು. ಅವ ರನ್ನು ತಮ್ಮ ಕೇಣ–ಕವಡುಗಳಿಂದ ಹಿಂಸೆಪಡಿಸಬೇಕೆಂದು ಕೋರುವುದು ಸರಿಯಲ್ಲ. ಇದೆಲ್ಲಕ್ಕೂ ಸುಶಿಕ್ಷಾರೂಪವಾದ ವಿದ್ಯಾರ್ಜನೆಯೇ ಮೂಲಾ ಧಾರಸೂತ್ರವು. ಸುಶಿಕ್ಷೆಯಿಲ್ಲದ ವಿದ್ಯೆಯು, ಮನೋವಿಕಲ್ಪಕ್ಕೆ ಕಾರಣ ವಾಗಿ, ವಿಪರೀತ ಫಲವನ್ನೇ ಉಂಟುಮಾಡಬಹುದು. ಅದಿರಲಿ.

ತಾಯಿ ! ಸಕಲವನ್ನೂ ತಿಳಿದಿರುವ ನಿನಗೆ ಇದನ್ನು ನಾನು ಹೇಳ ಬೇಕಾದುದಿಲ್ಲ. ಆದರೂ ಪತ್ರವನ್ನು ಕಡೆಮುಟ್ಟುವವರೆಗೂ ತಾಳ್ಮೆ ಯಿಂದ ಓದಿ, ತಿಳಿಯಬೇಕೆಂಬುದೇ ನನ್ನ ಆಶಯವು. ಪ್ರಕೃತವಿಚಾರದಲ್ಲಿ ನಿನ್ನಿಂದ ಅವಶ್ಯಕವಾಗಿ ನಡೆಯಬೇಕಾದುದೊಂದುಂಟು. ಅದೇನೆಂದು ಕೇಳುವೆಯಲ್ಲವೆ? ಹಾಗಾದರೆ, ಬೆದರದೆ, ಬೇಸರಿಸದೆ, ಮನಮುಟ್ಟಿ ಕೇಳುವೆ.

ತಾಯೀ ! ನಿನ್ನ ಸ್ವಾಮಿಯು, ದ್ರೋಹಿಗಳ ಮಾಯಾಜಾಲಕ್ಕೆ ಸಿಕ್ಕಿ, ಉತ್ಕ್ರಮಣಾವಸ್ಥೆಯಲ್ಲಿರುವನು. ಈಗ ಆತನ ಸಮೀಪದಲ್ಲಿ ಹಿತೈ ಷಿಗಳಾರೂ ಕಾಣುತ್ತಿಲ್ಲ. ಪ್ರಾಣಾಪಾಯವಾಗದಂತೆ ಆತನನ್ನು ಸಂರ ಕ್ಷಿಸಿಕೊಳ್ಳಲು, ಲೋಕೋದ್ಧಾರಕರು ಅಹೋರಾತ್ರಿಯೂ ಕಣ್ದೆರೆದು ಕಾದಿರುತ್ತಿರುವರು. ಆದರೂ, ದ್ರೋಹಿಗಳ ಅತ್ಯಾಚಾರಗಳನ್ನು ಪ್ರತ್ಯ ಕ್ಷಪ್ರಮಾಣಗಳಿಂದ ಕಂಡುಹಿಡಿಸಲ್ಲದೆ, ನಿಮಗಾರಿಗೂ ಕಲ್ಯಾಣವಾಗು ವಂತಿಲ್ಲ. ಅವರಲ್ಲಿ ಒಬ್ಬರು ತಲೆತಪ್ಪಿಸಿಕೊಂಡರೂ, ನಿಮ್ಮ ಮಾನ–ಪ್ರಾಣ ಧನಗಳಿಗೆ ಆತಂಕವು ತಪ್ಪಿದುದಲ್ಲವೆಂಬುದು ದೃಢವಾಗಿರಲಿ. ಅವರಾರು ? ಎಲ್ಲಿ ? ಹೇಗೆಂಬುದನ್ನು ನಿನಗೆ ನಾವು ಬೇರೆ ಹೇಳಬೇಕಾಗಿಲ್ಲವಷ್ಟೆ.

ಮತ್ತೊಂದುವಿಚಾರ—ನಿನ್ನ ಸ್ವಾಮಿಯು ಜೀವಿತದಲ್ಲಿ ನಿನಗೆ ಅಭಿಲಾಷೆಯಿದ್ದರೆ, ಪತಿಯೇ ಜೀವನಸರ್ವಸ್ವನೆಂದು ನೀನು ನೆರೆನಂಬಿದ್ದರೆ ಪತಿಯ ಕ್ಷೇಮಾಭ್ಯುದಯಕ್ಕಾಗಿ ಸಿದ್ಧಳಾಗುವೆ.

"ಇತಿ—ಹಿತೈಷಿ."

ಪತ್ರಾವಲೋಕನದಿಂದ ಗಂಗೆಯ ಮನಸ್ಸ್ಥಿತಿಯು ಹೇಗಾಗಿ ತಿರುಗಿರಬಹುದೆಂಬುದನ್ನು, ನಮ್ಮ ರಮಣೀಪಾರಕರ ಕೋಮಲಹೃದಯವೇ ಭಾವಿಸಿ ತಿಳಿಯಬೇಕಲ್ಲದೆ, ವಿವರಿಸಬೇಕೆಂದರೆ ನಮಗಳವಲ್ಲ. ಹೇಗೂ ಗಂಗೆಯು ವೀರಾಸನದಲ್ಲಿ ಕುಳಿತು, ದೈನ್ಯಭಾವದಿಂದ ಕೈನೀಡಿ, ವಿಕೃತಕಂಠದಿಂದ-'ಭಗವಂತ! ಈ ದ್ರೋಹಿಯನ್ನುದ್ಧರಿಸಲಾರೆಯಾ? ಈ ಪಾಪಿಯ ದುರಭಿಮಾನದಿಂದ ಪ್ರಾಪ್ತವಾಗಿರುವ ಈ ವಿಪತ್ತನ್ನು ಪರಿಹರಿಸಲಾರೆಯಾ? ಕಟಾಕ್ಷಿಸು. ದಯಾಮಯ! ಅನುತಾಪಾಗ್ನಿಯಿಂದ ಸಂತಪಿಸುವ ಈ ದೀನಳನ್ನು ಕಟಾಕ್ಷಿಸು.'

ಹೀಗೆ ಹೇಳುತ್ತಿದ್ದಂತೆಯೇ ಮೈಮರೆತು, ನೆಲದಮೇಲೆ ಕವಿದು ಮಲಗಿದಳು. ಗಂಗೆಯು, ಕಾತರದಿಂದ ಕಂಗೆಟ್ಟು, ಮಲಗಿದ ಒಂದೆರಡು ನಿಮಿಷದಲ್ಲಿಯೇ ಮುಂಗಡೆಯಲ್ಲಿ ಕೋಮಲಕಂಠದಿಂದ 'ಕಾತರದಿಂದ ಕಾರ್ಯಸಿದ್ಧಿಯಾದೀತೇ? ಶಾಂತಿಯಿರಲಿ-ತಾಯಿ!' ಎಂಬ ವಾಕ್ಯವು ಹೊರಟಿತು. ಗಂಗೆಯು ಬೆದರಿ, ತಲೆಯೆತ್ತಿ ನೋಡಿದಳು; ತನ್ನ ಮುಂದೆ ವೀರಜನ ಯೋಗ್ಯವಾದ ಉಡುಪನ್ನು ಧರಿಸಿ ನಿಂತಿದ್ದ 13–14 ವರ್ಷದ ಕೋಮಲ ಬಾಲಕನನ್ನು ಕಂಡಳು; ಕುತೂಹಲದಿಂದ ಕೇಳಿದಳು. 'ಅಯ್ಯಾ! ನೀನಾರು? ಇಲ್ಲಿಗೇಕೆಬಂದೆ?'

ಬಾಲಕ—ನಾನು ಜಮಾದಾರ್ ವಾಸುದೇವರಾಯರ ಬಂಧು; ಅವರ ಕಡೆಯಿಂದ ನಿಮ್ಮಲ್ಲಿಗೆ ವರ್ತಮಾನವನ್ನು ತಂದಿರುವ ನಿಯೋಗಿ.

ಗಂಗೆ—ಎದ್ದುಕುಳಿತು ಶಠತೆಯಿಂದ 'ನಿಮ್ಮ ಜಮಾದಾರನಿಗೆ ನನ್ನಲ್ಲಿ ಕೆಲಸವೇನಿದೆ?'

ಬಾಲಕ—ಜಮೀನ್ದಾರರು ಕಳ್ಳರ ಕೈಗೆ ಸಿಕ್ಕಿರುವರೆಂದೂ, ಅವರನ್ನು ಬಿಡಿಸಿಕೊಂಡು ಬರಲು, ಯಶವಂತರಾಯನೊಡನೆ ತಾವು ಹೊರಟಿರುವೆವೆಂದೂ ನಿಮ್ಮಲ್ಲಿ ಹೇಳಿ, ಮನೆಯಕಡೆ ಗಮನವಿರಬೇಕೆಂದೂ, ಚಿಂತಿಸಬೇಕಾದುದಿಲ್ಲವೆಂದೂ ಎಚ್ಚರಿಸಿ ಬರುವಂತೆ ನನಗೆ ಕಟ್ಟು ಮಾಡಿರುವರು.

ಗಂಗೆ—ಖತಿಯಿಂದ ನಿಟ್ಟುಸಿರಿಟ್ಟು-‘ ಅಪ್ಪ! ನಿಮ್ಮ ಕೊಬ್ಬಿದ ಜಮಾದಾರನಿಗೆ ನನ್ನ ವಂದನೆಗಳಿರಲಿ. ಅವನ ದುರಾಶೆಯು ಕಲ್ಪಾಂತರಕ್ಕೂ ಫಲಕಾರಿಯಲ್ಲವೆಂದು ಚೆನ್ನಾಗಿ ತಿಳಿಯಲಿ. ಆತನ ದುರಾಚಾರ ರೋಗಕ್ಕೆ ತಕ್ಕ ಚಿಕಿತ್ಸೆಯೂ ಜಾಗ್ರತೆಯಾಗಿ ನಡೆಯಿಸಲ್ಪಡುವುದೆಂಬುದನ್ನು ತಿಳಿದು ಎಚ್ಚೆತ್ತಿರಲಿ. ನನಗೆ ಚಿಂತೆಗೆ ಕಾರಣವಿಲ್ಲ. ಸ್ವಾಮಿದ್ರೋಹಿಗಳಿಬ್ಬರೂ ಹೊರಟಾಗಲೇ, ಜಮೀನ್ದಾರರ ಜೀವಿತಾಶೆಯು ಕೊನೆಗಂಡಿರಬಹುದೆಂದು ಗುಣಿಸುತ್ತಿರುವ ನನ್ನಲ್ಲಿ ಮತ್ತಾವಚಿಂತೆಗೂ ಎಡೆಯಿರುವುದಿಲ್ಲ. ಸತ್ಯ-ಧರ್ಮಗಳಿಗೆ ಜಯವು ನಿತ್ಯವಾಗಿರುವ ಪಕ್ಷದಲ್ಲಿ, ಜಮೀನ್ದಾರರ ಸತ್ಯಸಂಧತೆಯೇ ಅವರನ್ನು ಕಾಪಾಡುವುದೆಂದು ನಾನು ನಂಬಿರುವೆನು. ಇನ್ನು ಹೊರಟುಹೋಗು.’ ಹೀಗೆ ಹೇಳುತ್ತಿದ್ದಂತೆಯೇ ಗಂಗೆಯು ಸ್ಮೃತಿತಪ್ಪಿ ಕೆಳಗೆ ಬಿದ್ದಳು. ಬಾಲಕನು ಅನುಕಂಪದಿಂದ ಗಂಗೆಗೆ ಶೈತ್ಯೋಪಚಾರ ಮಾಡುತ್ತ-‘ ತಾಯಿ! ಕಳವಳಿಸಬಾರದು. ನಾನು ನಿನಗೆ ಅಹಿತನಾಗಿ ಬಂದಿಲ್ಲ. ನಿನ್ನ ಕಲ್ಯಾಣಾಕಾಂಕ್ಷಿಯಾಗಿ ಬಂದಿರುವ ನನ್ನನ್ನು ನಿನ್ನ ಚಿರಂಜೀವಿಯೆಂದೇ, ತಿಳಿದು, ಸಮಾಧಾನವನ್ನು ಹೊಂದಬೇಕು. ಹೀಗಿರಲಾಗದು.’

ಗಂಗೆ—ವಿಸ್ಮಯ-ಕುತೂಹಲಗಳಿಂದ ನೋಡುತ್ತ-‘ ಅಪ್ಪ! ನೀನಾರಕಡೆಯವನೋ, ನಿನ್ನ ಹೆಸರೇನೋ, ಯಾವ ಕಾರ್ಯಕ್ಕೆಂದು ಬಂದಿರುವೆಯೋ ನನಗದೊಂದೂ ತಿಳಿಯದು. ಆದರೂ ನಿನ್ನಲ್ಲಿ ನನಗೆ ಒಂದು ಬಗೆಯಾದ ವಿಶ್ವಾಸವುಂಟಾಗಿರುವುದು. ಕಾರಣವೇನು ?

ಬಾಲಕ—ತಾಯಿ ! ಇದೇ ಭಗವನ್ಮಾಯೆ ! ಇದೇ ಮನೋಶಕ್ತಿಯ ಸ್ವಭಾವವು. ಹೀಗಾಗಬೇಕಾದುದೇ ಸಹಜಧರ್ಮವು. ಸರ್ಕಾರದ ಕಡೆಯ ಪತ್ತೇದಾರನೇ ನಾನು. ನನ್ನ ಹೆಸರು ಕೃತಾಂತನೆಂದು. ಅದಿರಲಿ; ಪತ್ರವನ್ನು ಚೆನ್ನಾಗಿ ನೋಡಿದೆಯಲ್ಲವೆ ?

ಗಂಗೆ—ನೋಡಿದುದು ಮಾತ್ರವಲ್ಲ, ಮನಸ್ಸೂ ಪರಿಷ್ಕೃತವಾಗಿದೆಯೆಂದು ಹೇಳಬಹುದು. ಸುಕುಮಾರ ! ನೀನು ಬಂದುದಾವಾಗ ? ಪತ್ರ ವನ್ನು ಹೇಗೆ ತಲಪಿಸಿದೆ ? ನಿನಗೆ ನಿಜಾಂಶವು ಗೊತ್ತಿದೆಯೇ ?

ಕೃತಾಂತ (ಬಾಲಕ)—ನಾನು ಬಂದುದು, ನಿನ್ನೆಯ ರಾತ್ರಿಯಲ್ಲಿ. ಪತ್ರವ ನ್ನು ಮುಟ್ಟಿಸಿದುದೂ ಕಿಟಿಕಿಯ ಕಡೆಯಿಂದ. ನನ್ನ ಪ್ರವೇಶಕ್ಕೆ ಅವಕಾಶವಾದರೂ, ಚೋರಮಾರ್ಗದಿಂದ ಹೊರಟುಹೋದ ಯಶ ವಂತನ ಅಜಾಗರೂಕತೆಯೆಂದರೆ ಸಾಕು. ನನಗೆ ನಿಜಾಂಶವು ಆಮೂಲಾಗ್ರವಾಗಿ ಗೊತ್ತಾಗಿದೆ.

ಗಂಗೆ—ಹಾಗಾದರೆ, ನೀನು ಈ ವರೆಗೂ ಇದ್ದುದೆಲ್ಲಿ ? ಮಾಡುತ್ತಿದ್ದು ದೇನು ?

ಕೃತಾಂತ—ಕಿರುಮನೆಯ ಗೋಡೆಯ ಮರೆಯಲ್ಲಿದ್ದು, ನೀನು ಹೇಳಿ ಮಾಡಿದುದೆಲ್ಲವನ್ನೂ ಕೇಳಿ ನೋಡುತ್ತಿದ್ದೆನು.

ಗಂಗೆ—ಆತುರದಿಂದ–' ಆದರೆ, ನನ್ನ ಅಂತಸ್ತಾಪದ ಮೂಲವನ್ನು ತಿಳಿ ದೆಯಾ ? '

ಕೃತಾಂತ—ಮೊದಲು ಸಂಶಯಿಸಿದ್ದೆನು; ಆದರೆ, ಈಗ ನಿರ್ಧರವಾಗಿ ತಿಳಿ ದುಬಂದಿದೆ.

ಗಂಗೆ—ವಿಕೃತಸ್ವರದಿಂದ–' ಸುಕುಮಾರ ! ನನ್ನ ಆಲಸ್ಯ–ಉದಾಸೀನಗಳೇ ಇಷ್ಟು ಅನರ್ಥಗಳಿಗೂ ಕಾರಣವೆಂದು ನನಗೆ ಬೋಧೆಯಾಗುತ್ತಿದೆ. ಇದಕ್ಕಾಗಿ ನಾನು ತಕ್ಕ ಪ್ರಾಯಶ್ಚಿತ್ತವನ್ನು ಸ್ವಲ್ಪಾವಧಿಯಲ್ಲಿ ಯೇ ಮಾಡಿಕೊಳ್ಳಬೇಕಾಗಿದೆ. ಈವರೆಗೂ ನಾನು ಯಾರನ್ನು

ಕೇವಲ ದೇಹಾಭಿಮಾನದಿಂದ ಆಪ್ತವರ್ಗದಲ್ಲಿ ಗಣಿಸುತಿದ್ದೆನೋ, ಯಾರ ಮೇಲಣ ವಿಶ್ವಾಸಕ್ಕಾಗಿ ನಾನು, ಈವರೆಗೂ ಕಂಡೂ ಕಾಣದಂತಿದ್ದು, ಇಷ್ಟರ ಅನಿಷ್ಟವನ್ನುಂಟುಮಾಡಲು ಹೇತುವಾದೆನೋ ಅಂತಹರನ್ನೇ ಈಗ ನಾನು ನನ್ನ ಪ್ರಬಲಶತ್ರುಗಳಂತೆ ದ್ವೇಷಿಸುತ್ತಿರುವೆನು. ಇಂತಹರಲ್ಲಿ ಇನ್ನು ಕನಿಕರವೆಂಬುದು ನನ್ನ ಕನಸಿನಲ್ಲಿಯೂ ಬಳಿಸಾರುವಂತಿಲ್ಲ. ಇನ್ನೇನು ಹೇಳಲಿ ? ನನಗೆ ಈಗ ಬೇಕಾದುದು ಪತಿಯ ಕ್ಷೇಮವೊಂದೇ ! ಇದಕ್ಕಾಗಿ ನಾನು ನನ್ನ ಪ್ರಾಣವನ್ನಾದರೂ ಸಂತೋಷದಿಂದ ಸಮರ್ಪಿಸುವೆನು. ನನ್ನಿಂದ ಮಾಡಬೇಕಾದುದೇನಿದ್ದರೂ ವಿಳಂಬಿಸದೆ, ಹಿಂದೆಗೆಯದೆ ಕಟ್ಟುಮಾಡು.

ಕೃತಾಂತ—ಆನಂದೋದ್ರೇಕದಿಂದ ಗಂಗೆಯನ್ನೇ ನೋಡುತ್ತ–'ತಾಯೀ ! ಆತುರಪಡಬಾರದು. ನಿನ್ನ ಸ್ವಾಮಿಯ ಬಿಡುಗಡೆಗೆ ನೀನು ಮಾಡಬೇಕಾದ ಕಾರ್ಯವು ಬಹು ಪ್ರಯಾಸಕರವಾದುದು. ಇದನ್ನು ನಿರ್ವಹಿಸಬೇಕಾದರೆ, ನಿನ್ನಲ್ಲಿ ಅಧಿಕ ಸಾಹಸವೂ, ದೃಢಪ್ರತಿಜ್ಞೆಯೂ, ಶ್ರಮಸಹಿಷ್ಣುತೆಯೂ ಇರಬೇಕು.

ಗಂಗೆ—ಉನ್ಮಾದಿನಿಯಂತೆ ಥಿಗ್ಗನೆದ್ದುನಿಂತು—‹ ಮಗು, ಕೃತಾಂತ ! ನನ್ನನ್ನು ಸಾಮಾನ್ಯಸ್ತ್ರೀಯೆಂದು ಭಾವಿಸಿದೆಯೇನು ? ಅಭಿಮಾನ, ಆಲಸ್ಯಾದಿಗಳಿಂದ ಈವರೆಗೂ ಜಡಳಾಗಿದ್ದ ನಾನು ಈಗ ಕರ್ತವ್ಯನಿಷ್ಠೆಯೊಂದನ್ನೇ ಹಿಡಿದಿರುವೆನು. ನನ್ನಲ್ಲಿ ಈಗ ಅಬಲಾಸ್ವಭಾವದ ಮಾರ್ದವವೆಳ್ಳಷ್ಟೂ ಉಳಿದಿರುವುದಿಲ್ಲ. ಕೇವಲ ಕ್ಲೇಶ-ರೋಷಗಳ ನಿಷ್ಠುರತೆಯೊಂದೇ ನನ್ನ ಸಮಸ್ತ ರೋಮಕೂಪದಲ್ಲಿಯೂ ಅಗ್ನಿಕಣದಂತೆ ಜ್ವಲಿಸುತ್ತಿದೆ. ಈಗ ನನ್ನನ್ನು ಪ್ರತ್ಯಕ್ಷದಾನವಿಯೆಂದು ಹೇಳಿದರೂ ತಪ್ಪಾಗುವಂತಿಲ್ಲ. ನಿನಗಿನ್ನು ಸಂದೇಹವು ಸಾಕು. ಇದೊ ನಾನು ಈಗಲೇ ಸಿದ್ಧಳಾಗಿರುವೆನು.

ಹೊರಡು ; ಎಲ್ಲಿಗೆ-ಯಾವ ಕಾರ್ಯಕ್ಕೆ ನಿಯೋಗಿಸುವೆಯೋ, ನಿಯೋಜಿಸು. ವಿಳಂಬಿಸುವೆಯೇಕೆ ? '

ಕೃತಾಂತ—ವಿಸ್ಮಯದಿಂದ ತಲೆದೂಗಿ, ಗಂಗೆಯ ಮುಖವನ್ನೇ ನೋಡುತ್ತ-' ತಾಯಿ ! ನಿನ್ನ ಘನಮನಸ್ಸ್ಥೈರ್ಯ-ದೃಢಪ್ರತಿಜ್ಞೆಗಳು ಸಿದ್ಧಿಹೊಂದದಿರಲಾರವೆಂದು ನನಗೆ ಭರವಸೆಯುಂಟಾಗಿದೆ. ಭಗವಂತನೇ ಇದಕ್ಕೆ ಸಾಕ್ಷಿಯಾಗಿದ್ದು ಕೈಕೂಡಿಸಲಿ ! ನಾನು ಮುಂದಿನ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡು, ಒಂದೆರಡು ಗಂಟೆಯಲ್ಲಿಯೇ ಬರುವೆನು. ಅಷ್ಟರಲ್ಲಿಯೇ ನೀನು, ನಿಮ್ಮ ಅತ್ತೆಗೆ ಈ ವಿಚಾರವನ್ನು ಹೀಗೆಂದು ಹೇಳದೆ, ಮತ್ತೆ ಬೇರೆ ಕಾರಣಗಳನ್ನು ಹೇಳಿ, ಪಯಣಕ್ಕೆ ಸಿದ್ಧವಾಗಿರಬೇಕು.' ಎಂದು ಹೇಳಿ, ಹೊರಟು ಹೋದನು. ಗಂಗೆಯು ಪಯಣದ ಸಿದ್ಧತೆಗಾಗಿ ಉಪ್ಪರಿಗೆಯಿಂದಿಳಿದು, ಅತ್ತೆಯಬಳಿಗೆ ಹೊರಟುಹೋದಳು. (ಗಂಗೆಯ ಮನಸ್ಸು, ಹೇಗೆ ಪರಿಷ್ಕೃತವಾಯಿತೆಂಬುದನ್ನು ವಿಚಾರಮಾಡಿ ತಿಳಿದಬಳಿಕಿನ್ನಾದರೂ, ಗಂಗೆಯಂತಿರುವ ನಮ್ಮ ಸೋದರೀವರ್ಗದ ಅಭಿಮಾನಾವೃತಚಿತ್ತವೂ ಪರಿಷ್ಕೃತವಾದೀತೆಂದು ನಂಬಿ ನಿರೀಕ್ಷಿಸುವೆವು.)

## ತೃತೀಯ ಪರಿಚ್ಛೇದ.

### (ದಿಗ್ಬಂಧನ)

'ಬಿಸಿಲೇರಿಬರುತ್ತಿದೆ. ಇನ್ನು ಹೊರಡುವುದಾವಾಗ ? ಆ ಹುಡುಗನು ಇಷ್ಟುಹೊತ್ತಾದರೂ ಬರಲಿಲ್ಲವೇಕೆ ?' ಹೀಗೆಂದು ಚಿಂತಿಸುತ್ತಿದ್ದ ಗಂಗೆಯು, ಬೀದಿಯ ಮುಂಗಡೆ ಅಂಗಳದಲ್ಲಿಯೇ ಕುಳಿತು, ಕೃತಾಂತನ ಆಗಮನ ನಿರೀಕ್ಷೆಯಲ್ಲಿದ್ದಳು. ಮನೋವ್ಯಾಕುಲದಿಂದ ಇವಳ ಮುಖವು ಕಂದಿ,

ಕುಂದಿದ್ದಿತು. ಅಡಿಗಡಿಗೂ ಅಂತಸ್ತಾಪದಿಂದ ನಿಟ್ಟುಸಿರು ತಾನೇತಾನಾಗಿ ಹೊರಹೊರಡುತ್ತಿದ್ದಿತು. ಇವಳ ಬಳಿಯಲ್ಲಿ ಮತ್ತಾರೂ ಇರಲಿಲ್ಲ.

ಗಂಗೆಯ ನಿರೀಕ್ಷೆಯಂತೆ ಅತ್ಯಲ್ಪಾವಧಿಯಲ್ಲಿಯೇ ಕೃತಾಂತನು, ದ್ವಿಚಕ್ರ (Bicycle) ವಾಹಕನಾಗಿ ಬಂದಿಳಿದು, ಮುಖದಲ್ಲಿ ಸುರಿಯುತ್ತಿದ್ದ ಬೆವರನ್ನು ಕರವಸ್ತ್ರದಿಂದೊರಸಿಕೊಳ್ಳುತ್ತ, ಗಂಗೆಯಮುಂದೆ ಕುಳಿತನು.

ಗಂಗೆ—ಅಣ್ಣಾ! ನೀನು ಬರುವುದು ಇಷ್ಟು ಹೊತ್ತಾದುದರಿಂದ, ನನ್ನ ಮನಸ್ಸು ತಲ್ಲಣಿಸುತ್ತಿದ್ದಿತು.

ಕೃತಾಂತ—ಬೇಗ ಬರಬೇಕೆಂದೇ ಹೋಗಿದ್ದೆನು; ಆದರೆ, ನಮ್ಮ ಪ್ರಯಾಣಕ್ಕೆ ಬೇಕಾಗುವ ಸಾಧನಗಳನ್ನೂ, ಇಲ್ಲಿ ಮುಂದೆ ಮಾಡಬೇಕಾದ ಕಾರ್ಯಗಳಿಗೆ ತಕ್ಕ ಏರ್ಪಾಟನ್ನೂ ಕ್ರಮಪಡಿಸಿಕೊಂಡು ಬರುವುದರಲ್ಲಿ ವಿಳಂಬವಾಯಿತು ಪ್ರಯಾಣಕ್ಕಭ್ಯಂತರವಿಲ್ಲವಷ್ಟೆ?

ಗಂಗೆ—ಅಭ್ಯಂತರವೇನೂ ಇಲ್ಲ. 'ಮಾತುಲನು ಮೃತ್ಯುಶಯ್ಯೆಯಲ್ಲಿರುವುದರಿಂದ ನೋಡಿ ನಾಳೆಯೇ ಬರುವೆನೆಂದು,' ಅತ್ತೆಯವರಿಂದ ಅಪ್ಪಣೆ ಹೊಂದಿದೆನು. ಇನ್ನು ಹೊರಡುವುದೊಂದೇ ತಡೆ.

ಇಷ್ಟರಲ್ಲಿಯೇ ಹತ್ತು-ಹನ್ನೆರಡುಮಂದಿ ಪೋಲೀಸರು, ಎರಡು ಕದುರೆಬಂಡಿಗಳೊಡನೆ ಬಂದು ಸೇರಿದರು ಕೃತಾಂತನು ಗಂಗೆಯನ್ನು ಕುರಿತು-'ತಾಯಿ! ಇನ್ನು ಜಾಗ್ರತೆಯಾಗಿ ಬಂಡಿಯನ್ನೇರಬೇಕು. ಬಂಡಿಯಾಳು ನಮ್ಮವನು; ಯೋಗ್ಯನಾದವನು. ಯಾವ ಸಂಶಯವೂ ಇಲ್ಲದೆ ಬಂಡಿಯಲ್ಲಿ ಕುಳಿತು ಹೊರಡಬಹುದು. ನಾನು ಇಲ್ಲಿ ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ಮಾಡಿ, ಮುಂದೆ ಬೇಕಾಗುವ ಸಲಕರಣೆಗಳೊಡನೆ ನಿನ್ನ ಹಿಂದೆಯೇ ಬಂದು ಸೇರುವೆನು.'

ಗಂಗೆಯು ಧಿಗ್ಗನೆದ್ದುಹೋಗಿ ಅತ್ತೆಯ ಪಾದಗಳಿಗೆರಗಿ, ಹೊರಡುವೆನೆಂದು ಹೇಳಿ, ಅವಸರದಿಂದ ಬಂದು ಬಂಡಿಯನ್ನೇರಿದಳು. ಕೃತಾಂತನ ಅನುಮತಿಯಿಂದ ಬಂಡಿಯ ಜತೆಯಲ್ಲಿ ನಾಲ್ವರು ಪೋಲೀಸರು ಜಾಗರೂಕತೆಯಿಂದ ನಡೆದರು.

ಚಂದ್ರಮತಿಯು, ಸೊಸೆಯು ಹೊರಡುವುದನ್ನು ನೋಡಬೇಕೆಂದು ಆತುರದಿಂದ ಬಂದು ಬಾಗಲಬಳಿ ನಿಂತಳು. ಅಷ್ಟರಲ್ಲಿ ಗಂಗೆಯು ಕುಳಿತಿದ್ದ ಬಂಡಿಯು ಹೊರಟುಹೋಗಿದ್ದಿತು. ಮನೆಯಮುಂಗಡೆಯಲ್ಲಿ ಮತ್ತೊಂದು ಬಂಡಿಯೂ ಪೋಲೀಸರೂ ನಿಂತಿದ್ದುದನ್ನೂ, ಕೃತಾಂತನು ಅವರಿಗೆ ಕಾರ್ಯಕ್ರಮವನ್ನು ತಿಳಿಸುತ್ತಿದ್ದುದನ್ನೂ ಕಂಡು ಭ್ರಾಂತಳಾಗಿ,-ತೊದಲುನಾಲಿಗೆಯಿಂದ ಕೇಳಿದಳು,-'ಯಾರಪ್ಪ, ನೀವು ? ಇಲ್ಲಿಗೇಕೆ ಬಂದಿರುವಿರಿ ?'

ಕೃತಾಂತ—'ಅಮ್ಮಾಯಿ ! ನಾವು ಸರ್ಕಾರದ ಕಡೆಯುವರು. ತಮ್ಮ ಮಕ್ಕಳು, ರಾಜಕಾರ್ಯಗೌರವದಲ್ಲಿರುವುದರಿಂದ, ಇನ್ನೂ ಒಂದೆರಡು ವಾರಗಳವರೆಗೆ ಒರುವುದಿಲ್ಲ. ಆವರೆಗೂ ಈ ಮನೆಯು ಸರ್ಕಾರದವರ ವಿಚಾರಣೆಗೆ ಒಳಪಟ್ಟಿರಬೇಕಾಗಿದೆ. ನಿಮ್ಮ ಸಾಮಗ್ರಿಗಳೊಡನೆ ನಿಮ್ಮನ್ನು ಬೇರೆ ಸ್ಥಳದಲ್ಲಿ ಬಿಡಬೇಕಾಗಿದೆ. ವಿಳಂಬಿಸದೆ ನಿಮ್ಮ ದೇವರು-ಕೈಪೆಟ್ಟಿಗೆ ಮೊದಲಾದುವುಗಳೊಡನೆ ಬಂಡಿಯಲ್ಲಿ ಕುಳಿತುಕೊಳ್ಳಬೇಕು. ತ್ವರೆಮಾಡಿರಿ. ಹೆಚ್ಚುಹೊತ್ತು ತಡೆಯುವಂತಿಲ್ಲ.

ಚಂದ್ರಮತಿ—ಭಯದಿಂದ-'ಹಾ ! ಹಾಗೆಂದರೇನು ? ಮಗನೂ, ಮಕ್ಕಳೂ ಸೌಖ್ಯವಾಗಿದ್ದಾರೆಯೋ-ಇಲ್ಲವೊ ? ಬೇಗ ಹೇಳು. ನಾನು ಇನ್ನೆಲ್ಲಿಗೆ ಹೋಗಬೇಕು ?'

ಕೃತಾಂತ—ಚಿಂತಿಸಬಾರದು. ಎಲ್ಲರೂ ಸೌಖ್ಯವಾಗಿರುತ್ತಾರೆ. ನೀವು ಇನ್ನು ಸ್ವಲ್ಪಕಾಲ, ರಾವ್‌ಬಹದೂರ್ ರಾಧಾನಾಥರಾಯರ ಮನೆಯಲ್ಲಿ ಸುಕನ್ಯಾದೇವಿಯ ಉಪಚಾರವನ್ನು ಕೈಕೊಳ್ಳುತ್ತಿರಬೇಕು. ಇಲ್ಲಿರಲಾಗದು.

ಚಂದ್ರಮತಿಯು, ಬಗೆಗೆಟ್ಟು ಸಂದೇಹದಿಂದ ಕುದಿಯುತ್ತ, ಸಾಮಗ್ರಿಗಳೊಡನೆ ಬಂದು ಬಂಡಿಯಲ್ಲಿ ಕುಳಿತಳು. ಕೃತಾಂತನು ಪೊಲೀಸರ ಸಹಾಯದಿಂದ ಮನೆಯೊಳಹೊಕ್ಕು ಒಳಗಿದ್ದವರೆಲ್ಲರಿಗೂ ಕೈ

ಬೇಡಿಗಳನ್ನು ಹಾಕಿಸಿ, ಕರೆತಂದು ಬಂಡಿಯಬಳಿಯಲ್ಲಿ ನಿಲ್ಲಿಸಿದುದದೆಲ್ಲ, ಮನೆಯ ಪ್ರತಿಯೊಂದು ಬಾಗಿಲುಗಳಿಗೂ ಬೀಗಮುದ್ರೆಗಳಿಂದ ಭದ್ರ ಪಡಿಸಿ ಬಂದು, ಬಂಡಿಯ ಬಳಿಯಲ್ಲಿ ನಿಂತನು.

ಚಂದ್ರಮತಿ—ಭಯದಿಂದ ನಡುಗುತ್ತ–'ಅಪ್ಪ ! ಇದೇನಿದು ? ಇವರಿಗೆ ಬೇಡಿ ?'

ಕೃತಾಂತ—ಅಮ್ಮಾಯಿ ! ಹೀಗೇಕೆ ನಡುಗುವಿರಿ ? ಇವರು ಸ್ವಾಮಿ ದ್ರೋಹಪಾತಕಕ್ಕೆ ಅನುಭವವೇನೆಂಬುದನ್ನು ಇನ್ನು ಮುಂದೆ ನೋಡಬೇಕು. ಅದಕ್ಕಿದೇ ತಳಪಾಯವಾಗಿದೆ.

ಚಂದ್ರಮತಿ—ನಾನೂ ಸೆರೆಯಾಗಿರುತ್ತೇನೆಯೇ ?

ಕೃತಾಂತ—ಹಾಗೆಂದಿಗೂ ಯೋಚಿಸಬಾರದು. ತಾವು ನಮಗೆ ಪೂಜ್ಯರಾಗಿರುವಿರಿ.

ಚಂದ್ರಮತಿ—ಅಪ್ಪ ! ಹೇಗಾದರೂ ಮಾಡು ; ಏನನ್ನಾದರೂ ಹೇಳು. ನಾನು ಈವರೆಗೂ ಯಾರಿಗೂ ಸೋತಿರಲಿಲ್ಲ. ಈಗ ನಿನ್ನ ಪ್ರತಿಯೊಂದು ನಡೆ–ನುಡಿ–ಕೆಲಸಗಳಿಗೂ ನಡುಗುತ್ತಿರುವೆನು. ನನಗೆ ದಿಕ್ಕೇ ತೋರದಂತಿದೆ. ನಮ್ಮವರ ವಿಚಾರವೇನಾಗಿದೆಯೋ ?

ಕೃತಾಂತ—ಅಮ್ಮಾಯಿ ! ಸತ್ಯವಾಗಿಯೂ ಹೇಳುವೆನು. ನಿಮ್ಮವರೆಲ್ಲರೂ ಸುರಕ್ಷಿತರಾಗಿರುತ್ತಾರೆ. ನೀವೂ ಕೆಲವುದಿನಗಳವರೆಗೆ ಸುಕನ್ಯಾದೇವಿಯ ಬಳಿಯಲ್ಲಿರಬೇಕಾಗಿದೆ. ಈಗ ವಿಶೇಷವಿವರಣೆಗೆ ವೇಳೆಯಿಲ್ಲ. ಮುಂದೆ ತಿಳಿಯಲಾದೀತು. ಧೈರ್ಯವಾಗಿರಿ.

ಚಂದ್ರಮತಿಯು ಸುಮ್ಮನಾದಳು. ಕೃತಾಂತನು ಮೊದಲಿನಂತೆಯೇ ಎರಡುಚಕ್ರದ ಬಂಡಿ (ದ್ವಿಚಕ್ರ–Cycle) ಯನ್ನೇರಿ ಮನೆಯ ಕಾವಲಿಗಾಗಿ ಇಬ್ಬರು ಪೋಲೀಸರನ್ನು ನಿಲ್ಲಿಸಿ, ಉಳಿದವರೊಡನೆ ಹೊರ ಹೊರಟನು. (ಕೃತಾಂತನು ಮನೆಗೆ ಮಾಡಿದ ದಿಗ್ಬಂಧನದಿಂದ ಮನೆಯಲ್ಲಿದ್ದವರ ವಾಗ್ವಾದಕ್ಕೂ ಪ್ರಬಲ ಬಂಧನವೇ ಆದಂತೆ ತೋರುವುದಲ್ಲವೆ ! ಇರಲಿ.)

|| ಶ್ರೀ ||

# ಚತುರ್ಥ ಪರಿಚ್ಛೇದ.

(ಭಯಪ್ರದರ್ಶನ.)

ಇದು ಗೊಲ್ಲರಪಾಳ್ಯದ ಸತ್ರವನ್ನು ನೋಡಿದರೆ, ವಿಶೇಷವೇನೋ ನಡೆಯುವಂತೆ ತೋರುತ್ತಿದೆ. ಸತ್ರದ ಸುತ್ತಲ ಬೈಲುನೆಲವು, ಸುಮಾರು ಅರ್ಧಮೈಲಿಗಳವರೆಗೆ ಕಲ್ಲು-ಮುಳ್ಳು-ಗರಿಕೆಗಳಿಗೂ ಅವಕಾಶವಿಲ್ಲದಂತೆ ಅಗೆದು ಸರಿ ಮಾಡಲ್ಪಟ್ಟಿದೆ. ಸತ್ರದ ಒಳಗಡೆಯಲ್ಲಿಯೂ ಹೀಗೆಯೇ ಚೊಕ್ಕಟವಾಗಿ ಕಾಣುತ್ತಿದೆ. ಆದರೆ, ಹೊರಗೆ ಒಬ್ಬ ಆಳು ತೂಕಡಿಸುತ್ತಿರುವನಲ್ಲದೆ ಮತ್ತಾರೂ ಕಾಣುತ್ತಿಲ್ಲ. ಹೀಗಿರಲು ಕಾರಣವೇನು ? ಸತ್ರವು ಅಷ್ಟೇನೂ ದೊಡ್ಡದಲ್ಲ. ಸುಮಾರು ಇನ್ನೂರುಮಂದಿಗಳು ಕುಳ್ಳಿರಬಹುದಾದಷ್ಟು ವಿಶಾಲವುಳ್ಳ ಒಂದೇ ಒಂದು ತೊಟ್ಟಿಯೂ, ಸುತ್ತಲೂ ನಾಲ್ಕಾರು ಕಿರುಮನೆಗಳೂ ಇರುವುವಲ್ಲದೆ ಮತ್ತೇನೂ ಇಲ್ಲ. ಇಷ್ಟು ಚಿಕ್ಕ ಸತ್ರದಲ್ಲಿ ದೀಪಕ್ಕೂ ಅಭಾವವಾಗಿ ಅಲ್ಲಲ್ಲಿ ಒಂದೆರಡು ಸಣ್ಣಸಣ್ಣ ಸೊಡರುಗಳು ಮಿನುಗುತ್ತಿವೆ. ಪ್ರತಿಯೊಂದು ಬಾಗಲಲ್ಲಿಯೂ ತಳಿರುತೋರಣವು ಮಾತ್ರ ನಳನಳಿಸುವಂತಿದೆ. ಉಳಿದುದು ಹೇಗಾದರೂ ಇರಲಿ. ಒಳಗೇನಿರುವುದೆಂಬುದನ್ನು ನೋಡಿದರೆ ಸಾಕು.

ಕೆಲಸಕ್ಕೆ ಬಾರದ ಸತ್ರದ ಸುದ್ದಿ ನಮಗೇಕೆಂದು ಬೇಸರಿಸಬೇಡಿರಿ; ಸುಹೃದರೇ ! ಮೆಲ್ಲನೆ ಒಳಹೊಕ್ಕು ನೋಡಿರಿ. ಎಡಗಡೆಯ ಕಿರುಮನೆಯೊಳಗೆ ದೀಪವುರಿಯುತ್ತಿರುವುದಲ್ಲವೇ ? ಒಳಗೆ ಯಾರಿರುವರೆಂಬುದನ್ನು ತಿಳಿಯಿರಿ. ಮಂಚದಮೇಲೆ ಯಾರೋ ಮಲಗಿರುವರಲ್ಲವೇ ? ಅಹುದು. ಮಲಗಿರುವವರು ಮತ್ತಾರೂ ಅಲ್ಲ ; ಜಮೀನ್ದಾರ್ ತಾರಾಪತಿ ! ಹಾ !

ಹಾಗೆಂದರೇನು ? ಅಹುದು. ತಾರಾಪತಿರಾಯನೇ ಮಲಗಿರುವನು. ದುರ್ಗಾಪುರಕ್ಕೆಂದು ಹೊರಟವನು ಇಲ್ಲಿ ಒಬ್ಬನೇ ಮಲಗಿರುವನೇಕೆ ? ಇಲ್ಲಿ ಇವನ ಸಂಗಡಿಗರಿನ್ನಾರಿರುವರು ? ಹೋ ! ಇದೇನೋ ವಿಪರೀತವಾಗಿದೆ. ತಾರಾಪತಿಯು ಬೆನ್ನು-ಹಣೆ-ಕಾಲುಗಳಿಗೆಲ್ಲಕ್ಕೂ ಬಟ್ಟೆಗಳನ್ನು ಕಟ್ಟಿರುವುದೇಕೆ ? ಅಡಿಗಡಿಗೂ ಈ ಯಾತನಾಸ್ವರವು ಹೊರಡುತ್ತಿರುವುದೇತರಿಂದ ? ಕಳ್ಳರ ಕೈಸೆರೆಯಾಗಿರಬೇಕಲ್ಲವೇ ?

'ಆತುರಪಡಬೇಡಿರಿ, ಸುಹೃದರೇ ! ಆತುರಪಟ್ಟು, ರಸಾಭಾಸಕ್ಕೆ ಕಾರಣರಾಗಬೇಡಿರಿ. ತಾಳ್ಮೆಯಿಂದ ನೋಡುತ್ತಿದ್ದರೆ, ತಾನಾಗಿ ತಿಳಿದುಬರುವುದು. ದುಡುಕಿ, ಕೆಡಿಸುವುದೇಕೆ? ಇದೋ ಬರುತ್ತಿರುವವರು, ನೋಡಿರಿ ವಾಸುದೇವ-ಯಶವಂತರನ್ನು ! ಅವರಿತ್ತ ಬರುತ್ತಿರುವ ಬಗೆಯೆಂತಹದಾಗಿರಬೇಕೆಂಬುದನ್ನು ಊಹಿಸಿರಿ, ನೋಡುವ ! ಕೊಲೆಪಾತಕದ ಹೊಲಸುಕೆಲಸಕ್ಕೆಂದು ಬಗೆದು ಬರುತ್ತಿರುವರಲ್ಲವೇನು? ಸಂದೇಹವೇಕ ? ವಾಸುದೇವ-ಯಶವಂತರಿಬ್ಬರೂ ಬಂದು, ಮಲಗಿದ್ದ ತಾರಾಪತಿರಾಯನ ಬಳಿಯಲ್ಲಿ ನಿಂತರು. ಯಾತನಾವೇಗದಿಂದ ಕಣ್ಣುಗಳನ್ನು ಮುಚ್ಚಿ, ನರಲುತ್ತಿದ್ದ ಜಮೀನ್ದಾರನು, ಮೆಲ್ಲನೆ ಕಣ್ತೆರೆದು ಕ್ಷೀಣಸ್ವರದಿಂದ ಕೇಳಿದನು 'ಯಾರು ಬಂದಿರುವವರು ?'

ವಾಸುದೇವ—ನಾನು ಜಮಾದಾರ ವಾಸುದೇವರಾಯ.

ತಾರಾಪತಿ—ಮತ್ತಾರೂ ಇಲ್ಲವೇ ?

ವಾಸುದೇವ—ತಮ್ಮ ದಿವಾನ ಯಶವಂತರಾಯರೂ ಬಂದಿರುವರು.

ತಾರಾಪತಿ—ಎಲ್ಲಿರುವನು ?

ವಾಸುದೇವ—ತಮ್ಮ ದುರವಸ್ಥೆಗಾಗಿ ವಿಷಾದಪಡುತ್ತ ಇಲ್ಲಿಯೇ ನಿಂತಿರುವರು.

ಯಶವಂತ—ಮುಂದೆಬಂದು ಜಮೀನ್ದಾರನ ಕೈಹಿಡಿದು–'ಸಂಗತಿಯೇನಾಗಿದೆ ?'

ತಾರಾಪತಿ—ಆಗುವುದೇನು ? ಕಳ್ಳರ ಕೈಪೆಟ್ಟುಗಳನ್ನು ತಿಂದು ಸಾಯು ತ್ತಿರುವುದೇ.

ಯಶವಂತ—ಪ್ರಾಣಾಪಾಯವಾಗಿ ತೋರುವಂತಹ ಗಾಯಗಳಲ್ಲವಷ್ಟೆ ?

ತಾರಾಪತಿ--ಪ್ರಾಣವು ಎಷ್ಟರಲ್ಲಿದೆ ? ಹೋಗಲಿ; ಅದಾವುದಕ್ಕೂ ನಾನು ಅಳುವುದಿಲ್ಲ. ಆದರೆ, ಬರುವಾಗ ಅಮ್ಮಾಯಿಾಯವರ ಅನುಮತಿ ಯಿಲ್ಲದೆ, ಮತ್ತು ಗಂಗೆಗೂ ಹೇಳದೆ ಬಂದೆನು. ಮತ್ತೆ ಅವರನ್ನು ಕಂಡು ಸಾಯಬೇಕೆಂಬುದು ನನ್ನ ಇಷ್ಟವು.

ವಾಸುದೇವ—ನೀವೇನೂ ಚಿಂತಿಸಬೇಕಾಗಿಲ್ಲ. ನಿಮ್ಮನ್ನು ಕರೆದುಕೊಂಡು ಹೋಗುವುದಕ್ಕಾಗಿಯೇ ನಾವು ಬಂದಿರುವೆವು. ಆದರೆ, ಆಹಾರ ವಿಲ್ಲದೆ ಹೊರಡುವುದು ಹೇಗೆ ?

ತಾರಾಪತಿ—ಊಟಕ್ಕೇನು ಮಾಡುವಿರಿ ?

ವಾಸುದೇವ—ಈ ಸತ್ರಾಧಿಕಾರಿಯು ನಮಗೆ ಬೇಕಾದವನು. ಊಟಕ್ಕೆ ತೊಂದರೆಯಿಲ್ಲ ತಮ್ಮ ಆಹಾರಕ್ಕೂ ಚಿಂತಿಸಬೇಕಾಗಿಲ್ಲ. ಎಲ್ಲವೂ ಇಷ್ಟರಲ್ಲಿ ಸಿದ್ಧವಾಗಬಹುದು. ನೋಡಿ ಬರುವೆನು; ಸ್ವಲ್ಪ ಮಲಗಿರಿ. ಎಂದು ಹೇಳಿ, ಯಶವಂತನೊಡನೆ ಅಲ್ಲಿಂದ ಮತ್ತೊಂದು ಕಿರುಮನೆಯ ಕಡೆಗೆ ನಡೆದನು. ಅದೇ ವೇಳೆಯ ಲ್ಲಿಯೇ ಬಟ್ಟೆಯಿಂದ ದೇಹವೆಲ್ಲವನ್ನೂ ಮರೆಮಾಡಿಕೊಂಡಿದ್ದ ವ್ಯಕ್ತಿಯೊಂದು ಕಾಲುಸಪ್ಪಳವಾಗದಂತೆ ಮೆಲ್ಲಮೆಲ್ಲನೆ ನಡೆತಂದು, ಮಂಚದ ಕೆಳಗೆ ಅಡಗಿಕೊಂಡಿತು. ಅದಾರೆಂಬುದು ಈಗಲೇ ಹೇಗೆ ಗೊತ್ತಾಗಬೇಕು ? ಇದಿರಿಗೆ ಬಂದು ನಿಂತಾಗಲೇ ಹೇಳ ಬೇಕು. ಹೊರಗೆ ಹೋಗಿದ್ದ ವಾಸುದೇವ-ಯಶವಂತರಿಬ್ಬರೂ ನಾಲ್ಕಾರು ನಿಮಿಷಗಳಲ್ಲಿ ಮೂರುನಾಲ್ಕು ಬಾಳೆಯಹಣ್ಣುಗ ಳನ್ನೂ ಒಂದು ಪಾತ್ರೆಯಲ್ಲಿ ಹಾಲನ್ನೂ ತಂದರು. ತಾರಾಪತಿ ರಾಯನು ಕುತೂಹಲದಿಂದ ಕಣ್ದೆರೆದು ‘ ಏಚಾರವೇನು ? ’

ವಾಸುದೇವ—‘ ಈ ಹಣ್ಣುಗಳನ್ನು ತಿಂದು, ಹಾಲನ್ನು ಕುಡಿಯಿರಿ. ದೇಹಾಯಾಸವು ಕಡಿಮೆಯಾಗಿ, ಪಯಣಕ್ಕೆ ಅನುಕೂಲವಾಗುವುದು.’ ಎಂದು ಹೇಳುತ್ತ ಹಣ್ಣನ್ನು ಸುಲಿದು, ಜಮೀನ್ದಾರನ ಕೈಯಲ್ಲಿರಿಸುತ್ತಿದ್ದನು. ಜಮೀನ್ದಾರನು ಮೆಲ್ಲಗೆ ತೆಗೆದು ಬಾಯೊಳಗಿಟ್ಟು, ಕಷ್ಟದಿಂದ ಹಣ್ಣುಗಳನ್ನು ನುಂಗಿದನು. ಯಶವಂತನು ಕೈಯೊಳಗಿದ್ದ ಹಾಲಿನ ಪಾತ್ರೆಯನ್ನು ಮುಂದಿರಿಸಿ,–‘ ಇದೇ ಹಾಲು ; ಬಹು ಪ್ರಯಾಸಪಟ್ಟು ಪರಿಮಳವನ್ನು ಸೇರಿಸಿ, ಹದವಾಗಿ ಕಾಯಿಸಿದೆ. ಕುಡಿಯಬಹುದು.’ ಎಂದು ಹೇಳಿ ಬಾಯಿಗೆ ಹತ್ತಿರದಲ್ಲಿರಿಸಿದನು. ಜಮೀನ್ದಾರನು ಮಲಗಿದಂತೆಯೇ ಮೆಲ್ಲನೆ ತಲೆಯೆತ್ತಿ ಅರೆಬಾಗಿ ಹಾಲನ್ನು ಕುಡಿಯಹೋದನು. ಒಂದೆರಡು ಸೊಲಿಗೆಗಳಷ್ಟು ಹಾಲು, ಹೊಟ್ಟೆಗೆ ಹೋಗುವುದರೊಳಗಾಗಿಯೇ ಕಾಲುಗಳನ್ನೊದರುತ್ತ ಆರ್ತಸ್ವರದಿಂದ ಕೂಗಿ ಮೈಮರೆತು ಮಲಗಿದನು. ಹಾಲಿನ ಪಾತ್ರೆಯು ಕೆಳಗುರುಳಿಹೋಯಿತು. ಹಾಲು ನಷ್ಟವಾಯಿತೆಂದು ನಿಂತಿದ್ದವರು ಖತಿಗೊಂಡು ತಾರಾಪತಿರಾಯನನ್ನು ಹಿಡಿದು ಸರಿಯಾಗಿ ಮಲಗಿಸಿ ಕೇಳಿದರು,–‘ ಇದೇಕೆ ಹೀಗಾಯಿತು ? ಹಾಲನ್ನೇಕೆ ಸುರಿದುಬಿಟ್ಟಿರಿ ? ’

ತಾರಾಪತಿ—ಕಾಲವ್ರಣದಲ್ಲಿ ಅಧಿಕವಾದ ಯಾತನೆಯುಂಟಾಗಿ ಹೀಗೆ ಮಾಡಿತು. ಹಾಲು ಹೋದುದು ಹೋಗಲಿ. ನನಗೆ ಇಷ್ಟೇ ಸಾಕಾಗಿದೆ.

ಅಷ್ಟರಲ್ಲಿಯೇ ಅಲ್ಲಿಗೆ ಸುಪಂಥ–ಬಲವಂತರೂ ಬಂದು ಸೇರಿದರು. ತಾರಾಪತಿರಾಯನು ಕುತೂಹಲದಿಂದ ಚೆನ್ನಾಗಿ ನೋಡಿದನು. ಬಲವಂತನು ಎಡಗೈಯಲ್ಲಿ ಒಂದು ಅಖಂಡಪತ್ರವನ್ನೂ, ಬಲಗೈಯಲ್ಲಿ ಕತ್ತಿಯನ್ನೂ ಹಿಡಿದು ಮಂಚದ ಬಳಿಯಲ್ಲಿ ನಿಂತಿದ್ದುದನ್ನೂ, ಸುಪಂಥನು ಲೇಖನಿಯನ್ನು ಹಿಡಿದು ತನ್ನನ್ನೇ ನೋಡುತ್ತಿದ್ದುದನ್ನೂ ಕಂಡು, ಚಕಿತನಾಗಿ–‘ ನೀವಾರು ? ಏಕೆ ಬಂದಿರಿ ? ’ ಎಂದು ಕೇಳಿದನು.

ಬಲವಂತ—ನಾನು ನಿನ್ನ ಮಾವ, ಗಂಗೆಯ ತಂದೆ. ಈ ಪತ್ರಕ್ಕೆ ನಿನ್ನ ಹಸ್ತಾಕ್ಷರವನ್ನು ಬರೆದುಕೊಡು. ಲೇಖಿನಿಯನ್ನು ತೆಗೆದುಕೊ. ಕೈನೀಡು. ಬೇಗ ಬರೆ.

ತಾರಾಪತಿ—ಮಲಗಿದಂತೆಯೇ ಬೆದರಿ–'ಹಾ, ನನ್ನ ಮಾವ! ಗಂಗೆಯ ತಂದೆ!! ಸುಳ್ಳು–ಎಲ್ಲವೂ ಸುಳ್ಳು.'

ಸುಪಂಥ—ಸುಳ್ಳು ನಿಜವೆಂಬುದನ್ನು ಆ ಬಳಿಕ ಹೇಳುವೆ. ಮೊದಲು ರುಜುವನ್ನು ಮಾಡು.

ತಾರಾಪತಿ—ಪತ್ರದಲ್ಲಿ ಏನಿರುವುದೆಂಬುದನ್ನು ತಿಳಿಯದೆ ನಾನೇನನ್ನೂ ಬರೆಯಲಾರೆನು.

ಯಶವಂತ—ಹಟಮಾಡಿದರೆ ಜೀವಹಾನಿಯಾದೀತು. ವೃಥಾ ಮುಷ್ಕರ ದಿಂದ ಫಲವಿಲ್ಲ. ಬರೆಯುವುದು ಲೇಸು.

ತಾರಾಪತಿ—ನಾನು–ನಾನೆಂದಿಗೂ ಹಾಗೆ ಬರೆಯಲಾರೆನು. ಅಷ್ಟರ ಮೂರ್ಖನಲ್ಲ. ಹುಚ್ಚ! ನಿನ್ನ ದ್ರೋಹವು ನನ್ನನ್ನೇನು ಮಾಡ ಬಲ್ಲುದು?

ಯಶವಂತ—ಮಾತಿಗೆ ಮಾತನ್ನು ಬೆಳೆಯಿಸುವುದೇಕೆ? ಸಾಯುವುದೇ ಇಷ್ಟವೋ? ಇದಕ್ಕೆ ರುಜುವನ್ನು ಕೊಟ್ಟು, ಉಳಿದುಕೊಳ್ಳ ಲಿಷ್ಟವೊ?

ತಾರಾಪತಿ—ಜಮಾದಾರರೇ! ಇದೇನು? ಅನ್ಯಾಯ! ನೀವಿದ್ದೂ ಈ ಅನ್ಯಾಯವೇ! ನಿಮಗೂ ಇದರಲ್ಲಿ ಭಾಗವುಂಟೇ? ಏಕೆ–ಸುಮ್ಮ ನಿರುವಿರಿ?

ಬಲವಂತ—ಜಮಾದಾರರಿಗೆ ಗಂಗೆಯೇ ಸೇರುವಳು. ಇನ್ನೂ ಕೂಗಿ ಸಾಯುವೆಯೇನು?

ತಾರಾಪತಿ—ಗಂಗೆಯೇ ಸೇರುವಳೆಂಬ ಶಬ್ದವನ್ನು ಕೇಳಿ ವಿಕೃತಸ್ವರ ದಿಂದ ಕೂಗುತ್ತ ಮೈಮರೆದನು.

|| ಶ್ರೀ ||

# ಪಂಚಮ ಪರಿಚ್ಛೇದ.

(ಬೀಭತ್ಸವ್ಯಾಪಾರ)

ಮೈಮರೆದು ಮಲಗಿದ ತಾರಾಪತಿರಾಯನ ಅವಸ್ಥೆಯನ್ನು ನೋಡಿ, ನಿಂತಿದ್ದ ನಾಲ್ವರ ಮನದಲ್ಲಿಯೂ ಹರ್ಷವುಂಟಾಯಿತು. ಪರಸ್ಪರ ಮುಖಾವಲೋಕನದಿಂದ ತಮ್ಮತಮ್ಮ ಹರ್ಷವನ್ನು ಪ್ರಕಟಿಸಿದ ಬಳಿಕ, ನಾಲ್ವರೂ ತಾರಾಪತಿರಾಯನ ಮುಖವನ್ನು ನೋಡಿದರು. ಆತನ ಮುಖದ ಮೇಲೆ ಚೆಲ್ಲಿರುವ ನೀರನ್ನು ಕಂಡು ಬೆರಗಾಗಿ, ಇದೆಲ್ಲಿಯದೆಂದು ತರ್ಕಿಸಿ, ಸುತ್ತಲೂ ನೋಡಿದರು. ತಾರಾಪತಿರಾಯನು ಮಲಗಿದ್ದ ಮಂಚಕ್ಕೆ ಇದಿರಾಗಿದ್ದ ಕಿಟಕಿಯ ಕಡೆ ನೋಡಿದರು. ಕಿಟಕಿಯ ಕದವೂ ತೆರೆಯಲ್ಪಟ್ಟಿರಲಿಲ್ಲ.–'ಮತ್ತೆಲ್ಲಿಯದಾಗಿರಬೇಕು ?' ಎಂಬ ಸಂಶಯವುಂಟಾಯಿತು. ಎಷ್ಟುದೂರ ಯೋಚಿಸಿದರೂ ಸಂಶಯವು ತೊಲಗಲಿಲ್ಲ. ಕಡೆಗೆ, ಯಶವಂತನು ಇದ್ದುದರಲ್ಲಿ ಬುದ್ಧಿಯನ್ನುಪಯೋಗಿಸಿ–' ಇದು ಅಶಕ್ತತೆ ಮತ್ತು ಜೂರ್ಣದ ವೇಗ ಇವೆರಡರ ದೆಸೆಯಿಂದಾದ ಬೆವರಲ್ಲದೆ ಮತ್ತೇನೂ ಇಲ್ಲ.' ಎಂದು ಹೇಳಿ, ಸಂಶಯವನ್ನು ಹೋಗಲಾಡಿಸಿದನು. ಹಾಗೂ ಹೀಗೂ ಮಾತನಾಡುತ್ತಿರುವುದರಲ್ಲಿಯೇ ಕಾಲುಗಂಟೆಯು ಕಳೆದುಹೋಯಿತು. ಮತ್ತೆ ಇವರ ದೃಷ್ಟಿಗಳು, ಮಲಗಿದ್ದವನ ಕಡೆಗೆ ತಿರುಗಿದುವು. ಮತ್ತೆಯೂ ಮೊದಲಿನಂತೆಯೇ ಮುಖದಲ್ಲಿ ನೀರು ಚೆಲ್ಲಿದಂತಾಗಿದ್ದಿತು. ಹೀಗಾದುದರಿಂದ ವಾಸುದೇವನು ಶಂಕೆಗೊಂಡು–' ಹೊರಗೆ ಕಾವಲುಗಾರರಿಲ್ಲವೇನು ? ಎಂದು ಕೇಳಿದನು.

ಬಲವಂತ——ಕಿರುಮನೆಯ ಬಾಗಿಲವರೆಗೆ ಬಂದು–' ಕರಿಯ–ಕರಿಯಾ ! ' ಎಂದು ಕೂಗಿದನು. ಇವನ ಕೂಗನ್ನು ಕೇಳಿ ಬಾಗಿಲಬಳಿಯಲ್ಲಿ

ಕಾವಲಿದ್ದ ಕರಿಯನು ಬಂದು–' ಏನು ಬುದ್ಧಿ, ಕರೆದಿರಿ ? ' ಎಂದು ಕೇಳಿದನು.

ಬಲವಂತ—ಹೊರಗೆ ಯಾರು ಬಂದಿರುವರು ?

ಕರಿಯ—ಪಟೇಲ, ತಿಮ್ಮಯ್ಯನೊಬ್ಬನೇ ಬಂದಿರುವನು. ಮತ್ತಾರೂ ಬಂದಿಲ್ಲ.

ಬಲವಂತ—ಎಚ್ಚರಿಕೆಯಿಂದ ನೋಡುತ್ತಿರು ; ಸತ್ರದ ಸುತ್ತಲೂ ದೃಷ್ಟಿ ಬೀಳುತ್ತಿರಲಿ ; ಹೋಗು.

ಕರಿಯನು ಹೊರಟುಹೋದನು. ಬಲವಂತನು ಮತ್ತೆ ಬಂದು–'ವಾಸುದೇವರಾವ್ ! ಹೊರಗೆ ಯಾರೂ ಬಂದಿಲ್ಲ ಸಂದೇಹಕ್ಕೆ ಕಾರಣವೂ ಇಲ್ಲ. ಕೆಲಸವನ್ನು ಪೂರ್ತಿಮಾಡಬೇಕಷ್ಟೆ ?—ಎಂದು ಕೇಳಿದನು.'

ವಾಸುದೇವ—ಮಾಡಬಹುದು. ಹೇಗೂ ವಿಳಂಬಿಸುವುದು ಸರಿಯಾಗಿ ಕಾಣುವುದಿಲ್ಲ.

ಬಲವಂತ—' ವಿಳಂಬವಿಲ್ಲ.' ಎಂದು ಹೇಳಿ, ತಾರಾಪತಿಯ ಬಳಿಗೆ ಬಂದು–' ಕಣ್ತೆರೆದು ನೋಡು. ಈಗಲಾದರೂ ನಿನ್ನ ಹೆಸರನ್ನು ಇದರಲ್ಲಿ ಬರೆ. ಇಲ್ಲವಾದರೆ ಈಗಲೇ ನಿನಗೆ ಮೃತ್ಯು.'

ತಾರಾಪತಿ—ಖತಿಗೊಂಡು ಕಣ್ತೆರೆದು ಕ್ಷೀಣಸ್ವರದಿಂದ-' ದುರಾಗತರೇ ! ಇದರಿಂದ ನೀವು ಯಾವ ಫಲವನ್ನೂ ಹೊಂದಲಾರಿರಿ. ನನ್ನ ಸ್ವತ್ತನ್ನು ನೀವು ಕದ್ದು ಹೊತ್ತುಹಾಕಬೇಕೆಂದರೆ, ಅದೆಂದಿಗೂ ಆಗದ–ಹೋಗದ ಮಾತು. ನನಗೆ ಸಹಾಯಕನಾಗಿ ದೇವರಿಲ್ಲವೆ ? ಸರ್ಕಾರದವರಿಲ್ಲವೆ ? ಅಥವಾ ಧರ್ಮಕರ್ಮಗಳಾದರೂ, ಬೆಂಗಾವಲಾಗಿ ನಿಲ್ಲಲಾರವೆ ? ಈ ಬಣಬೆದರಿಕೆಗೆ ನನ್ನ ಆತ್ಮನು ಹೇಡಿಯಾಗುವಂತಿಲ್ಲ '

ಯಶವಂತ—ಹಾಗೋ ? ಚಿತ್ರವಧೆಯಿಂದ ಸಾಯುಬೇಕೆಂಬುದೇ ಇಷ್ಟವೋ ?

ತಾರಾಪತಿ—ತಿರಸ್ಕಾರದಿಂದ ನೋಡುತ್ತ-‘ ಭಂಡ ! ಪಾಮರ !! ಕೃತಘ್ನ !!! ನಿನಗೆ ಎಂತಹ ನರಕಪ್ರಾಪ್ತಿಯಾಗುವುದೋ ಊಹಿಸಿ ಮಾತನಾಡು. ನನ್ನನ್ನು ಚಿತ್ರವಧೆಗೆ ಗುರಿಮಾಡಬೇಕೆಂದರೆ, ನಿನ್ನಿಂದಾದೀತೇ ? ಒಂದುವೇಳೆ ಹಾಗಾಗುವ ಪಕ್ಷದಲ್ಲಿಯೂ, ಅದೂ ನನ್ನ ಪ್ರಾರಬ್ಧವೆನ್ನಿಸಲ್ಪಡುವುದಲ್ಲದೆ ನಿನ್ನದೆಂದು ಹೇಳಲಾರೆನು. ಶಿಕ್ಷರಕ್ಷಕನೂ, ನ್ಯಾಯಾನ್ಯಾಯ ವಿಚಾರಕನೂ ಆದ ಭಗವಂತನೊಬ್ಬನಿರುವನು.’ ಎಂದು ಹೇಳಿ ಕಣ್ಣುಮುಚ್ಚಿದನು.

ಯಶವಂತ—ಕ್ರೋಧಾವೇಶದಿಂದ ಮೈಮುರಿದು, ಬಲವಂತನ ಕೈಯಲ್ಲಿದ್ದ ಕತ್ತಿಯನ್ನು ತೆಗೆದುಕೊಂಡು ಹಲ್ಕಡಿಯುತ್ತ–‘ ಇದೋ ಕತ್ತಿ ಬೀಳುತ್ತಿದೆ. ಚಿತ್ರವಧೆ ಯಾರಿಂದಾಗುವುದೋ ನೋಡು ! ’ ಎಂದು ಕತ್ತಿಯನ್ನು ರಭಸದಿಂದ ಮೇಲಕ್ಕೆತ್ತಿದನು. ತಾರಾಪತಿಗೆ ಸ್ಮೃತಿ ತಪ್ಪಿದುದರಿಂದ ಉಸಿರೆತ್ತಲಿಲ್ಲ.

ಉಳಿದ ಮೂವರೂ ಯಶವಂತನ ಕ್ರೋಧಾವೇಶ-ಮತ್ತು ಜಮಾನ್ದಾರನ ಚಿತ್ರವಧೆಗಳಿಗೆ ಮೋಹಿತರಾಗಿ ಅತ್ತಿತ್ತನೋಡದೆ ನಿಂತಿದ್ದರು. ಸ್ಮೃತಿತಪ್ಪಿ ಮಲಗಿದ್ದ ಜಮಾನ್ದಾರನಿಗೆ ಈಗ ಸಹಾಯಕರಾರು ? ಎಲ್ಲಿ ? ಪುರಾಕೃತ ಪುಣ್ಯಫಲವೀಗೆಲ್ಲಿ ? ಮುಂದೆ ಬಂದು ನಿಲ್ಲಬಾರದೇ ! ತಾರಾಪತಿಯ ಪ್ರಾಣಸಂಕಟಕಾಲದಲ್ಲಿ ಉದಾಸೀನವೂ ಸರಿಯೇ ? ಮೇಲಕ್ಕೆತ್ತಿದ ಕತ್ತಿ, ಕುತ್ತಿಗೆಗೆ ಬೀಳುವುದೆಷ್ಟುಹೊತ್ತು ? ಹಾ ಕಷ್ಟ! ಕಷ್ಟ!! ಸತ್ಯಾತ್ಮರಿಗೊದವಿದ ವಿಪತ್ತು ಸೂಕ್ಷ್ಮರೂಪದಿಂದಲೇ ಪರಿಹರವಾಗುವದಲ್ಲವೇ ? ನಿಜ ! ಲೋಕಬಂಧು-ತಾರಾಪತಿರಾಯನನ್ನು ಕೊಲ್ಲಬೇಕೆಂದು ಯಶವಂತನು ಮೇಲಕ್ಕೆತ್ತಿದ ಕತ್ತಿ, ಕೆಳಗೆ ಬೀಳಲಿಲ್ಲ. ಎತ್ತುವುದಕ್ಕೆ ಸರಿಯಾಗಿ ಕತ್ತಿಯು ಮತ್ತೊಬ್ಬರಿಂದ ತೆಗೆದುಕೊಳ್ಳಲ್ಪಟ್ಟಿತಲ್ಲದೆ, ಯಶವಂತನ ಬೆನ್ನಿಗೆ ಪ್ರಹಾರವೂ, ಪ್ರಹಾರದೊಡನೆ-ಗರ್ಭನಿರ್ಭೇದವಾಗುವಂತೆ ಕರ್ಕಶಸ್ವರದಿಂದ ‘ಅಧಮಾಧಮ ! ನೀನಾರನ್ನು ಕೊಲ್ಲುವೆ? ನಿನ್ನ ತಲೆಯು

ಮೇಲೆ ಕತ್ತಿ ! ನಿನ್ನ ಹಿಂದೆ ಮೃತ್ಯು !! ನಿಮಿಷಾರ್ಧದಲ್ಲಿ ನಿನಗಾಗು ತ್ತಿದೆ ಪ್ರಾಣಾಪತ್ತು !!! ' ಎಂಬ ವಾಕ್ಯರವು ಹೊರಟು, ಯಶವಂತನನ್ನು ನೆಲಕ್ಕುರುಳುವಂತೆ ಮಾಡಿತು.

ಬಲವಂತಾದ್ಯರು ದಿಗ್ಭ್ರಾಂತಿಯಿಂದ ತಲೆಯೆತ್ತಿ ನೋಡಿದರು. ಖಡ್ಗಧಾರಿಣಿಯಾದ ಗಂಗೆಯೇ ಪ್ರತ್ಯಕ್ಷ ! ಸಾಲದುದಕ್ಕೆ ಅವಳಲ್ಲಿ–ಉಗ್ರಸ್ವರೂಪಿಣಿಯಾದ ಮಹಿಷಮರ್ಧಿನಿಯ ಸಾಕ್ಷಾತ್ಕಾರ !! ಹೇಳಿ–ಕೇಳಬೇಕೇ ಖಳರ ಮನಸ್ಸ್ಥಿತಿ ಹೇಗಾಯಿತೆಂಬುದನ್ನು ? ನಿಂತಿದ್ದ ಮೂವರೂ ನಡುಗಿದರೆಂದರೆ ಸಾಕು.

ಬಲವಂತ—ತತ್ತರಿಸುತ್ತ ಕಷ್ಟದಿಂದ ತೊದಲುನಾಲಿಗೆಯಲ್ಲಿ ' ಗಂಗೆ ! ಇದೇಕೆಬಂದೆ ? ನೀನು ನನ್ನ ಮಗಳಾಗಿಯೂ ನಮಗೆ ಪ್ರತಿಕೂಲ ಳಾಗಬಹುದೇ ? ನಿನ್ನನ್ನು ಕರೆತಂದವರಾರು ? ಹೀಗಾಡಲು ನಿನಗೆ ಹೇಳಿದವರಾರು ? '

ಗಂಗೆ—ಒಮ್ಮೆ ಪತಿಯ ಮುಖವನ್ನು ದೃಷ್ಟಿಸಿ ನೋಡಿದಳು. ಮುಖಕ್ಕೆ ಸರಿಯಾಗಿ ಹೊರಗಡೆಯಲ್ಲಿ ಗೋಡೆಯ ಕಂಡಿಯಿಂದ ಆಡಿಗಡಿಗೆ ನೀರು ಚೀರಿಸಲ್ಪಡುತ್ತಿರುವದನ್ನು ಸೂಕ್ಷ್ಮದೃಷ್ಟಿಯಿಂದ ತಿಳಿದು, ಸಮಾಧಾನಹೊಂದಿ–ಬಲವಂತನ ಕಡೆಗೆ ತಿರುಗಿ ಗರ್ವದಿಂದ ನಕ್ಕು ಹೇಳಿದಳು–' ಮುದಿಗೂಬೆ ! ಇನ್ನೂ ಎಷ್ಟೆಷ್ಟು ಪಾಪಕಾರ್ಯಗ ಳನ್ನು ಮಾಡಿದರೆ ತೃಪ್ತನಾದೀಯೆ ? ನಿನಗೇಕೆ ಸಾವಿಲ್ಲ ? ನಾನು ನಿನ್ನ ಮಗಳೂ ಅಲ್ಲ ; ನೀನು ನನ್ನ ತಂದೆಯೂ ಅಲ್ಲ. ತಿಳಿಯಿತೆ ? ಇನ್ನು ನನ್ನನ್ನು ಕರೆತಂದವರಾರೆನ್ನುವೆಯೋ ? ನಿನ್ನ ಕರ್ಮದೇವ ತೆಯೇ ನನಗೆ ಹೇಳಿತು. ನಿನ್ನ ಭಾಗದ ಮೃತ್ಯುವೇ ನನ್ನನ್ನು ಕರೆ ತಂದಿಲ್ಲಿ ನಿಲ್ಲಿಸಿತು. ನಿನಗೆ ದೈವವೇ ಪ್ರತಿಕೂಲವಾಗಿರುವಾಗ ಮಿಕ್ಕವರನ್ನು ಕೇಳುವೆಯಾ ? '

ಗಂಗೆಯ ಈ ಮಾತಿಗೆ, ಕೆಳಗೆಬಿದ್ದಿದ್ದ ಯಶವಂತನು, ಆಗ್ರ ಹದಿಂದೆದ್ದುನಿಂತು ಆವಳ ಕೈಯಲ್ಲಿದ್ದ ಖಡ್ಗವನ್ನು ಕಿತ್ತುಕೊಂಡು

‘ವಾಸುದೇವರಾವ್ ! ಇದೊ, ಇವಳನ್ನು ನಿನಗೊಪ್ಪಿಸಿರುತ್ತೇವೆ. ಇವಳನ್ನು ಕರೆದೊಯ್ದು ಬೇಕಾದಂತೆ ಮಾಡಬಹುದು. ನಾವೂ ನಮ್ಮ ಕೆಲಸವನ್ನು ಮುಗಿಸಿಬಿಡುವೆವು.’

ವಾಸುದೇವ—ಸಂತೋಷದಿಂದುಬ್ಬಿ–‘ಗಂಗೆ ! ಇನ್ನು ನಮಗಿಲ್ಲಿ ಕೆಲಸವಿಲ್ಲ ; ನಡೆ ಹೋಗುವ.’ ಎಂದು ಕೈಹಿಡಿಯಹೋದನು.

ಗಂಗೆ—ತಿರಸ್ಕಾರದಿಂದ ನಕ್ಕು–‘ಓಹೋ ! ಜಮಾದಾರರೇ ! ಅಲ್ಲಿಯೇ ನಿಂತರೆ ಸರಿಯಾಗಿದ್ದೀತು ; ನೋಡಿಕೊಳ್ಳಿರಿ ನೀವು ಪರದಾರಾಪಹರಣಕ್ಕೆಂದು, ಈ ಘೋರಕೃತ್ಯಕ್ಕೆ ಮುಂದಾಳಾಗಿ ನಿಂತಿರುವಿರಿ ನಿಮ್ಮ ಮಾನ-ಪ್ರಾಣಾಪಹಾರಕ್ಕೆಂದು, ಬೇರೊಬ್ಬರು ಸಿದ್ಧರಾಗಿರುವುದನ್ನು ನೀವು ಹೇಗೆ ತಿಳಿಯಬಲ್ಲಿರಿ ? ನನ್ನ ನೆಳಲುಕೂಡ ನಿಮಗೆ ಸಿಕ್ಕುವುದಿಲ್ಲವೆಂದು ನೀವೇಕೆ ತಿಳಿಯಲಾರಿರಿ ?

ಬಲವಂತ—ವಾಸುದೇವರಾವ್ ! ಇವಳೇ ನಮ್ಮ ಸರ್ವನಾಶಕ್ಕೆ ಮೂಲ. ಇವಳನ್ನು ಪ್ರಾಣದಿಂದ ಬಿಡಬಾರದು. ನೀನೂ, ಸುಪಂಥನೂ ಸೇರಿ, ಇವಳನ್ನು ಸರಿಮಾಡಿಬಿಡಿರಿ. ನಾನೂ, ಯಶವಂತನೂ ಇವಳ ಗಂಡನನ್ನು ಚಿತ್ರವಧೆಮಾಡಿ ಪೂರೈಸುವೆವು. ಎಂದು ಯಶವಂತನೊಡನೆ ತಾರಾಪತಿರಾಯನ ಬಳಿಗೆ ಬಂದನು.

ಗಂಗೆ—ಉನ್ಮಾದಿನಿಯಂತೆ ಹಾರಿಬಂದು–‘ಬೇಡಬೇಡ. ಕೈದುಡಿಕಿದರೆ ಕೆಟ್ಟುಹೋಗುವೆ.’ ಎಂದು ತಡೆದಳು. ಸುಪಂಥನು ಗಂಗೆಯ ಕೈಗಳನ್ನು ಬಿಗಿಯಾಗಿ ಹಿಡಿದನು. ವಾಸುದೇವನು ಅವಳ ಕೊರಳನ್ನು ಅಮುಕಿ ಹಿಡಿದನು. ಗಂಗೆಯು ಶ್ವಾಸೋಚ್ಛ್ವಾಸಕ್ಕೆ ಅವಕಾಶವಿಲ್ಲದೆ ಕಷ್ಟಪಡುತ್ತಿದ್ದಳು.

ತಾರಾಪತಿಗೆ ಇದೇ ಸ್ಮೃತಿಯುಂಟಾಗುತ್ತಿದ್ದುದರಿಂದ-ಕೂಗನ್ನು ಕೇಳಿ ಕಣ್ತೆರೆದು ನೋಡಿದನು. ತನ್ನವಧೆಗಾಗಿ ಬಲವಂತ-ಯಶವಂತರು ಕಾದಿರುವರು. ಇನ್ನೇನು-ತನ್ನಮೇಲೆ ಕತ್ತಿಯೂ ಬೀಳುವುದು.

ಸಾಲದುದಕ್ಕೆ ಗಂಗೆಯ ವಧೆಯು ಬೇರೆ ಮುಂದಿರುವುದು. ಪಾಪ! ತಾರಾಪತಿಗೆ ಆಗ ಉಂಟಾದ ಯಾತನೆಯನ್ನು ಹೇಗೆ ಹೇಳಿ ತಿಳಿಸುವ ? ತಾರಾಪತಿರಾಯನು, ಯಾತನಾಸ್ವರದಿಂದ–'ಅಯ್ಯೋ ! ಅನಾಹುತ ! ಸ್ತ್ರೀಹತ್ಯೆ !! ಕೊಲೆ-ಕೊಲೆ-ಕೊಲೆ !!! ' ಎಂದು ಕೂಗಿದನು. ಬಲವಂತನು ತಾರಾಪತಿಯ ಬಾಯನ್ನು ಬಲವಾಗಿ ಮುಚ್ಚಿದನು. ಯಶವಂತನು 'ಇನ್ನು ಆದುದಾಗಲಿ ; ಈ ಸಾರಿ ತೀರಿಸಿಬಿಡುವೆನು.' ಎಂದು ಮತ್ತೊಮ್ಮೆ ಖಡ್ಗವನ್ನು ಮೇಲಕ್ಕೆತ್ತಿದನು. ಈ ಸಂದರ್ಭದಲ್ಲಿಯೇ ಭಯಂಕರ ಶಬ್ದದಿಂದ ಕಿಟಕಿಯು ಕಳಚಿ ಕೆಳಗೆ ಬಿದ್ದುಹೋಯಿತು. ಕಿಟಕಿಯು ಬಿದ್ದೊಡನೆಯೇ ಕಿಟಕಿಯಕಡೆಯಿಂದ ಕೈಕೋವಿಯ (Revolver) ಮದ್ದು ಹಾರಿಬಂದು, ವಾಸುದೇವನ ಬೆನ್ನಿಗೆ ತಗಲಿ, ಅವನನ್ನು ನೆಲಕ್ಕುರುಳಿಸಿತು. ಯಶವಂತನ ಎತ್ತಿದಕ್ಕೈ ಹಾಗೆಯೇ ನಿಂತಿತು. ಎಲ್ಲರೂ ಇದೇನೆಂದು ತಿರುಗಿನೋಡಿದರು. ಕಿಟಕಿಯ ಕಡೆಯಿಂದ ಹೊರಟುಬಂದ ಪ್ರಕಾಶಮಾನವಾದ ದೀಪದ ಕಾಂತಿವಿಶೇಷವು ಕಿರುಮನೆಯೆಲ್ಲವನ್ನೂ ಸುತ್ತಿ, ಎಲ್ಲರಕಣ್ಣುಗಳನ್ನೂ ಮುಚ್ಚಿಸಿತು. ಪಾಪ ! ಬಲವಂತಾದ್ಯರು ಹುಚ್ಚರಂತಾಗಿ ವಿಕೃತಸ್ವರದಲ್ಲಿ 'ಅಯ್ಯಯ್ಯೋ, ಬೀಭತ್ಸವ್ಯಾಪಾರವೇ ! ನಮಗೇ ಸಾವು ಬಂದಿತೇ !! ' ಎಂದು ಕೂಗಿ, ನಿಂತಂತೆಯೇ ಸ್ಮೃತಿತಪ್ಪಿ ಬಿದ್ದುಬಿಟ್ಟರು.

|| ಶ್ರೀ ||

# ಷಷ್ಠಪರಿಚ್ಛೇದ.

(ದಿಗ್ವಿಜಯ.)

ಬೆಳಕು ಕಡಿಮೆಯಾಯಿತು. ಅದು ಕಡಿಮೆಯಾದಂತೆಲ್ಲಾ ಬಲವಂತಾದ್ಯರ ಮುಚ್ಚಿಹೋಗಿದ್ದ ಕಣ್ಣುಗಳೂ ಮೆಲ್ಲ ಮೆಲ್ಲನೆ ತೆರೆಯಲಾರಂಭಿಸಿದುವು. ಕಡೆಗೆ ದೀಪವು ಮರೆಯಾಯಿತು ; ಕಿರುಮನೆಯು ಮೊದಲಿದ್ದಂತೆ, ಸೊಡರ ಬೆಳಕಿಂದ ಮಿನುಗುತ್ತಿದ್ದಂತೆ ಕಂಡುಬಂದಿತು. ಕೆಳಗೆ ಬಿದ್ದಿದ್ದ ವಾಸುದೇವನ ಬೆನ್ನಿಂದ ರಕ್ತವು ಸುರಿಯುತ್ತಿದ್ದುದಲ್ಲದೆ, ಅವನ ಯಾತನಾಸ್ವರದಿಂದ ಕಿರುಮನೆಯೇ ಚದರುವಂತಾಯಿತು. ಪಾಪ ! ಬಲವಂತನಿಗೆ ಈಗೀಗ ಬುದ್ಧಿಯುಂಟಾಗುತ್ತಿದೆ. ಏನುಮಾಡುವುದು ? ತಮ್ಮ ದುರ್ಬೋಧನೆಯಿಂದ ಕೆಟ್ಟು ಬಿದ್ದಿದ್ದ ವಾಸುದೇವನನ್ನು ಸುಪಂಥನ ಸಹಾಯದಿಂದೆತ್ತಿ ಹಿಡಿದು ನಿಲ್ಲಿಸಿ, ಬೆನ್ನಿಗೆ ಬಟ್ಟೆಯನ್ನು ಕಟ್ಟಿ, ತನ್ನ ಭುಜದಮೇಲೆ ಆನಿಸಿಕೊಂಡು ನಿಂತನು. ಯಶವಂತನಿಗೆ ಇದು ಸಹನಾತೀತವಾಗಿ ತೋರಿತು. ತಾರಾಪತಿಯ ವಧೆಗಾಗಿ ಎತ್ತಿದ ಕೈ, ಗಂಗೆಯ ಕಡೆಗೆ ತಿರುಗಿತು. ಗಂಗೆಯಿಂದ ಯಾವ ಮಾತೂ ಹೊರಡಲಿಲ್ಲ. ಆದರೆ, ಆಗಲೂ ಅವನ ಪ್ರಯತ್ನವು ಸಾಗಲಿಲ್ಲ.–'ವಿದ್ರೋಹಿ ! ಪಾಮರ !! ಎತ್ತಿದ ಕೈ ಕೆಳಗೆ ಬಿಡುವುದಾಗಲೀ,–ಮುಂದೆ ಬರುವುದಾಗಲೀ ಕಂಡರೆ, ಈ ಬೆಂಕಿಯಿಂದ ಸುಟ್ಟುಹೋಗುವೆ. ಎಚ್ಚರಿಕೆ !' ಎಂಬ ಘನನಿರೋಧದಿಂದ ಆಶೆಯೂ ತಿರೋಧಾನವಾಯಿತು. ಮತ್ತೆ ಎಲ್ಲರೂ ತಿರುಗಿನೋಡಿದರು. ವಾಸುದೇವನಿದ್ದೆಡೆಯಲ್ಲಿ ಪಿಸ್ತೂಲನ್ನು ಹಿಡಿದು ಕೃತಾಂತನೇ ನಿಂತಿರುವನು. ಅಬ್ಬ, ಹದಿಮೂರು ವರ್ಷದ ಹುಡುಗನಿಗೆ ಎಂತಹ ಕೆಚ್ಚೆದೆ

ಯಾಗಿರಬೇಕು ! ಈ ಸಂದಿಗ್ಧಸಮಯದಲ್ಲಿ, ಆತನ ಮುಖದಿಂದ ಹೊರ ಹೊರಡುತ್ತಿರುವ ವಿದ್ಯುಲ್ಲಹರಿಯು ಅವರ ಮನಸ್ಸನ್ನು ಭ್ರಾಂತಿಗೊಳಿಸು ವುದರಲ್ಲಿ ಆಶ್ಚರ್ಯವೇನು ? ಎಲ್ಲರೂ ಹುಚ್ಚರಂತೆ, ಓಡಿಹೋಗಲು ಪ್ರಯತ್ನ ಪಟ್ಟರು. ಆದರೇನು ! ಅದಾದರೂ ಸಾಗಿತೇ ? ಇಲ್ಲ. ಬಾಗಿಲಬಳಿಯಲ್ಲಿ ನಿಂತು ಏಕಕಾಲದಲ್ಲಿ ಹತ್ತಿಪ್ಪತ್ತು ಮಂದಿಯನ್ನಾದರೂ ಸುಡುವಂತಹ ಕೈಕೋವಿಯನ್ನು ಹಿಡಿದಿದ್ದ ಧರ್ಮಪಾಲನನ್ನು ಕಂಡರು. ಇತ್ತ ಮಾರಿ ಯ ಭಯ ; ಅತ್ತ ಹೋತನ ಭಯ. ಮತ್ತೇನು ಮಾಡುವರು ? ತೇಜೋಹೀನರಾಗಿ ನಿಂತಲ್ಲಿಯೇ ನಿಂತರು.

ಗಂಗೆ—ಧರ್ಮಪಾಲನಿಗೆ ಕೈಮುಗಿದು-'ಮಹಾತ್ಮನೇ ! ತ್ವರೆಮಾಡು. ಈ ಪಾಪಿಗಳಲ್ಲಿ ಇನ್ನು ಕನಿಕರವು ನನಗೆ ಸಹನಾತೀತವಾಗಿದೆ.' ಎಂದು ಕೂಗಿ ಹೇಳಿದಳು.

ಧರ್ಮಪಾಲನು ಕಿರುನಗೆಯಿಂದ ತಲೆದೂಗಿ-'ತಾಯಿ ! ಕಾತರವೇಕೆ ? ಸ್ವಲ್ಪ ನಿಧಾನಿಸು.' ಎಂದು ಹೇಳಿ ಹೊರಗೆನೋಡಿ ಯಾರ ನ್ನೋ ಕರೆದನು. ಕೂಡಲೇ ಔಷಧಾದಿಗಳೊಡನೆ ವೈದ್ಯನೂ (Doctor) ಕೈಬೇಡಿಗಳನ್ನು ಹಿಡಿದಿದ್ದ ಸೇವಕನೂ ಕಿರುಮನೆಯೊಳ ಹೊಕ್ಕರು.

ಧರ್ಮಪಾಲ—'ವಂದನೆ, ಡಾಕ್ಟರ್‌ದೊರೆ ! ಜಮಿನ್ದಾರ್ ಲೋಕಬಂಧು ಗಳ ಉಪಚಾರವಾಗಲಿ ; ತ್ವರೆಪಡಿಸಿರಿ.' ಡಾಕ್ಟರನೂ ಪ್ರತಿವಂ ದನೆಮಾಡಿ ತಾರಾಪತಿಯು ಮಲಗಿದ್ದ ಮಂಚದಮೇಲೇರಿ ಕುಳಿತು, ಆತನ ಉಪಚಾರದಲ್ಲಿ ನಿರತನಾದನು. ಕೃತಾಂತನು ಧರ್ಮಪಾಲನ ಸಂಜ್ಞೆಯಂತೆ ಯಶವಂತನ ಕೈಯಲ್ಲಿದ್ದ ಖಡ್ಗವನ್ನು ಕಿತ್ತೆಸೆದು, ನಿಮಿಷಮಾತ್ರದಲ್ಲಿ ಸೇವಕನ ಕೈಯಲ್ಲಿದ್ದ ಬೇಡಿಗಳನ್ನು ತೆಗೆದು, ಬಲವಂತಾದಿ ನಾಲ್ವರಿಗೂ ತೊಡಿಸಿ, ಗಂಗೆಯು ಮತ್ತು ಧರ್ಮ ಪಾಲನು ತಲೆದೂಗುವಂತೆ ತನ್ನ ಕರಕೌಶಲವನ್ನು ಚೆನ್ನಾಗಿ ವ್ಯಕ್ತ ಪಡಿಸಿದನು.

ಇದೆಲ್ಲವೂ ಮುಗಿಯುವಷ್ಟರಲ್ಲಿಯೇ ಸತ್ರದ ಹೊರಬಾಗಿಲಲ್ಲಿ ಕೊಳಲೂದಿದ ಶಬ್ದವು ಕೇಳಿಸಿತು. ನೋಡುತ್ತಿದ್ದಂತೆಯೇ, ನಾಲ್ಕಾರು ನಿಮಿಷಗಳಲ್ಲಿ, ದೊಣ್ಣೆಗಳನ್ನು ಹಿಡಿದಿದ್ದ ಇನ್ನೂರುಮಂದಿ ಕಳ್ಳರಿಂದ ಸತ್ರವು ಕಿಕ್ಕಿರಿವಂತಾಯಿತು. ಹೀಗೆ ಬಂದವರನ್ನು ನೋಡಿ ಬಲವಂತನಿಗೆ ಸ್ವಲ್ಪ ಚೈತನ್ಯವುಂಟಾದಂತೆ ತೋರಿ ಮೆಲ್ಲನೆ-'ಕಾಪಾಡಿರಿ, ಅಪ್ಪರೇ ನಮ್ಮನ್ನು ಬಿಟ್ಟುಕೊಡಬೇಡಿರಿ!' ಎಂದು ಮೊರೆಯಿಟ್ಟನು. ದಂಗೆಕೋರರು ಕ್ರೋಧಾವೇಶದಿಂದ ಕಿರುಮನೆಗೆ ನುಗ್ಗಲು ಪ್ರಯತ್ನಪಟ್ಟರು. ಆದರೆ, ಧರ್ಮಪಾಲನು ಬಾಗಿಲಿಗಡ್ಡಲಾಗಿ ಕೈಕೋವಿಯನ್ನು ಗುರಿಹಿಡಿದು, ಎಡಗೈಯಿಂದ ಅಂಗಿಯ ಕಿಸೆಯಲ್ಲಿದ್ದ ತುತೂರಿಯನ್ನು ಹಿಡಿದು, ಬಲವಾಗಿ ಪೂರಿಸಿದನು. ಅದರ ಬಲವನ್ನಿನಾದದಿಂದ ಆ ಪ್ರಾಂತವೇ ನರ್ತಿಸುವಂತಾಯಿತು. ನಿಂತಿದ್ದವರೆಲ್ಲರೂ ಭವಿಷ್ಯವೇನೆಂಬುದನ್ನರಿಯಲಾರದೆ ಕಿವಿಗಳನ್ನು ಮುಚ್ಚಿಕೊಂಡು ನಿಂತರು. ತುತ್ತೂರಿಯ ಶಬ್ದವಡಗುವುದರಲ್ಲಿಯೇ ಸತ್ರದ ಸುತ್ತಲೂ ಭಲ್ಲೆಗಳನ್ನು ಹಿಡಿದ ಭಟರು ಮುತ್ತಿದರು. ಅವರಲ್ಲಿ ಮುಖಂಡರಾಗಿದ್ದ ನಾಲ್ಕಾರು ಮಂದಿಗಳು, ಗುಂಪಿನೊಳಗೆ ನುಗ್ಗಿಬಂದು, ಧರ್ಮಪಾಲನ ಮುಂದೆ ನಿಂತು, ಕೈಗಳನ್ನು ಮೇಲಕ್ಕೆತ್ತಿ-'ಜಯ! ವಿಜಯ!! ಸರದಾರ್ ಧರ್ಮಪಾಲರಿಗೆ ದಿಗ್ವಿಜಯ!!!' ಎಂಬ ಜಯಘೋಷದಿಂದ ಅಹಿತರ ತಲೆಯ ಮಿದುಳನ್ನು ಚದರಿಸಿಬಿಟ್ಟರು. ಸತ್ರದ ಒಳಗೂ, ಹೊರಗೂ, ಸುತ್ತಲೂ ಅದೇ ಜಯಘೋಷವೇ ತುಂಬಿತುಳುಕಾಡುವಂತಾಯಿತು.

ಧರ್ಮಪಾಲ——ಕೈಮೇಲಕ್ಕೆತ್ತಿ-'ಅಪ್ಪರೇ! ಸಂಜುಗಾರರಲ್ಲಿ ಒಂದು ತಲೆಯಾದರೂ ತಪ್ಪಿಸಿಕೊಳ್ಳದಂತೆ ಎಲ್ಲರನ್ನೂ ಹಿಡಿದು, ಬೇಡಿಗಳನ್ನು ತೊಡಿಸಬೇಕು.' ಎಂದು ಹೇಳಿ, ಮತ್ತೆ-'ಸಂಜುಗಾರರೆಲ್ಲರೂ ಕೇಳತಕ್ಕುದು. ನಿಮ್ಮಲ್ಲಿ ಪ್ರಾಣಾಪೇಕ್ಷೆಯುಳ್ಳವರೆಲ್ಲರೂ, ಭಟರಿಗೆ ವಿಧೇಯರಾಗಿರಬೇಕು. ಹಾಗಿಲ್ಲದೆ, ಪ್ರತಿಕೂಲವಾಗಿ ನಡೆಯಬೇಕೆಂಬವರು, ಅಲ್ಲಿಯೇ ಹತರಾಗಿ ಬೀಳುವರು. ಚನ್ನಾಗಿ ತಿಳಿದಿರಿ.' ಹೀಗೆಂದು ಎರಡಾವರ್ತಿ ಕೂಗಿಹೇಳಿದನು.

ಧರ್ಮಪಾಲನ ಅಪ್ಪಣೆಯಂತೆ ಭಟರಲ್ಲಿ ಕೆಲವರು, ಕಳ್ಳರ ದೊಣ್ಣೆಗಳನ್ನು ಕಿತ್ತೆಸೆಯುತ್ತಬಂದಂತೆಲ್ಲಾ ಹಿಂದಿದ್ದ ಮತ್ತೆಕೆಲವರು ಬೇಡಿಗಳನ್ನು ತೊಡಿಸುತ್ತ ಬಂದು, ಸ್ವಲ್ಪಹೊತ್ತಿನಲ್ಲಿಯೇ ಎಲ್ಲರನ್ನೂ ಸೆರೆ ಹಿಡಿದುಬಿಟ್ಟರು. ಧರ್ಮಪಾಲನು ಸಂಭ್ರಮದಿಂದ ಭಟರನ್ನು ಕುರಿತು– 'ಆಪ್ತರೇ! ನಿಮ್ಮಲ್ಲಿ ಮೂರುಪಾಲು ದಳವು, ಇವರನ್ನು ಜಾಗರೂಕತೆ ಯಿಂದ ಕರೆದೊಯ್ಯಬೇಕು; ಉಳಿದವರು ನಮ್ಮ ಜತೆಯಲ್ಲಿ ಬರಬೇಕು. ಇನ್ನು ಪಯಣಕ್ಕೆ ಸಿದ್ಧತೆಯಾಗಲಿ.' ಎಂದು ಕಟ್ಟುಮಾಡಿದನು.

ಧರ್ಮಪಾಲನ ದಳದಲ್ಲಿ ಮುಕ್ಕಾಲುಪಾಲು ಕೈಸೆರೆಯಾದವ ರನ್ನು ಕರೆದುಕೊಂಡು ಮುಂದೆ ಹೊರಟಿತು. ಉಳಿದವರು ಪ್ರಯಾಣಕ್ಕೆ ತಕ್ಕ ಬಂಡಿಗಳನ್ನೂ, ಸಾಮಗ್ರಿಗಳಿಗೆ ಬೇಕಾಗುವ ಬಂಡಿಗಳನ್ನೂ ತಂದು, ಸತ್ರದ ಮುಂದೆ ನಿಲ್ಲಿಸಿದರು. ಧರ್ಮಪಾಲನು ಬಲವಂತಾದ್ಯರನ್ನು ಬೆದ ರಿಸಿ, ಕಳುವಿನ ಪದಾರ್ಥಗಳೆಲ್ಲವನ್ನೂ ಹುಡುಕಿತರಿಸಿ, ಬಂಡಿಗಳಲ್ಲಿ ತುಂಬಿಸಿ ದನು. ಬಳಿಕ ವಾಸುದೇವಾದಿ ನಾಲ್ವರೂ ಒಂದು ಬಂಡಿಯಲ್ಲಿ ಕೂಡಲ್ಪ ಟ್ಟರು. ಅವರ ಕಾವಲಿಗಾಗಿ ಸುತ್ತಲೂ ಭಟರನ್ನು ನಿಯಮಿಸಿ, ಮೇಲ್ವಿ ಚಾರಣೆಗಾಗಿ ಕೃತಾಂತನೇ ಕುದುರೆಯನ್ನೇರಿ ಹೊರಟನು. ತಾರಾಪತಿ ರಾಯನನ್ನು ಮತ್ತೊಂದು ಬಂಡಿಯಲ್ಲಿ ಮೃದುವಾದ ಹಾಸಿಗೆಯ ಮೇಲೆ ಮಲಗಿಸಿ, ಆತನ ಔಷಧೋಪಚಾರಕ್ಕೆ ಡಾಕ್ಟರನ್ನೇ ಕುಳ್ಳಿರಿಸಿದನು. ಗಂಗೆ ಯು ಪ್ರತ್ಯೇಕವಾಗಿ ಇನ್ನೊಂದು ಬಂಡಿಯಲ್ಲಿ ಕುಳಿತಳು. ಬಳಿಕ ಸತ್ರದ ಬಾಗಿಲನ್ನು ಭದ್ರಪಡಿಸಿ, ಧರ್ಮಪಾಲನು, ಗಂಗೆಯ ಮತ್ತು ತಾರಾಪತಿ ರಾಯನ ಬೆಂಗಾವಲಾಗಿ ಅಶ್ವವನ್ನೇರಿ ವಿಜಯೋತ್ಸಾಹದಿಂದ ನಲಿಯುತ್ತ ಶ್ರೀನಗರಾಭಿಮುಖನಾಗಿ ನಡೆದನು. ಇದರಿಂದಲೇ–'ಧರ್ಮೋವರ್ಧ ತಿ-ವರ್ಧತಿ' ಎಂಬ ಸೂಕ್ತಿಯು ಸಾರ್ಥಕತೆಯನ್ನು ಹೊಂದಿರುವು ದೆಂದು ಹೇಳಬಹುದಲ್ಲವೇ, ಸುಹೃದರೇ! ಇರಲಿ. ಇನ್ನೂ ಮುಂದಿನ ಫಲಿ ತಾಂಶವನ್ನು ತಿಳಿದ ಬಳಿಕ ನಲಿದಾಡುವ.'

ಶ್ರೀ.

# ತುರೀಯಾ ಭಾಗ.

## ಪ್ರಥಮಪರಿಚ್ಛೇದ.

(ನ್ಯಾಯವಿಮರ್ಶೆ—ಕೃತಾಂತನ ವಾಜ್ಮಾಲ)

ಸ್ಥಾಂಮು, ಶ್ರೀನಗರದ ನ್ಯಾಯಾಸ್ಥಾನದಲ್ಲಿ ವಿಚಾರಣೆ. ನ್ಯಾಯಾಸ್ಥಾನವು, ಸಕಲ ಸನ್ನಾಹದೊಡನೆ, ಪರಿಶೋಭಿಸುತ್ತಿದೆ. ನ್ಯಾಯವಾದಿಗಳೂ, ಪಂಚಾಯಿತರೂ, ಇತರ ಕಾರ್ಯನಿರ್ವಾಹಕರೂ ತಂತಮ್ಮ ನಿಯತಸ್ಥಾನದಲ್ಲಿ ಕುಳಿತಿರುವರು. ಜಮೀನ್ದಾರ್ ತಾರಾಪತಿರಾಯ, ಕೃತಾಂತರಿಬ್ಬರೂ ಬಿರುದುಗಳನ್ನು ಧರಿಸಿ ಕುಳಿತಿದ್ದ ಧರ್ಮಪಾಲನ ಬಳಿಯಲ್ಲಿ ಕುಳಿತಿದ್ದರು. ರಾವ್‌ಬಹದೂರ್ ರಾಧಾನಾಥರಾಯನು ನ್ಯಾಯಾಸ್ಥಾನದ ವಿಚಾರಣಾಕರ್ತನಾಗಿಯೂ, ಪೋಲೀಸ್ ಇನ್ಸ್ಪೆಕ್ಟರ್ ದಳವಾಯಿಸಿಂಗನು ಸೂಚನಾಕರ್ತನಾಗಿಯೂ ನಿಯಮಿತರಾಗಿದ್ದರು. ನ್ಯಾಯತೀರ್ಮಾನಕಾರನು (ದಂಡಾಧಿಕಾರಿ) ಬಂದು ಕುಳಿತಿದ್ದನು. ತಾರಾಪತಿರಾಯನು ಕುಳಿತಿದ್ದ ಸ್ಥಳಕ್ಕೆ ಹಿಂಗಡೆಯ ತೆರೆಯೊಳಗೆ ಸುನಂದಾ-ಗಂಗೆ-ಯಮುನೆಯರು ಕುಳಿತಿದ್ದರು. ಉಳಿದ ವಿಷಕಂಠಾದಿಗಳೂ, ಬಲವಂತಾದಿಗಳೂ ನ್ಯಾಯಸ್ಥಾನದ ಹೊರಗೆ ನಿಲ್ಲಿಸಲ್ಪಟ್ಟಿದ್ದರು. ವಿಚಾರಣೆಗೆ ಗೊತ್ತಾದ ವೇಳೆಯೂ ಬಂದಿತು ; ದಂಡಾಧಿಕಾರಿಯ ಆಜ್ಞೆಯೂ ಆಯಿತು. ಯಶವಂತ, ವಾಸುದೇವ, ಬಲವಂತ, ಸುಪಂಥರೂ ಕರೆಸಲ್ಪಟ್ಟು ಕೈಕೋಳಗಳೊಡನೆ ಬಂದು ನಿಂತರು. ತಾರಾಪತಿರಾಯನು, ಕ್ರೋಧಾಂಧನಾಗಿ ಏಳಹೋಗಿ, ಅಷ್ಟರಲ್ಲಿಯೇ ಧರ್ಮಪಾಲರಿಂದ ತಡೆಯು

ಲ್ಪಟ್ಟು, ಖತಿಗೊಂಡು ಕುಳಿತನು. ಬಳಿಕ ಧರ್ಮಪಾಲನ ಸೂಚನೆಯಂತೆ, ಮೊದಲು ಕೃತಾಂತನ ಹೆಸರೇ ಕರೆಯಲ್ಪಟ್ಟಿತು. ಕೃತಾಂತನು ವಿನೀತ ನಾಗಿ ಎದ್ದುಬಂದು, ವಿಚಾರಣಾಕರ್ತರ ಇದಿರಾಗಿ ನಿಂತು, ತಲೆಬಾಗಿ ವಂದಿಸಿದನು.

ವಿಚಾರಣಾಕರ್ತ (ರಾಧಾನಾಥರಾವ್.)—ಕುತೂಹಲದಿಂದ 'ಅಯ್ಯ, ಕೃತಾಂತ! ನೀನಿನ್ನೂ ಕೋಮಲಬಾಲಕನು. ಈಗಲೇ ನೀನು ಮಾಡಿ-ಮಾಡುತ್ತಿರುವ ಸಾಹಸಕಾರ್ಯಗಳು ಸ್ತುತ್ಯರ್ಹವಾದುವು ಗಳೇಸರಿ. ಆದರೂ, ನೀನರಿತಿರುವ ವಿಚಾರವೆಲ್ಲವನ್ನೂ ಯಥಾವ ತ್ತಾಗಿ ತಿಳಿಸು. ಸತ್ಯವನ್ನು ಮಾತ್ರ ಎಂದಿಗೂ-ಯಾರೂ ಉಲ್ಲಂ ಘಿಸಬಾರದು.'

ಕೃತಾಂತನು, ವೃದ್ಧಿಹೊಂದುತ್ತಿರುವ ಉತ್ಸಾಹಶಕ್ತಿಯಿಂದ ನಲವೇರಿ, ನ್ಯಾಯಸ್ಥಾನದಲ್ಲಿದ್ದವರೆಲ್ಲರೂ ಕೇಳುವಂತೆ ಸ್ಫುಟವಾಗಿಯೂ, ಘಟ್ಟಿಯಾಗಿಯೂ, ಗಂಭೀರವಾಗಿಯೂ, ಅರ್ಥವತ್ತಾಗಿಯೂ ತನ್ನ ಚರಿ ತೆಯೆಲ್ಲವನ್ನೂ ಹೇಳತೊಡಗಿದನು. [ನಮ್ಮ ಸೋದರಿಯರು ಮತ್ತೂ ಅಧಿ ಕಶ್ರದ್ಧೆಯಿಂದ ಇದನ್ನು ಅವಧರಿಸಬೇಕಲ್ಲವೆ ?]

ಕೃತಾಂತ—ದಂಡಾಧಿಕಾರಿಯ ಮತ್ತು ವಿಚಾರಣಾಕರ್ತನ ಕಡೆಗೆ ತಿರುಗಿ ಕೈಮುಗಿದು 'ಆಶ್ಚರ್ಯಜನಕವಾದ ನನ್ನ ಚರಿತ್ರೆಯನ್ನು ಯಥಾವ ತ್ತಾಗಿಯೇ ವಿವರಿಸುವೆನು. ನ್ಯಾಯಾಸ್ಥಾನದ ಸಮಸ್ತರೂ ಅವ ಧರಿಸಬಹುದಾಗಿದೆ. ಏನೆಂದರೆ:—

ಸುನಂದಾದೇವಿಯೇ ನಮ್ಮ ತಾಯಿ. ನನ್ನ ತಮ್ಮನಾದ ಮೋ ಹನಕುಮಾರನು ಗರ್ಭದಲ್ಲಿರುವಾಗ ನನ್ನ ತಾಯಿಯು, ಪ್ರಸುವಕ್ಕಾಗಿ ಕರೆಯಬಂದಿದ್ದ ತನ್ನ ತಂದೆಯೊಡನೆ, ಮೂರುವರ್ಷದ ಮಗುವಾಗಿದ್ದ ನನ್ನನ್ನು ಕರೆದುಕೊಂಡು, ಪತಿಯಾಜ್ಞೆಯನ್ನು ಹೊಂದಿ, ತೌರೂರಿಗೆ ತೆರಳಿ ದಳು. ಅಲ್ಲಿಗೆ-ಎಂದರೆ ದುರ್ಗಾಪುರಕ್ಕೆ ಹೋಗಿ ಸೇರಿದ ೩-೪ ತಿಂಗಳೊ

ಳಗಾಗಿಯೇ ಮೋಹನನು ಹುಟ್ಟಿದನು. ಅವನು ಹುಟ್ಟಿದ ಒಂದೆರಡು ತಿಂಗಳವರೆಗೂ ನಮ್ಮ ತಂದೆಯು, ನನ್ನ ತಾಯಿಗೆ ಬಹು ಪ್ರೇಮದಿಂದಲೇ, ಪತ್ರವನ್ನು ಬರೆಯುತ್ತಿದ್ದವರು ಆ ಬಳಿಕ ನಿಲ್ಲಿಸಿಬಿಟ್ಟರು. ನಾಲ್ಕಾರುತಿಂಗಳವರೆಗೆ ನಿರೀಕ್ಷಿಸಿದರೂ ನಮ್ಮ ತಂದೆಯಕಡೆಯಿಂದ ಸಮಾಚಾರವೇ ಬರಲಿಲ್ಲ. ನಮ್ಮ ತಾಯಿ ಬರೆದ ಪತ್ರಗಳಿಗೆ ಒಂದಕ್ಕಾದರೂ ಉತ್ತರದ ಮಾತೇ ಇಲ್ಲವೆಂದೂ, ಹೀಗಾಗಲು ಕಾರಣವೇನಿರಬಹುದೆಂದೂ ಮನದಲ್ಲಿಯೇ ಮರುಗುತ್ತಿದ್ದಳು. ಮೋಹನನಿಗೆ ವರ್ಷವಾಗುತ್ತಬಂದರೂ ಮಕ್ಕಳಮೇಲಾಗಲೀ, ಪತ್ನಿಯ ವಿಷಯದಲ್ಲಾಗಲೀ ನಮ್ಮ ತಂದೆಯ ಗಮನವಿಲ್ಲದಿದ್ದುದರಿಂದ ನಮ್ಮ ತಾಯಿಗೂ, ತಾಯಿಯ ತಂದೆತಾಯಿಗಳಿಗೂ ಅಧಿಕವ್ಯಾಕುಲವುಂಟಾಯಿತು. ಅವರೂ ಎಷ್ಟೋಬಗೆಯಾಗಿ ಬರೆದು ಕೇಳಿದರು. ಅವರಿಗೂ ಉತ್ತರವು ದೊರೆಯಲಿಲ್ಲ. ಇನ್ನಿದರಮೇಲೆ ತಮ್ಮ ಯತ್ನವೇನೂ ಇಲ್ಲವೆಂದು ಸುಮ್ಮನಾದರು.

ಹೀಗೆಯೇ ಒಂದೆರಡು ವರ್ಷಗಳು ಕಳೆದುಹೋದಬಳಿಕ ಈ ಕಡೆಯಿಂದ ಬಂದ ಯಾತ್ರಿಕರೊಬ್ಬರಿಂದ ನಮ್ಮ ತಂದೆಯು ತನ್ನ ಪತ್ನಿ, ಮೃತ್ಯುವಶಳಾದಳೆಂದು ಹೇಳಿಕೊಂಡು, ಮತ್ತೆ ಮದುವೆಯಾಗಿರುವರೆಂದು ತಿಳಿದುಬಂದಿತು. ಇದೇ ತಮಗೆ ಇಲ್ಲಿಂದ ಪತ್ರವಿಲ್ಲದಿರುವುದಕ್ಕೆ ಕಾರಣವಿರಬೇಕೆಂಬುವುದು ನಮ್ಮೆಲ್ಲರ ಮನಸ್ಸಿಗೂ ಹೊಳೆಯಿತು. ಇದರಿಂದ ನಮ್ಮ ತಾಯಿಯು, ತನ್ನನ್ನು ಅವಿಶ್ವಾಸಿನಿಯೆಂದೇನಾದರೂ ಭಾವಿಸಿ, ಹೀಗೆ ತನ್ನನ್ನು ನಿರಾಕರಿಸಿರಬಹುದೇನೆಂಬ ಸಂಶಯಕ್ಲೇಶದಿಂದ ತನ್ನ ಅಂತಸ್ತಾಪವೆಲ್ಲವನ್ನೂ ನನ್ನ ಕೈಯಿಂದ ನಮ್ಮ ತಂದೆಗೆ ವಿವರವಾಗಿ ಬರೆಯಿಸಿದಳು. ಆ ವೇಳೆಗೆ ನನಗೆ ೭-೮ ನೆಯ ವರ್ಷವು ನಡೆಯುತ್ತಿದ್ದಿತು. ಆಗಲೇ ನಾನು, ನಮ್ಮ ತಾತನ ಶಿಕ್ಷಣಾಕೌಶಲದಿಂದಲೂ, ನಮ್ಮ ತಾಯಿ, ತಾಯಿಯತಾಯಿಯರ ಹಿತಬೋಧನಾಶಕ್ತಿಯಿಂದಲೂ ಕನ್ನಡ ಮೂರನೆಯ ತರಗತಿಯಲ್ಲಿ ಓದುತ್ತಿದ್ದೆನಲ್ಲದೆ, ಯಾವ ಪುಸ್ತಕವನ್ನು ಅಥವಾ-ಎಂತಹ

ಮೋಡಿ ಕೈಬರೆವಣಿಗೆಯನ್ನು ಕೊಟ್ಟರೂ ಧಾರಾಳವಾಗಿ ಓದಬಲ್ಲವಳಾಗಿದ್ದೆನು. ಇದರಿಂದ ನಾನು ನಮ್ಮ ತಂದೆಗೆ ಕಾಗದವನ್ನು ಬರೆಯಬೇಕೆಂದರೆ ಉತ್ಸಾಹವನ್ನೇ ಹೊಂದುತ್ತಿದ್ದೆನಾದುದರಿಂದ, ಅದು ಮೊದಲು, ನಾನೇ ನಮ್ಮ ತಂದೆಗೆ ಕಾಗದವನ್ನು ಬರೆಯುತ್ತಿದ್ದೆನು. ಅದು ಹಾಗಿರಲಿ.

ನನ್ನ ಕಾಗದವು ಸೇರಿದ ಒಂದೆರಡು ವಾರಗಳಲ್ಲಿಯೇ ನಮ್ಮ ತಂದೆಯ ಕಡೆಯಿಂದ ನನ್ನ ಹೆಸರಿಗೆ ಬಂದ ಉತ್ತರಪತ್ರದಲ್ಲಿ–'ಬ್ರಹ್ಮಸಂಕಲ್ಪವು ಹೀಗಿತ್ತಾದುದರಿಂದ, ದ್ವಿತೀಯಸಂಬಂಧಕ್ಕೆ ಗುರಿಯಾಗಬೇಕಾಯಿತು. ಇದಕ್ಕಾಗಿ ಯಾರೂ ಹೇಗೂ ಯೋಚಿಸಬೇಕಾಗಿಲ್ಲ. ನಿಮ್ಮಲ್ಲಿಯಾಗಲೀ, ನಿಮ್ಮ ತಾಯಿಯ ವಿಷಯದಲ್ಲಾಗಲೀ ನನಗೆ ತಿರಸ್ಕಾರಬುದ್ಧಿಯಿರುವುದಿಲ್ಲ. ಆದರೆ ಈಗಲೇ ನಾನು ನಿಮ್ಮನ್ನು ಕರೆಯಿಸುವಂತಿಲ್ಲ. ಏಕೆಂದರೆ— ಪ್ರಬಲವ್ಯಾಜ್ಯಕ್ಕೆ ಸಿಕ್ಕಿ ನರಳುತ್ತಿರುವ ನಾನು, ಸದ್ಯಸ್ಥಿತಿಯಲ್ಲಿ ಊರೂರು ಸುತ್ತಬೇಕಾಗಿ ಬಂದಿದೆ ಸಾಲದುದಕ್ಕೆ ಮಾತೃವಾಕ್ಯವೂ ತಡೆಮಾಡುತ್ತಿದೆ. ಈ ಹಲವು ಕಾರಣಗಳಿಂದ ಪ್ರತ್ಯೇಕಭವನವನ್ನು ನಿರ್ಮಿಸಿ, ಆ ಬಳಿಕ ನಿಮ್ಮನ್ನು ಕರೆಯಿಸಿಕೊಳ್ಳುವೆನು. ಅವರೆಗೂ ನೀವು ನನಗೆ ತೊಂದರೆಯನ್ನು ಕೊಡದೆ, ಅಲ್ಲಿಯೇ ಇರಬೇಕೆಂದು ಕೇಳುತ್ತಿರುವೆನು.' ಹೀಗೆಂದು ಬರೆದಿದ್ದರು.

ಅಷ್ಟಕ್ಕೇ ನಾವು ಸುಮ್ಮನಿರದೆ, ಮತ್ತೆಯೂ ಪ್ರಾರ್ಥಿಸಿಕೊಂಡುದಕ್ಕೆ ನಮ್ಮ ತಾತನಮೇಲೆಯೂ, ನಮ್ಮ ತಾಯಿಯ ವಿಷಯದಲ್ಲಿಯೂ ಕೆಲವು ನಿಷ್ಠುರವಾದ ಮಾತುಗಳನ್ನು ಬರೆದು, ಇನ್ನುಮುಂದೆ ನಾನು ಬರಹೇಳುವವರೆಗೆ, ಈ ಪ್ರಸ್ತಾಪವಾಗಿ ಬರೆದು ಬರುವ ಪತ್ರಕ್ಕೆ ಉತ್ತರವು ದೊರೆಯದೆಂದೂ, ದುಡುಕಿ ಬಂದರೆ ಆಗಲೇ ತ್ಯಾಗಮಾಡುವೆನೆಂದೂ ಉತ್ತರವನ್ನು ಬರೆದಟ್ಟಿದರು. ಹೀಗಾದಬಳಿಕ, ನಮ್ಮ ತಾತನು ನಮ್ಮ ತಾಯಿಗೆ ಬಹುವಿಧವಾಗಿ ಸಮಾಧಾನ ಹೇಳಿದುದಲ್ಲದೆ, ನಮ್ಮನ್ನು ಕಳುಹುವ ಮಾತನ್ನೇ ಬಿಟ್ಟುಬಿಟ್ಟರು.

ಹೀಗೂ ೩-೪ ವರ್ಷಗಳಾದುವು. ಕಡೆಗೆ ಈಗ ೧೦ ತಿಂಗಳ ಮೊದಲು, ನಮ್ಮ ತಂದೆಯ ಹಸ್ತಾಕ್ಷರ, ಮೊಹರು ಮುದ್ರೆಗಳಿಂದ ಕ್ರಮವಾಗಿ ನಮ್ಮ ತಾಯಿಯ ಹೆಸರಿಗೆ ಮಕ್ಕಳೊಡನೆ ಹೊರಟುಬರಬೇಕೆಂಬ ಅರ್ಥದಿಂದ ಬರೆಯಲ್ಪಟ್ಟ ಪತ್ರವು ನಮ್ಮ ಕೈಸೇರಿತು. ಆದರಿಂದ ಆವರೆಗೂ ನಮಗೆ ಬರುತ್ತಿದ್ದ ಪತ್ರಗಳು ಇತರರ ಕೈಬರೆಹವೆಂಬುದೇ ದೃಢಪಟ್ಟಿತಲ್ಲದೆ, ಹೀಗಾಗಲು ಕಾರಣವೇನೆಂಬ ಶಂಕೆಯೂ ಉಂಟಾಯಿತು.

ಹೇಗಾದರೂ ಆಗಲಿ, ಮತ್ತೆ ಪತಿಸಾಮೀಪ್ಯವನ್ನು ಸೇರಿದರೆ ಸಾಕೆಂಬ ಒಂದೇಹಟದಿಂದ ನಮ್ಮ ತಾಯಿಯು, ನನ್ನೊಡನೆ-ತಂದೆಯ ಮನೆಯಾಳುಗಳ ಸಹಾಯದಿಂದ ಹೊರಟಳು. ಬರುವ ದಾರಿಯಲ್ಲಿ, ಗೊಲ್ಲರಪಾಳ್ಯದ ಸತ್ರಾಧಿಪತಿಯು ಕಾದಿದ್ದು, ನಮ್ಮನ್ನು ಬಹುವಿಧವಾಗಿ ಪ್ರಾರ್ಥಿಸಿ, ಆಹಾರವನ್ನು ತೆಗೆದುಕೊಂಡು ಹೋಗಲು, ನಮ್ಮನ್ನು ಬಿಡದೆ ಕರೆದೊಯ್ದು, ನಮ್ಮನ್ನು ಪಚರಿಸಿದ ಬಳಿಕ ಮತ್ತೆ ಬೀಳ್ಕೊಟ್ಟನು. ಅಲ್ಲಿ ತೆಗೆದುಕೊಂಡ ಮಾದಕ ದ್ರವ್ಯಸೇವನೆಯಿಂದ ಎಲ್ಲರೂ ಮೈಮರೆತು ಬಂಡಿಯಲ್ಲಿ ಒರಗಿದ್ದೆವು. ಬಾಲ್ಯಚಾಪಲ್ಯದಿಂದ ನನಗೆ ಮಾತ್ರ ನಿದ್ದೆ ಹತ್ತಲಾರದಿದ್ದಿತು. ನಾಲ್ಕಾರು ಮೈಲಿಗಳನ್ನು ದಾಟಿ ಬರುವುದರೊಳಗಾಗಿಯೇ ಬಂಡಿಯನ್ನೇ ಅನುಸರಿಸಿ ಬಂದ ಸುಪಂಥನು, ಸದ್ದುಮಾಡದೆ ನನ್ನನ್ನು ಎತ್ತಿ ಹೆಗಲಮೇಲೇರಿಸಿ, ಒಂದೇ ಓಟದಿಂದ ಓಡಿದನು. ಅವನ ಹಿಂದೆ ಬಲವಂತನೂ ಓಡಿಬಂದನು. ಬಂಡಿಯಿದ್ದಲ್ಲಿಗೆ-ಮೆಳೆಗಳಲ್ಲಿ ಅಡಗಿದ್ದ ಕಳ್ಳರು ಓಡಿಹೋದರು. ಅಲ್ಲಿ ನಡೆದುದನ್ನು ನಾನು ಕಣ್ಣಾರೆ ನೋಡಲಾಗಲಿಲ್ಲ

ಬಲವಂತ-ಸುಪಂಥರು ನನ್ನನ್ನು ಹೊತ್ತುಕೊಂಡುಹೋಗಿ, ಒಂದು ಪಾಳುಮನೆಯಲ್ಲಿ ಕೂಡಿ, ಆಹಾರವನ್ನು ಕೊಡುವ ನೆಪವಿಟ್ಟು, ದಿನಕ್ಕೆರಡುಬಾರಿಯಾದರೂ ತಪ್ಪದೆ ಬಂದು, ನಾನು ಸುಪಂಥನನ್ನು ಮದುವೆಯಾಗಲೊಪ್ಪಬೇಕೆಂದು ನನ್ನನ್ನು ನಿರ್ಬಂಧ ಮಾಡುತ್ತಿದ್ದರು. ನಾನು

ಆ ವೇಳೆಯಲ್ಲಿ, ಉಸಿರೆತ್ತದೆ ಅಳುವೊಂದರಿಂದಲೇ ಪರ್ಯವಸಾನ ಮಾಡುತ್ತಿದ್ದುದರಿಂದ, ಅವರ ದೆಸೆಯಿಂದುಂಟಾದ ಅನೇಕ ವಿಧವಾದ ಹಿಂಸೆಗಳಿಗೂ ಸಿಕ್ಕಿ ಪರಿತಪಿಸುತ್ತಿದ್ದೆನು.

ಹೆಚ್ಚು ದಿನಗಳು ಹಾಗೆ ನಡೆಯಲಿಲ್ಲ. ಒಂದುವಾರಾವಧಿ ಮಾತ್ರವೇ. ಅಷ್ಟರಲ್ಲಿಯೇ ಧರ್ಮಸಂಸ್ಥಾಪಕರಾದ ಧರ್ಮಪಾಲರು, ವಿದ್ರೋಹಿಗಳ ಕಡೆಯ ನರಸಿಂಗನೆಂಬ ದೂತನನ್ನು ಕೈವಶಪಡಿಸಿಕೊಂಡು, ಅವನಿಂದ ಅಲ್ಲಿಯ ರಹಸ್ಯವೆಲ್ಲವನ್ನೂ ತಿಳಿದು, ಅದೇ ವೇಷವನ್ನು ಧರಿಸಿ, ವಿದ್ರೋಹಿಗಳನ್ನು ವಂಚಿಸಿ ಬಂದು, ಮೊದಲುದಿನದಲ್ಲಿ ನನ್ನನ್ನು ಪತ್ರಮುಖದಿಂದೆಚ್ಚರಿಸಿ ಹೋದರು. ಮರುದಿನದ ರಾತ್ರಿಯಲ್ಲಿ ಮತ್ತೆ ಬಂದು ನಿಜಪರಿಚಯವನ್ನುಂಟುಮಾಡಿ, ನನ್ನ ಆತ್ಮರಕ್ಷಣೆಗಾಗಿ ಸಣ್ಣ ತುಬಾಕಿಯೊಂದನ್ನು ಪ್ರಯೋಗೋಪಸಂಹಾರ ಕ್ರಮಗಳೊಡನೆ ನನ್ನ ಕೈಗಿತ್ತು, ನನ್ನ ಬಿಡುಗಡೆಗೆ ಬೇಕಾದ ಉಪಾಯಗಳನ್ನು ಸೂಚಿಸಿ, ಸಲಕರಣೆಗಳನ್ನೂ ಕೊಟ್ಟು, ಅಭಯವಿತ್ತು ತೆರಳಿದರು. ಇದಾದ ಮರುದಿನ ಮಧ್ಯಾಹ್ನದಲ್ಲಿ ಆಹಾರವನ್ನು ತಂದ ಬಲವಂತನನ್ನು ನಾನು, ಧರ್ಮಪಾಲರ ಸೂಚನೆಯಂತೆ ವೇಷಾಂತರದಿಂದ ವಂಚಿಸಿ, ಅವನನ್ನು ಬಂದಿಯಾಗಿ ಮಾಡಿ ಹೊರಟು, ನನ್ನ ತಿಳಿವಿಗಾಗಿ ಅಲ್ಲಲ್ಲಿ ದಾರಿಯುದ್ದಕ್ಕೂ ಚೆಲ್ಲಿದ್ದ ಕಾಡುಸೌದೆಗಳನ್ನು ಆರಿಸುತ್ತ, ನೋಡುವವರಿಗೆ ಅನುಮಾನವಾಗದಂತೆ ಹಾಗೆಯೇ ಚೌಕದ ಒಳಿಗೆ ಬಂದೆನು. ಅಷ್ಟರಲ್ಲಿಯೇ ಬಂದು, ತಡೆಗಟ್ಟಿದ ಚೌಕದ ಕಳ್ಳರನ್ನು ಪ್ರತಿಭಟಿಸಿ ತುಬಾಕಿ ಮದ್ದಿನಿಂದ ಅವರಲ್ಲಿ ಒಬ್ಬಿಬ್ಬರನ್ನು ಕೆಳಗೆ ಬೀಳಿಸಿದೆನು. ಅಷ್ಟರಲ್ಲಿಯೇ ನನ್ನ ಸಹಾಯಕ್ಕಾಗಿ ಪೋಲೀಸು ಆಳಿನ ವೇಷದಲ್ಲಿ ಬಂದ ಧರ್ಮಪಾಲರು, ನನ್ನನ್ನು ತಮ್ಮೊಡನೆ ಇಲ್ಲಿಗೆ ಕರೆತಂದರು.

ನನ್ನನ್ನು ಕರೆತಂದುದು ಮೊದಲು ಧರ್ಮಪಾಲರು ನನಗೆ ಈ ವೇಷವನ್ನೂ, ಈ ಕೃತಾಂತನಾಮಕರಣವನ್ನೂ ವಿಧಿಸಿದುದಲ್ಲದೆ ಅಹೋ

ರಾತ್ರಿಯೂ ನನಗೆ ಅಂಗಸಾಧನೆ, ಕೈಗಾರಿಕೆ, ಕುದುರೆ ಸವಾರಿ, ಬೈಸಿಕಲ್ ಸವಾರಿ, ಪಿಸ್ತೂಲ್‌ಪ್ರಯೋಗ, ಯಂತ್ರಕ್ಕೆ ವಸ್ತುಸ್ವರೂಪವನ್ನು ಆಕರ್ಷಿಸುವ ರೀತಿ ಇವೇ ಮೊದಲಾದ ಹಲವು ಬಗೆಯ ಕುಶಲ ಕಲೆಗಳನ್ನೂ, ನಮ್ಮ ಆರ್ಯನೀತಿಗೆ ಒಳಪಟ್ಟ ಧರ್ಮರಹಸ್ಯ-ದಂಡನೀತಿ ಕ್ರಮಗಳನ್ನೂ ಬೋಧಿಸುತ್ತ ಬಂದರು. ನನಗೂ ಅವೆಲ್ಲವನ್ನೂ ಕಲಿಯಬೇಕೆಂಬ ಶ್ರದ್ಧೆಯೂ, ತಕ್ಕಷ್ಟು ಮೇಧಾಶಕ್ತಿಯೂ ಹೆಚ್ಚುತ್ತಲೇ ಇದ್ದಿತು.

ಹೀಗೆ ನನ್ನ ವ್ಯಾಸಂಗ ಅಭ್ಯಾಸಗಳು ನಡೆಯುತಿರುವಾಗಲೇ ಧರ್ಮಪಾಲರು, ಅಹಿತರ ಕುಹಕವನ್ನು ತಿಳಿದು, ನಮ್ಮ ತಾಯಿಯ ಪ್ರಾಣರಕ್ಷಣೆಗಾಗಿ ಶ್ರೀನಗರದಿಂದ ನಮ್ಮ ತಾತನು ಬರೆದಂತೆ ನಮ್ಮ ತಂದೆಗೆ ಪತ್ನೀಪುತ್ರರನ್ನು ದುರ್ಗಾಪುರಕ್ಕೆ ಕಳುಹಿಸಿಕೊಡಬೇಕೆಂಬ ಅಭಿಪ್ರಾಯವುಳ್ಳ ಪತ್ರವನ್ನು ಬರೆದು ದೂತನ ಕೈಯಿಂದ ಮುಟ್ಟಿಸಿದರು. ಪತ್ರವು ಸ್ವಲ್ಪ ವ್ಯಾಕುಲವನ್ನುಂಟುಮಾಡುವಂತಹ ಕಾರಣಗಳನ್ನು ಸೂಚಿಸಿದ್ದುದರಿಂದ ನಮ್ಮ ತಂದೆಯು. ಪತ್ನಿಯನ್ನು ಪುತ್ರನೊಡನೆ ನಾಳೆಯೇ ಕಳುಹುವೆನೆಂದು ಉತ್ತರವನ್ನು ಕಳಿಸಿದರು.

ಇಷ್ಟರಲ್ಲಿ ಅಹಿತರ ಒಳಸಂಚನ್ನು ತಿಳಿದ ಧರ್ಮಪಾಲರು, ಗೊಲ್ಲರಪಾಳ್ಯಕ್ಕೆ ಹೋಗುವ ದಾರಿಯಲ್ಲಿ ಗುಡಾರವನ್ನು ಹೊಡೆಯಿಸಿ, ದಳವಾಯಿಸಿಂಗರು ನಮ್ಮ ತಾತನ ವೇಷದಿಂದ ಗುಡಾರದ ಬಾಗಿಲಲ್ಲಿ ಸೇವಕನೊಡನೆ ಕಾದಿದ್ದು, ದಾರಿಯಲ್ಲಿ ಬರುವ ನಮ್ಮ ತಾಯಿಯನ್ನು ಒಳಕ್ಕೆ ಬರಮಾಡಿಕೊಳ್ಳಬೇಕೆಂದು ಕಟ್ಟುಮಾಡಿ, ತಾವು ನನ್ನೊಡನೆ ಒಳಗೆ ಮರೆಯಾಗಿದ್ದರು.

ಸ್ವಲ್ಪ ಹೊತ್ತಿನಲ್ಲಿಯೇ ನಮ್ಮ ನಿರೀಕ್ಷೆಗೆ ತಕ್ಕಂತೆ ನಮ್ಮ ತಾಯಿ ಕುಳಿತಿದ್ದ ಬಂಡಿಯೂ ಬಂದಿತು. ಬಾಗಲಲ್ಲಿದ್ದವರಿಂದ ತಾಯಿಯು ನನ್ನ ತಮ್ಮನೊಡನೆ ಬಂಡಿಯಿಂದಿಳಿಸಲ್ಪಟ್ಟು ಕರೆಯಿಸಲ್ಪಟ್ಟಳು. ಒಳಗೆ ಬಂದ ಬಳಿಕ, ಧರ್ಮಪಾಲರು ಸಂಗತಿಯನ್ನು ಸಂಗ್ರಹವಾಗಿ ತಿಳಿಯಹೇಳಿ,

ನಮ್ಮ ತಾಯಿಯನ್ನು ಮೋಹನನೊಡನೆ ಶ್ರೀನಗರದಲ್ಲಿರಬೇಕೆಂದು ಸೂಚಿಸಿ, ದಳವಾಯಿಸಿಂಗರಿಗೆ ಅವರನ್ನು ಸುಖವಾಗಿ ಕರೆತಂದಿಲ್ಲಿಗೆ ಬಿಡುವಂತೆ ನಿಯಮಿಸಿ, ತಾವೇ ಸುನಂದೆಯಂತೆಯೂ, ನನ್ನನ್ನೇ ಮೋಹನನಂತೆಯೂ ತಮ್ಮ ನಟನೆಯಿಂದ ಭ್ರಾಂತಿ ಹುಟ್ಟಿಸಿ, ನನ್ನೊಡನೆ ಬಂಡಿಯನ್ನು ಹತ್ತಿದರು. ಮುಂದೆ ಬೇಕಾದ ಸಾಧನಗಳನ್ನೊಳಗೊಂಡಿದ್ದ ಪೆಟ್ಟಿಗೆಯನ್ನೂ ಬಂಡಿಯಲ್ಲಿರಿಸಿಕೊಂಡು ಹೊರಟೆವು. ಬಂಡಿಯೂ ಗೊಲ್ಲರಪಾಳ್ಯದ ಕಳ್ಳರ ಚೌಕಕ್ಕೆ ಬಂದಿತು. ಅಲ್ಲಿಯವರೆಗೂ ಸುನಂದೆಯಂತೆಯೇ ನಟಿಸುತ್ತಿದ್ದ ಧರ್ಮಪಾಲರ ಮಾಟವನ್ನರಿಯದೆ, ಗೋಪಾಲನು ಅಲ್ಲಿ ಬಂಡಿಯನ್ನು ನಿಲ್ಲಿಸಿ, ನಮ್ಮನ್ನು ಬೆದರಿಸಲು ಶಿಳ್ಳೆಹಾಕಿದನು. ಕೂಡಲೇ ಮೆಳೆಯಲ್ಲಿ ಅಡಗಿದ್ದ ಕಳ್ಳರು ಬಂದು ಬಂಡಿಯನ್ನು ಮುತ್ತಿದರು. ಈ ಸಂದರ್ಭದಲ್ಲಿಯೇ ನಾವು ಬಂಡಿಯ ಕದಗಳನ್ನು ಭದ್ರವಾಗಿ ಹಾಕಿ, ಒಳಗೆ ಆಯುಧಗಳನ್ನೂ, ಯಂತ್ರಗಳನ್ನೂ, ಬೆಳಕುಗಳನ್ನೂ ಕ್ರಮಪಡಿಸಿಟ್ಟುಕೊಂಡಿದ್ದೆವು.

ಹೀಗೆ ಗುಪ್ತಸಂಧಾನದಲ್ಲಿರುವ ನಮ್ಮ ಒಳಗುಟ್ಟನ್ನರಿಯದೆ ಗೋಪಾಲನೇ ಮೊದಲಾದವರೆಲ್ಲರೂ ಕೋಲಾಹಲದಿಂದ ಸುತ್ತಿಮುತ್ತಿ ಬಂಡಿಯ ಬಾಗಿಲನ್ನು ತೆರೆದರು. ಒಡನೆಯೇ ನಾವು ತೋರಿಸಿದ ಬೆಳಕಿಗೆ ಎಲ್ಲರೂ ಭ್ರಾಂತರಾಗಿ, ನಿಂತಂತೆಯೇ ಕಣ್ಣುಗಳನ್ನು ಮುಚ್ಚಿಕೊಂಡರು. ಧರ್ಮಪಾಲರು ಕೆಳಗಿಳಿದರು ; ಯಂತ್ರಕ್ಕೆ ಅವರ ಆಗಿನ ಭಾವನಾಸ್ವರೂಪಗಳನ್ನು ಆಕರ್ಷಿಸಿಕೊಳ್ಳುತ್ತಾ ಬಂದರು. ನಾನೂ ಅವರ ಅಭಿಪ್ರಾಯದಂತೆ ಪಿಸ್ತೂಲನ್ನು ಹಿಡಿದು ಕಳ್ಳರು ಮೇಲೆಬೀಳದಂತೆ ತಡೆಯುತ್ತಿದ್ದೆನು.

ಧರ್ಮಪಾಲರು ಅಷ್ಟರಲ್ಲಿ ತಮ್ಮ ಕೆಲಸವನ್ನು ಮುಗಿಸಿ, ಶಂಖವನ್ನೂದಿದರು. ಮೊದಲೇ ಗೊತ್ತಾಗಿದ್ದಂತೆ ಮರದಮೇಲೆ ಅಡಗಿದ್ದ ಧರ್ಮಪಾಲರ ಕಡೆಯ ಭಟರು ಆ ಕ್ಷಣವೇ ಬಂದು ಸೇರಿ ಎಲ್ಲರನ್ನೂ ಸೆರೆಹಿಡಿದರು. ಆಗಲೇ ಪ್ರತಿಷ್ಠೆಯನ್ನು ತೋರಿಸಿದ ಗೋಪಾಲನ ಬಲದತೋಳು

ನನ್ನ ಕೈಕೋವಿಯಿಂದ ಭೇದಿಸಲ್ಪಟ್ಟಿತು. ಅದಿರಲಿ, ಇಷ್ಟೆಲ್ಲಾ ಮುಗಿದು ನಾವು ಜಯವನ್ನು ಹೊಂದಿ, ಶ್ರೀನಗರಕ್ಕೆ ಬಂದು ಸೇರುವುದರೊಳಗಾಗಿಯೇ ದಳವಾಯಿಸಿಂಗರ ಸಹಾಯದಿಂದ ನಮ್ಮ ತಾಯಿಯು ಮೋಹನನೊಡನೆ ಬಂದು ಸೇರಿದಳು.

ಹೀಗೂ ಒಂದು ಪಕ್ಷವಾಗಿರಬಹುದು. ಅಷ್ಟರಲ್ಲಿಯೇ ಗೊಲ್ಲರ ಪಾಳ್ಯಕ್ಕೆ ಹೋಗಿದ್ದ ಧರ್ಮಪಾಲರು, ಯಾರಿಗೂ ತಿಳಿಯದಂತೆಯೇ ನಮ್ಮ ತಂದೆಯು, ಅಹಿತರ ವಂಚನೆಗೆ ಗುರಿಯಾಗಿ ಪ್ರಾಣಾಪಾಯದಲ್ಲಿರುವ ಸಂಗತಿಯನ್ನು ತಿಳಿದುಬಂದು, ನನ್ನಲ್ಲಿ ಹೇಳಿ, ನನ್ನನ್ನೂ ಜತೆಗೊಂಡು, ಮತ್ತೆ ಗೊಲ್ಲರಪಾಳ್ಯಕ್ಕೆ ಹೋದರು. ಅಲ್ಲಿ ಉಪಾಯ-ಚಾಕಚಕ್ಯಗಳಿಂದ ವರ್ತಮಾನವಿಂತಹುದೆಂದು ತಿಳಿಯಲಾಯಿತು. ಬಳಿಕ ಧರ್ಮಪಾಲರು, ನನ್ನನ್ನು ಮುಂದಿನಕಾರ್ಯಗಳಲ್ಲಿ ನಿಯಮಿಸಿ, ನಮ್ಮ ಕಿರುತಾಯಿಗೆ ಹಿತ ಸೂಚನಾಪತ್ರವೊಂದನ್ನು ಬರೆದು, ನನ್ನ ಕೈಯಲ್ಲಿತ್ತುಕಳುಹಿದರು.

ಹೀಗೆ ಬಲವತ್ತರವಾದ ಕಾರ್ಯದಲ್ಲಿ ನಿಯೋಜಿತಳಾದ ನಾನು, ಬೈಸಿಕಲ್ ಸಹಾಯದಿಂದ ಶ್ರೀನಗರಕ್ಕೆ ಬಂದು, ಡಾಕ್ಟರರನ್ನು ಗೊಲ್ಲರಪಾಳ್ಯಕ್ಕೆ ಹೋಗುವಂತೆ ಹೇಳಿ, ದಳಪತಿಯನ್ನು ಕರೆದು—'ನಮ್ಮ ಭಟರುಗಳೆಲ್ಲರೂ ಸಾಯುಧರಾಗಿ ಗೊಲ್ಲರಪಾಳ್ಯಕ್ಕೆ ಹೋಗಿ ಸತ್ರದ ಸುತ್ತುಮುತ್ತಲ ಮರಗಳಮೇಲೆ ಕಾದಿದ್ದು ತುತೂರಿಯಶಬ್ದವು ಕೇಳಿಬಂದಕೂಡಲೆ ಎಲ್ಲರೂ ಸತ್ರವನ್ನು ಮುತ್ತಬೇಕಲ್ಲದೆ, ಮುಖಂಡರೊಡನೆ ಕೆಲವರು ಕೈಬೇಡಿ-ಹಗ್ಗಗಳನ್ನೂ ತೆಗೆದುಕೊಂಡು ಸತ್ರದೊಳಕ್ಕೆ ಬರಬೇಕು. ಇದಲ್ಲದೆ ಸ್ವಾರಿಗೆ ಯೋಗ್ಯವಾದ ಮತ್ತು ಇತರ ಸಾಮಗ್ರಿಗಳನ್ನಿಡಬೇಕಾದ ಬಂಡಿಗಳೂ ಹೋಗಿರಬೇಕು.' ಹೀಗೆಂದು ಕಟ್ಟುಮಾಡಿ ಅವರನ್ನು ಕಳುಹಿದ ಬಳಿಕ, ಅಲ್ಲಿ ನಿಲ್ಲದೆ ವಿಷಹರಪುರಕ್ಕೆ ಹೋಗಿ ಸೇರಿದೆನು. ನಾನು ನಮ್ಮ ತಂದೆಯ ಮನೆಯ ಬಳಿಗೆ ಹೋಗುವಷ್ಟರಲ್ಲಿಯೇ ಯಶವಂತನು, ವಾಸುದೇವನೊಡನೆ ಕಳ್ಳತನದಿಂದ ಹೊರಬಿದ್ದು ಓಡಿಹೋದುದನ್ನು ಕಂಡು, ಆಗಲೇ

ನಮ್ಮ ಕಿರುತಾಯಿಯು, ಮಲಗುವ ಮನೆಯಬಳಿಗೆ ಹೋಗಿ ನಿದ್ದೆಯ ಲ್ಲಿದ್ದವಳ ಮೇಲೆ ಪತ್ರವನ್ನೆಸೆದು, ಕಾದಿದ್ದು, ಬಳಿಕ ಕಾಣಿಸಿಕೊಂಡು ಳಿಗೆ ಧರ್ಮಪಾಲರ ಅಪ್ಪಣೆಯನ್ನೂ, ಮುಂದೆ ಮಾಡಬೇಕಾದ ಕೆಲಸ ವನ್ನೂ ಸೂಚಿಸಿ, ದಳವಾಯಿಸಿಂಗರ ಬಳಿಗೆ ಹೊರಟೆನು. ನಾನು ಅಲ್ಲಿಂದ ಕಾರ್ಯವನ್ನು ಮುಗಿಯಿಸಿಕೊಂಡು ಬರುವಷ್ಟರಲ್ಲಿ, ನಮ್ಮ ಮಲತಾಯಿ ಹೊರಡಲನುವಾಗಿದ್ದಳು. ಅವಳನ್ನು ಬಂಡಿಯಲ್ಲಿ ಕುಳ್ಳಿರಿಸಿ ಗೊಲ್ಲರಪಾ ಳ್ಯಕ್ಕೆ ಕಳಿಸಿದ ಬಳಿಕ, ಅಮ್ಮಾಯಿಯಾಯವರನ್ನೂ ಅವರ ಸಾಮಗ್ರಿಗ ಳೊಡನೆ ಮತ್ತೊಂದು ಬಂಡಿಯ ಮೇಲೇರಿಸಿ, ಮನೆಯಲ್ಲಿದ್ದವರನ್ನು ಹಿಡಿದು, ಮನೆಬಾಗಿಲುಗಳಿಗೆ ಬೀಗಮುದ್ರೆಗಳನ್ನು ಹಾಕಿ, ಕಾವಲಿರಿಸಿದ ಬಳಿಕ ನಾನು, ಅಮ್ಮಾಯಿಯಾಯವರನ್ನು ಸುಕನ್ಯಾದೇವಿಯ ಬಳಿಯಲ್ಲಿ ಬಿಟ್ಟು, ಅಡಿಗೆಯವರೇ ಮೊದಲಾದವರನ್ನು ದಳವಾಯಿಸಿಂಗರ ವಿಚಾರಣೆ ಗೊಪ್ಪಿಸಿ, ನಾನು ಅದೇ ಕ್ಷಣವೇ ಗೊಲ್ಲರಪಾಳ್ಯಕ್ಕೆ ಹೊರಟೆನು.

ಇಷ್ಟನ್ನೂ ಕಾಲನಿರ್ಣಯದಿಂದ ಮೊದಲೇ ಗೊತ್ತುಮಾಡಿದ್ದ ಪಟ್ಟಿ ಯ ಪ್ರಕಾರ ಲೇಶಮಾತ್ರವೂ ನ್ಯೂನಾತಿರಿಕ್ತವಾಗದಂತೆ ನಡೆಯಿಸಿ, ನಾನು ಗೊಲ್ಲರಪಾಳ್ಯವನ್ನು ಸೇರುವುದರೊಳಗಾಗಿ ನಮ್ಮ ಮಲತಾಯಿಯು ಧರ್ಮ ಪಾಲರ ಸಮ್ಮುಖವನ್ನು ಸೇರಿ, ಮುಂದಿನ ಕೆಲಸಗಳೇನೆಂಬುದನ್ನು ಕೇಳಿ ತಿಳಿದು, ಸಿದ್ಧವಾಗಿದ್ದಳು. ಅಲ್ಲಿಗೆ ನಾನು ಹೋಗಿ ಸೇರಿದ ಕೂಡಲೇ ಸತ್ರದ ಕಾವಲಿನ ಕರಿಯನನ್ನು ದಾನದಂಡೋಪಾಯಗಳಿಂದ ವಶಪಡಿಸಿ ಕೊಂಡು, ಅವನ ಮುಖದಿಂದ ಗೊಲ್ಲರಪಾಳ್ಯದ ಪಟೇಲ-ಕರಣಿಕರಿಗೆ ಬಲ ವಂತನೇ ಹೇಳಿ ಕಳಿಸಿದಂತೆ-' ಈ ರಾತ್ರಿಯೊಂದು ವಿಶೇಷವು ನಡೆಯುವಂ ತಿದೆ; ಕ್ಷಣಮಾತ್ರದಲ್ಲಿ ಬಹು ಸುಲಭರೀತಿಯಿಂದ ನಮ್ಮ ಕಾರ್ಯಸಿದ್ಧಿಯಾ ಗುವಂತಿದೆ. ಹಾಗಾದರೆ, ನಿಮ್ಮ ತಲೆಯಮೇಲೆ ಹೊನ್ನಿನ ಮಳೆಯನ್ನೇ ಸುರಿಸಿಬಿಡುತ್ತೇನೆ. ಇದಕ್ಕಾಗಿ ನೀವು ಈ ರಾತ್ರಿಯೇ-ಈಗಲೇ ನಮ್ಮವ ರೆಲ್ಲರನ್ನೂ ಒಟ್ಟುಗೂಡಿಸಿ ಕರೆತಂದು ಸತ್ರದ ಬಳಿಯಲ್ಲಿರಬೇಕಲ್ಲದೆ,

ಕೊಳಲೂದಿದ ಕೂಡಲೇ ಎಲ್ಲರೂ ಸತ್ರದೊಳಗೆ ನುಗ್ಗಬೇಕು.' ಹೀಗೆ ಹೇಳಿಕಳಿಸಿ ಅವರಿಂದ ಹಾಗೆಯೇ ದಂಗೆಕೋರರನ್ನು ಸೇರಿಸುವಂತೆ ಮಾಡಿಸಿ ಬಂದೆವು.

ಇಷ್ಟರಲ್ಲಿ ನಮ್ಮ ತಂದೆಯ ವಧಕಾರ್ಯಕ್ಕೆಂದು ಇವರೆಲ್ಲರೂ ಸಿದ್ಧರಾಗಿ ಸತ್ರದಲ್ಲಿ ಸೇರಿದ್ದರು. ಮೊದಲು, ನಮ್ಮ ತಂದೆಗೆ ವಾಸುದೇವ-ಯಶವಂತರು ಕಾಣಿಸಿಕೊಂಡು, ಆಪ್ತರಂತೆ ನಟಿಸಿ, ಆಹಾರವನ್ನು ತರಲು ಬೇರೆಕಡೆಗೆ ಹೋದರು. ಅದೇ ವೇಳೆಯಲ್ಲಿಯೇ ನಮ್ಮ ಬಲತಾಯಿಯು ಕಿರುಮನೆಯೊಳಹೊಕ್ಕು, ಪತಿಯ ಮಂಚದ ಕೆಳಗೆ ಅಡಗಿದ್ದಳು. ವಾಸುದೇವಾದಿಗಳು ಮತ್ತೆಬಂದು, ವಿಷಚೂರ್ಣ ಮಿಶ್ರವಾದ ಹಾಲನ್ನು ನಮ್ಮ ತಂದೆಗೆ ಕೊಟ್ಟು, ಕುಡಿಯ ಹೇಳಿದರು. ಆದರೆ, ನಮ್ಮ ಮಲತಾಯಿಯು ಆ ಹಾಲು ಹೊಟ್ಟೆಗೆ ಹೋಗದೆ ಕೆಳಗೆ ಸುರಿದುಹೋಗುವಂತೆ ಮಾಡಿದಳು.

ನಾವು ಇದೆಲ್ಲವನ್ನೂ ಕಿಟಕಿಯ ರಂಧ್ರದಲ್ಲಿ ಜಾಗರೂಕತೆಯಿಂದ ನೋಡುತ್ತ, ನಮ್ಮ ತಂದೆಯು ಚೇತರಿಸಿಕೊಳ್ಳುವಂತೆ ಆತನ ಮುಖಕ್ಕೆ ಗೋಡೆಯ ರಂಧ್ರಮುಖದಿಂದ ಡಾಕ್ಟರ ಕೈಯಲ್ಲಿ ಅತ್ತರು-ಪನ್ನೀರು ಮೊದಲಾದ ರಸದ್ರವ್ಯಗಳನ್ನು ಚೀರಿಸುತ್ತಿದ್ದೆವು. ಇದನ್ನರಿಯದೆ ಬಲವಂತಾದಿಗಳು ನಮ್ಮ ತಂದೆಯನ್ನು ಚಿತ್ರವಧೆಗೆ ಗುರಿಮಾಡ ತೊಡಗಿದುದೂ, ಅದಕ್ಕೆ ವಿಘ್ನಕಾರಿಯಾಗಿ ಬಂದ ಗಂಗೆಯನ್ನು ಕೊಲ್ಲುವುದಕ್ಕುದ್ಯುಕ್ತರಾದುದೂ, ಇನ್ನೂ ಮುಂದೆ ನಡೆದ ವಿಚಾರಗಳೂ ಆಯಾ ಕಾಲದಲ್ಲಿ ತೆಗೆದ ಚಿತ್ರದಿಂದಲೂ, ಯಂತ್ರಮುಖದಿಂದಲೂ ತಿಳಿಯಲ್ಪಡಬಹುದಲ್ಲದೆ, ಇಲ್ಲಿ ಹೇಳಲ್ಪಡುವುದು ಸಾಧ್ಯವಲ್ಲ.

ಕೃತಾಂತನ ವಾಙ್ಮೂಲವನ್ನು ಸಾವಧಾನದಿಂದ ಕೇಳುತ್ತಿದ್ದ ದಂಡಾಧಿಕಾರಿಯ ವದನದಿಂದ-' ಭಲೆ ! ದಕ್ಷಕನ್ಯೆ ! ಅಹುದು ; ನೀನೇ ದಕ್ಷಳಾದ ಕನ್ಯೆ.' ಎಂಬ ಉದ್ಗಾರವು ಹೊರಟಿತು. ಅದೇ ಉದ್ಗಾರವೇ ಮತ್ತೆಮತ್ತೆಯೂ ನ್ಯಾಯಸ್ಥಾನದಲ್ಲಿದ್ದವರ ಬಾಯಿಂದ ಹೊರಡುವಂತಾ

ಯಿತು. ತಾರಾಪತಿರಾಯನಂತೂ ಆನಂದ ಪಾರವಶತೆಯಿಂದ ಸ್ತಂಭೀಭೂತನಾಗಿ ಕುಳಿತಿದ್ದನು.

ರಾಧಾನಾಥ—ಮಗುವೆ ! ನೀನು ಸಾಹಸಿಯೆನ್ನುವುದರಲ್ಲಿ ಸಂದೇಹವಿಲ್ಲ. ನಿನ್ನ ಚರಿತೆಯೂ ಆಶ್ಚರ್ಯ–ಮತ್ತು ಉತ್ಸಾಹಜನಕವಾದುದಾಗಿಯೇ ಇರುವುದು ; ಸುಳ್ಳಲ್ಲ. ಆದರೆ, ನೀನು ನಮ್ಮ ಜಮೀನ್ದಾರರ ಸುಕುಮಾರಿಯೆಂಬುದನ್ನು ನಿರ್ಧರಿಸಲು, ಈ ನಿನ್ನ ವೇಷವು ಪ್ರತಿಬಂಧವಾಗಿದೆ. ಇನ್ನು ಈ ನಿನ್ನ ಕೃತಾಂತವೇಷದಿಂದ ಆಗಬೇಕಾದುದೇನೂ ಉಳಿದಿಲ್ಲ. ನಿನ್ನ ನಿಜಸ್ವರೂಪವನ್ನು ತೋರಿಸಿ, ಸಂದೇಹನಿವೃತ್ತಿಮಾಡಬೇಕಾದುದೊಂದೇ ಉಳಿದಿರುವುದು.

ಕೃತಾಂತ–(ವಿಂದೆ)—ಧರ್ಮಪಾಲನ ಇಂಗಿತವರಿತು, ತಲೆಬಾಗಿ ತೆರೆಯ ಕಡೆಗೆ ಹೊರಟುಹೋದನು. ನ್ಯಾಯಸ್ಥಾನದಲ್ಲಿದ್ದವರ ಮನೋರಾಜ್ಯಗಳಲ್ಲಿ ಅನೇಕ ವಿಧವಾದ ಭಾವನಾವಿಷಯಗಳು ತರ್ಕಿಸಲ್ಪಡುತ್ತಿದ್ದು, ವಿಂದಾಸ್ವರೂಪ ಸಂದರ್ಶನವನ್ನೇ ನಿರೀಕ್ಷಿಸುವಂತೆ ಮಾಡಿದ್ದುವು.

## ದ್ವಿತೀಯ ಪರಿಚ್ಛೇದ.

(ವಿಂದಾಪರಿಚಯ-ಪ್ರಹರಿಗಳ ಹೇಳಿಕೆ.)

ನ್ಯಾಯಸ್ಥಾನದಲ್ಲಿ, ವಿಚಾರಣಾಕರ್ತನಾದ ರಾವ್ ಬಹದೂರ್ ರಾಧಾನಾಥನ ಮುಂದೆ, ಸಾಕ್ಷಾತ್–ದಕ್ಷಕನ್ಯಾ ಸಾಕ್ಷಾತ್ಕಾರವಾಗಿದೆ. ಸರ್ವಮಂಗಳಾ ಸಂದರ್ಶನಹೊಂದಿ ಧನ್ಯರಾದೆವೆಂಬ ಸಂತೋಷದಿಂದ ಅಲ್ಲಿರುವವರ ಮುಖವೆಲ್ಲವೂ ಪ್ರಫುಲ್ಲಪದ್ಮಗಳನ್ನೇ ಹೋಲುತ್ತಿವೆ. ಧರ್ಮಪಾಲನ ಮುಖದಲ್ಲಿ ಮಾತ್ರ ಗಂಭೀರಮುದ್ರೆಯೊಂದಲ್ಲದೆ,

ಇತರ ವಿಕಾರಚಿಹ್ನೆಗಳಿಗೆ ಅವಕಾಶವೇ ಕಾಣುತ್ತಿಲ್ಲ. ಇದಲ್ಲವೇ ಧೈರ್ಯಕ್ಕೆ ಲಕ್ಷಣವು!

'ದಕ್ಷಕನ್ಯೆ' ಎಂದರೆ ಮತ್ತಾರೂ ಅಲ್ಲ. ಕೃತಾಂತವೇಷದಲ್ಲಿದ್ದು, ನಿಜರೂಪದಿಂದ ಪ್ರತ್ಯಕ್ಷಳಾಗಿರುವ ಸುನಂದಾನಂದನೆಯಾದ ವಿಂದೆಯೇ!

ವಿಂದೆಯು ರಾಧಾನಾಥರಾವಬಹದೂರನ ಸಮಕ್ಷದಲ್ಲಿ ತಲೆಬಾಗಿ ನಿಂತವಳು, ಒಮ್ಮೆ ಧರ್ಮಪಾಲನ ಮುಖವನ್ನು ನೋಡಿದಳು. ಹಿಂದೆ ಎಷ್ಟೋಬಾರಿ, ಅದೇ ಮುಖವನ್ನು ನೋಡಿದ್ದರೂ, ಬಹುಕಾಲ ಆತನ ಸಹಚರ್ಯೆಯಲ್ಲಿದ್ದರೂ ತೋರಬರದಿದ್ದ ಲಜ್ಜಾಭಾವವು, ಇಂದು, ಒಮ್ಮೆ ನೋಡಿದಮಾತ್ರದಿಂದ ಹಠಾತ್ ಉಂಟಾಯಿತು. ಹೀಗಾಗಲು ಕಾರಣವೇನೆಂಬುದು ಅವಳ ಮನಸ್ಸಿಗೆ ಥಟ್ಟನೆ ಹೊಳೆಯಲಿಲ್ಲ. ಆದರೂ, ಸೂಕ್ಷ್ಮಬುದ್ಧಿಯ ಬಾಲಿಕೆಯು ಇದೆಲ್ಲಕ್ಕೂ, ವೇಷ-ಭಾಷಾವರ್ತನೆಗಳೇ ಕಾರಣವೆಂಬುದನ್ನು ತಿಳಿಯದೆ ಬಿಡಲಿಲ್ಲ.

ಚಾಣಾಕ್ಷನಾದ ಧರ್ಮಪಾಲನು, ಲಜ್ಜಾವನತಮುಖಿಯಾದ ವಿಂದೆಗೆ ಅಧಿಕಶ್ರಮವಾಗದಿರಲೆಂದು, ವ್ಯಾಜಾಂತರದಿಂದ ದಳವಾಯಿಸಿಂಗನ ಕಡೆಗೆ ತಿರುಗಿ ಕುಳಿತನು. ಅದು ಹೇಗೂ ಇರಲಿ.

ರಾಧಾನಾಥ—ತಾರಾಪತಿರಾಯನಕಡೆಗೆ ತಿರುಗಿ—'ಜಮೀನ್ದಾರ್ ಲೋಕಬಂಧುಗಳೇ! ಈ ಸುಕುಮಾರಿಯು ನಿಮ್ಮ ಪುತ್ರಿಯೇ ನಿಜವೆಂದು ನಿರ್ಧರವಾಗಿ ಹೇಳಬಲ್ಲಿರೋ?'

ಜಮೀನ್ದಾರ್— ಸ್ವಾಮಿ! ಮೂರುವರ್ಷದ ಮಗುವಾಗಿದ್ದಾಗ ನೋಡಿದ್ದ ನೆನಪಿನಮೇಲೆ, ಈಗ ಹೀಗೆಯೇ ಸರಿಯೆಂದು ನಿರ್ಧರಿಸುವ ಶಕ್ತಿಯಿಲ್ಲದಿದ್ದರೂ, ಅವಳಲ್ಲಿ ತೋರಿಬರುತ್ತಿದ್ದ ಲಕ್ಷಣಗಳೆಲ್ಲವೂ ಇವಳಲ್ಲಿ ಮತ್ತೂ ಪುಷ್ಟಿಹೊಂದಿರುವುದೆಂದುಮಾತ್ರ ಹೇಳಬಲ್ಲೆನು.

ದಳವಾಯಿ—ಹಾಗಾದರೆ, ಈಕೆಯ ಪರಿಚಯವು ದೃಢಪಡುವಂತೆ ಮಾಡುವುದು ಸುನಂದಾದೇವಿಯನ್ನೇ ಸೇರಿರುವುದು.

ರಾಧಾನಾಥ—ಧರ್ಮಪಾಲನ ಮುಖವನ್ನು ನೋಡಿ—'ಸರದಾರರೇ! ದಳವಾಯಿಸಿಂಗರ ಸೂಚನೆಯನ್ನು ತಿಳಿದಿರಷ್ಟೆ.'

ಧರ್ಮಪಾಲ—ಕೇಳಿದೆನು. ಅದೂ ಆಗಬಹುದು.

ಬಳಿಕ ಧರ್ಮಪಾಲನ ಸೂಚನೆಯಂತೆ ತೆರೆಯಕಡೆಯಿಂದ ಸುನಂದಾದೇವಿಯೂ ಕರೆಯಿಸಲ್ಪಟ್ಟು, ಅವಕುಂಠನವನ್ನು ಹೊದ್ದು, ಭಯದಿಂದ ಕಂಪಿಸುತ್ತ ನಿಂತಳು.

ರಾಧಾನಾಥ—ತಾಯಿ! ಭಯಕ್ಕೇನೂ ಕಾರಣವಿಲ್ಲ. ಈ ಸುಕುಮಾರಿಯಾರೆಂಬುದನ್ನು ನೀವು ತಿಳಿದಿದ್ದರೆ ಹೇಳಬೇಕು.

ಸುನಂದೆ—ಅವಕುಂಠನದ ಮರೆಯಿಂದಲೇ ನೆಲ್ಲನೆ ತಲೆಯೆತ್ತಿ, ವಿಂದೆಯ ಮುಖವನ್ನು ನೋಡಿದಳು. ಅವಳ ಆನಂದಕ್ಕೆ ಪಾರವೇ ಇಲ್ಲವಾಯಿತು. ಕಣ್ಣುಗಳಿಂದ ಆನಂದಬಾಷ್ಪವು ಸುರಿಯಿತು. ಆದರೂ ಬಹು ಪ್ರಯತ್ನದಿಂದ ತಡೆದು, ಗದ್ಗದಸ್ವರದಿಂದ—'ಇವಳೇ ನನ್ನ ಮಗಳು. ಇವಳೇ ಕಳುವಾಗಿದ್ದ ವಿಂದೆ.' ಎಂದು ಹೇಳಿದಳು.

ರಾಧಾನಾಥ—ವಿಂದೆಯನ್ನು ಸಮೀಪಕ್ಕೆ ಕರೆದು, ಕೃತಾಂತನ ವಾಙ್ಮೂಲ (ಲಿಖಿತ) ಪತ್ರವನ್ನು ತೋರಿಸಿ,– 'ಇದಾರ ವಾಙ್ಮೂಲವು?'

ವಿಂದೆ—ಇದು ಕೃತಾಂತವೇಷದಿಂದ ನಾನೇ ಹೇಳಿದುದಾಗಿದೆ.

ರಾಧಾನಾಥ—ವಾಸುದೇವ-ಯಶವಂತರಕಡೆಗೆ ತಿರುಗಿ,–'ಹುಂ! ನಿಮ್ಮ ಹೇಳಿಕೆಯೇನಾದರೂ ಉಂಟೋ?'

ವಾಸು-ಯಶ—ಇವರನ್ನು ಕೇಳಬೇಕಾದುದಿಲ್ಲ.

ಬಳಿಕ ಸುನಂದೆಯು ವಿಂದೆಯೊಡನೆ ಮೊದಲಿದ್ದೆಡೆಗೆ ಕಳುಹಲ್ಪಟ್ಟಳು. ಪ್ರಹರಿಗಳ ವಿಚಾರಣೆಯಾಗಬೇಕೆಂದು ಸೂಚನೆಯಾಯಿತು. ಅದರಂತೆಯೇ ಅಲ್ಲೀಖಾನ್–ಉಸ್ಮಾನ್–ವಿಷಕಂತರು ಬರಮಾಡಲ್ಪಟ್ಟರು.

ರಾಧಾನಾಥ—ಅಯ್ಯಾ! ನಿಮ್ಮ ಮುಸಲ್ಮಾನ್ ಧರ್ಮದಮೇಲೆ ಗುರಿಯಿಟ್ಟು, ಈ ವ್ಯಾಜ್ಯದ ವಿಷಯವಾಗಿ ನೀವು ತಿಳಿದಿರುವುದೆಲ್ಲವನ್ನೂ ನಿಜವಾಗಿ ಹೇಳಿರಿ.

ಉಸ್ಮಾನ್—ನಾವು ಜಮೀನ್ದಾರರ ಅಪ್ಪಣೆ ಹೊಂದಿ, ವಿಷಕಂಠನನ್ನು ಕಾವಲಿಗಾಗಿ ನಿಲ್ಲಿಸಿ, ಊಟಮಾಡಿಬರಲು ಮನೆಗೆ ಹೋದೆವು. ಮತ್ತೆ ಬರುವಾಗ ದಾರಿಯ ಬಳಿಯಲ್ಲಿದ್ದ ಹಳ್ಳದಲ್ಲಿ ಕಳ್ಳರು ಅಡಗಿದ್ದುದನ್ನು ನಾವು ತಿಳಿಯದೆ, ವಿನೋದವಾಗಿ ಹಾಡುತ್ತಾ ಬರುತ್ತಿದ್ದೆವು. ಹೀಗೆ ಬರುತ್ತಿದ್ದ ನಮಗೆ ತಿಳಿಯದಂತೆ ಹಿಂದಿನಿಂದ ಬಂದ ಕಳ್ಳರು, ಒಟ್ಟಿಗೆ ನಮ್ಮ ಮೇಲೆ ಕಂಬಳಿಗಳನ್ನೆಸೆದು ಬಲವಾಗಿಕಟ್ಟಿ, ಒಬ್ಬೊಬ್ಬರನ್ನು ಇಬ್ಬಬ್ಬರಂತೆ ಹೊತ್ತುಕೊಂಡು ಹೋಗಿ, ಗೊಲ್ಲರಪಾಳ್ಯದ ಗುಡ್ಡದಲ್ಲಿದ್ದ-ಇಲ್ಲಿ ನಿಂತಿರುವ ಮುದುಕನ ಮುಂದೆ ಕೆಡಹಿದರು. ಇವನೂ, ಇವನ ಬಳಿಯಲ್ಲಿರುವವ (ಸುಪಂಥ) ನೂ ನಮ್ಮನ್ನು ಸಾಯುವಂತೆ ಹೊಡೆದು, ಮತ್ತೆ ನಮ್ಮ ಕೈಕಾಲುಗಳಿಗೆ ಬೇಡಿಗಳನ್ನು ತೊಡಿಸಿ, ಒಂದು ಕತ್ತಲೆ ಕೋಣೆಯಲ್ಲಿ ಕೂಡಿದರು. ಅಲ್ಲಿ ನಾವು ಬೆಳಕು-ಗಾಳಿ-ಆಹಾರಗಳಿಗೆ ಮಾರ್ಗವಿಲ್ಲದೆ, ಹಗಲೂ-ರಾತ್ರಿಯೂ ಅಳುತ್ತ, ಇವರು ದಿನಕ್ಕೊಂದುಬಾರಿ ತಂದುಕೊಡುತ್ತಿದ್ದ ಒಣರೊಟ್ಟಿಗಳಿಂದ ಜೀವವನ್ನುಳಿಸಿಕೊಂಡಿದ್ದೆವು.

.ರಾಧಾನಾಥ--ನಿಮ್ಮನ್ನುಬಿಡಿಸಿದವರಾರು? ನೀವೇ ಕದ್ದುಬಂದಿರೋ, ಹೇಗೆ?

ಉಸ್ಮಾನ್—ನಾವು ಕದ್ದುಬರಲಿಲ್ಲ. ಧರ್ಮಪಾಲರ ಕಡೆಯ ವೀರಭಟನೊಬ್ಬನು ಬಂದು, ನಮ್ಮನ್ನು ಬಿಡುಗಡೆಮಾಡಿ ಕರೆದೊಯ್ದನು. ಅದು ಮೊದಲು, ನಾವು ಈವರೆಗೂ ಧರ್ಮಪಾಲರ ಮನೆಯೊಳಗದಲ್ಲಿ ನಿರತರಾಗಿದ್ದೆವು. ಇಷ್ಟಲ್ಲದೆ ನಮಗಿನ್ನಾವುದೂ ತಿಳಿಯದು.

ರಾಧಾನಾಥ—ವಿಷಕಂಠನನ್ನು ಕುರಿತು-‘ ವಿಷಕಂಠ ! ಮೊದಲನೆಯ ಕಳುವಿನ ವಿಷಯದಲ್ಲಿ ನೀನು ತಿಳಿದಿರುವುದೇನು ? ನಿಜವಾಗಿಹೇಳು.’

ವಿಷಕಂಠ—ನಾನು ಜಮೀನ್ದಾರರ ಅಪ್ಪಣೆಯಂತೆ ಮುಸಲ್ಮಾನ್ ಪ್ರಹರಿಗಳನ್ನು ಊಟಕ್ಕೆ ಕಳಿಸಿ, ನಾನೇ ಕಾವಲಿಗಾಗಿ ಕುಳಿತಿದ್ದೆನು.

ಇಬ್ಬರು ಮುಸಲ್ಮಾನರು ಪ್ರಾಕಾರದ ಬಾಗಿಲನ್ನು ಹತ್ತಿ ಕೆಳಗೆ ಧುಮ್ಮಿಕ್ಕಿ ನನ್ನ ಬಳಿಗೆ ಬಂದುದನ್ನು ನೋಡಿ, ನಾನು ಊಟಕ್ಕೆ ಹೋಗಿದ್ದ ನಮ್ಮವರೇ ಬರುತ್ತಿರುವರೆಂದು ಸುಮ್ಮನಿದ್ದೆನು. ಆದರೆ, ಆ ನನ್ನ ಊಹೆಯು ತಪ್ಪಾಗಿ, ಅವರು ಹಾರಿಬಂದು ನನ್ನ ಮೇಲೆ ಬಿದ್ದು, ಬಾಯಿಗೆ ಬಟ್ಟೆಯನ್ನು ತುರುಕಿ, ಕೈಕಾಲುಗಳನ್ನು ಕಟ್ಟಿ, ತಮ್ಮ ಕೆಲಸಗಳನ್ನು ಸಾಧಿಸಿಕೊಳ್ಳುವುದಕ್ಕೆ ದಾರಿಯಾಯಿತು.

ರಾಧಾನಾಥ—ಅವರಿಗೆ ಬಾಗಿಲನ್ನು ತೆರೆದವರಾರು ? ಅವರು ಒಳಗೆ ಹೋದುದು ಹೇಗೆ ? ಬಂದುದೆಲ್ಲಿಂದ ?

ವಿಷಕಂಠ—ಒಳಗಿದ್ದು ಬಾಗಿಲನ್ನು ತೆರೆದವನೇ ಈ ಯಶವಂತನಾಗಿರಬೇಕು. ಆದರೆ, ನಿರ್ಧರವಾಗಿ ಹೇಳಲಾರೆನು. ಇವರು ಒಳಬಾಗಿಲಿಂದಲೇ ಮನೆಯೊಳ ಹೊಕ್ಕು ಬಾಗಿಲನ್ನು ಮುಚ್ಚಿದರು ; ಮತ್ತೆ ಹೊರಗೆ ಹೋದುದು ಯಾವಾಗಲೋ, ಎಲ್ಲಿಂದಲೋ, ಒಳಗೆ ಏನುಮಾಡಿದರೋ ನನಗೊಂದೂ ತಿಳಿಯದು. ಹೇಗೂ ರಾತ್ರಿ ಎಷ್ಟೋ ಹೊತ್ತಿನ ಮೇಲೆ, ನಮ್ಮ ಜಮೀನ್ದಾರರೇ ಶ್ರೀದತ್ತಕುಮಾರರೊಡನೆ ಬಂದು ನೋಡಿ, ನನ್ನ ಕಟ್ಟನ್ನು ಬಿಚ್ಚಿದರು. ಮರುದಿನವೇ ಕಿರಿಯ ಯಜಮಾನಿಯವರ-ಒಡವೆ ವಸ್ತುಗಳೆಲ್ಲವೂ ಕಳುವಾದುವೆಂಬ ವದಂತಿ ಹುಟ್ಟಿತು.

ರಾಧಾನಾಥ—ಹೋಗಲಿ ; ನೀನು ಯಾವ ಅಪರಾಧಕ್ಕಾಗಿ, ಸರ್ಕಾರದವರ ವಶಪಡಿಸಲ್ಪಟ್ಟೆ ?

ವಿಷಕಂಠ—ಮಹಾಸ್ವಾಮಿ ! ನಾನು ಯಾವ ತಪ್ಪನ್ನೂ ಮಾಡಿದವನಲ್ಲ.

ರಾಧಾನಾಥ—ತಪ್ಪಿಲ್ಲದಿದ್ದರೆ, ನಿನ್ನನ್ನು ಹಿಡಿಯುತ್ತಿದ್ದವರಾರು ?

ವಿಷಕಂಠ—ನಾನು ಯಾವ ಪಾಪವನ್ನೂ ಕಂಡವನಲ್ಲ. ನನ್ನ ಅಂಗಿಯ ಕಿಸೆಯಲ್ಲಿ ಸೀಸೆಯೊಂದಿದ್ದು, ಅದೇ ನನ್ನನ್ನು ತಪ್ಪಿತಸ್ಥನನ್ನಾಗಿ ಮಾಡಿತು.

ರಾಧಾನಾಥ—ಬಳಿಯಲ್ಲಿದ್ದ ಪೆಟ್ಟಿಗೆಯಿಂದ ಸೀಸೆಯೊಂದನ್ನು ಹೊರ ತೆಗೆದು ತೋರಿಸಿ-' ಇದೇ ಸೀಸೆಯೋ-ನಿನ್ನಲ್ಲಿದ್ದುದು ? '

ವಿಷಕಂಠ—ಹಾಗೆಯೇ ಕಾಣುತ್ತದೆ.

ರಾಧಾನಾಥ—ಇರಲಿ ; ಇದನ್ನು ನೀನು ಎಲ್ಲಿಂದ ತಂದೆ ? ಯಾವ ಕಾರ್ಯಕ್ಕೆ ಉಪಯೋಗಿಸಬೇಕೆಂದಿದ್ದೆ ?

ವಿಷಕಂಠ—ಮಹಾಸ್ವಾಮಿ ! ನಾನು ಎಲ್ಲಿಂದಲೂ ತಂದವನೂ ಅಲ್ಲ, ಅದು ನನಗೆ ಯಾವುದಕ್ಕೂ ಬೇಕಾಗಿಯೂ ಇರಲಿಲ್ಲ. ನಾನು ನಿಜವಾಗಿಯೂ ನಿರಪರಾಧಿ.

ರಾಧಾನಾಥ —ಹಾಗಿದ್ದರೆ, ಇದು ನಿನ್ನಲ್ಲಿದ್ದ ಬಗೆಯೇನು ? ತಂದಿರಿಸಿದವರಾರು ? ನಿನಗೆ ತಿಳಿಯದೆ ನಿನ್ನ ಅಂಗಿಯೊಳಗೆ ಸೇರುವುದು ಹೇಗೆ ?

ವಿಷಕಂಠ—ನಾನು ರಾತ್ರಿ, ಬೀದಿಯ ಪಡಸಾಲೆಯ ಮೇಲೆ ಮಲಗಿದ್ದೆನು. ಮತ್ತೆ ಕಣ್ದೆರೆದು ನೋಡುವಾಗ ರಸ್ತೆಯ ಬಳಿಯಲ್ಲಿ, ಚರಂಡಿಯೊಳಗೆ ಬಿದ್ದಿದ್ದೆನು. ಹೀಗಾಗಲು ಕಾರಣವೇನೆಂಬುದನ್ನು ತಿಳಿಯದೆ ಭಯದಿಂದ ಎದ್ದುಬಂದು, ಬೀದಿಯ ಬಾಗಿಲಬಳಿಗೆ ಬಂದು, ಕುಳಿತೆನು. ಯಮುನಾಬಾಯಿಯವರೂ ಬಂದು ಸೇರಿದರು. ಅಷ್ಟರಲ್ಲಿಯೇ ಮನೆಯವರೆಲ್ಲರೊಡನೆ ಜಮಾನ್ದಾರರೇ ಬಂದು ನಮ್ಮನ್ನು ವಿಚಾರಿಸಿದರು. ನಾವು ಯಾವುದನ್ನೂ ತಿಳಿಯೆವೆಂದು ಹೇಳಿದರೂ, ಯಶವಂತ ಮತ್ತು ಕಿರಿಯ ಯಜಮಾನಿಯವರ ಹೇಳಿಕೆಯ ಮೇಲೆ-ನಮ್ಮಿಬ್ಬರನ್ನು ತಪ್ಪಿತಸ್ಥರೆಂದೇ ನಿರ್ಧರಿಸಿ, ಪೋಲೀಸರ ವಶಪಡಿಸಿದರು. ಆದರೆ ಸ್ವಲ್ಪದಿನಗಳಲ್ಲಿಯೇ ಧರ್ಮಪಾಲರು ನನ್ನಲ್ಲಿ ಕೃಪೆಮಾಡಿ, ನನ್ನ ನಡತೆಯ ಮೇಲೆ ಹೊಣೆಕೊಟ್ಟು, ನನ್ನನ್ನು ಬಿಡಿಸಿ ಕರೆದುಕೊಂಡುಹೋಗಿ, ಈವರೆಗೂ ಪೋಷಿಸುತ್ತಿದ್ದರು. ಇಷ್ಟಲ್ಲದೆ ನನಗಿನ್ನಾವುದೂ ಗೊತ್ತಿಲ್ಲ.

ಇಷ್ಟಕ್ಕೆ ಪ್ರಹರಿಗಳ ಸಾಕ್ಷ್ಯವು ಮುಗಿಯಿತು.

|| ಶ್ರೀ ||

# ತೃತೀಯ ಪರಿಚ್ಛೇದ.

(ಯಮುನೆಯ ಹೇಳಿಕೆ)

ಸೂಚನಾಕರ್ತರ ಅಭಿಪ್ರಾಯದಂತೆ ಈ ಬಾರಿ ಯಮುನೆಯು ಕರೆಯಿಸಲ್ಪಟ್ಟಳು.

ರಾಧಾನಾಥ — ಅಮ್ಮ ! ನಿಮ್ಮ ತಿಳಿವಿಗೆ ಒಳಪಟ್ಟಂತೆ ಈ ವ್ಯಾಜ್ಯಮೂಲವೆಷ್ಟೋ ಅಷ್ಟನ್ನೂ ನಿಜವಾಗಿಹೇಳಿರಿ.

ಯಮುನಾ—ವಿನೀತೆಯಾಗಿ-‘ನನ್ನಲ್ಲಿ ಅನೃತಕ್ಕೆ ಅವಕಾಶವಿಲ್ಲ. ನಾನು ಕಂಡು ಕೇಳಿದುದನ್ನು ಮರೆಮಾಜದೆ ಹೇಳುವೆನಲ್ಲದೆ, ನಿಷ್ಠುರಕ್ಕಾಗಲೀ-ಜನವಾರ್ತೆಗಾಗಲೀ ಹಿಂದೆಗೆದು ಅಪಲಪಿಸುವುದು ನನ್ನ ಶೀಲವಾಗಿಲ್ಲ. ಅದಿರಲಿ, ಸುನಂದಾದೇವಿಯನ್ನು ಪ್ರಸುವಕ್ಕಾಗಿ ಅವರ ತಂದೆಯೇ ಬಂದು ಕರೆದೊಯ್ದುಬಳಿಕ, ನಾಲ್ಕಾರು ತಿಂಗಳಲ್ಲಿಯೇ ಜಮೀನ್ದಾರರಿಗೆ ಪುತ್ರೋತ್ಸವವಾದ ಸಂತೋಷವಾರ್ತೆಯು ಮುಟ್ಟಿ, ವಿಷಹರಪುರದಲ್ಲೆಲ್ಲಾ ಆನಂದವೇ ಆನಂದವೆಂಬಂತೆ ಜಮೀನ್ದಾರರು ದೊಡ್ಡ ಸಂತರ್ಪಣೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿಯೇ ನಮ್ಮ ಜಮೀನ್ದಾರರ ದ್ವಿತೀಯಪತ್ನಿ-ಗಂಗಾಬಾಯಿಯು, ತಮ್ಮ ಅಜ್ಜಿಯೊಡನೆ ಮನೆಗೆ ಬಂದಿದ್ದಳು. ಆಗ ಈಕೆಗೆ ಇನ್ನೂ ವಿವಾಹವಾಗಿರಲಿಲ್ಲ. ಆಗಲೇ ಇವರ ವಿದ್ಯಾಪ್ರೌಢಿಮೆ, ಕುಶಲಕಲಾಪ್ರಶಂಸೆಗಳಾದುವು. ಇದಾದ ತಿಂಗಳೊಳಗಾಗಿಯೇ ದುರ್ಗಾಪುರದಿಂದ ಸುನಂದಾಬಾಯಿಯು ಆಕಸ್ಮಿಕವಾಗಿ ಬಂದೊದಗಿದ ಸನ್ನಿಪಾತದಿಂದ ಕಾಲವಶರಾದರೆಂಬ ತಂತಿಯು, ಜಮೀನ್ದಾರರ ಕೈಸೇರಿತು. ಆಗ ಜಮೀನ್ದಾರರಿಗೂ

ಮತ್ತು ನಮಗೂ ಉಂಟಾದ ಶೋಕವನ್ನು ಇಷ್ಟೇ ಸರಿಯೆಂದು ಹೇಳಲಾಗುವಂತಿಲ್ಲ. ಅದೂ ಸಾಲದೆಂದು, ಪತ್ನೀವಿಯೋಗಸಂತಪ್ತರಾಗಿದ್ದ ಜಮೀನ್ದಾರರಿಗೆ ಒಂದು ತಿಂಗಳೊಳಗಾಗಿ–' ಮಾತೃವಿಯೋಗವನ್ನು ತಡೆಯದೆ ಪುತ್ರನೂ ಪರಲೋಕಕ್ಕೆ ತೆರಳಿದ ' ನೆಂಬ ದುಃಖವಾರ್ತೆಯೂ ಬಂದುಸೇರಿತು. ಆಗಲಂತೂ ಜಮೀನ್ದಾರರ ಮನಸ್ಸಿನ ಮತ್ತು ಮನೆಯ ಸ್ಥಿತಿಗಳನ್ನು ನೋಡಿ ಸಹಿಸುವಂತಿರಲಿಲ್ಲ. ಹೇಗಾದರೂ ಅನುಭವವನ್ನು ವಿವರಿಸಲಾಗದಷ್ಟೆ. ಜಮೀನ್ದಾರರು ಸುನಂದಾವಿಯೋಗವಾರ್ತೆಯನ್ನು ಕೇಳಿದುದು ಮೊದಲು, ವಿನೋದ–ಉತ್ಸಾಹಗಳನ್ನೇ ತೊರೆದುಬಿಟ್ಟರು. ಆದರೂ ಮಾತೃವಾಕ್ಯದ ನಿರ್ಬಂಧದ ಮೇಲೆಯೂ, ಯಶವಂತನ ಹೇಳಿಕೆಯ ಮೇಲೆಯೂ ಅಸಿವರ್ಗಾಸಪಕ್ಷದಿಂದ ಗಂಗಾಬಾಯಿಯನ್ನು ಮದುವೆಯಾದರು.

ಇದಾಗಿ ಮೂರು–ನಾಲ್ಕು ವರ್ಷಗಳು ಕಳೆದ ಬಳಿಕ, ತಾಯಿಯ ಮಾತಿನಂತೆ ಹೆಂಡೆಯನ್ನಾದರೂ ಕಳುಹಬೇಕೆಂದು ಇವರು ದುರ್ಗಾಪುರಕ್ಕೆ ಕಾಗದವನ್ನು ಬರೆದಿದ್ದರು. ಅದಕ್ಕೆ ಉತ್ತರವಾಗಿ, ಹೆಂಡೆಯ ವಿಚಾರವಾಗಿ ನೀವು ಕೇಳತಕ್ಕುದಿಲ್ಲವೆಂದೂ, ಅವಳಿಗೆ ಸರಿಯಾದ ಶಿಕ್ಷಣವನ್ನು ಕೊಟ್ಟು. ಮುಂದಕ್ಕೆ ತರುವ ಕೆಲಸವು ತಮಗೆ ಸೇರಿರುವುದೆಂದೂ ಬರೆದ ಪತ್ರವು, ಜಮೀನ್ದಾರರ ಕೈಸೇರಿತು. ಅದರ ಮೇಲೆ ಅವರು ಇನ್ನೇನನ್ನೂ ಹೇಳಲಾರದೆ ಸುಮ್ಮನಾದರು. ಮಗನೊಡನೆ ಸುನಂದಾದೇವಿಯು ಜೀವಿಸಿರುವ ಸಂಗತಿಯೇ ನಮಗಾರಿಗೂ ತಿಳಿದಿರಲಿಲ್ಲ.

ಆದರೆ ಈಚೆಗೆ, ಈಗ ಹತ್ತುತಿಂಗಳ ಕೆಳಗೆ, ಎಂದರೆ–ಮೊದಲನೆಯ ಕಳುವಾದ ದಿನವೇ ಜಮೀನ್ದಾರರ ಬಳಿಗೆ, ಈ ಉದ್ದೇಶದಿಂದಲೇ ಬಂದ ಶ್ರೀದತ್ತಕುಮಾರರಿಂದ ನನಗೆ ಸುನಂದಾದೇವಿಯ ಜೀವಿ

ತವೃತ್ತಾಂತವು ತಿಳಿದುಬಂದಿತು. ಅದನ್ನು ಕೇಳಿ ಸಂತೋಷದಿಂದ ನಾನು, ಮನೆಗೆ ಬರುವಷ್ಟರಲ್ಲಿಯೇ ಸಾಯಂಕಾಲವಾಗಿದ್ದುದರಿಂದ ಬಿಸಿಲ್ಮಾಳಿಗೆಯನ್ನೇರಿ ನೋಡಿದೆನು. ನಾನು ಹೋಗುವುದರೊಳಗಾಗಿ ಅಲ್ಲಿಂದ ಆಗಲೇ ಹಿಂತಿರುಗಿದ ಗಂಗಾಬಾಯಿಯನ್ನೂ, ಬೀದಿಯಲ್ಲಿ ನೆಲದಮೇಲೆ ನಿಂತು, ವಿಕಾರಚೇಷ್ಟೆಗಳಿಂದ ನೋಡುತ್ತಿದ್ದ ಈ ವಾಸುದೇವರಾಯನನ್ನೂ ಕಂಡು, ನನಗೆ ಸಂಶಯವಾಯಿತು. ಪರೀಕ್ಷಿಸಬೇಕೆಂದು ಕೆಳಗಿಳಿದುಬರುವಷ್ಟರಲ್ಲಿ ಗೋಪಾಲನೂ ಅಲ್ಲಿಗೆ ಬಂದಿದ್ದನು. ಅವನ ನಡೆ-ನುಡಿಗಳು ನನ್ನ ಸಂಶಯವನ್ನು ಮತ್ತೂ ಹೆಚ್ಚಿಸಿದುದರಿಂದ, ಅವನಿಗೆ ಸುಳ್ಳುಹೇಳಿ, ಮೋಸಮಾಡಿ, ಅವನ ಜಾಡೆಯನ್ನು ಕಂಡುಹಿಡಿಯಲು ಪ್ರಯತ್ನಿಸಿದೆನು ಆ ನನ್ನ ಪ್ರಯತ್ನದಿಂದ ಯಶವಂತ-ಗೋಪಾಲರ ಅಭಿಸಂಧಾನವು, ಬಹುದಿನಗಳಿಂದ ನಡೆದುಬರುತ್ತಿರುವುದೆಂದು ತಿಳಿಯಲಾಯಿತು; ಗಂಗೆಯ ಮನೋಗತವೆಂತಹುದೆಂಬುದನ್ನು ಪರೀಕ್ಷಿಸಿದ್ದರಲ್ಲಿ ಸಕಾರಣವಾದ ಸಮಾಧಾನಗಳು ದೊರೆಯದೆ ಸಂದೇಹಾಂಶಗಳೇ ಕಂಡುಬಂದುವು. ಬಳಿಕ ನಾನು ಜಮೀನ್ದಾರರ ತಾಯಿಯನ್ನು ಕಾಲೋಚಿತವಾಗಿ, ಹಿತಸೂಚನೆಗಳಿಂದ ಎಚ್ಚರಿಸಿ, ಅವರಿಗೆ ನಾನು ಕೇಳಿ-ನೋಡಿ-ತಿಳಿದುದೆಲ್ಲವನ್ನೂ ಶ್ರೀದತ್ತಕುಮಾರರಿಗೆ ತಿಳಿಸಿದೆನು. ಮತ್ತೆ ಅವರ ಸೂಚನೆಯಂತೆ ವೇಷಾಂತರದಿಂದ ಬಂದು, ಜಮೀನ್ದಾರರ ಮನೆಯ ಪ್ರಾಕಾರದ ಬಳಿಯಲ್ಲಿ ಮರದಹಿಂದೆ ಮರೆಯಾಗಿ ಮಲಗಿದ್ದೆನು.

ನನ್ನ ಈ ಸಂಚನ್ನು ತಿಳಿಯದೆ ಗೋಪಾಲನೂ, ವಾಸುದೇವನ ಕಡೆಯವನಾಗಿ ಮತ್ತೊಬ್ಬನೂ ಮುಸಲ್ಮಾನರಂತೆ ವೇಷವನ್ನು ಧರಿಸಿ, ಬಾಗಿಲಮೇಲೇರಿ ಕೆಳಗೆ ದುಮ್ಮಿಕ್ಕಿ, ಮನೆಯ ಬಾಗಿಲ ಬಳಿಗೆ ಹೋದರು. ಅವರು ಅಲ್ಲಿಗೆ ಹೋಗುವವರೆಗೂ ನೋಡು

ತ್ತಿದ್ದ ನಾನು, ಆಗಲೇ ಅವರಿಗೆ ತಿಳಿಯದಂತೆ, ಪ್ರಾಕಾರದ ಗೋಡೆಯನ್ನೇರಿ ಒಳಹೊಕ್ಕು, ಅಲ್ಲಿಯೇ ನಿಂತು ನೋಡುತ್ತಿದ್ದೆನು. ಯಶವಂತನು ಬಾಗಿಲನ್ನು ತೆರೆದು ಅವರನ್ನು ಒಳಗೆ ಸೇರಿಸಿ, ಮತ್ತೆ ಬಾಗಿಲನ್ನು ಹಾಕಿದನು. ಇಷ್ಟರಲ್ಲಿ ನಾನು ಹಿತ್ತಿಲಬಾಗಿಲಬಳಿಯಲ್ಲಿ ಮರೆಯಾಗಿದ್ದೆನು. ಸುಮಾರು ಒಂದು ಘಂಟೆಯೊಳಗಾಗಿಯೇ ಗೋಪಾಲನೂ ಮತ್ತೊಬ್ಬನೂ ದೊಡ್ಡದೊಡ್ಡ ಹೊರೆಗಳನ್ನು ಹೊತ್ತು ಹಿತ್ತಿಲ ಗೋಡೆಯನ್ನೇರಿ, ಕೆಳಗೆ ಹಾರಿ ಓಡಿಹೋದರು. ಇದೆಲ್ಲವನ್ನೂ ನೋಡುತ್ತಿದ್ದ ನಾನು ಕುಮಾರರಲ್ಲಿಗೆ ಹೋಗಿ ತಿಳಿಸಿ, ಅವರ ಸೂಚನೆಯಂತೆ ಆರಾತ್ರಿ ಮನೆಗೆ ಬಾರದೆಯೇ ಉಳಿದಿದ್ದೆನು.

ರಾಧಾನಾಥ—ಸರಿಯೆ, ನೀವು ಅಪರಾಧಿಯಾಗಿ ಹಿಡಿಯಲ್ಪಟ್ಟುದೇಕೆ?

ಯಮುನೆ—ಮನೆಯವರ ದ್ವೇಷಸಾಧನೆಯೊಂದೇ ಕಾರಣವಲ್ಲದೆ, ಬೇರೆ ಯಾವುದೂ ನನಗೆ ತಿಳಿಯದು.

ರಾಧಾನಾಥ—ಯಾವ ಆಧಾರದಿಂದ ಈ ಮಾತನ್ನು ಹೇಳುವಿರಿ?

ಯಮುನೆ—ಮನೆಯಲ್ಲಿ ನಾನು ಜಮಿನ್ದಾರರ ಮತ್ತು ಅವರ ತಾಯಿಯ ವಿಚಾರದಲ್ಲಿ ದೃಢವಿಶ್ವಾಸದಿಂದ ವರ್ತಿಸುತ್ತಿದ್ದುದೂ, ಅವರು ನನ್ನನ್ನು ಸಹಜವಾತ್ಸಲ್ಯದಿಂದ ಪೋಷಿಸುತ್ತಿದ್ದುದೂ, ಮನೆಯಲ್ಲಿ ನಡೆಯುತ್ತಿದ್ದ ಕುಹುಕಗಳನ್ನು ಹೊರಗೆಡಹಲು ನಾನು ಪ್ರಯತ್ನಪಟ್ಟು ಸ್ವಾತಂತ್ರ್ಯದಿಂದ ವರ್ತಿಸಿದುದೂ, ಗಂಗಾಬಾಯಿಗೂ ಮತ್ತೂ ಯಶವಂತಾದಿಗಳಿಗೂ ಅಸೂಯೆಗೆ ಕಾರಣವಾಗಿತ್ತು. ಇದನ್ನು ಬಾಯ್ದೆರೆದು ಹೇಳುವುದಕ್ಕಾಗಲಾರದಿದ್ದುದರಿಂದ, ಮೊದಲನೆಯಸಾರಿ ನಡೆದ ಕಳುವಿಗೆ ನಾನೇ ಮೂಲವೆಂಬ ಆರೋಪವುಂಟಾಯಿತು. ಆದರೆ ಯಜಮಾನರು ನಂಬದೆ ನನಗೆ ಮತ್ತೂ ಹೆಚ್ಚಿನ ಸ್ವಾತಂತ್ರ್ಯವನ್ನೇ ಕೊಟ್ಟರು. ಇದರಿಂದ ಅಸೂಯೆಗೆ ಕಸಿಕಟ್ಟಿದಂತಾಯಿತು.

ಸುನಂದಾದೇವಿಯೂ ಬಂದ ಬಳಿಕಂತೂ, ಮನೆಯಲ್ಲಿ ಪ್ರತಿಯೊಂದು ಕಾರ್ಯವೂ ನನ್ನ ವಿಚಾರಣೆಗೇ ಸೇರುತ್ತಿದ್ದಿತು. ಆಗಲೇ ನಾನು ಅಡಿಗೆ ಪರಿಚಾರಕರಲ್ಲಿ ಒಬ್ಬೊಬ್ಬರ ಹುಳುಕನ್ನೂ ಕಂಡುಹಿಡಿದು ಯಜಮಾನರಿಗೆ ಒಪ್ಪಿಸುತ್ತಿದ್ದುದರಿಂದ, ಅವರಲ್ಲಿ ಒಬ್ಬೊಬ್ಬರಾಗಿ ಓಡಿಸಲ್ಪಟ್ಟರು.

ಹೀಗಿರುವಾಗಲೇ ಸುನಂದಾದೇವಿಯ ತಂದೆಯಿಂದ ಬಂದ ಕಾಗದದಲ್ಲಿ ಅವರ ತಾಯಿ ಮೃತ್ಯುಶಯ್ಯೆಯಲ್ಲಿರುವಂತೆ ತಿಳಿದು, ತಾಯಿಯನ್ನು ನೋಡುವ ಉದ್ದಿಶ್ಯವಾಗಿ ಮೋಹನನೊಡನೆ ಸುನಂದಾದೇವಿಯು ದುರ್ಗಾಪುರಕ್ಕೆ ಪ್ರಯಾಣಮಾಡಿದರು. ಅವರು ಹೊರಟುಹೋದ ಹದಿನೈದು ದಿನಗಳೊಳಗಾಗಿಯೇ ಜಮೀನ್ದಾರರ ಮನೆಯಲ್ಲಿ ಮತ್ತೊಂದು ಕಳವು ನಡೆದಂತೆಯೂ, ಅದಕ್ಕೆ ನಾವೇ ಕಾರ್ಯಕಾರಿಗಳೆಂದೂ ನಿರ್ಧರಿಸಲ್ಪಟ್ಟಿತು.

ರಾಧಾನಾಥ—ನಿಮ್ಮ ಮೇಲೆ ಅಪರಾಧವು ನಿರ್ಧರವಾದುದು ಹೇಗೆ ? ಆಗ ನೀವಿದ್ದುದೆಲ್ಲಿ ?

ಯಮುನೆ—ಆರಾತ್ರಿ ನಾನು ಅರ್ಧರಾತ್ರಿಯವರೆಗೂ ಜಮೀನ್ದಾರರ ತಾಯಿಯ ಬಳಿಯಲ್ಲಿ ಮಾತನಾಡುತ್ತಿದ್ದು, ಆಮೇಲೆ ನನ್ನ ಸ್ಥಳದಲ್ಲಿ ಹೋಗಿ ಮಲಗಿದೆನು. ನಿತ್ಯದಂತೆಯೇ ಬೆಳಗಿನಜಾಮದ ನಾಲ್ಕು ಘಂಟೆಯಲ್ಲಿ ಎದ್ದು, ಹಿತ್ತಲಕಡೆಯ ಪುಷ್ಕರಣಿಯ ಬಳಿಗೆ ಹೋಗಿ, ಅಲ್ಲಿಂದ ಹಿಂತಿರುಗಿ ಬರುವಷ್ಟರಲ್ಲಿ, ಹಿತ್ತಲ ಬಾಗಿಲನ್ನು ಯಾರೋ ಹಾಕಿದ್ದರು. ಎಷ್ಟು ಸಾರಿ ಕೂಗಿದರೂ ಬಾಗಿಲು ತೆರೆಯಲ್ಪಡಲಿಲ್ಲವಾಗಿ ಹಿತ್ತಲನ್ನು ದಾಟಿ, ಬೀದಿಯಕಡೆಯಿಂದ ಬಂದೆನು. ಅಷ್ಟರಲ್ಲಿಯೇ ಜಮೀನ್ದಾರರೂ ಬೀದಿಯಬಾಗಿಲನ್ನು ತೆರೆದರು. ಒಳಗೆ ಏನು ನಡೆದಿದ್ದಿತೋ ನನಗೆ ತಿಳಿಯದು. ಹೇಗೂ ಜಮೀನ್ದಾರರೂ ಅವರ ತಾಯಿ ಮತ್ತು ಪತ್ನಿ ಗಂಗಾಬಾಯಿಯ

ವರುಗಳೂ ನನ್ನನ್ನು ವಿಚಾರಿಸಿ, ಶೋಧಿಸಬೇಕೆಂದರು. ನಾನು ಹಿಂದುಮುಂದು ನೋಡದೆ, ಶೋಧನೆಗೆ ಸಮ್ಮತಿಸಿದೆನು. ಆಗ ನನಗೆ ತಿಳಿಯದಂತೆ ನನ್ನ ಸೀರೆ ಸೆರಗಿನ ಕೊನೆಗೆ ಸಿಕ್ಕಿದ್ದ ಬಟ್ಟೆಯ ಗಂಟು ಕೆಳಗೆ ಬಿದ್ದಿತು. ಅದರೊಳಗೆ ಅಮ್ಮಾಯಿಯವರ ಪೆಟ್ಟಿಗೆಯ ಬೀಗದಕೈಗಳಿದ್ದುವು. ಅದು ನನ್ನಲ್ಲಿಗೆ ಹೇಗೆ ಬಂದಿತೋ ಇರಿಸಿದವರಾರೋ ನಾನದನ್ನು ಕಣ್ಣಾರೆ ನೋಡಲಿಲ್ಲವಾದರೂ, ಇಂತಹವರ ಕೆಲಸವೇ ಸರಿಯೆಂದು ಭಾವಿಸಿ ತಿಳಿಯಬಲ್ಲೆನು. ಆದರೆ ಅದನ್ನಿಲ್ಲಿ ನಾನೇ ಬಾಯ್ದೆರೆದು ಹೇಳುವುದು ಸರಿಯಲ್ಲವೆಂದಿರುವೆನು. ಹೇಗೂ ಇರಲಿ, ಆ ಅಪರಾಧವು ನನ್ನ ಮೇಲೆ ಬಿದ್ದು, ನನ್ನನ್ನು ಪೊಲೀಸಿಗೆ ಕಳುಹುವಂತೆ ಮಾಡಿದರೂ, ಶ್ರೀದತ್ತಕುಮಾರರೇ ಬಂದು ನನ್ನನ್ನು ಬಿಡಿಸಿ ಕರೆದೊಯ್ದು, ತಮ್ಮ ಮನೆಯಲ್ಲಿ ಸುನಂದಾದೇವಿಯ ಮತ್ತು ಅವರ ಸೋದರತ್ತೆಯ ಸಹಾಯಕ್ಕೆ ನಿಯಮಿಸಿದರು. ನಾನು ಈವರೆಗೂ ಅಲ್ಲಿಯೇ ಇದ್ದೆನು.

ರಾಧಾನಾಥ—ಯಶವಂತನ ಕಡೆ ತಿರುಗಿ—'ಏನಯ್ಯಾ! ನಿಮ್ಮ ಕಡೆಯ ಆಕ್ಷೇಪವೇನಾದರೂ ಉಂಟೊ?'

ಯಶವಂತ—ಇವಳನ್ನು ಕೇಳಬೇಕಾಗಿಲ್ಲ; ಮುಂದೆ ಇದೆ.

(ಯಮುನೆಯು ಮೊದಲಿದ್ದೆಡೆಗೆ ಕಳುಹಲ್ಪಟ್ಟಳು.)

॥ ಶ್ರೀ ॥

## ಚತುರ್ಥಪರಿಚ್ಛೇದ.

(ಗಂಗೆಯ ನಿಶ್ಚಿತಾರ್ಥ.)

ನ್ನು ಈಬಾರಿ ಗಂಗಾಬಾಯಿಯೆಂದು ಗೊತ್ತಾಯಿತು. ಗಂಗಾಬಾಯಿಯು ಕರೆಯಲ್ಪಟ್ಟಳು. ಅವಕುಂಠನವನ್ನು ಹೊದ್ದು ಬಂದು ತಲೆವಾಗಿ ನಿಂತಳು. ಜಮೀನ್ದಾರನು ಕ್ಲೇಶರೋಷಾದಿಗಳಿಂದ ಪರವಶನಾದನು. ಗಂಗೆಯು ಆತನ ಅವಸ್ಥೆಯನ್ನು ನೋಡಿ ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಿದ್ದಳು.

ರಾಧಾನಾಥ—ತಾಯಿ! ನೀವು ಈ ವ್ಯಾಜ್ಯದ ವಿಷಯವಾಗಿ ಏನು ಹೇಳಬಲ್ಲಿರಿ?

ಗಂಗೆ—ನಾನು ಹೇಳುವುದೆಲ್ಲ ಅಖಂಡವೂ-ಅದ್ಭುತವೂ-ನಿಗೂಢವೂ ಆದ ವಿಚಾರಗಳು. ಅವುಗಳಲ್ಲಿ ಒಂದಾದರೂ ಅನೃತವಿರುವುದಿಲ್ಲ.

ರಾಧಾನಾಥ—ಹಾಗಿದ್ದರೆ, ಧೈರ್ಯವಾಗಿ ಹೇಳಿರಿ, ತಾಯಿ!

ಗಂಗೆ—ಹೇಳಹೋದಳು; ಆದರೆ ಮೊದಲು ಕೊರಳುಕಟ್ಟಿದಂತಾಗಿ ಕಣ್ಣುಗಳಲ್ಲಿ ನೀರುತುಂಬಿ, ಹೃದಯವು ಕಂಪಿಸಿತು. ಆದರೂ ಗಂಗೆಯು ಕಷ್ಟದಿಂದ ಮನೋನಿಗ್ರಹಮಾಡಿ, ಪತಿಯನ್ನು ನಿಂತಲ್ಲಿಯೇ ವಂದಿಸಿ, ಮೇಲೆನೋಡಿ-'ಸರ್ವೇಶ್ವರ! ಸರ್ವಸಾಕ್ಷಿಮಂತ!! ಪ್ರಸನ್ನನಾಗು. ನನ್ನ ನಿಶ್ಚಿತಾರ್ಥವನ್ನು ತಿಳಿಯೆಹೇಳಿ, ಪ್ರಾಯಶ್ಚಿತ್ತಮಾಡಿಕೊಳ್ಳುವವರೆಗೂ, ನನ್ನೀ ಚೈತನ್ಯವನ್ನು ಕುಂದಿಸದಿರು. ನನ್ನನ್ನು ಪಾಪನಿರ್ಮುಕ್ತಳನ್ನಾಗಿ ಮಾಡು.' ಎಂದು ಪ್ರಾರ್ಥಿಸಿದಬಳಿಕ ಸ್ಥಿರಳಾಗಿ ನಿಂತು ಹೇಳಲಾರಂಭಿಸಿದಳು.

' ನ್ಯಾಯಕರ್ತರೇ !

ವಿದ್ಯಾಭ್ಯಾಸವು ಪುರುಷರಿಗೆ ಅವಶ್ಯಕವಾದಷ್ಟೇ ಸ್ತ್ರೀಯರಿಗೂ ಇರಬೇಕೆಂಬುದು ನಿಜವಾದ ಮಾತು. ಆದರೆ, ವಿದ್ಯೆಯು ಕೇವಲ ಶಿಕ್ಷ್ಣ-ಅಧ್ಯಯನಪೂರ್ವಕವಾಗಿ ಭಗವತ್ಸ್ವರೂಪ-ಸಂಬಂಧ-ಕರ್ತವ್ಯಗಳನ್ನು ಬೋಧಿಸುವ ಜ್ಞಾನವಾಗಿದ್ದು, ಅದೇ ಸ್ತ್ರೀಯರಿಂದ ಸಂಪಾದಿಸಲ್ಪಡಬೇಕಲ್ಲದೆ, ಬರಿಯ ಭಾಷಾಪರಿಚಯವಾಗಲೀ, ಇತರ ಪ್ರೌಢಕಲಾಪರಿಶ್ರಮವಾಗಲೀ ಸ್ತ್ರೀಯರಿಗೆ ಮುಖ್ಯವೆನಿಸಲಾರದು. ವಿದ್ಯೆಯಿಲ್ಲದೆ ಕಲಾಭಿಜ್ಞತೆಯುಂಟಾದರೆ, ಅದು ಸ್ತ್ರೀಯರಲ್ಲಿ ಅಭಿಮಾನ-ಆಲಸ್ಯ-ಉದಾಸೀನ-ಅಸೂಯೆ, ಸಂಶಯ, ಇತ್ಯಾದಿ ದೋಷಗಳಿಗೆ ಗುರಿಯಾಗಿ, ಅನರ್ಥವನ್ನೇ ಉಂಟುಮಾಡುವಂತಾಗುವುದಲ್ಲದೆ, ಸಹವಾಸದೋಷಕ್ಕೆ ಗುರಿಯಾಗುವಪಕ್ಷದಲ್ಲಿ ಸ್ವರೂಪನಾಶಕ್ಕೇ ಕಾರಣವಾದೀತೆಂದೂ ಹೇಳಬೇಕಾಗಿದೆ. ಅದು ಹಾಗಿರಲಿ.

ನಾನು ಇತರ ಕುಶಲಕಲೆಗಳಲ್ಲಿ ಪರಿಶ್ರಮವುಳ್ಳವಳಾಗಿದ್ದು, ತಕ್ಕಮಟ್ಟಿಗೂ ಭಾಷಾಪರಿಜ್ಞಾನವನ್ನು ಹೊಂದಿದ್ದರೂ, ನನಗೆ ಮೇಲಿನ ಶಿಕ್ಷಾರೂಪವಾದ ವಿದ್ಯೆಯು ಅಷ್ಟಾಗಿ ದೊರೆಯಲಿಲ್ಲ. ಸಾಧ್ವೀಮಣಿಯಾದ ನನ್ನ ತಾಯಿಯ ಸುಬೋಧ-ಶಿಕ್ಷಣೆಯೂ ನನಗೆ ಕೇವಲ ನನ್ನ ಬಾಲ್ಯದಲ್ಲಿ ಮಾತ್ರವೇ ದೊರೆದಿತ್ತಾದರೂ, ಅತ್ಯಲ್ಪಕಾಲದಲ್ಲಿಯೇ ಹೊಂದಿದ ಮಾತೃವಿಯೋಗದುಃಖದಿಂದ ಅದು ಪ್ರಸಾರಕ್ಕೆ ಬರದೆ, ಅಂತರಂಗದಲ್ಲಿಯೇ ಅಡಗಿರಬೇಕಾಯಿತು—

ಮಾತೃವಿಯೋಗಹೊಂದಿದ ಒಂದೆರಡು ವರ್ಷಗಳಲ್ಲಿಯೇ ಯಶವಂತನು, ಜಮೀನ್ದಾರರ ದಿವಾನನಾಗಿ ನೇಮಿಸಲ್ಪಟ್ಟಿದ್ದುದರಿಂದ, ಒಬ್ಬ ದಾದಿಯೊಡನೆ ನನ್ನನ್ನು ವಿಷಹರಪುರದಲ್ಲಿಯೇ ಇರಿಸಿ, ನನಗೆ ಅಲ್ಲಿ ವ್ಯಾಸಂಗವನ್ನು ರೂಢಿಗೆ ತರುವಂತೆ ಮಾಡಿದರು. ಯಶವಂತನು, ನನ್ನ ಮತ್ತು ನನ್ನ ಪೋಷಕಳ ವಿಚಾರದಲ್ಲಿ ಅಧಿಕ ಶ್ರದ್ಧೆಯಿಂದ ತೃಪ್ತಿಕರವಾದ ಏರ್ಪಾಟುಮಾಡಿ, ಆಡಿಗಡಿಗೆ ಬಂದು, ನಮ್ಮನ್ನು ವಿಚಾರಿಸಿಕೊಳ್ಳುತ್ತಿದ್ದನು.

ಹೀಗೆ ಒಂದು ವರ್ಷಕಾಲ ನಡೆದ ಬಳಿಕ, ಸುನಂದಾದೇವಿಯು ಕಾಲವಾದಳೆಂಬ ವದಂತಿ ಹುಟ್ಟಿತು. ಅದರ ಮೇಲೆ ನನ್ನನ್ನು ಕರೆಯಿಸಿ ನೋಡಿ, ಜಮೀನ್ದಾರರ ತಾಯಿಯವರು ಮಗನನ್ನು ಬಲಾತ್ಕರಿಸಿ, ಮತ್ತೆ ಮದುವೆಗೆ ಒಪ್ಪುವಂತೆ ಮಾಡಿದರು. ನನ್ನ ಸುಕೃತವೂ ಚೆನ್ನಾಗಿದ್ದುದರಿಂದ, ನಾನು ಅವರ ಪತ್ನೀಸ್ಥಾನದಲ್ಲಿ ಸೇರುವಂತಾದೆನು.

ಆದರೆ, ವಿವಾಹವಾಗಿ ಪತಿಗೃಹವನ್ನು ಸೇರಿದ ನಾನು, ಪತಿಸನ್ನಿಧಿಯಲ್ಲಿ ಸರಸ-ವಿನೋದ-ಪ್ರಸಂಗಗಳಾವುದಕ್ಕೂ ಭಾಗಿನಿಯಾಗಿರಲಿಲ್ಲ. ನನ್ನ ವಿಷಯದಲ್ಲಿ, ಜಮೀನ್ದಾರರು ಅನಾದರವನ್ನಾಗಲೀ, ಅಥವಾ ತಿರಸ್ಕಾರವನ್ನಾಗಲೀ ತೋರುತ್ತಿರಲಿಲ್ಲವಾದರೂ ಪ್ರಸನ್ನರಾಗಿರಲಿಲ್ಲ. ಅದು ನನಗೆ ಸಹನಾತೀತವಾಗಿಯೇ ಇದ್ದಿತು. ಅಲ್ಲದೆ ಅವರು ಅಡಿಗಡಿಗೆ ಜನರಮುಂದೆ ಹೇಳುತ್ತಿದ್ದ ಸುನಂದೆಯ ಹೊಗಳಿಕೆಯೂ ನನ್ನ ಅಸೂಯೆಯನ್ನು ಹೆಚ್ಚಿಸುತ್ತಲೇ ಬರುತ್ತಿದ್ದಿತು. ಹೀಗೆ ನನ್ನ ಸ್ವಾಮಿಯು ನನ್ನ ವಿಷಯದಲ್ಲಿ ಪರಾಙ್ಮುಖರಾಗುವುದಕ್ಕೆ ಕಾರಣವು ಅವರ ನಡೆಯಲ್ಲಿ ಕಲಂಕವಿರಬೇಕೆಂದೂ, ಹಾಗಿಲ್ಲದೇ ಇದ್ದ ಪಕ್ಷದಲ್ಲಿ ಇವರು ನನ್ನಲ್ಲಿಯೂ, ಮನೆಯ ವಿಚಾರದಲ್ಲಿಯೂ ಇಷ್ಟು ಬೇಸರಪಡುತ್ತಿರಲಿಲ್ಲವೆಂದೂ ಯೋಚಿಸಿದೆನು. ಪತಿಯ ಅಪ್ರಸನ್ನತೆಗೆ ನನ್ನಲ್ಲಿ ಅನುವರ್ತನಗುಣವಿಲ್ಲದಿದ್ದುದೂ, ಅಭಿಮಾನ ಸ್ವಪ್ರತಿಷ್ಠೆಗಳು ನನ್ನಲ್ಲಿ ಮಿತಿಮೀರಿಹೋಗಿದ್ದುದೂ ಕಾರಣವೆಂಬುದನ್ನು ಅಸೂಯಾಗ್ರಸ್ತಳಾದ ನಾನು ತಿಳಿಯದವಳಾಗಿದ್ದೆನು. ಇದೇ ಗುಣವೇ ನಮ್ಮ ಸ್ತ್ರೀಜಾತಿಯ ಸುಖ-ಸಂತೋಷಗಳಿಗೆ ವಿಘ್ನವಾಗಿರಬೇಕೆಂದು ನನಗೆ ಈಗ ಹೊಳೆಯುತ್ತಿರುವುದು. ಅದೂ ಹಾಗಿರಲಿ.

ಮೊದಲನೆಯ ಕಳುವಾದ ದಿನದ ಸಾಯಂಕಾಲದಲ್ಲಿ, ನಾನು ಬೇಸರವನ್ನು ಕಳೆದುಕೊಳ್ಳಬೇಕೆಂದು, ಮಾಳಿಗೆಯ ಮೇಲೆ ತಿರುಗಾಡುತ್ತಿದ್ದೆನು. ಆದರೆ, ನನ್ನ ದುರದೃಷ್ಟವಶದಿಂದ ತಲೆಯಲ್ಲಿ ಮುಡಿದಿದ್ದ ಗುಲಾ

ಬಿಯ ಹೂವು, ಜಾರಿ ಕೆಳಗೆ ಬೀದಿಯ ಮಾರ್ಗದಲ್ಲಿ ಬಿದ್ದಿತು. ಹೂವು ಬಿತ್ತೆಂದು ನಾನು ಆ ಕಡೆ ನೋಡುವಷ್ಟರಲ್ಲಿಯೇ, ಈ ಜಮಾದಾರ ವಾಸು ದೇವನು ಆ ಕಡೆ ಬರುತ್ತಿದ್ದವನು, ಥಟ್ಟನೆ ಹೂವನ್ನು ಕೈಯಿಂದೆತ್ತಿ ಕಣ್ಣಿ ಗೊತ್ತಿಕೊಳ್ಳುತ್ತ, ನಾನು ನಿಂತಿದ್ದ ಕಡೆಯನ್ನೇ ನೋಡುವುದನ್ನು ಕಂಡೆನು. ನನ್ನ ತಲೆಯಲ್ಲಿದ್ದ ಹೂವು ಕೆಳಗೆ ಜಾರಿಬಿದ್ದುದೂ, ಅದು ಅನ್ಯಾಕ್ರಾಂತವಾದುದೂ, ಸಾಲದುದಕ್ಕೆ ಅವನು, ವಿಕಾರಚೇಷ್ಟೆಗಳಿಂದ ನೋಡುತ್ತಿರುವುದೂ—ಇವೆಲ್ಲಾ ಕಾರಣಗಳಿಂದಲೂ ನನ್ನ ಮನಸ್ಸು ವ್ಯಾಕುಲಿತವಾಯಿತು. ನಾನು ನಿಂತಲ್ಲಿಯೇ ಯೋಚಿಸುತ್ತಿದ್ದು, ನಾಲ್ಕಾರು ನಿಮಿಷಗಳ ಮೇಲೆ ಎಚ್ಚೆತ್ತುನೋಡಿದೆನು. ಇವನು ಆಗಲೂ ಅಲ್ಲಿಯೇ ಇದ್ದುದರಿಂದ, ನಾನು ಭಯಪಟ್ಟು, ಅಲ್ಲಿ ನಿಲ್ಲದೆ ನನ್ನ ಸ್ಥಾನಕ್ಕೆ ಹೊರಟು ಹೋದೆನು.

ಆ ರಾತ್ರಿ ಎಳುಗಂಟೆಯಲ್ಲಿಯೇ ಯಶವಂತನು ನಾನಿದ್ದಲ್ಲಿಗೆ ಬಂದು, ನನ್ನನ್ನು ಬಹುವಿಧವಾಗಿ ಹೊಗಳಿದುದಲ್ಲದೆ, ಜಮಾದಾರನ ವಿದ್ಯಾ ಗುಣಗಳನ್ನೂ ವಿವಿಧವಾಗಿ ವರ್ಣಿಸಿದನು. ನಾನು ಇನ್ನೂ ಸುಸ್ಥಿತಿಗೆ ಬಂದಿರಲಿಲ್ಲವಾದುದರಿಂದ, ಅವನಿಗೆ ಯಾವ ಉತ್ತರವನ್ನೂ ಕೊಡಲಾರದಿ ದ್ದೆನು. ಆದರೆ ಅವನು, ಜಮಾದಾರನ ವಿಷಯಪೂರ್ತಿಗೆ ನಾನು ಸಮ್ಮತಿ ಸಬೇಕೆಂದೂ, ಮುಂದೆ ಜಮೀನ್ದಾರರ ಸರ್ವಸ್ವವೂ ತನ್ನ ಕೈವಶವಾಗುವು ದರಿಂದ, ಜಮಾದಾರನಿಗೆ ತಾವು ಅರ್ಧಭಾಗವನ್ನು ಕೊಟ್ಟು ಉನ್ನತಿಗೆ ತರುವೆವೆಂದೂ, ಇನ್ನೂ ಹಲವು ದುರ್ಭಾಷೆಗಳಿಂದ ನನ್ನ ಕಿವಿಯನ್ನು ಕಿವು ಡನ್ನಾಗಿಮಾಡಿದರು. ನಾನು ಅದಕ್ಕೆ ಸಮ್ಮತಿಸದೆ ಒಂದೆರಡು ನಿಷ್ಠುರದ ಮಾತುಗಳನ್ನಾಡಿದೆನು. ಇಷ್ಟಕ್ಕೇ ಯಶವಂತನು ಕ್ರೋಧಾಂಧನಾಗಿ ನನ್ನನ್ನು ಮನಬಂದಂತೆ ಬೈದು, ಬೆದರಿಸಿದುದಲ್ಲದೆ—'ನಿನ್ನನ್ನು ಕಷ್ಟಪಟ್ಟು ಸಾಕಿದುದೂ, ಈ ಮನೆಗೆ ನಿನ್ನನ್ನು ಮದುವೆಮಾಡಿಕೊಟ್ಟುದೂ, ನಿನ್ನ ಆಗ್ರಹದಂತೆ ನಡೆಯಬೇಕೆಂದಲ್ಲ. ನಮ್ಮ ವಿಚಾರವಾಗಿ ನೀನು ಒಂದಕ್ಷರ

ವನ್ನಾದರೂ ಯಾರಮುಂದೆಯಾಗಲಿ ಹೇಳಿದುದಾದರೆ, ಆ ಕ್ಷಣವೇ ಜಮೀನ್ದಾರನ ಪ್ರಾಣವನ್ನು ತೆಗೆದು, ನಿನ್ನನ್ನು ಅಂತ್ಯಜರಿಂದ ಕೆಡಿಸಿಹಾಕುವೆನೆಂದೂ, ತಮ್ಮ ಕಾರ್ಯಕ್ಕೆ ಪ್ರತಿಕೂಲವನ್ನಾಚರಿಸುವುದಾದರೆ, ನಿನ್ನಲ್ಲಿ ಕಳಂಕವನ್ನು ಹೊರಿಸಿ, ಮನೆಬಿಟ್ಟು ಹೊರಡಿಸುವಂತೆ ಮಾಡುವೆವೆಂದೂ ಹೇಳಿ, ನನ್ನನ್ನು ಭಯಸಾಗರದಲ್ಲಿ ಮುಳುಗಿಸಿದನು.

ಆಗ ನನಗೆ ಸಾರಾಸಾರ ವಿಚಾರವು ಅಷ್ಟು ದೃಢವಾಗಿ ತಿಳಿದಿರಲಿಲ್ಲವಾದುದರಿಂದಲೂ, ವೈಧವ್ಯ, ಅಪವಾದ, ನಿರಂತರಕಷ್ಟ–ಇತ್ಯಾದಿಗಳ ಭಯದಿಂದಲೂ, ಸಾಲದುದಕ್ಕೆ ಭ್ರಾತೃವಾತ್ಸಲ್ಯವೆಂಬ ಲೋಭದಿಂದಲೂ ನಾನು, ದುರಾಚಾರಕ್ಕೆಂದಿಗೂ ಗುರಿಯಾಗುವುದಿಲ್ಲವೆಂದು ತಿರಸ್ಕರಿಸಿದೆನಾದರೂ, ಅವನ ಕಾರ್ಯಗಳಿಗೆ ಪ್ರತಿಕೂಲವನ್ನು ಮಾಡುವುದಾಗಲೀ, ಹೇಳುವುದಾಗಲೀ ಇಲ್ಲವೆಂದು ಭಾಷೆಯಿತ್ತು, ಅದರಂತೆ ನಡೆಯಲು ನಿಶ್ಚಯಿಸಿದೆನು. ಆ ರಾತ್ರಿಯೇ ನಾನು ಅವನ ಇಷ್ಟದಂತೆ, ನನ್ನ ಆಭರಣ ವಸ್ತ್ರಾದಿಗಳೆಲ್ಲವನ್ನೂ ತೆಗೆದಿತ್ತು, ಅವನನ್ನು ಕಳುಹಿ, ಪೆಟ್ಟಿಗೆಗಳ ಹಲಗೆಗಳನ್ನೊಡೆದೆಸೆದು, ಬಾಗಿಲಿಗೆ ಕೈಹಿಡಿವಂತೆ ರಂಧ್ರಮಾಡಿದೆನು. ಈ ಕಾರ್ಯವು ನನಗೆ ತಕ್ಕುದಲ್ಲವೆಂದು ಆತ್ಮನು ಹೇಳುತ್ತಿದ್ದುದರಿಂದ, ನಾನು ಆ ರಾತ್ರಿಯಲ್ಲಿ ಹುಚ್ಚಳಂತೆಯೇ ಇದ್ದೆನು. ಈ ಕಾರಣಗಳಿಂದಲೇ, ರಾತ್ರಿ–ಎಂದೂ ಕರೆಯದಿದ್ದ ಪತಿಯು, ಆ ದಿನದಲ್ಲಿ ಎರಡು–ಮೂರು ಬಾರಿ ಹೇಳಿಕಳುಹಿದರೂ ಬರಲಾರೆನೆಂದು ಹೇಳಿ, ಅವರ ಮನಸ್ಸನ್ನು ಖತಿಗೊಳಿಸಿಬಿಟ್ಟೆನು. ಇಷ್ಟುಮಾಡಿಯೂ, ಜಮೀನ್ದಾರರು ಶ್ರೀದತ್ತಕುಮಾರನೊಡನೆ ಪರೀಕ್ಷೆಗೆಂದು ಬಂದಾಗ, ನಾನು ಏನನ್ನೂ ತಿಳಿಯದವಳಂತೆ ಮಲಗಿದ್ದೆನು. ಅಷ್ಟಲ್ಲದೆ, ಯಜಮಾನರ ಕಾಗದಪತ್ರಗಳನ್ನೂ ಹೊತ್ತುಹಾಕಿದವರಾರೆಂಬುದನ್ನು ನಾನು ನೋಡಿದವಳಲ್ಲ. ಆದರೂ, ಯಶವಂತ–ಗೋಪಾಲರಿಬ್ಬರಲ್ಲದೆ, ಮತ್ತಾರೂ ಬಂದಿರಲಿಲ್ಲವೆಂದು ಹೇಳಬಲ್ಲೆನು.

ಧರ್ಮಪಾಲ—ಹಾಗಾದರೆ, ಆ ರಾತ್ರಿ ಯಶವಂತಾದಿಗಳನ್ನು ಕಟ್ಟಿಹಾಕಿದ್ದವರಾರು ?

ಗಂಗೆ—ಅದಾವುದೂ ನನಗೆ ಗೊತ್ತಿಲ್ಲ. ಸಾಯಂಕಾಲದಲ್ಲಿ ನಡೆದ ವಿಚಾರದಿಂದ ವ್ಯಾಕುಲಿತಳಾಗಿದ್ದ ನಾನು ಆ ರಾತ್ರಿ ಕೆಳಗಿಳಿದು ಬರಲೇ ಇಲ್ಲ.

ರಾಧಾನಾಥ—ಯಶವಂತನು ನಿಮಗೇನಾಗಬೇಕು ?

ಗಂಗೆ—ಬೇಸರದಿಂದ-' ಅವರ ಸಂಬಂಧವಿಂತಹುದೆಂದು ಹೇಳಲಿಕ್ಕೂ ನನಗೆ ಅಸಹ್ಯವಾಗುತ್ತಿದೆ. ಅವರ ಬಾಯಿಂದಲೇ ಹೇಳಿಸಬೇಕಲ್ಲದೆ, ಈಗ ನನ್ನಿಂದ ಅದನ್ನು ಹೇಳಲಾಗುವಂತಿಲ್ಲ. ಆದರೆ, ಅವರಾಗಿ ಹೇಳದೆಹೋದ ಕಾಲಕ್ಕೆ, ನಾನೇ ಅವರ ಯಾವದ್ವೃತ್ತಾಂತವನ್ನೂ ಹೇಳುವುದರಲ್ಲಿ ಸಂಶಯವಿಲ್ಲ.

ರಾಧಾನಾಥ—ಹಾಗಾಗಲಿ ; ನಿಮ್ಮ ಅತ್ತೆಯವರ ಪೆಟ್ಟಿಗೆ ಮೊದಲಾದುವುಗಳನ್ನು ಕದ್ದವರಾರೆಂಬುದನ್ನು ನೀವು ಬಲ್ಲಿರೋ ?

ಗಂಗೆ—ಅದೂ ಯಶವಂತನ ಕೆಲಸವೇ ಸರಿ.

ರಾಧಾನಾಥ—ಹೇಗೆ ಹೇಳುವಿರಿ ? ನಿಮಗಿದು ತಿಳಿದಿದ್ದಿತೋ ?

ಗಂಗೆ—ಹೀಗೆಯೇ ಮಾಡುವೆನೆಂದು ನನಗೆ ಇವನು ಹೇಳಿರಲಿಲ್ಲ. ಆ ರಾತ್ರಿ, ನನ್ನ ಕಿರುಮನೆಯಲ್ಲಿ ನಾನು ಮಲಗಿದ್ದೆನು. ಅಲ್ಲಿಗೆ ಬಂದು ಕೂಗಿ ಎಚ್ಚರಿಸಿ, ಅಮ್ಮಾಯಿಯವರ ಪೆಟ್ಟಿಗೆಗಳ ಬೀಗದ ಕೈಗಳನ್ನು ಬಟ್ಟೆಯಲ್ಲಿ ಕಟ್ಟಿ, ಅದನ್ನು ಯಮುನೆಯ ಉಡಿಯಲ್ಲಿ ಸೇರಿಸಬೇಕೆಂದೂ, ತಾನೇ ಈ ಕೆಲಸವನ್ನು ಮಾಡುವುದು ಸಾಧ್ಯವಾಗಿದ್ದರೂ, ಪುರುಷರ ಸುಳಿವನ್ನು ಅತಿ ಸೂಕ್ಷ್ಮವಾಗಿ, ವಾಸನೆಯಿಂದ ಗ್ರಹಿಸುವ ಯಮುನೆಯ ಬಳಿಗೆ ಹೋಗುವುದು ಸರಿಯಾಗಿಲ್ಲವೆಂದೂ, ಬಹುಬಗೆಯಿಂದ ಕೇಳಿಕೊಂಡನಲ್ಲದೆ, ಯಮುನೆಯನ್ನೂ-ವಿಷಕಂಠನನ್ನೂ ಮನೆಬಿಟ್ಟು ಹೊರಡಿಸುವಂತೆ ಮಾಡಲು, ಇದೇ ಮುಖ್ಯವಾದ ಉಪಾಯವೆಂದೂ ಸೂಚಿಸಿದನು. ಯಮುನೆಯನ್ನು ಹೊರಡಿಸಬೇಕೆಂಬುದು ನನಗೂ ಇಷ್ಟವಾಗಿದ್ದುದರಿಂ

ದಲೂ-ಮೊದಲುಸಾರಿ, ಯಜಮಾನರಲ್ಲಿ ಹೇಳಿಯೂ ಅದು ಫಲಕಾರಿಯಾಗದಿದ್ದುದು ಅಸಮಾಧಾನವುಂಟುಮಾಡುತ್ತಿದ್ದುದರಿಂದಲೂ, ನಾನು ಅದನ್ನು ತಂದು ಯಮುನೆಯ ಸೀರೆಯ ಕೊನೆಗೆ ಕಟ್ಟಿ, ಹೊರಟುಹೋಗಿ ಮಲಗಿದೆನು. ಉಳಿದ ಕೆಲಸವೆಲ್ಲವೂ ಯಶವಂತನ ಕುಮಂತ್ರಕ್ಕೇ ಸೇರಿರಬೇಕು.

ರಾಧಾನಾಥ—ಹೋಗಲಿ ; ನಿಮ್ಮ ಸಪತ್ನಿಯ ಮತ್ತು ಸಪತ್ನೀಪುತ್ರರ ವಿಷಯವಾಗಿ ನಿಮಗೆ ದ್ವೇಷವಿದ್ದಿತೋ ? ಅವರ ಕೊಲೆಗೆ ನೀವೇನಾದರೂ ಪ್ರೇರಕರಾಗಿರುವಿರೋ ?

ಗಂಗೆ—ಗದ್ಗದಸ್ವರದಿಂದ-'ನನ್ನ ಜೀವನದಲ್ಲಿಯಾದರೂ ನನಗೆ ದ್ವೇಷವುಂಟಾದೀತಲ್ಲದೆ,-ಕುಮಾರನ ವಿಷಯದಲ್ಲಿಯಾಗಲೀ, ಸುನಂದಾಬಾಯಿಯಲ್ಲಿಯಾಗಲೀ ನನಗೆ ದ್ವೇಷವುಂಟಾಗಲು ಕಾರಣವಿರುವುದಿಲ್ಲ. ಸ್ವಾಮಿಯ ಅಪ್ರಸನ್ನತೆಗೆ ಕಾರಣಳಾಗಿ, ಅಭಿಮಾನಾದಿಗಳಿಂದ ಬೀಗಿದ್ದ ನನಗೆ ಜ್ಞಾನವನ್ನುಂಟುಮಾಡಿ, ಪುತ್ರನನ್ನೂ ನನ್ನ ಕೈಗೊಪ್ಪಿಸಿ, ಪತಿಯ ವಿಶ್ವಾಸವು ನನ್ನಲ್ಲಿ ಪೂರ್ಣವಾಗಿರುವಂತೆ ಮಾಡಿದ ಸುನಂದಾದೇವಿಯನ್ನು ನಾನೆಂದಿಗೂ ಸಪತ್ನಿಯೆಂದು ತಿಳಿಯಲಾರೆನು ! ಆಕೆಯನ್ನು ನನ್ನ ಭಾಗ್ಯದೇವತೆಯೆಂದೇ ಹೇಳಬಲ್ಲೆನು. ಅಷ್ಟೇಅಲ್ಲ ! ಯಾವ ದಿನದಲ್ಲಿ-ಅವರು ಲಕ್ಷ್ಮೀಭವನಕ್ಕೆ ಕಾಲಿಟ್ಟರೋ, ಆ ದಿನದ ಮೊದಲು, ನನಗೆ ಸತೀಕರ್ತವ್ಯವು ಜಾಗ್ರತವಾಗುತ್ತ ಬಂದಿತಲ್ಲದೆ, ಯಶವಂತಾದಿಗಳ ಕೂಡ ಸಂಭಾಷಣವೂ ನಿಷಿದ್ಧವೆಂದು ತಿಳಿದುಬಂದಿತು. ಆದಕ್ಕಾಗಿ ನಾನು, ಯಾವಾಗಲೂ ಅವರ ಬಳಿಯಲ್ಲಿಯೇ ಇದ್ದು, ವಿವಿಧ ಪ್ರಸಂಗದಿಂದ ಆತ್ಮಸಮಾಧಾನವನ್ನು ಕಲ್ಪಿಸಿಕೊಳ್ಳುತ್ತಿದ್ದೆನು. ಆದರೆ, ನನ್ನ ದುರ್ದೈವದಿಂದ ಅತ್ಯಲ್ಪಕಾಲದಲ್ಲಿಯೇ ಅವರನ್ನು ಅಗಲುವ ಪ್ರಸಂಗವುಂಟಾಯಿತು. ಅವರು ಮತ್ತೆ

ದುರ್ಗಾಪುರಕ್ಕೆ ತೆರಳಿದ ಬಳಿಕ ಲಕ್ಷ್ಮೀನಿಲಯವು ಮುಚ್ಚಲ್ಪಟ್ಟುದರಿಂದ, ವಿಲಾಸಭವನದಲ್ಲಿಯೇ ಇರಬೇಕಾಯಿತು. ಇದರಿಂದ ನನಗೆ ಈ ಯಶವಂತನ ಹಿಂಸೆಯು, ಮತ್ತೆ ತಲೆಯೆತ್ತುವಂತಾಯಿತು.

ರಾಧಾನಾಥ—ವಿಂದೆಯ ಅಪಹರಣದ ವಿಚಾರವಾಗಿಯಾಗಲೀ ಮತ್ತಾವ ಕೊಲೆ-ಸುಲಿಗೆಗಳ ವಿಷಯದಲ್ಲಿಯಾಗಲೀ, ಇವರು ನಿಮ್ಮಲ್ಲಿ ಎಂದಾದರೂ ಹೇಳಿದ್ದರೋ ?

ಗಂಗೆ—ಸುನಂದಾದೇವಿಯು ಮತ್ತು ಮೋಹನನು ಜೀವಿಸಿರುವ ವರ್ತಮಾನವೇ ನನಗೆ ತಿಳಿದಿರಲಿಲ್ಲ. ವಿಂದೆಯನ್ನು ಸುಪಂಥನಿಗೆ ಮದುವೆ ಮಾಡಿ ಕೊಡಬೇಕೆಂದು ಮಾತ್ರವೇ ಇವರು ನನಗೆ ಹೇಳಿದ್ದರು. ಒಡಹುಟ್ಟಿದ ಪ್ರೀತಿಯಿಂದ, ನಾನೂ ಅದಕ್ಕೆ ಸಮ್ಮತಿಸಿದ್ದು, ಒಂದೆರಡು ಬಾರಿ ವಿಂದೆಯ ವಿವಾಹ ವಿಷಯವಾಗಿ ಯಜಮಾನರ ಮತ್ತು ಅತ್ತೆಯವರ ಬಳಿಯಲ್ಲಿ ಪ್ರಸ್ತಾಪಿಸಿದ್ದೆನು. ಆದರೆ, ಸುಪಂಥನು ನನ್ನ ಬಂಧುವೆಂದು ಹೇಳಿರಲಿಲ್ಲ. ಸುನಂದಾದೇವಿಯು ಪುತ್ರನೊಡನೆ ಜೀವಿಸಿರುವ ಸಂಗತಿಯನ್ನು ಕೇಳಿ, ಮೊದಲು ನನಗೆ ಅಸೂಯೆಯಾಗಿತ್ತಾದರೂ, ಆ ಅಸೂಯೆಯು ಅವರನ್ನು ನೋಡಿದ ಬಳಿಕ ಉಳಿಯಲಿಲ್ಲ. ಅವರನ್ನು ಕೊಲ್ಲಬೇಕೆಂದು ಇವರು ಹೂಡಿದ್ದ ಮಾಟವನ್ನೂ ನಾನು ಅರಿಯೆನು. ಅವರು ದುರ್ಗಾಪುರಕ್ಕೆ ಹೊರಟುಹೋಗಿ, ಯಮುನೆಯನ್ನೂ ಹೊರ ಹೊರಡಿಸಿದ ಮೇಲೆಯೇ, ನನಗೆ ಇವರ ಅಭಿಸಂಧಿಯು ಹೀಗಿರಬಹುದೆಂದು ಸಂಶಯವುಂಟಾಯಿತು. ಆ ಸಂಶಯಕ್ಕೆ ಸರಿಯಾಗಿ ತೋಟದಿಂದ ಹಾಗೆಯೇ ಹೊರಟುಹೋಗುವೆನೆಂದು ಬರೆದಿದ್ದ ಸ್ವಾಮಿಯ ಪತ್ರವೂ, ಆ ಬಳಿಕ ನಾನು ಕಂಡ ಕನಸೂ, ಕನಸಿಗನುಸಾರವಾಗಿ ಬಂದ ಧರ್ಮಪಾಲರ ಪತ್ರವೂ ನನಗೆ ಆತ್ಮಸ್ವ

ರೂಪ-ಕರ್ತವ್ಯನಿಷ್ಠೆಗಳೂ ಕಾರ್ಯಾಕಾರ್ಯವಿಚಾರಗಳಲ್ಲಿ ಪರಿಜ್ಞಾನನ್ನುಂಟುಮಾಡುವಂತಾದುವು. ಹಾಗಾದುದರಿಂದ, ಆ ವರೆಗೆ ನಾನು ನನ್ನ ಸ್ವಾಮಿಯ ವಿಷಯದಲ್ಲಿ ಉಂಟಾಗಿದ್ದ ಸಂಶಯ, ದುರಭಿಮಾನಗಳನ್ನು ಕಳೆದು, ನನ್ನ ಹಿಂದಿನ ಜ್ಞಾನಶೂನ್ಯತೆಗೆ ಪರಿತಪಿಸುವಂತಾದೆನು. ಅದು ಮೊದಲು, ನನಗೆ ಕೇವಲ ಹಿತರಂತಿದ್ದ ಯಶವಂತಾದಿಗಳೇ ನನ್ನ ಸರ್ವನಾಶಕ್ಕೂ ಕಾರಣರಾಗಿ ಹುಟ್ಟಿದವರೆಂದು ತಿಳಿದು, ದ್ವೇಷಿಸುತ್ತ ಬಂದೆನು. ನನ್ನ ಧೂರ್ತತೆಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ಸಂಕಲ್ಪಿಸಿದೆನು. ಆ ಸಂಕಲ್ಪದಿಂದಲೇ ನಾನು, ಕೃತಾಂತನ ಸಹಾಯದಿಂದ, ಗೊಲ್ಲರಪಾಳ್ಯವನ್ನು ಸೇರಿ, ಅಲ್ಲಿ ಧರ್ಮಪಾಲರು ಕೊಟ್ಟ ಸಲಹೆಗಳಿಂದ ಯಶವಂತಾದಿಗಳು ಮರೆಯಾಗಿದ್ದ ವೇಳೆಯಲ್ಲಿ ಹೋಗಿ, ಸ್ವಾಮಿಯ ಮಂಚದಡಿಯಲ್ಲಿ ಕಾದಿದ್ದು, ಅವರು ಯಜಮಾನರಿಗೆ ಕುಡಿಯುವಂತೆ ಹೇಳಿ ತಂದಿದ್ದ ಹಾಲನ್ನು ಕುಡಿಯದಂತೆ ಮಾಡಲು, ಉಕ್ಕಿನ ಸರಿಗೆಯಿಂದ ಮಲಗಿದ್ದವರ ಕಾಲನ್ನು ಚುಚ್ಚಿ, ಅದರ ಯಾತನೆಯಿಂದ ಅವರದನ್ನು ಕೆಡಹುವಂತೆ ಮಾಡಿದೆನು. ಆದಾದ ಬಳಿಕ, ನಡೆದ ವಿಚಾರವೆಲ್ಲವೂ ಕೃತಾಂತನ ವಾಙ್ಮೂಲದಿಂದಲೂ, ಧರ್ಮಪಾಲರ ವಾಕ್ಯದಿಂದಲೂ ತಿಳಿಯಬೇಕಲ್ಲದೆ ನನ್ನಿಂದ ಹೇಳಿ ಮುಗಿಯುವಂತಿಲ್ಲ.

ಮುಖ್ಯವಾಗಿ ಅಭಿಮಾನ-ಆಲಸ್ಯ-ಉದಾಸೀನಗಳುಳ್ಳ ಮಾನಿನಿಯರಿಗೆ ಇದೇ ಪ್ರಾಯಶ್ಚಿತ್ತವಿರಬೇಕೆಂದು ನನ್ನ ಅನುಭವದಿಂದ ತಿಳಿಯುತ್ತಿದೆ. ಇನ್ನು ಇದಕ್ಕೂ ಹೆಚ್ಚು ಹೇಳುವುದಕ್ಕೆ ನನಗಳವಲ್ಲ. ಅನುತಾಪಾನಲದಿಂದ ಬೆಂದುಹೋಗುತ್ತಿರುವ ನನ್ನ ಮನಸ್ಸಿಗೆ, ಭಗವತ್ಕೃಪೆಯೊಂದೇ ಇನ್ನು ಪ್ರಾರ್ಥನೀಯವಾಗಿದೆಯಲ್ಲದೆ, ಸ್ಥಾನಗೌರವವಾಗಲೀ ಇತರ ಬಹುಮಾನವಾಗಲೀ ಬೇಕಾಗಿಲ್ಲ.

ಹೀಗೆ ಹೇಳುತ್ತಿದ್ದಂತೆಯೇ ಗಂಗೆಯ ಮುಖವು, ವಿವರ್ಣವಾಯಿತು ; ಕಣ್ಣಾಲೆಗಳು ತಿರುತಿರುಗಿದುವು ; ನಾಲಿಗೆಯ ದ್ರವವೂ ಆರಿತು. ಕಡೆಗೆ ಗಂಗೆಯು ಚೈತನ್ಯವಿಲ್ಲದೆ ಕೆಳಗೆ ಬೀಳುವಂತಾದಳು.

ಹೀಗಾಗಬಹುದೆಂದು ಮೊದಲೇ ಸೂಚಿಸಲ್ಪಟ್ಟು ಎಚ್ಚರದಲ್ಲಿದ್ದ ವಿಂದೆಯೂ, ಯಮುನೆಯೂ ತೆರೆಯ ಕಡೆಯಲ್ಲಿ ನಿಂತೇಇದ್ದರು. ಧರ್ಮಪಾಲನು ಗಂಗೆಯ ಅವಸ್ಥೆಯನ್ನು ನೋಡಿ, ತೆರೆಯಕಡೆಗೆ ತಿರುಗಿ, ಕೈಸನ್ನೆ ಮಾಡಿದನು. ಧರ್ಮಪಾಲನ ಸೂಚನೆಯೊಡನೆಯೇ ಇಬ್ಬರೂ ಬಂದು, ಗಂಗೆಯನ್ನು ಹಿಡಿದು, ಮೆಲ್ಲನೆ ಕರೆದುಕೊಂಡು ಹೋದರು.

ಗಂಗಾಬಾಯಿಯ ಸ್ಥಿತಿಯನ್ನು ನೋಡಿ, ಎಲ್ಲರ ಕಣ್ಣುಗಳಿಂದಲೂ ಶೋಕಾಶ್ರುಗಳು ಸಡಲಿದುವು ; ಅನುಕಂಪದಿಂದ ಎಲ್ಲರ ಹೃದಯಗಳೂ ಕಂಪಿಸಿದುವು. ಇನ್ನು ತಾರಾಪತಿರಾಯನ ಮನಸ್ಸ್ಥಿತಿಯನ್ನು ಹೇಳಿ-ಕೇಳುವುದೇನು ?

## ಪಂಚಮ ಪರಿಚ್ಛೇದ.

(ವಾಸುದೇವಾದಿಗಳ ಗರ್ವಭಂಗ)

ಈತಡವೆ, ಜಮಾದಾರ ವಾಸುದೇವರಾಯನ ವಿಚಾರಣೆಯಾಗಬೇಕು. ಗಂಗೆಯ ವಾಕ್ಯವೆಲ್ಲವನ್ನೂ ಕೇಳಿರುವ ವಾಸುದೇವಾದ್ಯರಿಗೆ, ಇನ್ನು ತಪ್ಪಿಸಿಕೊಳ್ಳುವೆವೆಂಬ ಆಶೆಯೇನಾದರೂ ಉಳಿದಿರುವುದೋ ? ಎಲ್ಲಿ ಬಂತು ! ವಿಚಾರಣೆಗೆಂದು ಬಂದು ನಿಂತುದು ಮೊದಲು, ಇಲ್ಲಿಯವರೆಗೂ ತಮಗೆ ಅನುಕೂಲವಾದ ಒಂದು ಅಕ್ಷರವನ್ನಾದರೂ ಕೇಳಲಿಲ್ಲ. ಅವರಿಗೆ ಹೊರಟ

ಕೃತಾಂತಾದಿಗಳ ಪಾಖ್ಯಾಲಗಳೆಲ್ಲವೂ, ತಮ್ಮ ಅಪರಾಧವು ಸ್ಥಿರಪಡುವು ದಕ್ಕೆ ಮಾತ್ರ ಸಹಕಾರಿಗಳಾಗಿರುತ್ತವೆ. ' ಇನ್ನುಮುಂದೆ ಯಾವ ಮಾರ್ಗ ವನ್ನು ಹಿಡಿಯಬೇಕು ? ಇನ್ನುಮುಂದೆಯಾದರೂ ಯಾವುದರಿಂದ, ಇದ್ದು ದರಲ್ಲಿ ತಮಗೆ ಸುಖವಾಗಬಹುದು ? ' ಇವೆರಡೇ ಚಿಂತೆಗಳು ಅವರ ಮುಖ ವನ್ನು ವಿಕಾರಪಡಿಸಲಿಕ್ಕೆ ಸಾಕಲ್ಲವೇ ? ಇರಲಿ ; ' ಅವಶ್ಯಮನು ಭೋಕ್ತವ್ಯಂ ಕೃತಂಕರ್ಮ ಶುಭಾಶುಭಂ.'

ದಳವಾಯಿಸಿಂಗ್—ಇನ್ನು ಜಮಾದಾರರ ವಿಚಾರವಾಗಬಹುದು. ಅವರು ಕಳ್ಳರೆಲ್ಲರನ್ನೂ ಬಹು ಸಾಹಸಪಟ್ಟು ಹಿಡಿದು ತಂದಿರುವರಷ್ಟೆ ; ಇನ್ನೂ ವಿಳಂಬವೇಕೆ ?

ವಾಸುದೇವನು ನಿಟ್ಟುಸಿರಿಡುತ್ತ ತಲೆಬಾಗಿ ನಿಂತನು.

ಧರ್ಮಪಾಲ—ಗಂಗಾಬಾಯಿಯವರ ಪಾಖ್ಯಾಲದಿಂದ ಜಮಾದಾರರು ವಿರಕ್ತರಾದಂತೆ ತೋರುತ್ತಿದೆ. ಆದರೂ ಯತ್ನವಿಲ್ಲ ; ಹೇಳಲೇ ಬೇಕು.

ರಾಧಾನಾಥ—ಜಮಾದಾರನ ಕಡೆಗೆ ತಿರುಗಿ–' ಏನಯ್ಯಾ, ವಾಸುದೇವ ರಾಯ ! ಈಗ ನೀನು ಹೇಳುವುದೇನಾದರೂ ಉಂಟೋ ? '

ವಾಸುದೇವ—ನಿಟ್ಟುಸಿರಿಟ್ಟು–' ಹೇಳುವುದೇನು ? ಕಂಡಂತೆಯೇ ಇದೆ. ' ವಿನಾಶಕಾಲೇ ವಿಪರೀತ ಬುದ್ಧಿಃ ' ಎಂಬುದು ನನಗೆ ಅನ್ವ ಯಿಸಿತು.'

ರಾಧಾನಾಥ — ತಲೆದೂಗಿ–' ನಿಜ ! ಅದನ್ನು ನೂರುಬಾರಿ ಹೇಳಿದರೂ ಸಮ್ಮತವು. ಮಾಡಿದ ಕಾರ್ಯಕ್ಕೆ ಅನುಭವವು ತಪ್ಪಿದುದಲ್ಲವಾ ದರೂ, ಮಾಡಿದ ತಪ್ಪನ್ನು ಮನಸ್ಸಾಕ್ಷಿಯಾಗಿ ಹೇಳಿ–ಪಶ್ಚಾತ್ತಾ ಪಹೊಂದುವುದರಿಂದ, ಮುಂದೆಯಾದರೂ ಶಾಂತಿಸುಖಕ್ಕೆ ಅವ ಕಾಶವುಂಟು. ನಿನ್ನ ಕೃತ್ಯಾ–ಕೃತ್ಯವೆಲ್ಲವನ್ನೂ ಇಲ್ಲಿಯವರೆಲ್ಲರೂ ಕೇಳುವಂತೆ ಸ್ಪಷ್ಟವಾಗಿ ಹೇಳು.

ವಾಸುದೇವ—ಮತ್ತೆ ನಿಟ್ಟುಸಿರಿಟ್ಟು ತಲೆಯೆತ್ತಿ–‘ ಗಂಗೆಯನ್ನು ನಾನು ಹಿಂದೆ ಯಾವಾಗಲೂ ನೋಡಿರಲಿಲ್ಲ ; ನೋಡಬೇಕಾದ ಪ್ರಕೃತವೂ ಇರಲಿಲ್ಲ. ಯಶವಂತನನ್ನು ನೋಡಿದ್ದೆನಾದರೂ ಈಗಾಗಿರುವಷ್ಟರ ಬಳಿಕೆಯುಂಟಾಗಿರಲಿಲ್ಲ. ಆದರೆ, ಜಮೀನ್ದಾರರ ಮನೆಯಲ್ಲಿ ಮೊದಲನೆಯ ಕಳುವಾದ ದಿನವೇ ನಾನು, ಬೀದಿಯಲ್ಲಿ ಬರುತ್ತಿದ್ದ ವೇಳೆಯಲ್ಲಿ ಗಂಗಾಬಾಯಿಯು ಮುಡಿದಿದ್ದ ಹೂವು, ಮೇಲಿಂದ ಬಿದ್ದುದನ್ನು ನೋಡಿದುದೇ, ನನ್ನ ಇಷ್ಟರ ಸ್ವರೂಪನಾಶಕ್ಕೂ ಹೇತುರೂಪವಾಗಿ ಪರಿಣಮಿಸಿತು. ಆ ಪುಷ್ಪ ಪರಿಗ್ರಹಣವೇ ನನ್ನ ಬುದ್ಧಿಭ್ರಮಣಕ್ಕೂ, ಇತರ ದುರಾಚಾರಕ್ಕೂ ಕಾರ್ಯಕಾರಿಯಾಗಿ ತಿರುಗಿಸಿತು. ಆ ವರೆಗೂ ನನ್ನಲ್ಲಿದ್ದ ಭಕ್ತಿ, ಶ್ರದ್ಧೆ, ಉತ್ಸಾಹಗಳೇ ಮೊದಲಾದ ಗುಣ–ಸ್ವಭಾವಗಳು ಅದುಮೊದಲು ವಿಕಲ್ಪವನ್ನು ಹೊಂದಿದುವು. ಗಂಗಾಬಾಯಿನ್ನು ಹೊಂದಬೇಕೆಂಬ ಚಿಂತೆಯೊಂದೇ ನನ್ನ ಚಿತ್ತವನ್ನು ಆಕ್ರಮಿಸಿ, ಪರದಾರಾಪಹರಣದ ಘೋರಪಾತಕವನ್ನೂ ಗಣಿಸದೆ, ಅದಕ್ಕಾಗಿ ಎಷ್ಟರ ಅತ್ಯಾಚಾರವನ್ನಾದರೂ ಮಾಡಲು ಸಿದ್ಧವಾಯಿತು. ಸಾಲದುದಕ್ಕೆ ಯಶವಂತನೂ ಸೇರಿ, ನನ್ನ ಈ ಆಶೆಯನ್ನು ಪೂರ್ಣಮಾಡುವೆನೆಂದೂ, ಇದು ತನಗೆ ಕಷ್ಟವಾಗಿರುವುದಿಲ್ಲವೆಂದೂ, ಇದಕ್ಕಾಗಿ ನಮ್ಮ ಉದ್ದೇಶಸಾಫಲ್ಯಕ್ಕೆ ಬೇಕಾಗುವ ಸಹಾಯ ಸಂಪತ್ತಿಯನ್ನೊದಗಿಸಿಕೊಡುವುದೇ, ನಾನು ಇವರಿಗೆ ಮಾಡಬೇಕಾದ ಪ್ರತ್ಯುಪಕಾರವಾಗಿರಬೇಕೆಂದೂ ನನ್ನಲ್ಲಿ ಪ್ರಮಾಣಪೂರ್ವಕವಾದ ವಾಗ್ದಾನಮಾಡಿ, ನನ್ನಿಂದಲೂ ವಾಗ್ದಾನ ಹೊಂದಿದನು. ಮತ್ತು ಇವನು ತನ್ನ ಬಹು ದೀರ್ಘಕಾಲದ ಪ್ರಯತ್ನವನ್ನೂ, ತನ್ನ ತಂದೆ–ತಮ್ಮಂದಿರು ಗೊಲ್ಲರಪಾಳ್ಯದಲ್ಲಿಯೂ, ತಾನು ಜಮೀನ್ದಾರರ ಮನೆಯಲ್ಲಿಯೂ ನೆಲಸಿರುವುದರ

ಉದ್ದೇಶವಾದರೂ ಇದೆಂಬುದನ್ನೂ ನನ್ನಲ್ಲಿ ಹೇಳಿದನು. ಇವನು ಹೇಳುವವರೆಗೂ, ನನಗೆ ಜಮೀನ್ದಾರರ ಜೇಷ್ಠಪತ್ನೀ ಪುತ್ರರ ಜೀವಿತವೃತ್ತಾಂತವು ತಿಳಿದಿರಲಿಲ್ಲ.

ಮೂರ್ಖರೋಗದಿಂದ ಯುಕ್ತಾಯುಕ್ತ ವಿಚಾರಶೂನ್ಯನಾದ ನಾನು ಇವರಿಗೆ ಅನುಸಾರವಾಗಿ ನಡೆಯಲು ಒಪ್ಪಿ, ಅದರಂತೆಯೇ ಮೊದಲನೆಯ ಕಳುವಾದ ದಿನದ ಮೊದಲು, ಈ ವರೆಗೂ ನನ್ನ ಕೈಕೆಳಗಿದ್ದವರೊಡನೆ ಇವರಿಗೆ ಸಹಾಯಕನಾಗಿದ್ದೆನು. ಇನ್ನು ಇದಕ್ಕೂ ಹೆಚ್ಚಾಗಿ ಹೇಳಲಾರೆನು. ಮುಖ್ಯವಾಗಿ ಯಾವ ಕಾರ್ಯವು ನನ್ನಿಂದ ಅವಶ್ಯವಾಗಿ ಖಂಡಿಸಲ್ಪಡಬೇಕಾಗಿದ್ದಿತೋ, ಅಂತಹ ಹೇಯಕಾರ್ಯವೇ ನನ್ನಿಂದ ಮಾಡಲ್ಪಟ್ಟಿತೆಂದೂ, ಇದರಿಂದ ಸ್ವಾಮಿದ್ರೋಹಾದಿ ಪಾತಕಕ್ಕೆ ಗುರಿಯಾದ ನನಗೆ, ಈಗ ರಾಜಾಗ್ರಹದ ಕಠಿಣಶಿಕ್ಷೆಯೇ ಹಿತಕಾರಿಯಾಗಿದೆಯೆಂದೂ ತೋರುತ್ತಿದೆ.

ರಾಧಾನಾಧ—ತಲೆದೂಗಿ-' ಅದೇನೂ ತಪ್ಪಿದುದಲ್ಲ. ಆದರೆ, ಈಗಲಾದರೂ ನೀನು ನಿನ್ನ ಅಪರಾಧವನ್ನು ಮನಸ್ಸಾಕ್ಷಿಯಾಗಿ ಒಪ್ಪಿಕೊಂಡುದಕ್ಕಾಗಿ ಸಂತೋಷ. ಅದಿರಲಿ. ಜಮೀನ್ದಾರರ ವಧೆಗೆಂದು ಮಾಡಿದ ಮಾಟಕ್ಕೆ ನೀನೇ ಪ್ರೇರಕನೋ ' ಹೇಗೆ ?

ವಾಸುದೇವ—ನಾನು ಯಾವುದನ್ನೂ ಮುಂದಾಗಿ ಹೇಳುತ್ತಿರಲಿಲ್ಲ. ಆದರೆ ಯಶವಂತನು ಹೇಳಿದುದೆಲ್ಲಕ್ಕೂ ಸಮ್ಮತಿಸಿ. ಆ ರೀತಿ ಅನುವರ್ತಿಸುತ್ತಿದ್ದುದು ನಿಜವು. ಸುನಂದಾದೇವಿಯನ್ನು ಪುತ್ರನೊಡನೆ ವಧಿಸಿದಲ್ಲದೆ, ತಮಗೆ ಉದ್ದೇಶಸಿದ್ಧಿಯಾಗದೆಂದೂ, ಅದು ಹೇಗಾದರೂ ನಡದೇತೀರಬೇಕೆಂದೂ ಹೇಳಿ, ಅದಕ್ಕಾಗಿ ನನ್ನಿಂದ ನಾಲ್ಕಾರುಮಂದಿಗಳ ಸಹಾಯವನ್ನು ತೆಗೆದುಕೊಂಡಿದ್ದನು. ಆದರೆ, ಅದು ದೈವಕೃಪೆ-ಧರ್ಮಪಾಲರ ದಕ್ಷತೆಗಳಿಂದ ಸಾಗ

ಲಿಲ್ಲ. ಮತ್ತೆ ನನಗೆ ತಿಳಿಸದೆಯೇ ಜವಾನ್ದಾರರನ್ನು ಬರಮಾಡಿ ಕೊಂಡು, ದಾರಿಯಲ್ಲಿ ಅವರನ್ನು ಗಾಯಪಡಿಸಿಟ್ಟುಕೊಂಡಿರು ವುದು ತಿಳಿದುಬಂದ ಬಳಿಕ, ಯಶವಂತನು ನನ್ನನ್ನು ಅಲ್ಲಿಗೆ ಕರೆ ದೊಯ್ದನು. ಅಲ್ಲಿ ನಡೆದುದೆಲ್ಲವೂ ಮೊದಲೇ ಕೃತಾಂತ-ಗಂಗಾ ಬಾಯಿಯವರಿಂದ ಹೇಳಲ್ಪಟ್ಟಿದೆ. ಇನ್ನು ನಾನು ಹೇಳುವುದೇನು ?

ರಾಧಾನಾಥ—ಯಶವಂತನನ್ನು ನೋಡಿ-' ಏನಯ್ಯಾ, ಯಶವಂತರಾಯ! ಒಳ್ಳೇ ಶಾಶ್ವತವಾದ ಯಶಸ್ಸೇ ನಿನಗಾಗಿ ಕಾದಿರುವುದಲ್ಲವೇ ? ಸಂತೋಷ ನಿಮ್ಮ ವಾಸುದೇವರಾಯನ ಹೇಳಿಕೆಯೆಲ್ಲವನ್ನೂ ಕಿವಿಗೊಟ್ಟು ಕೇಳಿದೆಯಷ್ಟೆ. ಇನ್ನೂ ತಪ್ಪಿಸಿಕೊಳ್ಳುವಂತೆ ಏನಾ ದರೂ ಉಪಾಯಗಳನ್ನು ಯೋಚಿಸಿದ್ದರೆ ಹೇಳು.

ಯಶವಂತನ ಬಾಯಿಂದ ಈಗ ಎಂತಹ ಭಾಷಣವು ಹೊರಡ ಬೇಕು ? ಅನೃತವೇ ಹೊರಡಬೇಕು. ಆದರೆ, ಅನೃತಾಲಾಪಕ್ಕೆ ಇಲ್ಲಿ ಸ್ಥಳ ವಿಲ್ಲ. ಎಲ್ಲವೂ ಅಂಗೈನೆಲ್ಲಿಯಕಾಯಾಗಿ ತೋರುವಂತೆ, ಧರ್ಮಪಾಲನು ಪ್ರತಿಕಾರ್ಯ-ಸ್ಥಿತಿ-ಗತಿ-ಸ್ವರೂಪವನ್ನೂ ಪ್ರದರ್ಶನಕ್ಕೆ ತರುವುದರಲ್ಲಿರುವನು. ಇನ್ನು ಒಪ್ಪದೆ ವಾದಿಸುವುದರಿಂದ ಫಲವೇನು ? ಬಹುಕಾಲದಿಂದ ಬಂದ ಗುಣವನ್ನು ಒಂದೇತಡವೆಗೆ ಬಿಡುವುದೆಂದರೆ ಸಾಧ್ಯವಲ್ಲ. ಆದರೂ, ಅನಿ ವಾರ್ಯ ಪಕ್ಷಕ್ಕಾಗಿ ಯಶವಂತನು ನಿಜವನ್ನೇ ಹೇಳಬೇಕಾಗಿ ಬಂದಿತು. ಕಡೆಗೆ ವಿವರ್ಣಮುಖದಿಂದ-ವಿಕೃತಸ್ವರದಿಂದ ಹೇಳಲಾರಂಭಿಸಿದನು.

" ಲೋಕದಲ್ಲಿ, ತಾಯ್ತಂಡೆಗಳಂತೆ ಮಕ್ಕಳೂ ಆಗುವರೆಂಬುದು ನಿಜವಾದ ಮಾತು. ನಮ್ಮ ತಾಯಿಯ ಸೌಶೀಲ್ಯವನ್ನು ಗಂಗಾಬಾಯಿ ಯು ತಕ್ಕಮಟ್ಟಿಗೂ ಅನುಸರಿಸಿದಳು. ನಾನು ನನ್ನ ತಂದೆಯನ್ನೇ ಹೋಲುತ್ತಿರುವೆನೆಂದು ಹೇಳಬಹುದು. ನನ್ನ ಚರಿತ್ರೆಯು ಕೇವಲ ಕುತ್ಸಿ ತವಾದುದು. ಅದನ್ನು ಕೇಳುವುದೆಂದರೂ ಅಸಹ್ಯವಾಗಿಯೇ ತೋರು ವುದು. ಆದರೂ, ಈಗ ಹೇಳಲೇಬೇಕಾಗಿ ಬಂದಿರುವುದರಿಂದ ಮೊದಲೇ ಕ್ಷಮೆಯನ್ನು ಕೇಳಬೇಕಾಗಿದೆ "

ರಾಧಾನಾಥ—ಹೇಳು, ಹೇಳು. ನಿನ್ನ ನಡೆ-ನುಡಿ-ವಿಚಾರಗಳೂ, ಅವಕ್ಕಾಗುವ ಪರಿಣಾಮಗಳೂ ನಮ್ಮ ಮುಂದಿನ ಸೊಕ್ಕಿನಮಕ್ಕಳಿಗೆ ಎಚ್ಚರಿಕೆಯನ್ನುಂಟುಮಾಡುವುವೆಂದು ನಂಬುವೆನು.

ಯಶವಂತನು ಇದ್ದುದರಲ್ಲಿ ತಕ್ಕಮಟ್ಟಿಗೆ ಧೈರ್ಯಹೊಂದಿ, ಹೇಳಲು ಮೊದಲು ಮಾಡಿದನು.

“ ಈ ಬಲವಂತನೇ ನನ್ನ ತಂದೆ. ಸುಪಂಥನು ನನ್ನ ತಮ್ಮನು. ಗಂಗೆಯೇ ನನ್ನ ಒಡಹುಟ್ಟಿದ ತಂಗಿಯಾಗಬೇಕು. ನಾನು ಈ ವರೆಗೂ ನಮ್ಮ ಈ ಸಂಬಂಧವನ್ನು ಯಾರಿಗೂ ಹೇಳಬಾರದೆಂದು ಸಂಕಲ್ಪಿಸಿದ್ದೆನು. ಜಮೀನ್ದಾರರ ಸ್ವತ್ತೆಲ್ಲವನ್ನೂ ಹೊತ್ತುಹಾಕಬೇಕೆಂಬುದೇ ನಮ್ಮ ಮುಖ್ಯೋದ್ದೇಶವಾಗಿದ್ದಿತು. ಇದಕ್ಕಾಗಿಯೇ ಮೊದಲು, ತಂದೆಯಿಂದ ಪ್ರೇರಿತನಾಗಿ ನಾನೊಬ್ಬನೇ ಬಂದು, ಜಮೀನ್ದಾರರಲ್ಲಿ ಆಶ್ರಯಿಸಿ, ನಾಲ್ಕಾರು ತಿಂಗಳಲ್ಲಿಯೇ, ನನ್ನ ಚಟುವಟಿಕೆಯಿಂದ ಇವರನ್ನು ತೃಪ್ತಿಪಡಿಸಿ, ಸರ್ವಾಧಿಕಾರವನ್ನೂ ವಹಿಸಿ ನಿಂತೆನು. ಆ ಬಳಿಕ ಅಡಿಗೆ ಪರಿಚಾರಕರು ಮೊದಲಾಗಿ, ಕರಣಿಕ-ಗೊಲ್ಲರವರೆಗೂ ನಮ್ಮವರನ್ನೇ ಕರೆಯಿಸಿಕೊಂಡು, ಮನೆಯಾಡಳಿತವೆಲ್ಲವನ್ನೂ ನಾನೇ ನೋಡಿಕೊಳ್ಳುತ್ತ ಬಂದೆನು. ಇಷ್ಟರಲ್ಲಿ ಸುನಂದಾಬಾಯಿಯು, ಪ್ರಸುವಕ್ಕಾಗಿ ತವರ್ಮನೆಗೆ ಹೋದುದರಿಂದ, ನಮ್ಮ ಕಾರ್ಯಕ್ಕೆ ಮತ್ತೂ ಅನುಕೂಲವೇ ಆಯಿತು. ಆ ಸಂದರ್ಭದಲ್ಲಿಯೇ ಗಂಗೆಯನ್ನೂ ವಿಷಹರಪುರಕ್ಕೆ ಕರೆಯಿಸಿ, ನಮ್ಮ ಮನೆಯೂಳಿಗದವಳೊಬ್ಬಳ ಜತೆಯಲ್ಲಿ ಬೇರೆಯಾಗಿರಿಸಿ, ಅವರ ಪೋಷಣೆಗೆ ನಾನೇ ನಿಂತೆನು. ಅಷ್ಟರಲ್ಲಿಯೇ ಸುನಂದಾಬಾಯಿ ಮತ್ತು ಅವಳ ಮಗನು ಸತ್ತರೆಂಬ ವರ್ತಮಾನವೂ ನಮ್ಮ ತಂದೆಯಿಂದ ಕೊಡಲ್ಪಟ್ಟಿತು. ಅದುಮೊದಲು ದುರ್ಗಾಪುರಕ್ಕೆ ಹೋಗುತ್ತಿದ್ದ ಪ್ರತಿಯೊಂದು ಪತ್ರಗಳನ್ನೂ ನಾನೇ ಬರೆಯುತ್ತಿದ್ದೆನು. ಅಲ್ಲಿಂದ ಬರುತ್ತಿದ್ದ ಪತ್ರಗಳು ನನ್ನ ಕೈಬಿಟ್ಟು ಅನ್ಯರ ಬಳಿಗೆ ಹೋಗದಂತೆ ಬಹು ಜಾಗರೂಕತೆಯಿಂದ ತಕ್ಕ ಏರ್ಪಾಟು ಮಾಡಿದ್ದೆನು.

ರಾಧಾನಾಥ—ಪತ್ರವ್ಯವಹಾರವೇನೋ ನಿನ್ನ ಮೂಲಕವೇ ನಡೆಯುತ್ತಿದ್ದಿತು ; ಆದರಿಂದ ತಿಳಿಯಲಿಲ್ಲ. ಆದರೆ, ದುರ್ಗಾಪುರದಿಂದ ಯಾರೂ ಬಂದು ನೋಡಿ-ಹೇಳಿ, ಹೋಗುತ್ತಿರಲಿಲ್ಲವೇ ? ಅವರಿಂದಲಾದರೂ ನಿಜಾಂಶವು ತಿಳಿಯದಿದ್ದಿತೇ ?

ಯಶವಂತ—ಯಜಮಾನರ ಸ್ವಭಾವವು ಕೇವಲ ವಿರಕ್ತವೃತ್ತಿಯಲ್ಲಿದ್ದುದರಿಂದಲೂ, ಅವರು ನನ್ನಲ್ಲಿ ಪೂರ್ಣವಾದ ಭರವಸೆಯಿಟ್ಟು, ಯಾವ ಕೆಲಸವನ್ನಾಗಲೀ, ಯಾರೊಡನೆ ಮಾತನಾಡುವುದನ್ನಾಗಲೀ–ಮೊದಲು ನನಗೆ ಬಂದು, ಆ ಬಳಿಕ ತಮಗೆ ಬರುವಂತೆ ಕಟ್ಟುಮಾಡಿದ್ದುದರಿಂದಲೂ ನನ್ನ ಉದ್ದೇಶಕ್ಕೆ ಆ ನಡುವೆ ವಿಘ್ನವೇನೂ ಒದಗಲಿಲ್ಲವಾಯಿತು.

ರಾಧಾನಾಥ—ಹೋಗಲಿ. ಮೊದಲು ಜಮೀನ್ದಾರರ ಪೆಟ್ಟಿಗೆಯನ್ನೂ, ಭಾವಚಿತ್ರವನ್ನೂ ಕದ್ದುದು ನಿನ್ನ ಕೆಲಸವಷ್ಟೆ ; ಹೇಗೆ ? ಕಿರುಮನೆಯ ಬಾಗಿಲನ್ನು ತೆರೆದುಹಾಕಿದ್ದವರಾರು ?

ಯಶವಂತ—ಜಮೀನ್ದಾರರ ಮನೆಗೆ ಸಂಬಂಧಪಟ್ಟ ಪ್ರತಿಯೊಂದು ಕಳುವೂ ನನ್ನಿಂದಲೇ ನಡೆಯಿಸಲ್ಪಟ್ಟುದು. ವಾಸುದೇವರಾಯನಿಗೆ ವಾಗ್ದಾನವಿತ್ತ ಬಳಿಕ, ಅವರ ಕೈಕೆಳಗಿನವರನ್ನು ನನ್ನ ಕೈವಶಪಡಿಸಿಕೊಂಡೆನು. ಆ ರಾತ್ರಿ, ಜಮೀನ್ದಾರರು ಮಲಗುವ ಕಿರುಮನೆಯ ಕಿಟಕಿಯ ಕದವನ್ನೂ, ಹೊರಗಡೆಯ ಬಾಗಿಲನ್ನೂ ನಾನೇ ತೆಗೆದವನು. ಆ ತಂತ್ರವು ನನಗೆ ತಿಳಿದಿದ್ದ ವಿಚಾರವು ಯಾರಿಗೂ ತಿಳಿಯದು. ಅವರ ಬಳಿಯಲ್ಲಿದ್ದ ಭಾವಚಿತ್ರವನ್ನೂ, ಮತ್ತು ಇತರ ಪೆಟ್ಟಿಗೆಯ ಬೀಗದಕೈಗಳನ್ನೂ, ಕಾಗದಪತ್ರಗಳನ್ನೂ ನಾನೇ ಕದ್ದೆನು. ನನ್ನ ಹೇಳಿಕೆಯಂತೆಯೇ ಗೋಪಾಲನೂ, ಮತ್ತೊಬ್ಬನೂ ಮುಸಲ್ಮಾನರ ವೇಷವನ್ನು ಧರಿಸಿಬಂದರು. ಅವರನ್ನು ನಾನು ಒಳಗೆ ಕರೆದುಕೊಂಡು, ಅಷ್ಟರಲ್ಲಿಯೇ ಸಿದ್ಧಪಡಿ

ಸಿದ್ಧ ಪದಾರ್ಥಗಳನ್ನು ತಲೆಯಮೇಲೆ ಹೊರಿಸಿ. ಅಡಿಗೆಯವ ರನ್ನೂ, ಪರಿಚಾರಕರನ್ನೂ ಕಿರುಮನೆಯಲ್ಲಿ ಕೂಡಿ, ನನ್ನನ್ನೂ ಮಂಚಕ್ಕೆ ಕಟ್ಟಿಹಾಕಿ, ಚಿತ್ತಲ ಗೋಡೆಯನ್ನು ಹಾದುಹೋಗು ವಂತೆ ಹೇಳಿದೆನು. ಅವರು ಹಾಗೆಯೇಮಾಡಿದರು. ಜಮಾದಾರರ ಕೈಕೆಳಗಿನ ನಾಲ್ವರು ಜವಾನರಿಂದ ಮುಸಲ್ಮಾನ ಪ್ರಹರಿಗಳನ್ನು ಹಿಡಿಯಿಸಿ, ಗುಡ್ಡಕ್ಕೆ ಕಳುಹಿದೆನು.

ರಾಧಾನಾಥ—ತಲೆದೂಗುತ್ತ-' ಸುನಂದಾಬಾಯಿಯು, ಮಕ್ಕಳೊಡನೆ ಬರುತ್ತಿದ್ದ ದಾರಿಯಲ್ಲಿ ನಡೆದ ದರೋಡೆಯೂ ನಿನ್ನ ಹೇಳಿಕೆಯಿಂ ದಲ್ಲವೇ ? ಜಮೀನ್ದಾರರ ಮಗಳನ್ನು ಮಾತ್ರ ಹೊತ್ತುಹಾಕಿ, ಮಗನನ್ನು ಕೊಲ್ಲುತ್ತಿದ್ದುದಕ್ಕೂ, ಅವರ ಪತ್ನಿಯನ್ನು ಬಿಗಿದು ಕಟ್ಟಿಹಾಕಿದ್ದುದಕ್ಕೂ ಕಾರಣವೇನು ?

ಯಶವಂತ—ಸುನಂದಾಬಾಯಿಯು ಜೀವಿಸಿರುವ ಸಂಗತಿಯನ್ನು ಇವರು ತಿಳಿದಮೇಲೆ, ಶ್ರೀದತ್ತಕುಮಾರರ ಸಹಾಯದಿಂದ ಅವರನ್ನು ಕರೆಯಿಸಿಕೊಳ್ಳುವ ಪ್ರಯತ್ನಮಾಡಿದರು. ಅವರು ಬಂದರೆ, ನಮ್ಮ ಉದ್ದೇಶವೂ, ಇಷ್ಟು ದೀರ್ಘಕಾಲ ಪಟ್ಟ ಪ್ರಯಾಸವೂ, ನಿಷ್ಫಲ ವಾಗುವುವಲ್ಲದೆ, ನಮ್ಮ ಅಭಿಸಂಧಿಯೂ ಹೊರಬೀಳುವುದೆಂದು ಶಂಕಿಸಿ, ಅವರನ್ನು ನಡುದಾರಿಯಲ್ಲಿಯೇ ಪೂರೈಸಿಬಿಡುವಂತೆ ಗೊಲ್ಲರಪಾಳ್ಯಕ್ಕೆ ವರ್ತಮಾನವನ್ನು ಕಳುಹಿದೆನು.

ಎಂದೆಯ ರೂಪು-ಗುಣ-ವಿದ್ಯಾ-ಬುದ್ಧಿ ಶಕ್ತಿಗಳನ್ನು ನೋಡಿ ಅವಳನ್ನು ಕೊಲ್ಲಲಿಕ್ಕೆ ಮನವೊಪ್ಪದೆ, ನನ್ನ ತಮ್ಮನಿಗೆ ಮದುವೆ ಮಾಡಬೇಕೆಂದು ಸಂಕಲ್ಪಿಸಿ ಕದ್ದೊಯ್ಯಲಾಗಿದ್ದಿತು. ಮೋಹನ ಕುಮಾರನನ್ನು ಕೊಲ್ಲಬೇಕೆಂದಿದ್ದುದು, ಜಮೀನ್ದಾರರ ಸ್ವತ್ತಿಗೆ ಮತ್ತಾವ ಹಕ್ಕುದಾರರೂ ಇರದಂತೆ ಮಾಡಬೇಕೆಂಬ ಉದ್ದೇಶ ದಿಂದಲೇ ! ಸುನಂದಾದೇವಿಯನ್ನು ಬಿಗಿದುಕಟ್ಟಿದ್ದುದಕ್ಕೆ ಕಾರ

ಣವೂ ಇದೇ ಆಗಿದ್ದಿತು. ಆದರೆ, ದೈವಗತಿಯೇ ಬೇರೆಯಾಯಿತು. ಸುನಂದಾದೇವಿಯೂ ಮಗನೊಡನೆ ಸುಖವಾಗಿ ಬಂದು ಸೇರಿದಳು.

ರಾಧಾನಾಥ—ಹೋಗಲಿ ; ಗೋಪಾಲನೊಡನೆ ಸುನಂದಾದೇವಿಯನ್ನು ಕಳುಹಿದಾಗ-ನೀನು ಮಾಡಿದ ಹೂಟವೇನಾದರೂ ಫಲಕಾರಿಯಾಯಿತೋ, ಹೇಗಾಯಿತು ?

ಯಶವಂತ—ನಮ್ಮ ಹೂಟವು ನಮ್ಮ ಮೇಲೆಯೇ ತಿರುಗಿತು. ಹೇಗೆಂದರೆ—ಸುನಂದಾದೇವಿಯು ಬಂದ ಬಳಿಕ, ಮೋಹನಕುಮಾರನ ವರ್ಧಂತಿಯುತ್ಸವದ ದಿನದಲ್ಲಿಯೇ ಇವರನ್ನು ಮುಗಿಸಿಬಿಡುವಂತೆ ನಾನೂ, ವಾಸುದೇವರಾಯರೂ ಸೇರಿ, ಏರ್ಪಾಟುಮಾಡಿದ್ದೆವು. ಆದರೆ, ಅಷ್ಟರಲ್ಲಿಯೇ ಸುನಂದಾದೇವಿಯ ತಂದೆಯೇ ಬರೆದಂತೆ ಅವರನ್ನು ಕಳುಹಬೇಕೆಂಬ ಪತ್ರವು ಬಂದಿತು. ಆದರಂತೆ ಉತ್ಸವ ಕಾರ್ಯವನ್ನು ನಿಲ್ಲಿಸಿ, ಅವರನ್ನು ದುರ್ಗಾಪುರಕ್ಕೆ ಕಳುಹುವುದಾಗಿ ನಿಶ್ಚಯಿಸಿದರು. ಇದನ್ನು ತಿಳಿದ ನಾನು, ಈ ಮೂಲಕವಾಗಿಯೇ ಉದ್ದೇಶವನ್ನು ನೆರವೇರಿಸಿಕೊಳ್ಳಬೇಕೆಂದು ಮತ್ತೆ ಪಾಳ್ಯಕ್ಕೆ ಒರೆದೆನು. ಆದರೆ, ಆಗಲೂ ದೈವವಿಲಾಸವು ಬೇರೆಯಾಗಿಯೇ ಇದ್ದು, ಅದೇ ನಮ್ಮ ಸರ್ವನಾಶಕ್ಕೆ ಮೂಲವಾಗಿ ತಿರುಗಿತು. ಆಗಲೇ ಗೋಪಾಲನೂ ಇವರ ಕೈವಶನಾದನು.

ರಾಧಾನಾಥ—ವಿಷಕಂಠನ ಅಂಗಿಯಲ್ಲಿ ಸೀಸೆಯನ್ನು ಇರಿಸಿದ್ದವರಾರು ?

ಯಶವಂತ—ಸೀಸೆಯನ್ನಿರಿಸಿದ್ದುದೂ, ಅಮ್ಮಾಯಿಯಾಯವನ್ನು ಕಟ್ಟಿ ಹಾಕಿ, ಅಲ್ಲಿದ್ದುದನ್ನು ಹೊತ್ತುಹಾಕಿದುದೂ, ವಿಷಕಂಠನನ್ನು ಚರಂಡಿಯಲ್ಲಿ ಮಲಗಿಸಿದುದೂ ನನ್ನ ಕೆಲಸವೇ ಸರಿ.

ರಾಧಾನಾಥ—ಜಮೀನ್ದಾರರ ವಧೆಗೆಂದು ಮಾಡಿದ ಹೂಟವಾರದು ? ಏತಕ್ಕಾಗಿ ಮಾಡಲ್ಪಟ್ಟಿತು ?

ಯಶವಂತ—ಸುನಂದಾದೇವಿಯು ತಪ್ಪಿಸಿಕೊಂಡ ಬಳಿಕ, ನಮ್ಮ ತಂದೆ, ತಮ್ಮಂದಿರೇ ಯೋಚಿಸಿ, ಜಮೀನ್ದಾರರನ್ನು ಬರಮಾಡಿಕೊಳ್ಳಲಿ

ಕ್ಕಾಗಿ ದುರ್ಗಾಪುರದಿಂದ ಕಳುಹಿದಂತೆ ಕಾಗದವನ್ನು ಬರೆದು ಆಳಿನ ಕೈಯ್ಯಲ್ಲಿರಿಸಿ, ಅವನ ಮತ್ತೊಂದು ಕಾಗದದಲ್ಲಿ ತಮ್ಮ ಉದ್ದೇಶವನ್ನೂ ಸೂಚಿಸಿ, ಅದನ್ನು ನನಗೇ ಕೊಡುವಂತೆ ಅಟ್ಟಿದರು. ನಾನದನ್ನು ನೋಡಿದ ಬಳಿಕ, ಗಾಳಿಸಂಚಾರಕ್ಕಾಗಿ ತೋಟದಕಡೆಗೆ ಹೋಗಿದ್ದ ಜಮೀನ್ದಾರರ ಬಳಿಗೆ ಆಳನ್ನು ಕಳಿಸಿದೆನು. ಅವರದನ್ನು ನೋಡಿ ಭೀತರಾಗಿ ಹಾಗೆಯೇ ಅಲ್ಲಿಂದ ಗಂಗಾಬಾಯಿಗೆ ಕಾಗದವನ್ನು ಬರೆದು, ಅದೇ ಆಳಿನ ಕೈಯಲ್ಲಿತ್ತು ಕಳುಹಿ, ತಾವು ಹಾಗೆಯೇ ದುರ್ಗಾಪುರಕ್ಕೆ ತೆರಳಿದರು.

ಅದೇ ಆಳಿನ ಮೂಲಕವೇ ಜಮೀನ್ದಾರರ ವಧೆಗೆ, ಮೊದಲು ಮಾಡಬೇಕಾದ ಕ್ರಮಗಳನ್ನು ಸೂಚಿಸಿ ಕಳಿಸಿ, ಆ ರಾತ್ರಿಯೇ ವಾಸುದೇವರಾಯನನ್ನು ಜತೆಗೊಂಡು ನಾನೂ ತೆರಳಿದೆನು. ಅಲ್ಲಿಗೆ ಹೋಗಿ ಸೇರುವುದರೊಳಗಾಗಿ ಎಲ್ಲವೂ ಸಿದ್ಧವಾಗಿದ್ದಿತು. ಅಲ್ಲಿ ನಡೆದ ವಿಚಾರಗಳೇನೆಂಬುದನ್ನು ಮಾತ್ರ ನಾನು ಹೇಳಲಾರೆನು. ವೃತಾಂತನ ವಾಙ್ಮೂಲವು ಸತ್ಯವಾದುದೆಂಬುದನ್ನು ಮನಸಾಕ್ಷಿಯಾಗಿ ಒಪ್ಪಿಕೊಳ್ಳುವೆನು. ಅವೆಲ್ಲವೂ ನಿಜವಾಗಿಯೂ ನಡೆದವುಗಳಾಗಿವೆ.

ರಾಧಾನಾಥ—ಸ್ವಾರಸ್ಯವಾಗಿದೆ. ನಿನ್ನ ಜೀವಿತವೃತ್ತಾಂತವು ಬಹು ಸ್ವಾರಸ್ಯವಾಗಿದೆ. ಇದರ ಸವಿಯು, ಮುಂದೆ ತಿಳಿಯುವುದು. ಆಗಲಿ. ಇನ್ನು ಬಲವಂತರಾಯರ ಚರಿತ್ರೆಯೊಂದೇ ಉಳಿದಂತಿದೆ. ಅದೂ ಆಗಲಿ.

ಯಶವಂತ-ವಾಸುದೇವರಿಬ್ಬರೂ ಮರುಮಾತಿಲ್ಲದೆ ಸುಮ್ಮನಾಗಿ, ಸರಿದುನಿಂತರು. ಆಗಲೀಗ ಅವರ ಗರ್ವಭಂಗವಾಯಿತೆಂದು ನಿರ್ಧರವಾಗಿ ಹೇಳಬಹುದು.

|| ಶ್ರೀ ||

# ಷಷ್ಠ ಪರಿಚ್ಛೇದ.

(ಬಲವಂತನ ಜೀವಿತ.)

ಸತ್ಸಹವಾಸದ ಮಹಿಮೆಯೇ ಅಮೋಘವಾದುದು. ಸತ್ಪುರುಷರು, ಪಾಮರರನ್ನು ಪಂಡಿತರನ್ನಾಗಿಯೂ, ಪಂಡಿತರನ್ನು ಪರಮಹಂಸರನ್ನಾಗಿಯೂ ಮಾಡಬಲ್ಲರು. ಹೇಗೆಂಬುದನ್ನು ಬಲವಂತನ ಈಗಿನ ಸ್ಥಿತಿಯೇ ಹೇಳುತ್ತದೆ. ಬಲವಂತನು ಬಂದು ವಿಚಾರಣಾಕರ್ತರ ಇದಿರಾಗಿ, ನ್ಯಾಯಪೀಠಕ್ಕೆ ಕೈಮುಗಿದು, ಕಣ್ಣೀರುಸುರಿಸುತ್ತ ನಿಂತಿರುವನು. ಅಧಿಕಾರಿಗಳ ಅಪ್ಪಣೆಯಾದಲ್ಲದೆ ವಿಚಾರಣೆಗೆ ಅವಕಾಶವಿಲ್ಲ.

ಇದೊ, ನ್ಯಾಯಕರ್ತರ ಅಪ್ಪಣೆಯೂ ಆಯಿತು. ಬಲವಂತನ ಭಗವತ್ಪ್ರಾರ್ಥನೆಯೂ ನಡೆಯಿತು. ಕಡೆಗೆ ಬಲವಂತನು ದೃಢಚಿತ್ತನಾಗಿ ಸಭಿಕರೆಲ್ಲರೂ ಕೇಳುವಂತೆ ಗಟ್ಟಿಯಾಗಿ ಹೇಳತೊಡಗಿದನು.

ನ್ಯಾಯಾಧಿಪತಿಗಳೇ, ನ್ಯಾಯಮಾರ್ಗಾನುಯಾಯಿಗಳೇ !

ನೀವು ಈವರೆಗೆ ಎಂದೂ ಕಂಡು ಕೇಳದಿದ್ದ ನನ್ನ ಕುತ್ಸಿತಚರಿತ್ರೆಯನ್ನು ಈ ದಿನ,–ಈ ದುರ್ದಿನದಲ್ಲಿ ಕೇಳುತ್ತಿರುವಿರಿ. ಪುಣ್ಯಪುರುಷರಾದ ನಿಮ್ಮ ಸಂದರ್ಶನಲಾಭದಿಂದ, ನನಗೆ ಈಗಲಾದರೂ ಅನುತಾಪವುಂಟಾದುದು, ನಮ್ಮ ತಂದೆತಾಯಿಯರ ಅನುಗ್ರಹವೆಂದೇ ಭಾವಿಸುವೆನು. ನನಗೆ ಕಾಲವು ಕಳೆಯಿತು. ಪಾತಕಗಳಿಗೆಲ್ಲಾ ನಾನೇ ಜನ್ಮಸ್ಥಳವಾದೆನು. 'ವೃದ್ಧಾ ನಾರೀ ಪತಿವ್ರತಾ' ಎಂಬ ಸಾಮತಿಯಂತೆ, ಈಗ ನನಗಾಗಿದೆ. ಮಾಡತಕ್ಕುದೇನು ! ಈಗ ದೊರೆತಿರುವ ಸುಸಂಧಿಯು ನನಗೆ, ಮುಂದೆ ಹೇಗೂ ದೊರೆಯಲಾರದು. ಇಂತಹ ಸುಯೋಗದಲ್ಲಿ ನಾನು

ನನ್ನ ಯಾವದ್ವೃತ್ತವನ್ನೂ ವಿವರಿಸಿ, ಮನಃಕ್ಲೇಶದಿಂದ ಬಿಡುಗಡೆಯಾಗ ಬೇಕೆಂದು ನಿಶ್ಚಯಿಸಿ ಹೇಳುತ್ತಿರುವೆನು ; ಆಗ್ರಹಿಸದೆ ಅವಧರಿಸಬೇಕೆಂಬುದೇ ನನ್ನ ಪ್ರಾರ್ಥನೆ.

ನನ್ನ ಜನ್ಮ ಸ್ಥಳವು ರಾಜಮಹೇಂದ್ರಪುರ. ನನ್ನ ತಾಯಿತಂದೆಗಳು ಸತ್ಕುಲಪ್ರಸೂತರೂ, ಸತ್ಯಾಚಾರ ಸಂಪನ್ನರೂ ಆಗಿದ್ದ ಶ್ರೀಮಂತರು. ನನ್ನ ಒಡಹುಟ್ಟಿದವರು ನಾಲ್ಕಾರುಮಂದಿಯಿದ್ದರೂ, ಅವರೆಲ್ಲರೂ ತಮ್ಮ ಅಲ್ಪ ವಯಸ್ಸಿನಲ್ಲಿಯೇ ಮಾತಾಪಿತೃಗಳನ್ನಗಲಿ, ಮೃತ್ಯುವಶರಾದರು. ಕಡೆಗೆ ನಾನೊಬ್ಬನೇ ಉಳಿದೆನು.

ಸಾಮಾನ್ಯವಾಗಿ ಹಣಗಾರರ ಮಕ್ಕಳೇ ಅಭಿಮಾನಪರರಾಗುವರಲ್ಲವೇ ? ಹಾಗೂ ಹೆತ್ತಮಕ್ಕಳೆಲ್ಲವನ್ನೂ ಮೃತ್ಯುದೇವತೆಗೆ ಸೂರೆಯಿತ್ತು, ಒಬ್ಬನೇ ಒಬ್ಬನಾಗಿ ನಿಂತ ನನ್ನ ವಿಷಯದಲ್ಲಿ, ಅವರ ಮಮತೆಯೆಂಬುದನ್ನು ಹೇಳಬೇಕೆ ! ಅವರೇನೋ ಗುಣಸಂಪನ್ನರಾಗಿದ್ದರೂ, ಪುತ್ರಸ್ನೇಹವೆಂಬ ಮಾಯಾಪಾಶಕ್ಕೆ ಸಿಕ್ಕಿ, ನನ್ನನ್ನು ದಂಡಿಸುವ ಮಾತನ್ನಾದರೂ ಎತ್ತದೆ, ಅತಿಯಾದ ಲಾಲನೆಯಿಂದ ಮನಬಂದಂತೆ ಬಿಟ್ಟರು. ಸಹವಾಸವಾದರೂ ಸರಿಯಾಗಿಸೇರಿದ್ದರೆ, ನಾನೂ ಸನ್ಮಾರ್ಗದಲ್ಲಿರುತ್ತಿದ್ದೆನು. ಅದೂ ನನ್ನ ಪಾಲಿಗೆ ದುರ್ಲಭವಾಗಿ, ನನಗೂ ಹೆಚ್ಚಾದ ದುಷ್ಟರೇ ನನ್ನ ಜತೆಗೆ ಸೇರಿದರು. ಮೊದಲೇ ಧನದಮದ ; ಜತೆಗೆ ಕುಲೀನತೆಯ ಮದವೂ ಸೇರಿದೆ. ಅವು ಸಾಲದೆಂದು ಪ್ರೋತ್ಸಾಹವೂ, ತಕ್ಕಷ್ಟು ಸಹಾಯಗಳೂ ದೊರೆತರೆ ಕೇಳತಕ್ಕುದೇ ಇಲ್ಲ. ನನ್ನ ವಿದ್ಯಾವ್ಯಾಸಂಗಕ್ಕಾಗಿ ತೆತ್ತ ಹಣವೆಲ್ಲವೂ ಹೆಂಡದಂಗಡಿ, ಜೂಜಿನ ಚಾವಡಿ, ಸೂಳೆಯರ ಮೇಳ, ಹೊಟೇಲಿನ ಸಡಗರ, ಕ್ಷೌರಕನ ಪೆಟ್ಟಿಗೆ-ಇವುಗಳಿಗೇ ಸಾಲದಂತಾಗಿದ್ದಿತು. ಇದಕ್ಕಾಗಿ ನಾನು ಮನೆಯಲ್ಲಿದ್ದ, ಕೈಗೆ ಸಿಕ್ಕಿದ ಪಾತ್ರೆ ಪದಾರ್ಥಗಳನ್ನೂ, ಒಡವೆ ವಸ್ತುಗಳನ್ನೂ ಕದ್ದೊಯ್ದು, ನನ್ನ ಆಗಾಗಿನ ದಾಹವನ್ನು ತೀರಿಸಿಕೊಳ್ಳುತ್ತಿದ್ದೆನು. ಇದನ್ನು ತಿಳಿದು, ನನ್ನ ತಾಯಿತಂದೆಗಳು ನನಗೆ ಬಹುವಿಧ

ದಿಂದ ವಿವೇಕಹೇಳಿದರು. ಆದರೆ, ಅದೆಲ್ಲವೂ ನಿಷ್ಫಲವಾಗಿಯೇ ಹೋಯಿತು. ಹೀಗೆ ನನ್ನ ದುರ್ನಡತೆಯಿಂದುಂಟಾದ ಮನೋರೋಗದಲ್ಲಿಯ್ಕೆ ನಮ್ಮ ತಂದೆಯೂ ಮೃತನಾದನು. ಪಿತೃವಿಯೋಗವು ನನಗೆ ಸಂತೋಷಕರವೇ ಆಗಿದ್ದಿತಲ್ಲದೆ ವಿಷಾದವನ್ನುಂಟುಮಾಡಲಿಲ್ಲ. ಆದರೆ, ಹೀಗೆಯೇ ಬಿಟ್ಟರೆ ಕೆಟ್ಟುಹೋಗುವನೆಂದು ನಮ್ಮ ತಾಯಿಯು, ತನ್ನ ಬಂಧುವರ್ಗಕ್ಕೆ ಸೇರಿದ–ಸಲ್ಲಕ್ಷಣಸಂಪನ್ನೆಯಾದ ಕನ್ನೆಯನ್ನೇ ಕರೆತಂದು, ನನಗೆ ವಿವಾಹ ಮಾಡಿದಳು. ಆ ನನ್ನ ಪತ್ನಿಯಾದರೂ ಸಾಮಾನ್ಯಸ್ತ್ರೀಯಲ್ಲ. ಸಾಧ್ವೀಮಣಿಯೆಂದರೆ ಅವಳನ್ನೇ ಮೊದಲು ಹೇಳಬೇಕು. ಅಂತಹ ಸತೀಮಣಿಯಲ್ಲಿ ಕೂಡ, ನಾನು ಕ್ರೂರವಾಗಿ ನಡೆದುಕೊಳ್ಳುತ್ತಿದ್ದೆನಲ್ಲದೆ, ನನ್ನ ದುರಾಚಾರಕ್ಕೆ ಸಹಕರಿಸಬೇಕೆಂದು ಬಗೆಬಗೆಯಾಗಿ ಹೊಡೆದು, ಬಯ್ದು ಕೊರಗಿಸುತ್ತಿದ್ದೆನು. ಸೊಸೆಯು ಪಡುವ ಕಷ್ಟಕ್ಕೂ, ನನ್ನ ದುರ್ನಡತೆಗೂ ಪರಿತಪಿಸುತ್ತ ನಮ್ಮ ತಾಯಿಯೂ ಅತ್ಯಲ್ಪಕಾಲದಲ್ಲಿಯೇ ಸತ್ತಳು.

ತಾಯಿ ಸತ್ತ ಬಳಿಕಂತೂ ನನಗೆ ಇದ್ದ ಒಂದು ಕಂಟಕವೂ ಕಳೆದಂತಾಯಿತು. ಆ ಮುಂದೆ ನನ್ನ ದುಂದುವೆಚ್ಚಕ್ಕೂ, ಆಡಂಬರಗಳಿಗೂ ಎಲ್ಲೆಯೇ ಇಲ್ಲದಂತಾಯಿತು. ನನ್ನ ಸಂಗಡಿಗರೆಲ್ಲರನ್ನೂ ಮನೆಗೇ ಕರೆತರಲು ಮೊದಲು ಮಾಡಿದೆನು. ಅವರ ಸಂತೋಷ ಮತ್ತು ಮುಖೋಲ್ಲಾಸಗಳಿಗಾಗಿ ಮಾಡಬೇಕಾದ ಆಹಾರಪಾನೀಯಗಳೆಲ್ಲಕ್ಕೂ ನನ್ನಪತ್ನಿಯನ್ನೇ ನಿಲ್ಲಿಸಿದೆನು. ಕ್ಷಮಾವಲಂಬಿನಿಯಾದ ನನ್ನ ಪತ್ನಿಯು, ನನ್ನ ಕೋಟಲೆಗಳನ್ನು ಸಂತೋಷದಿಂದಲೇ ಸಹಿಸಿ, ನನ್ನ ಮನೋನುಕೂಲೆಯಾಗಿ ಸೇ ಸುತ್ತ ಬಂದಳು. ಇದರಿಂದ ಅವಳಲ್ಲಿ ನನಗೆ ಪ್ರೇಮವೂ ಹುಟ್ಟಿ ಅವಳನ್ನು ತಕ್ಕಮಟ್ಟಿಗೂ ಸುಖಪಡಿಸಬೇಕೆಂದು ನಿಶ್ಚಯಿಸಿದೆನು. ನಿಂದ ನನ್ನ ತೃಷ್ಣೆಯು ಮನೆಯಲ್ಲಿ ಮಾತ್ರವೇ ನಿಂತಿತು. ಆದ ದುಂದುಗಾರಿಕೆಯು ಮಾತ್ರ ಹೋಗಲಿಲ್ಲ. ಅದಕ್ಕೆ ಅದೃಷ್ಟಯುವಾಗಬೇಕಲ್ಲವೆ! ಅದಿರಲಿ.

ನನ್ನ ದುರದೃಷ್ಟದಿಂದ ನನ್ನ ಪತ್ನಿಯಾದರೂ ನಡುಗಾಲದಲ್ಲಿಯೇ ನನ್ನನ್ನು ಳಿದು, ತಾನುಮಾತ್ರ ಕಾಲಗತಿ ಹೊಂದಿದಳು. ಅವಳು ಸಾಯು ವಾಗ ಯಶವಂತನಿಗೆ 18 ವರ್ಷಗಳೂ, ಗಂಗೆಗೆ 8 ವರ್ಷಗಳೂ, ಸುಪಂಥನಿಗೆ 6 ವರ್ಷಗಳೂ ಕಳೆದಿದ್ದುವು. ಆವೇಳೆಗೆ ಯಶವಂತನು, ನನ್ನ ನಡೆನುಡಿಗಳನ್ನೇ ಚೆನ್ನಾಗಿ ಅಭ್ಯಾಸಕ್ಕೆ ತಂದಿದ್ದನು. ಗಂಗೆಗೆ ಮಾತ್ರವೇ ವಿದ್ಯಾವ್ಯಾಸಂಗವೂ, ಕುಶಲಕಾರ್ಯಶಿಕ್ಷಣವೂ ತಕ್ಕಮಟ್ಟಿಗೆ ಚೆನ್ನಾಗಿ ನಡೆಯುತ್ತಿದ್ದುವು. ಅಲ್ಲದೆ ಅವಳ ಕಂಠವು ಕೋಮಲವಾಗಿದ್ದುದರಿಂದ, ಸಂಗೀತಕಲೆಯಲ್ಲಿ ಪೂರ್ಣಪಾಂಡಿತ್ಯವನ್ನುಂಟುಮಾಡಬೇಕೆಂದು ಸಂಕಲ್ಪಿಸಿ, ಸಂಗೀತವಿದ್ವಾಂಸರನ್ನೇ ಅವಳ ಪಾಠಕ್ಕೆ ನೇಮಿಸಿದ್ದೆನು. ಹೀಗೆ ಮಗಳು ವಿದ್ಯಾವತಿಯಾಗುತ್ತಿರುವಳೆಂಬ ಸಮಾಧಾನವುಂಟಾಗಿದ್ದರೂ, ಮಗನೂ, ಪತಿಯೂ ದುರ್ಮಾರ್ಗಿಗಳಾಗಿ ಕೆಟ್ಟುಹೋಗುತ್ತಿರುವರೆಂಬ ಶೋಕವೇ ಆ ನನ್ನ ಪತ್ನಿಗೆ ಮೃತ್ಯುವಾಯಿತು. ಈಗದಕ್ಕಾಗಿ ಎಷ್ಟು ಅತ್ತರೂ ಫಲವೇನು ?

ಪತ್ನೀವಿಯೋಗವೇ ನನ್ನ ಕಷ್ಟಕ್ಕೆ ತಳಹದಿಯಾಯಿತು. ಮಕ್ಕಳನ್ನು ನೋಡಿಕೊಳ್ಳುವ ಕೆಲಸವೂ ನನ್ನ ಪಾಲಿಗೆ ಬಿದ್ದು, ಮನೆಯ ತಾಪತ್ರಯಗಳು ಒಂದೊಂದಾಗಿ ಮನಸ್ಸಿಗೆ ಹೊಳೆಯುತ್ತ ಬಂದುವು. ಆದರೆ, ' **ಸಾಯುವ ಕಾಲಕ್ಕೆ** ಓದಕುಳಿತರು ' ಎಂಬಂತೆ ಆಗ ನನಗುಂಟಾದ ಪಶ್ಚಾತ್ತಾಪವೂ ಫಲಕಾರಿಯಾಗಲಿಲ್ಲ. ಏಕೆಂದರೆ—ನನ್ನ ಮತ್ತು ಯಶವಂತರಿಬ್ಬರ ದುಂದುವೆಚ್ಚವೂ, ಅದಕ್ಕಾಗಿ ಮಾಡಿದ ಸಾಲದ ಗಾಧಾರ-ಸ್ಥಿರಾಧಾರಗಳ ಬಾಧೆಯೂ ಒಟ್ಟಿಗೆ ತಲೆಯೆತ್ತಿ, ನನ್ನನ್ನು 'ಂಟಿನಲ್ಲಿ ಹಿಡಿಯಬೇಕೆಂಬ ಪ್ರಯತ್ನವು ನಡೆದಿದ್ದಿತು. ' ಇನ್ನು ನನಗೆ ೀನು ? ಇದ್ದ ಸ್ಥಿರಚರ ಸ್ವತ್ತುಗಳೆಲ್ಲವೂ ಹೋದುವು. ಇನ್ನು ಸಾಲ 'ೀಗೆ ತೀರಿಸಬೇಕು ? ತೀರಿಸದಿದ್ದರೆ ಕಾರಾಗೃಹವಾಸವನ್ನು ಕೊಳ್ಳಬೇಕು ? ಮಕ್ಕಳಿಗೆ ದಿಕ್ಕಾರು ? ' ಹೀಗೆ ಬಗೆಬಗೆ 'ಳಿಂದ ನಾನು ಅಸ್ಥಿರನಾದೆನು. ಕಡೆಗೆ ಮನವನ್ನು ಬಿಗಿ

ಹಿಡಿದು, ಯಾವಾಗಲೂ ನನ್ನ ಬಳಿಯಲ್ಲಿಯೇ ಇದ್ದು, ಬೆಳೆದ ಕೆಲವುಮಂದಿ ಆಪ್ತಸೇವಕರನ್ನು ಜತೆಗೊಂಡು, ರಾತ್ರಿವೇಳೆಯಲ್ಲಿ ಯಾರಿಗೂ ಸೂಚಿಸದಂತೆ ನನ್ನಲ್ಲಿದ್ದ ಒಡಕುಪಾತ್ರೆಗಳನ್ನು ಬಂಡಿಯಲ್ಲಿ ತುಂಬಿಸಿ, ಮಕ್ಕಳನ್ನೂ ಕರೆದುಕೊಂಡು ದೇಶಸಂಚಾರಕ್ಕೆ ಹೊರಟೆನು.

ದೇಶಸಂಚಾರದಲ್ಲಿ ನಾನು ಉದರನಿಮಿತ್ತವಾಗಿ ಅನೇಕ ಹಗಲುವೇಷಗಳಿಂದ ಜನಗಳನ್ನು ಮರುಳುಮಾಡಿ, ಧನಸಂಗ್ರಹಮಾಡುತ್ತಬಂದೆನು. ಇದರಿಂದ ನನಗೆ ಧನಾರ್ಜನೆಯಲ್ಲಿ ಅತಿಯಾದ ದಾಹವುಂಟಾಯಿತು. 'ಧನದಾಹವು ಬಹುಪಾಪಿ' ಎಂಬುದನ್ನು ಧನಪಿಶಾಚಗ್ರಸ್ತನಾದ ನಾನು ತಿಳಿಯಲಾರದೆ ಹೋದೆನು. ಅದಕ್ಕಾಗಿಯೇ ನನ್ನ ದೇಹಸೌಖ್ಯ-ಸಂತೋಷಕೂಟಗಳನ್ನು ತೊರೆದೆನು ; ಚೋರಮಾರ್ಗವನ್ನು ಅಭ್ಯಾಸಕ್ಕೆ ತಂದೆನು. ಇಷ್ಟು ಸಾಹಸಪ್ರಯತ್ನದಿಂದ, ತಸ್ಕರವಿದ್ಯಾನೈಪುಣ್ಯವನ್ನು ಹೊಂದಿದ ನಾನು, ಕಡೆಗೆ, ಗೊಲ್ಲರಪಾಳ್ಯಕ್ಕೆ ಬಂದು ಸೇರಿದೆನು.

ಗೊಲ್ಲರಪಾಳ್ಯಕ್ಕೆ ಬಂದ ಬಳಿಕ ನಾನು ಸುಮ್ಮನಿರಲಿಲ್ಲ. ಪಾಳುಬಿದ್ದಿದ್ದ ಕಟ್ಟಡವೊಂದನ್ನು ಕೊಂಡುಕೊಂಡು, ಅದನ್ನು ಸತ್ರವೆಂದು ಪ್ರಸಿದ್ಧಿಪಡಿಸಿ, ಜನರನ್ನು ಸುಲಭವಾಗಿ ನನ್ನ ದಾರಿಗೆ ಸೆಳೆಯುತ್ತಬಂದೆನು. ಆ ಊರಿನವರನ್ನು ಕ್ರಮಕ್ರಮವಾಗಿ ಸವಿಮಾತುಗಳಿಂದಲೂ, ಸವಿಭೋಜನಗಳಿಂದಲೂ, ಉಚಿತ ಸನ್ಮಾನಗಳಿಂದಲೂ ಅಡಿಗಡಿಗೂ ನಲವೇರಿಸುತ್ತ ಎಲ್ಲರೂ ನನ್ನಲ್ಲಿ ಅನುರಕ್ತರಾಗುವಂತೆ ಮಾಡಿಕೊಂಡೆನು. ಇಷ್ಟರಲ್ಲಿಯೇ ನನಗೆ ಜಮೀನ್ದಾರರ ಬಲವದೈಶ್ವರ್ಯವೃತ್ತಾಂತವೂ ತಿಳಿದು, ಒಂದೇಸಲ ಅದನ್ನು ಅಪಹರಿಸಬೇಕೆಂಬ ದುರ್ಭಾವನೆಯುಂಟಾಯಿತು.

ನಮ್ಮದಾದ ವಸ್ತುಗಳನ್ನು ಉಳಿಸಿಕೊಳ್ಳಬೇಕಾದರೂ, ನಾವು ಬಹು ಪ್ರಯಾಸಪಡಬೇಕು. ಹಾಗಿರುವಲ್ಲಿ, ಅನ್ಯರ ಸ್ವತ್ತನ್ನು,-ಹಾಗೂ ಅಖಂಡವಾದ, ಅಪಾರವಾದ ಭೂಸ್ವತ್ತನ್ನು ಅಪಹರಿಸುವುದೆಂದರೆ, ಸುಮ್ಮನಾದೀತೇ ? ಇದಕ್ಕಾಗಿ ನಾನು ಹಲವು ಉಪಾಯಗಳನ್ನು ಹುಡುಕಬೇ

ಯಿಂದ ಎದ್ದು ಬಂದು, ನ್ಯಾಯವಿಚಾರಕರ ಮುಂದಿದ್ದ ಪೆಟ್ಟಿಗೆಯ ಕದವನ್ನು ತೆಗೆದು, ಒಳಗಿದ್ದ ಮಾಲುಗಳನ್ನೂ, ಯಂತ್ರ-ಚಿತ್ರ ಮತ್ತು ಪತ್ರಗಳನ್ನೂ ಕ್ರಮಕ್ರಮವಾಗಿ ತೆಗೆದು ಮೇಜಿನಮೇಲಿರಿಸಿ, ಘನಘಂಭೀರಸ್ವರದಿಂದ ಹೇಳಿದನು. ಈವರೆಗೂ ನ್ಯಾಯಪೀಠಕ್ಕೆ ವಿದಿತವಾಗಿರುವ ವಿಚಾರಗಳೆಲ್ಲವೂ ಇದರಿಂದ ಪ್ರಮಾಣಿಸಲ್ಪಡಬಹುದು. ಯಶವಂತನು ಜಮೀನ್ದಾರರ ಹೆಸರಿನಿಂದ ಬರೆಯುತ್ತಿದ್ದ ಸುಳ್ಳುಕಾಗದಪತ್ರಗಳೂ, ಕೊಲೆ-ಸುಲಿಗೆಗಳಿಗಾಗಿ ಮಾಡಬೇಕಾದ ಕಾರ್ಯಗಳಿಗೆ ಕೊಟ್ಟ ಸೂಚನೆಗಳೂ ಇಲ್ಲಿರುವ ಪತ್ರಗಳಲ್ಲಿರುವುವು. ಕದ್ದೊಯ್ದಿದ್ದ ವಸ್ತುಗಳೂ, ಕಳವಿಗಾಗಿ ಮಾಡಿದ್ದ ಸಾಧನಗಳೂ ಇಲ್ಲಿ ಬೇರೆಬೇರೆಯಾಗಿ ಇಡಲ್ಪಟ್ಟಿರುವುವು. ಇವರ ಕುತಂತ್ರವು ಭೇದಿಸಲ್ಪಟ್ಟ ಕಾಲದಲ್ಲಿ ನಡೆದ ವಿಧಾನವೂ, ಆಗಿನ ಇವರ ಕುತ್ಸಿತ ಕಾರ್ಯಗಳೂ ಮತ್ತು ಇವರ ಆಕೃತಿ, ಪ್ರಕೃತಿ, ವೈಚಿತ್ರ್ಯಗಳೂ ಇವರ ವಾಗ್ದ್ವಾರವಾಗಿ ಹೊರಬಿದ್ದ ದುರ್ಭಾಷೆಗಳೂ ಛಾಯಾಗ್ರಾಹಿ ಮತ್ತು ಶಬ್ದಗ್ರಾಹಿ ಯಂತ್ರಗಳ ಮೂಲಕವಾಗಿ ಪರಿಶೋಧಿಸಲ್ಪಟ್ಟು ತಿಳಿಯಬಹುದು.

ಇನ್ನೂ ಹೇಳುವುದೇನೆಂದರೆ-ಸಕಲವಿಧವಾದ ಸುಖದುಃಖಗಳಿಗೂ ಪಾಪಪುಣ್ಯಗಳೇ ಕಾರಣವು. ಸಮಸ್ತವಾದ ಪಾಪಪುಣ್ಯಗಳಿಗೂ ಸ್ತ್ರೀಯರ ಸದ್ವರ್ತನ-ದುರ್ವರ್ತನಗಳೇ ಮೂಲವು. ಸದ್ವರ್ತನಕ್ಕೆ ಅವರ ಕರ್ತವ್ಯಕ್ಷಮತೆಯೇ ಆಧಾರವು. ಕರ್ತವ್ಯಕ್ಷಮತೆಗೆ ಆತ್ಮಸ್ವರೂಪಜ್ಞಾನವೇ ಶಾಂತಿಪ್ರದವಾದುದು. ಆದಾದರೂ ಸುಶಿಕ್ಷಾರೂಪದ ವಿದ್ಯಾಧನದಲ್ಲಿಯೇ ನೆಲೆಗೊಂಡಿರತಕ್ಕುದು. ಇದರ ಉದಾಹರಣೆಗೆಂದರೆ, ಗಂಗಾಬಾಯಿಯು ವಿದ್ಯಾವತಿಯೆನ್ನಿಸಿದ್ದರೂ-ಸಾಧನಬಲವೂ, ಸ್ಥಿರಪ್ರಜ್ಞೆಯೂ ಇಲ್ಲದಿದ್ದುದರಿಂದಲೇ ಜಮೀನ್ದಾರರ ಸಂಸಾರಕ್ಕುಂಟಾದ ಇಷ್ಟು ಅನರ್ಥಕ್ಕೂ ಅವಕಾಶವಾಯಿತು. ಅವಳಲ್ಲಿ ಇತಿಕರ್ತವ್ಯತೆಯು ಚೆನ್ನಾಗಿ ಸ್ಫುರಿಸುತ್ತಿದ್ದರೆ, ಮನೆಯಲ್ಲಿದ್ದ ಮೃತ್ಯುವನ್ನು ಹೊರಡಿಸುವಷ್ಟರ ದಕ್ಷತೆಯೂ

ಆಗಲೇ ಉಂಟಾಗುತ್ತಿದ್ದಿತು. ಆದರೆ, ಅದು ಕಡೆಯಲ್ಲಿ ಯಾದರೂ ತನ್ನ ಶಕ್ತತೆಯನ್ನು ಪ್ರದರ್ಶಿಸದೆ ಬಿಡಲಿಲ್ಲವಾದುದರಿಂದ, ಕಷ್ಟನಿವಾರಣೆಗೆ ಸಾಧನವಾದರೂ ಗಂಗಾಬಾಯಿಯ ಸ್ಥಿರಪ್ರಜ್ಞೆಯೆಂಬುದು ನಿರ್ಧರವಾಯಿತು.

ಗಂಗಾಬಾಯಿಯಲ್ಲಿ ಕರ್ತವ್ಯಜ್ಞಾನವು ಜಾಗೃತವಾಗುವವರೆಗೂ, ಗೋಪಾಲನ ಸ್ವಾಮಿದ್ರೋಹ, ಯಶವಂತನ ಕುತ್ಸಿತವ್ಯಾಪಾರ, ಉಳಿದವರ ಮಾಯಾಜಾಲಗಳು ಅಷ್ಟಿಷ್ಟಾಗಿ ಬಾಧಿಸುತ್ತಿದ್ದುವು. ಅಲ್ಲಿಂದ ಮುಂದೆ ಅದರ ಹುಟ್ಟೇ ಅಡಗುವಂತಾಗಿ ಹೋಯಿತು. ಇದಕ್ಕೂ ಹೆಚ್ಚಿದ ನಿದರ್ಶನವಿನ್ನೇಕೆ ? ಇಷ್ಟು ಹೇಳಿದರೆ ಸಾಕು.

ಮಕ್ಕಳಿಗೆ ಬಾಲ್ಯದಿಂದಲೂ ಕರ್ತವ್ಯಜ್ಞಾನವಂಕುರಿಸುವಂತೆ ಶಿಕ್ಷಣೆಯು ದೊರೆಯುತ್ತಿರಬೇಕು. ಇಂತಹ ಉತ್ತಮ ಶಿಕ್ಷಣೆಯಿಂದಲೇ ನಮ್ಮ ಮಕ್ಕಳು ಮುಂದಿಗಳೆನ್ನಿಸಿ, ಮಾನ-ಧನ-ಕೀರ್ತಿಗಳನ್ನು ಊರ್ಜಿತ ಪಡಿಸಿ, ದೇಶಕ್ಕೂ, ದೇಶೀಯರಿಗೂ ಮೇಲ್ಮೆಯನ್ನುಂಟುಮಾಡುವವರಾಗುತ್ತಾರೆ. ಇದಕ್ಕೆ ಎಂದೆಯ ಬಾಲ್ಯಚರಿತೆಯೇ ನಿದರ್ಶನಕ್ಕೆ ಸಾಕಾಗಿ ತೋರುತ್ತದೆ.

ಎಂದೆಯಲ್ಲಿರುವ ದಕ್ಷತೆಯೇ ನಮ್ಮ ಮಹಿಳಾವರ್ಗದಲ್ಲೆಲ್ಲಾ ವ್ಯಾಪಿಸುವ ಪಕ್ಷದಲ್ಲಿ, ವಾಸುದೇವ-ಯಶವಂತ-ಗೋಪಾಲರಂತವರ ಸ್ವಾಮಿದ್ರೋಹಕ್ಕೂ, ಬಲವಂತ-ಸುಪಂಥರಂತವರ ಧನದಾಹದ ಪಾಪಾಚರಣೆಗೂ ಗಂಡುಮದ್ದಾಗಿ ತಿರುಗಿ, ನಮ್ಮ ಭಾರತಮಾತೆಯ ಯಶಶ್ಚಂದ್ರಿಕೆಯು ಮತ್ತೆ ಪ್ರಕಾಶಕ್ಕೆ ಬರುವುದರಲ್ಲಿ ಏನೂ ಸಂಶಯವಿಲ್ಲ. ಇನ್ನು ಈ ವ್ಯಾಜ್ಯದ ವಿಷಯವಾಗಿ ನ್ಯಾಯಪೀಠಕ್ಕೆ ಸರಿತೋರುವಂತೆ ಇತ್ಯರ್ಥವನ್ನು ನಿರೂಪಿಸಬಹುದೆಂದು ಸೂಚಿಸಿ ವಿರಮಿಸುವೆನು.

ಸರದಾರ್ ಧರ್ಮಪಾಲ (ಶ್ರೀದತ್ತಕುಮಾರ) ನು ಸ್ವಾಭಿಮಾನ ಪೂರ್ವಕವಾಗಿ ಹೇಳಿ ತೋರಿಸಿದ ನ್ಯಾಯಸ್ಥಾಪನೆಯು, ಅಲ್ಲಿದ್ದವರೆಲ್ಲರ

ಮನಸ್ಸಿಗೂ ಸರಿದೋರಿತು. ಎಲ್ಲರೂ ಧರ್ಮಪಾಲನ ಭಾಷಣಕ್ಕೆ ಧನ್ಯವಾದವನ್ನು ಮಾಡಿದರು. ವಿಚಾರಣೆಯು ಅಲ್ಲಿಗೆ ಸಾಂಗವಾಗಿ ನೆರವೇರಿದಂತಾಗಿ, ತೀರ್ಮಾನವು (Judgment) ಮುಂದೆ ಹೇಳಲ್ಪಡುವುದೆಂದು ನಿಶ್ಚಿತವಾಯಿತು.

|| ಶ್ರೀ ||

## ಅಷ್ಟಮ ಪರಿಚ್ಛೇದ.

(ಫಲಿತಾಂಶ).

ಸ್ವದೇಶಭಾಷಾವತ್ಸಲರೇ ! ಸನಾತನಧರ್ಮ ಸಂಸ್ಥಾಪಕರೇ !! ಆರ್ಯಸೂತ್ರಾನುಯಾಯಿಗಳೇ !!! ನಮ್ಮ ಇಂದಿನ ಕಥಾಫಲಿತಾಂಶರೂಪದ ಸವಿನಯ ನಿವೇದನವನ್ನೂ ಸಾದರಿಸಬಲ್ಲಿರಲ್ಲವೇ ? ಧರ್ಮಭಗಿನಿಯರೇ ! ಹಾಗಿದ್ದರೆ, ಪರಾಮರ್ಶಿಸಿರಿ.

ಪ್ರಯತ್ನಕಾರ್ಯದ ಮುಖ್ಯೋದ್ದೇಶವನ್ನು ದೊರಕಿಸಿಕೊಳ್ಳುವುದೇ ಫಲಿತಾಂಶವಷ್ಟೆ. ಹಾಗಾದರೆ, ನಮ್ಮ ಈ ಚರಿತ್ರಲೇಖನದ ಫಲಿತಾಂಶವಾವುದೆಂದರೆ, ಚರಿತ್ರೆಗೆ ಸಂಬಂಧಪಟ್ಟ ಕಾರ್ಯಸ್ವರೂಪವನ್ನೂ, ಅವುಗಳ ಪರ್ಯವಸಾನದ ಕ್ರಮಗಳನ್ನೂ ನಿರವಿಸಿ, ಹೇಳಿ ಕೇಳಿ ನೋಡಬಲ್ಲವರೆಲ್ಲರ ಕಣ್ಮನಂಗಳೂ ಇತಿಕರ್ತವ್ಯವನ್ನು ತಿಳಿದು, ನಡೆದಂತಾಗುವುದನ್ನು ಕಣ್ಣಾರ ನೋಡಿ, ಕಿವಿಯಾರ ಕೇಳಿ, ಮನವಾರೆ ನಲಿವುದೇ ನಮ್ಮೀ ಲೇಖನದ ಪರಿಶ್ರಮಕ್ಕೆ ತಕ್ಕುದಾದ ಫಲಿತಾಂಶವು. ಆದರೆ, ಹೇಳಿದುದನ್ನೇ ಹೇಳಿ, ಬರೆದುದನ್ನೇ ಬರೆದು ಪುಟಭಾಗವನ್ನು ತುಂಬಿಸುವೆವೆಂದಾಗ್ರಹಿಸಬೇಡಿರಿ. ಮತ್ತೆ ಮತ್ತೆಯೂ, ಒತ್ತಿಯೊತ್ತಿ ಹೇಳುವುದೇ ನಮ್ಮ ಕರ್ತವ್ಯವು. ಹೇಳಿದುದೆಲ್ಲ

ವನ್ನೂ ಸಾವಧಾನದಿಂದ ಸಮಾಲೋಚಿಸಿ, ಸಾರವನ್ನು ಸಂಗ್ರಹಿಸುವುದೇ ನಿಮ್ಮ ಕರ್ತವ್ಯವು. ಅಷ್ಟಲ್ಲದೆ ಮತ್ತಿನ್ನೇನು ? ಪ್ರಸ್ತಾವನವು ಇಷ್ಟುಸಾಕು.

ನ್ಯಾಯತೀರ್ಮಾನದಲ್ಲಿ, ಬಲವಂತ-ಸುಪಂಥರಿಗೆ, ಅವರ ಕುತ್ಸಿತ ವ್ಯಾಪಾರದ ಫಲಕ್ಕಾಗಿ ಯಾವಜ್ಜೀವವೂ ಕಾರಾಗೃಹವಾಸದ ಕಠಿಣ ಶಿಕ್ಷೆಯೂ, ಯಶವಂತ-ವಾಸುದೇವರಿಗೆ ಸ್ವಾಮಿದ್ರೋಹ ಮತ್ತು ದೇಶ ಕ್ಷೋಭೆಗಳ ಫಲರೂಪವಾಗಿ ಮರಣಾವಧಿ ದ್ವೀಪಾಂತವಾಸದ ಶಿಕ್ಷೆಯೂ, ಕೊಲೆಗೇಡಿಯಾದ ಗೋಪಾಲನಿಗೆ ಮರ್ಯ್ಯಾದೋಲ್ಲಂಘನದ ಮತ್ತು ದೈವ ದ್ರೋಹದ ಮಹತ್ಫಲರೂಪವಾದ ಮರಣಶಿಕ್ಷೆಯೂ. ವಿಧಿಸಲ್ಪಟ್ಟುವು. ಅವರಿಗೆ ಅನುಯಾಯಿಗಳಾಗಿದ್ದ ಗೊಲ್ಲರಪಾಳ್ಯದವರೆಲ್ಲ ಮಾಸಾವಧಿ ಮಾತ್ರವೇ ಕಾರ್ಯ್ಯಾಗೃಹದಲ್ಲಿದ್ದು, ಆ ಬಳಿಕ ಧರ್ಮಪಾಲರ ಅಧೀನರಾಗಿರ ತಕ್ಕುದೆಂಬ ವಿಧಾಯಕವಾಯಿತು. ಉಳಿದ ಚೌಕದ ಕಳ್ಳರಿಗೂ ವರ್ಷಗ ಟ್ಟಲೆಯ ಕಾರಾಗೃಹವಾಸ ಶಿಕ್ಷೆಯಾಯಿತು. ಹೇಗೂ ಬಹು ದೀರ್ಘಕಾಲದ ದುಷ್ಕರ್ಮಕ್ಕೆ ಇಷ್ಟು ಕಾಲಾನಂತರದಲ್ಲಿಯಾದರೂ ಇಷ್ಟರ ಫಲವು ದೊರೆ ಯದೆ ಬಿಡಲಿಲ್ಲ. ಇನ್ನು ಗಂಗೆಯ ತಪ್ಪಿತಕ್ಕೆ ಅನುತಾಪವೇ ಶಿಕ್ಷೆಯಾಯಿತು. ಹಾಗೂ ಆ ಅನುತಾಪವೇ ದಕ್ಷತೆಯನ್ನುಂಟುಮಾಡಿ, ಜಮೀನ್ದಾರರ ಪ್ರಾಣಸಂರಕ್ಷಣೆಗೂ, ಬಹು ದೀರ್ಘಕಾಲದ ದುರಭಿಸಂಧಿಯ ಉದ್ಘಾಟ ನೆಗೂ ಕಾರಣವಾಯ್ತೆಂಬ ಕೀರ್ತಿಯೂ, ಪ್ರಾಪ್ತವಾಯಿತು. ಸುನಂದೆಯ ಸಹನ ಶೀಲತೆಯೂ, ಯಮುನೆಯ ವಸ್ತುವಿಚಾರಪರತೆಯೂ ಶ್ಲಾಘಿಸಲ್ಪ ಟ್ಟುವು. ವಿಷಕಂಠಾದಿ ಪ್ರಹರಿಗಳು ಸ್ವಾಮಿಭಕ್ತರೆಂದು ಬಹುಮಾನಿಸಲ್ಪ ಟ್ಟರು. ದಳವಾಯಿಸಿಂಗನ ಕಾರ್ಯನಿರ್ವಾಹಶಕ್ತಿಗಾಗಿ ವೇತನವೂ ಹೆಚ್ಚಿತು. ಮತ್ತೇನಾಗಬೇಕು ?

ವಿಂದೆಯೆಂದರೆ-ಸಾಕ್ಷಾದ್ದಾಕ್ಷಾಯಿನಿಯ ಅಪರಾವತಾರನೆಂದೂ, ಅವಳ ಅದ್ಭುತಮಹಿಮಾಪ್ರದರ್ಶನವೇ, ಮುಂದಿನ ನಮ್ಮ ಸೋದರೀವರ್ಗಕ್ಕೆ ಪರಮಾದರ್ಶಜೀವನಪ್ರದವಾಗಿರಬೇಕೆಂದೂ, ಇದಕ್ಕಾಗಿ ಇವಳಿಗೆ ದಕ್ಷ

ಕನ್ಯಾ ನಾಮವು ಪ್ರಸಿದ್ಧವಾಗಲೆಂದೂ ಧರ್ಮಾಧಿಕಾರಿಗಳ ಆಜ್ಞೆಯಾಯಿತು. ಸರದಾರ್ ಧರ್ಮಪಾಲನೆಂಬ ಬಿರುದಾಂಕಿತನಾದ ಶ್ರೀದತ್ತಕುಮಾರನಿಗೆ, ಆತನ ಅಸಾಧಾರಣ ಗುಣಗಳಿಗೆ ಪ್ರತಿಫಲವಾಗಿ ಗೊಲ್ಲರಪಾಳ್ಯದ ಜಹಗೀರು ಲಭಿಸಿತು. ಪ್ರಯಾಸದ ಫಲಸ್ವರೂಪವಾಗಿ ದಕ್ಷಕನ್ಯೆಯೇ ಧಾರಾಪೂರ್ವಕವಾಗಿ ಕೊಡಲ್ಪಟ್ಟಳು. ಸಾಲದುದಕ್ಕೆ ಬಲವಂತ-ವಾಸುದೇವರಾಯರ ಸ್ಥಿರಚರ ಸ್ವತ್ತುಗಳೆಲ್ಲವೂ ಧರ್ಮಪಾಲನ ವಶವಾದುವು. ಇನ್ನೇನಾಗಬೇಕು ? ಭೂ-ವನಿತಾ-ವಿತ್ತಗಳೆಂಬ ತ್ರಿವಿಧ ಸಂಪತ್ತೂ ಲಾಭವಾದ ಬಳಿಕ ಅಭ್ಯುದಯಕ್ಕೇನು ಕಡಮೆ ?

ಜಹಗೀರ್ದಾರ್ ಶ್ರೀದತ್ತಕುಮಾರನು, ದಕ್ಷಕನ್ಯಾ (ವಿಂದಾ) ಸಮೇತನಾಗಿ ಪಾಲಕ-ಮಾತೃಸಹಿತ ಗೊಲ್ಲರಪಾಳ್ಯವನ್ನು ಸೇರಿ, ಅಲ್ಲಿಗೆ 'ಧರ್ಮನಗರ' ವೆಂಬ ಅಭಿಧಾನವಿತ್ತು, ಅಲ್ಲಿಯವರೆಲ್ಲರನ್ನೂ ಕಾಲೋಚಿತ ನೀತಿ-ರೀತಿಗಳಿಂದ ಸ್ವಾಧೀನಪಡಿಸಿಕೊಂಡು, ಅಲ್ಲಿ ಅನೇಕವಿಧವಾದ ಕರ್ಮಾಗಾರ, ವಿದ್ಯಾಶಾಲೆ, ಸಾಧನಮಂದಿರಗಳನ್ನು ಸ್ಥಾಪಿಸಿ, ಜನರ ಸೋಮಾರಿತನಕ್ಕೂ, ದಾರಿದ್ರ್ಯರೋಗಕ್ಕೂ, ಚೋರತನಕ್ಕೂ ಗಂಡುಮದ್ದೆನ್ನಿಸಿದನು. ರಮಣೀಯವಾದ ಆರಾಮ, ಚಿತ್ರಶಾಲೆ, ಗೀತಾಮಂದಿರಗಳನ್ನೂ ನಿರ್ಮಿಸಿದನು. ಹೆಚ್ಚೇಕೆ, ದೇಶೋನ್ನತಿಗೂ, ದೇಶೀಯರಿಗೂ ಯಾವುದು ಕರ್ತವ್ಯವೆನ್ನಿಸಿರುವುದೋ, ದೇಶ ಭಕ್ತರಿಗೆ ಯಾವುದು ಆವಶ್ಯವಾಗಿ ಮಾಡಲ್ಪಡಬೇಕೆಂಬ ವಿಧಿಯುಂಟೋ ಅಷ್ಟನ್ನೂ ನಡೆಯಿಸುತ್ತಿದ್ದನೆಂದರೆ ಸಾಕು. ಇನ್ನು ಉಳಿದುದೆಂದರೆ, ಜಮೀನ್ದಾರ್ ತಾರಾಪತಿರಾಯನ ವಿಚಾರವೊಂದೇ.

ತಾರಾಪತಿರಾಯನಿಗೇನು ಕೊರತೆ ? ಸ್ನೇಹಮಯೀ ಸುನಂದಾದೇವಿಯೂ, ವಿದ್ಯಾವತೀ ಗಂಗಾದೇವಿಯೂ, ಸಹಚಾರಿಣೀಸಖಿಯರಾಗಿದ್ದು, ಮೋಹನದತ್ತಕುಮಾರನು ಅಂಕದಲ್ಲಿ ಪರಿಶೋಭಿಸುತ್ತಿರುವಂದು, ಯೋಗಿನೀ ಚಂದ್ರಮತಿಯು ಪುತ್ರವಾತ್ಸಲ್ಯದಿಂದ ಹರಸುವುದೂ, ಯಮು

ನೆಯೇ ಮೊದಲಾದ ಪರಿಜನರು ನಲಿದು ಸೇವಿಸುತ್ತಿರುವುದೂ, ಯಾವ ಸ್ವರ್ಗಸುಖಕ್ಕೆ ಕಡಮೆಯಾಗಿರುವುದು ? ಅಷ್ಟೇಅಲ್ಲ. ಕೈತಪ್ಪಿಹೋಗಿದ್ದ ಧನಕನಕ ವಸ್ತುಗಳೆಲ್ಲವೂ ದೊರೆದುವು ; ಮನಃಕಾಲುಷ್ಯವೂ ಪರಿಹರವಾಯಿತು. ರಾವ್‌ಬಹದ್ದೂರ್ ರಾಧಾನಾಥರಾಯನೂ, ಸುಕನ್ಯಾದೇವಿಯೂ ಸಮೀಪ ಬಂಧುಗಳಾದರು. ಶ್ರೀದತ್ತಕುಮಾರನೇ ಜಾಮಾತನಾದನು. ಉಭಯಕುಲೋದ್ಧಾರಿಣಿಯಾದ ದಕ್ಷಕನ್ಯೆ (ವಿಂದೆ) ಯೇ ಸೀಮಂತ ಪುತ್ರಿಯೆಂದು ಪ್ರಸಿದ್ಧಿ ಹೊಂದಿದಳು. ಇನ್ನೇನು ಉಳಿದಿರುವುದು ? ಕೀರ್ತಿ-ಭೋಗ-ಸಂಪದ-ಸಮಾಧಾನಗಳೆಂಬ ಚತುರಂಗ ಬಲವೂ ಪರಿಪುಷ್ಟವಾಗಿವೆಯಲ್ಲವೆ ? ಸಿಜ. ತಾರಾಪತಿರಾಯನು, ಇಂದು ನಿಜವಾಗಿಯೂ, ತಾರಾಪತಿಯಾಗಿಯೇ ಪ್ರಕಾಶಿಸುತ್ತಿರುವನು. ಪ್ರಕಾಶಿಸಲಿ ! ಪುತ್ರಪೌತ್ರಾಭಿವೃದ್ಧಿಯಿಂದ ಚಿರಕಾಲ ಪ್ರಕಾಶಿಸುತ್ತಿರಲಿ ! ತನ್ನ ಪವಿತ್ರತೆ, ಪ್ರೇಮ, ಕೃತಜ್ಞತೆ, ಸತ್ಯಸಂಕಲ್ಪಗಳನ್ನೇ ತನ್ನ ಇತರ ಭ್ರಾತೃವರ್ಗಕ್ಕೂ ಹಂಚಿ, ಅವರನ್ನೂ ತನ್ನಂತೆಯೇ ಪ್ರಕಾಶಿಸುವಂತೆ ಮಾಡುತ್ತಿರಲಿ !! ನಮ್ಮ ಭಾರತಮಾತೆಯು ಎಂದೆಂದಿಗೂ ಕುಂದದ ಆನಂದಸಾಮ್ರಾಜ್ಯದಲ್ಲಿ ಬಗೆಗೊಳ್ಳುತ್ತಿರುವಂತೆ ಮಾಡಲಿ !!! ಇಷ್ಟಾಗಿ ನಮ್ಮ ಲೇಖಿನಿಯ ಪರಿಶ್ರಮಕ್ಕೂ ಫಲವು ದೊರೆದಂತಾಗಲಿ. ಮತ್ತೇನು ನಮ್ಮ ಕೋರಿಕೆ ? ಕರ್ತವ್ಯದಕ್ಷರನ್ನಾಗಿ ಮಾಡುವ ಭಗವತ್ಕೃಪಾರೂಪವು, ನಮ್ಮಲ್ಲಿ ಸಾಕ್ಷಾತ್ಕರಿಸಿರಬೇಕೆಂಬುದೊಂದೇ ! ಹಾಗಾದರೆ, ಹೀಗೆಂದು ಪ್ರಾರ್ಥಿಸುವೆವು. (ಅಸ್ತು)

"ಯಸ್ಮಿನ್ ವಿನ್ಯಸ್ಯಭಾರಂ ವಿಜಯಿನಿ ಜಗತಾಂ ಜಂಗಮಸ್ಥಾವರಾಣಾಂ |
ಲಕ್ಷ್ಮೀನಾರಾಯಣಾಖ್ಯಂ ಮಿಥುನ ಮನುಭವ ತ್ಯತ್ಯುದಾರಾನ್ ವಿಹಾರಾನ್ ||
ಆರೋಗ್ಯಂ ಭೂತಿಮಾಯುಃ ಕೃತಮಿಹ ಬಹುನಾ ಯದ್ಯದಾಸ್ಥಾಪದಂ ವ |
ಸ್ತತ್ತನ್ನಿತ್ಯಂ ಸಮಸ್ತಂ ದಿಶತುಸಪುರುಷೋ ದಿವ್ಯಹೇತ್ಯಕ್ಷವರ್ತೀ" ||೧೦೦||

(ಸು—ಶ)

|| ಶ್ರೀ ಕೃಷ್ಣಾರ್ಪಣಮಸ್ತು ||

ಇನಿಯನನಗಲ್ದ ಬಳಿಕೀ |
ತನುಮನಕಳಲಲ್ಲದಿಲ್ಲ ಪೆರತೊಂದು ಮೆನು ||
ತ್ತನುವಳಿಯದೆ ಪೆಣ್ಗಳ್ಗೊಳ |
ವೆನಿತಾನುಂ ಕಜ್ಜಮೆಂದು ಮೇದಿನಿ ತಿಳಿಗುಂ || ೧೨ ||

ಸಯೆ ಗಂಡಂ ಪೆಂಡಿತಿಯುಂ |
ಸಯಲೇಕೆಯೊ ? ಒರ್ಬ್ಬನರಿಯೆ ಪಲರೊಳರೆಂಬೀ ||
ಸಯಲೊಲ್ಲದ ಪೆಣ್ಬಡೆಗಂ |
ಜೆಪೆ ' ಪತಿರನ್ಯೋವಿಧೀಯತೇ ' ಎಂದುಲಿವರ್ || ೧೩ ||

ನರಕದ ನೆರೆವನೆಯಿಂದೋ |
ಸರಿಸಿದರೆಂತಾನು ಮೊರ್ವಮಾನವಗತಿಗೆ ||
ಯ್ತರಲಾರ್ಪರರಿವಿನೆಂಬಂ |
ತಿರೆ ಕಂಡರಿಯಾ ವಿಳಾಸಿನೀ ವಿಭ್ರಮಮಂ || ೧೪ ||

ಸಲ್ಲದ ಸಂದೆಗ ಮೊಳಕೊಳೆ |
ತಲ್ಲಳದಿಂ ಭ್ರಮರಕೀಟವೆಂಬೀ ನ್ಯಾಯಂ ||
ಪಲ್ಲಟಿಸಿತ್ತೊರ್ವಂಗೆನೆ |
ಪೊಲ್ಲಮೆಯಿಂ ಭ್ರಮರೆ ಕೀಟದಿಂ ಕಡೆಯೆನಿಕುಂ || ೧೫ ||

ಮನೆಗಾವಿನಾಳ್ಗಳಿಂ ತಿಂ |
ತೆನಲಿರ್ಕ್ಕುಂ ಸುಂದರ ಪ್ರಸಾದರ ಮನೆಯಾಳ್ ||
ಮನಮಂ ಗೆಲ್ದಂಜವದಿಂ |
ದೆನೆ ದೀವಿಗೆ ವಿಡಿದ ಕೇಶಿಯಂ ಮೆಚ್ಚದರಾರ್ || ೧೬ ||

ದಾಂಗುಡಿವಿಟ್ಟುದಂಬರದೊಳೀ ಪೊಸಥಾಳದ ಮಿಂಚು ಮಿಂಚಿದ |
ತ್ತಂಗನೆಯರ್ಗೆ ಕಣ್ಬೊಲಸಿದೆಂಬಿನೆಗಂ ನಡೆತಂದುಮೇದಿನೀ|| ಸಂಗ
ತಿಯೊಂದೆಯುಂ ವರಶಚೀವರನಳ್ಕೈರ್ದವೊಕ್ಕು ಕೂಡಿ ಮುಂ |
ತಾಂಗಡವೆಂಬಿನಂ ನೆಲಸಿನಿಲ್ಕೆ ತಟಿತ್ತ್ರಭೆ ಥಾಳಥಳ್ಯದಿಂ || ೧೭ ||

ಇಂತು ತ್ರೈಲೋಕ್ಯಭದ್ರಾಕಾಂಕ್ಷಿ.

*15-3-1915.* R. Tata, M.A., L.T.

*From*

**J. S. CHAKRAVARTI, Esq., M.A.,F.R.,A.S,**

**Comptrollor to the Government of Mysore.**

---

DEAR MADAM,

I am much obliged to you for your kindness in sending me a copy of '*virahini*' the fourth work of your Granthamala. I have read some of your previous books and though I have found the language difficult in some places and the syntax some-what hard to follow...................due, no doubt, to my imperfect knowledge of the kanarese language......................I have invariably found them full of interest and with very high moral ideals. I am happy to see that Mysore has produced a lady author of your stamp and I sincerely wish that your desire for founding an independent monthly journal, may be fulfilled.

With continued good wishes for your success in you laudable endeavour to improve and adorn the kanarese language and with best regards,

19th March, 1915.

BANGALORE.

I am
Yours faithfully,
(Sd.) J. S. CHAKRAVARTI.

# THE MYSORE PATRIOT.

## SATHI-HITHAISHINI GRANTHAMALA.

Srimathi, Tirumalammal of Nanjangud has brought out a number of very useful kanada books. "Vidyullatha" "Satheethvarakshini" "Viragini' and "Suseele" are four books which she has published. In all these books she has port-rayed human nature in its simplicity. The language of the books is generally simple and rises to sublimity here and there. The stories are told in the most interesting and attractive manner. Some of the dialogues are excellent. There is an ultimate tone of morality pervading the treatment adopted in the books. There is, however, room for improvement which, we hope, will be attended to in the next edition, if any.

*August 27, 1915*